ಚಾಮರಸ ವಿರಚಿತ

# ಪ್ರಭುಲಿಂಗಲೀಲೆ

ಡಾ. ಬಿ.ವ್ಹಿ. ಮಲ್ಲಾಪುರ

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**PRABHULINGA LEELE** : Edited by **Dr. B.V. Mallapur,** Dharwad
Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xlvi + ೩೮೧
ಬೆಲೆ : ರೂ. ೯೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೨೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಬಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಹೊನ್ನುಡಿ

ನಾಡಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನದ ಪರಿಮಾಣವನ್ನು ಅಳೆಯುವುದರಲ್ಲಿ ಅಲ್ಲಿನ ಸಾಹಿತ್ಯದ ಕೃತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸುಮಾರು ಎರಡು ಸಾವಿರದ ಐದನೂರು ವರ್ಷಗಳಿಗೂ ದೀರ್ಘವಾದ ಐತಿಹಾಸಿಕ ಪರಂಪರೆ ಚೆಲುವ ಕನ್ನಡ ನಾಡಿನದು. ಹಾಗೆಯೇ ಅದರ ಸಾಹಿತ್ಯ ಕೂಡ ಪಂಪ, ಕುಮಾರವ್ಯಾಸ, ಶರಣರು, ದಾಸರು ಮೊದಲಾದವರಿಂದ ಸಮೃದ್ಧವಾಗಿ ಬೆಳೆದಿದೆ. ಅದರ ಸಮೃದ್ಧತೆಗೆ ಏಳು ಜ್ಞಾನಪೀಠಗಳ ಗರಿಮೆಯೇ ಸಾಕ್ಷಿ.

ಕರ್ನಾಟಕವು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುತ್ತಿರುವುದು ಒಂದು ಐತಿಹಾಸಿಕವೂ ಹಾಗೂ ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ.

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಹಾಗೂ ಸೃಜನೇತರ ಪ್ರಕಾರದ ೧೦೧ ಕೃತಿಗಳನ್ನು, ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ.

ಈ ವಿಶಿಷ್ಟ ಕೃತಿಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನನ್ನ ವಂದನೆಗಳು. ಈ ಸಾಹಿತ್ಯ ಮಾಲಿಕೆಯನ್ನು ಸಾಹಿತ್ಯಾಭಿಮಾನಿಗಳು ಸ್ವಾಗತಿಸುವ ಮೂಲಕ ಈ ಕೃತಿಗಳ ಸದುಪಯೋಗ ಪಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

(ಐ.ಎಂ. ವಿಠ್ಠಲಮೂರ್ತಿ)
ವಿಶೇಷಾಧಿಕಾರಿಗಳು
ವಿಶ್ವ ಕನ್ನಡ ಸಮ್ಮೇಳನ

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕ್ಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೧.೦೧.೨೦೧೧

ಮನು ಬಳಿಗಾರ್
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿ ರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕ್ಕರ್
ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಪ್ರಸ್ತಾವನೆ

**ಪ್ರಭುಲಿಂಗಲೀಲೆಯ ಕರ್ತೃತ್ವ**

'ಪ್ರಭುಲಿಂಗಲೀಲೆ'ಯನ್ನು ಚಾಮರಸನೇ ಬರೆದಿರುವನೆಂಬುದಕ್ಕೆ ಯಾವ ಆಂತರಿಕ ಆಧಾರವೂ ಇಲ್ಲ. ಅದಕ್ಕೆ ಮುಖ್ಯ ಕಾರಣ ಅವನ ವ್ಯಕ್ತಿತ್ವನಿರಸನ ಸ್ವಭಾವ. "ಮಾಡಿದೆನೆಂಬುದು ಮನದಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ" ಎಂಬ ಬಸವವಾಣಿಯಲ್ಲಿ ಅವನಿಗೆ ಸಂಪೂರ್ಣವಿಶ್ವಾಸ. ಮಾಡುವವನೂ ಅವನೇ ಮಾಡಿಸಿಕೊಳ್ಳುವವನೂ ಅವನೇ ಎಂಬ ಮನೋಭಾವ ಅವನದು.

ದೇಗುಲವೆ ಮಾತುಡವಂದದೊ
ಳಾಗಿರದೆಯೊಳಗಿರ್ದು ನುಡಿದಡೆ
ಲೋಗರಿಗೆ ಪ್ರತಿಶಬ್ದದಿಂದಾಪರಿಯಲೆನ್ನೊಳಗೆ
ಲಾಗಿನಿಂದಲಿ ಗುರುಗುಹೇಶ್ವರ
ನಾಗಳೆನ್ನನು ನುಡಿಸಿದಡೆ ನುಡಿ
ದಾಗುಮಾಡಿಯೆ ಪೇಳ್ದೆನೀ ಪ್ರಭುಲಿಂಗಲೀಲೆಯನು

ಎಂಬ ಅವನ ಪದ್ಯ ಮೇಲಿನ ಹೇಳಿಕೆಯನ್ನು ಎಲ್ಲಂದದಿಂದ ಸಮರ್ಥಿಸುತ್ತದೆ. ದೇಗುಲದೊಳಗಿರುವ ಒಬ್ಬ ವ್ಯಕ್ತಿ ಮಾತಾಡಿದಾಗ ಕೇಳುವವರಿಗೆ ಗುಡಿಯೆ ಮಾತಾಡಿದಂತೆನಿಸುತ್ತದೆ. ಹಾಗೆಯೇ ನನ್ನ ದೇಹವೆನ್ನುವ ಗುಡಿಯಲ್ಲಿರುವ ಗುರುಗುಹೇಶ್ವರನು ಈ ಕವಿತೆಯನ್ನು ನುಡಿದಿದ್ದಾನೆ. ಆದರೆ ಅದನ್ನು ನಾನು ನುಡಿದಂತೆ ಕೇಳುಗರಿಗೆ ಅನಿಸುತ್ತದೆ. ನಿಜವಾಗಿ ಇದನ್ನು ನಾನು ನುಡಿದವನಲ್ಲ. ಅವನು ನುಡಿಸಿದ, ನಾನು ನುಡಿದೆ." ಎನ್ನುವ ಸರ್ವಾರ್ಪಣ ಮನೋಭಾವ ಇಲ್ಲಿ ಪರಿಸ್ಫುಟ. ಇದರ ಮುಂದಣ "ವಿವರಿಸುವಡೀ ಲೀಲೆಯನು ಹೇಳುವನು ದಿಟ ನಾನಲ್ಲ" ಎಂಬ ಮಾತಿನಲ್ಲಿಯೂ ಅದೇ ಭಾವವಿದೆ. ಇಂಥವನು ಹೇಗೆ ತಾನೆ ಪ್ರಭುಲಿಂಗಲೀಲೆಯನ್ನು ಬರೆದವನೆಂದು ಹೇಳಿಕೊಂಡಾನು?

ಆದರೆ ಪ್ರಭುಲಿಂಗಲೀಲೆಯನ್ನು ಚಾಮರಸನೇ ರಚಿಸಿರುವನೆಂಬುದಕ್ಕೆ ನಂಬಲರ್ಹ ಬಾಹ್ಯಾಧಾರಗಳು ಸಾಕಷ್ಟಿವೆ.

ಪ್ರಭುಲಿಂಗಲೀಲೆಯ ಕೆಲವು ಹಸ್ತಪ್ರತಿಗಳಲ್ಲಿ ಕಾವ್ಯಾರಂಭಕ್ಕೆ ಮೊದಲು ಐದು ಪದ್ಯಗಳು ಬರುತ್ತಿದ್ದು ಅವುಗಳಲ್ಲಿ ಒಂದನೆಯ ಕಂದಪದ್ಯ ಚಾಮ(ಚಾಮರಸ)ನ ಸ್ತುತಿಯಾಗಿದೆ. ತದನಂತರದ ಪದ್ಯದಲ್ಲಿ ಪ್ರಭುಲಿಂಗಲೀಲೆಯ ಪ್ರತಿಯೊಂದು

ಗತಿಯ ಆರಂಭಕ್ಕೆ ಬರುವ ಸೂಚನಾಪದ್ಯದ ಭಾಗವನ್ನು ಪುಸ್ತಕದಿಂದ ಹೇಳುವ ಮಾತು ಬರುತ್ತದೆ. ಆದುದರಿಂದ ಇವು ಪ್ರಭುಲಿಂಗಲೀಲೆಗೆ ಸೇರಿದ ಪದ್ಯಗಳಲ್ಲ. ಇವುಗಳನ್ನು ಬಾಹ್ಯ ಆಧಾರಗಳೆಂದು ಪರಿಗಣಿಸಬೇಕಾಗುತ್ತದೆ.

ಅದೃಶ್ಯಕವಿಯ (ಸು.೧೫೮೦) ಪ್ರೌಢರಾಯನಕಾವ್ಯ (೨೧–೩೦, ೩೧), ಸಿದ್ಧನಂಜೇಶನ (ಸು.೧೬೫೦) ರಾಘವಾಂಕ ಚಾರಿತ್ರ (೧೪–೨) ಮತ್ತು 'ಗುರುರಾಜ ಚಾರಿತ್ರ' (೧೩–೩೩) ಶಾಂತಲಿಂಗದೇಶಿಕನ (೧೬೭೨) ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ಶಂಕರಕವಿಯ (೧೭೬೩) ಚೋರಬಸವ ಚಾರಿತ್ರ– ಇವು ಚಾಮರಸನೇ ಪ್ರಭುಲಿಂಗಲೀಲೆಯನ್ನು ಬರೆದಂತೆ ತಿಳಿಸುತ್ತವೆ.

ಪ್ರಭುಲಿಂಗಲೀಲೆ, ತೆಲುಗು, ತಮಿಳು, ಸಂಸ್ಕೃತ ಮತ್ತು ಮರಾಠಿ ಭಾಷೆಗಳಿಗೆ ಅನುವಾದಗೊಂಡಿರುವುದು, ಅದರ ಮಹತ್ವದ ಹೆಗ್ಗುರುತು. ಪಿಡುಪರ್ತಿಯ ಸೋಮನಾಥ (೧೫೦೦) ಮತ್ತು ಪಿಡುಪರ್ತಿಯ ಬಸವಕವಿ (ಸು.೧೫೦೦) ಅದನ್ನು ತೆಲುಗಿಗೆ ಅನುವಾದಿಸಿದ್ದರೆ ಬ್ರಹ್ಮದಾಸನೆಂಬ ಮರಾಠಿಕವಿ ಅದನ್ನು 'ಲೀಲಾವಿಶ್ವಂಭರ' ಹೆಸರಿನಿಂದ ಮರಾಠಿ ಭಾಷೆಗೆ ಅನುವಾದಿಸಿದ್ದಾನೆ. ಇವರೆಲ್ಲರು ತಾವು ಚಾಮರಸನ ಪ್ರಭುಲಿಂಗಲೀಲೆಯನ್ನೇ ತಮ್ಮ ತಮ್ಮ ಭಾಷೆಗಳಲ್ಲಿ ಅನುವಾದಿಸಿದ್ದಾಗಿ ತಿಳಿಸಿದ್ದಾರೆ.

ವಿರೂಪಾಕ್ಷ ಪಂಡಿತ (೧೫೮೪) ತನ್ನ ಚೆನ್ನಬಸವ ಪುರಾಣದಲ್ಲಿ (೧–೨೯), ಎಳಂದೂರು ಹರೀಶ್ವರ (೧೬೦೬) ತನ್ನ ಪ್ರಭುದೇವರ ಪುರಾಣದಲ್ಲಿ, ಸಂಪಾದನೆಯ ಪರ್ವತೇಶ (೧೬೯೮) ತನ್ನ ಚತುರಾಚಾರ್ಯ ಪುರಾಣದಲ್ಲಿ, ಚನ್ನಮಲ್ಲೇಶ (೧೭೦೦) ತನ್ನ ದೀಪದಕಲಿಯರ ಕಾವ್ಯದಲ್ಲಿ, ಚಾಮರಸನನ್ನು ಪೂರ್ವಕವಿಸ್ತವನದಲ್ಲಿ ಸ್ಮರಿಸಿದ್ದಾರೆ. ಚಾಮರಸನೇ ಪ್ರಭುಲಿಂಗಲೀಲೆಯನ್ನು ಬರೆದಂತೆ ಜನವದಂತಿಯೂ ಇದೆ. ಇದರಿಂದ ಪ್ರಭುಲಿಂಗಲೀಲೆಯ ಕರ್ತೃ ಚಾಮರಸನೆಂಬುದು ಸ್ಪಷ್ಟವಾಗುತ್ತದೆ.

**'ಚಾಮರಸ' ಹೆಸರು**

'ಚಾಮರಸ' ಹೆಸರಿನ ಬಗ್ಗೆಯೂ ಒಂದೆರಡು ಮಾತು. ಈ ಹೆಸರಿನ ಆರಂಭದಲ್ಲಿ ಬರುವ 'ಚಾಮ' ಇದು 'ಶ್ಯಾಮ' ಶಬ್ದದ ತದ್ಭವ. ಅದಕ್ಕೇ ಇರಬೇಕು ಕೆಲವು ಕಾವ್ಯಗಳು ಮೂಲತಃ ಇವನು ಬ್ರಾಹ್ಮಣನೆಂದು ಹೇಳುತ್ತವೆ. ಹೆಸರಿನ ಉತ್ತರ ಭಾಗವಾದ 'ಅರಸ' ಎನ್ನುವುದು ಅವನು ದೊರೆಯಾಗಿದ್ದನೆಂಬ ಊಹೆಗೆ ಎಡೆ ಕೊಡುವದಾದರೂ, ಹಾಗೆ ಹೇಳಲು ಯಾವ ಆಧಾರವೂ ಇಲ್ಲ. ಪ್ರಾಯಃ, ಅವನು ಪ್ರೌಢರಾಯನ ಸಂಪರ್ಕಕ್ಕೆ ಬಂದಮೇಲೆ ಅದು ಸೇರಿಕೊಂಡಿರಬೇಕು ಅಥವಾ ಸೇರಿಸಿರಬೇಕು.

**ಜನ್ಮಸ್ಥಳ**

ಚಾಮರಸನ ಜನ್ಮಸ್ಥಳದ ಬಗ್ಗೆಯೂ ಒಂದೇ ಅಭಿಪ್ರಾಯವಿಲ್ಲ. ಅವನಂತೂ ತನ್ನ ಕೃತಿಯಲ್ಲಿ ಆ ಬಗ್ಗೆ ಯಾವ ಸೂಚನೆಯನ್ನೂ ಕೊಟ್ಟಿಲ್ಲ. ಆದುದರಿಂದ ಅವನ ಊರನ್ನು ತಿಳಿಯಲು ಮತ್ತೆ ಬಾಹ್ಯಾಧಾರಗಳ ಸಹಾಯ ಪಡೆಯುವುದು ಅನಿವಾರ್ಯ. ಪರ್ವತೇಶನ 'ಪ್ರಭುದೇವರ ಸಾಂಗತ್ಯ'ದ ಪೂರ್ವಕವಿಸ್ತವನದಲ್ಲಿ ಚಾಮರಸನ ಹೆಸರೂ ಬರುತ್ತಿದ್ದು ಅಲ್ಲಿ ಅವನನ್ನು 'ನಾಗಣಾಪುರ'ದ ಚಾಮರಸ ಎಂದು ಉಲ್ಲೇಖಿಸಲಾಗಿದೆ. ಬ್ರಹ್ಮದಾಸನ ಮರಾಠಿ 'ಲೀಲಾವಿಶ್ವಂಭರ' ಅನುವಾದ ಕೃತಿಯಲ್ಲಿಯೂ ಚಾಮರಸನ ಊರು ನಾಗಣಾಪುರ ಎಂದೇ ಬಂದಿದೆ. ಶಂಕರಕವಿಯ ಚೋರಬಸವಚಾರಿತ್ರದಲ್ಲಿ ಚಾಮರಸನ ಊರು 'ಗದಗು' ಎಂದು ಬರುತ್ತದೆ. (ಬಸವನಾಳ ಸಂಪಾದಿತ, ಪ್ರಭುಲಿಂಗಲೀಲೆಯ ಪ್ರಸ್ತಾವನೆ, ಅಡಿಟಿಪ್ಪಣಿ ಪುಟ ೩), ಇದರಿಂದ ಚಾಮರಸನ ಹುಟ್ಟಿದ ಊರು ಗದಗಿನ ಬಳಿಯೆ ಇರುವ ನಾಗಣಾಪುರವಾಗಿದ್ದು, ತದನಂತರ ಗದಗಿಗೆ ಬಂದು ಅಲ್ಲಿಂದ ಅವನು ವಿಜಯನಗರಕ್ಕೆ ಹೋಗಿರಬೇಕು.

**ಚರಿತ್ರೆ**

ತನ್ನ ತಂದೆ ತಾಯಿಗಳ ಹೆಸರನ್ನಂತೂ ಚಾಮರಸ ಹೇಳಿಕೊಂಡಿಲ್ಲ. ಅದಕ್ಕೆ ಅವನ ವೀರವಿರಕ್ತಿಯೆ ಕಾರಣ. ಬೇರಾವ ಬಾಹ್ಯ ಆಕರಗಳಿಂದಲೂ ಆ ಬಗ್ಗೆ ಏನೂ ತಿಳಿದು ಬರುವುದಿಲ್ಲ. ಆದರೆ ಕೆಲವು ಇತರ ಸಂಗತಿಗಳನ್ನು ಅವು ತಿಳಿಸುತ್ತವೆ. ಭೈ.ಕಾ.ಕ.ಸೂ. ರತ್ನಾಕರ, ಮೂಲತಃ ಬ್ರಾಹ್ಮಣನಾಗಿದ್ದ ಇವನು ಹಂಪೆಯ ಉದ್ದಾನ ವೀರಭದ್ರನಿಂದ (ವರ) ದೀಕ್ಷೆ ಪಡೆದನೆಂದು ಹೇಳುತ್ತದೆ. ಗುರುರಾಜ ಚಾರಿತ್ರದ ಪ್ರಕಾರ ಚಾಮರಸ ಪೂರ್ವಜನ್ಮದಲ್ಲಿ ಇರುವೆಯಾಗಿದ್ದು ಕಕ್ಕಯ್ಯನ ಪ್ರಸಾದವನ್ನು ಬಸವಣ್ಣನಿಗೆ ತಂದುಕೊಟ್ಟ (೧೩–೩೧). ಇದೇ ಕೃತಿಯಲ್ಲಿ (೧೩–೩೨) ಚಾಮರಸ ಹರಿಹರನಿಂದ ವರಪಡೆದಂತೆ ಹೇಳಲಾಗಿದೆ. ಆದರೆ ಕಾಲದ ದೃಷ್ಟಿಯಿಂದ ಇವರಿಬ್ಬರಲ್ಲಿ ತುಂಬಾ ಅಂತರವಿರುವುದರಿಂದ ಇದನ್ನು ನಂಬುವುದು ಸಾಧ್ಯವೆನಿಸದು. ಚಾಮರಸನಿಗೆ 'ಅನ್ಯಮತಕೋಲಾಹಲ' ಹಾಗೂ 'ವೀರಶೈವಾಚಾರಮಾರ್ಗ ಸಾರೋದ್ಧಾರ' ಬಿರುದುಗಳಿದ್ದಂತೆಯೂ ಗುರುರಾಜ ಚಾರಿತ್ರದಲ್ಲಿ ಬಂದಿದೆ (೧೯–೨೭). ಚಾಮರಸನು ನೂರೊಂದು ವಿರಕ್ತದಲ್ಲಿ ಒಬ್ಬನೆಂದೂ ಹೇಳಲಾಗುತ್ತದೆ. ಇದನ್ನು ಒಪ್ಪದವರೂ ಇದ್ದಾರೆ.

**ಪ್ರಭುಲಿಂಗಲೀಲೆಯ ರಚನೆಗೆ ಕಾರಣ :**

ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಪ್ರಭುಲಿಂಗಲೀಲೆಯ ರಚನೆಗೆ

ಕಾರಣವನ್ನೂ ಕೆಲವು ಕೃತಿಗಳಲ್ಲಿ ಹೇಳಿರುವುದು. ಚಾಮರಸ, ಪ್ರಭುಲಿಂಗಲೀಲೆ ರಚಿಸಲು ಕಾರಣವನ್ನು ಪ್ರೌಢರಾಯನ ಕಾವ್ಯದಲ್ಲಿ (೧–೩೯ ರಿಂದ ೫೧ ಮತ್ತು ೨೧–೩೦ ರಿಂದ ೩೫) ಹೀಗೆ ಹೇಳಿದೆ :

ಜಕ್ಕಣಾರ್ಯರು ರಚಿಸಿದ 'ಏಕೋತ್ತರ ಶತಸ್ಥಲ' ಗ್ರಂಥದ ಮೆರವಣಿಗೆಯನ್ನು ಹಂಪೆಯಲ್ಲಿ, ಕಲ್ಲಮಠದ ಪ್ರಭುದೇವ, ಕರಸ್ಥಲದ ನಾಗಿದೇವ, ಚಾಮರಸಾದಿಗಳು ಅಸಂಖ್ಯ ಭಕ್ತರೊಡಗೂಡಿ ಮಾಡುತ್ತಿರುವಾಗ, ಅದನ್ನು ನೋಡಿದ ಮುಕುಂದಪೆದ್ದಿ ಮರುದಿವಸ ಪ್ರೌಢರಾಯನ ಆಸ್ಥಾನದಲ್ಲಿ ಜಕ್ಕಣಾರ್ಯರನ್ನುದ್ದೇಶಿಸಿ ಹಿಂದಣ ರಾತ್ರಿಯಲ್ಲಿ ನಡೆಸಿದುದು ಸತ್ತವರ ಒಸಗೆಯೊ, ಹೆತ್ತ ಸೌರಂಭವೊ ಎಂದು ಕೇಳಿದಾಗ, ಜಕ್ಕಣಾರ್ಯ ಅದಕ್ಕೆ ಸರಿಯಾದ ಉತ್ತರವನ್ನು ಕೊಡುತ್ತಾನೆ. ಹೀಗೆ ಇಬ್ಬರಲ್ಲಿಯೂ ವಾಗ್ವಾದ ನಡೆದು "ಕೋಣನ ಕೊಂಬಿನ ಮೇಲೆ ಏಳನೂರೆಪ್ಪತ್ತು ಸೇದುವಬಾಯಿ" ಎಂಬ ಪ್ರಭುದೇವನ ವಚನಕ್ಕೆ ಮುಕುಂದಪೆದ್ದಿ, ಅದು ಮದ್ದಳೆಯ ಅಲ್ಲಮ, ಕಾಮಲತೆಯನ್ನು ಮೋಹಿಸಿ ಅವಳೊಡನಿರುವಾಗ ಅವಳು ಸಾಯಲು ಅವಳ ಹುಚ್ಚಿನಲ್ಲಿ ಹೇಳಿದ ಒಗಟಿನ ಪದ್ಯವೆಂದು ಹೇಳುತ್ತಾನೆ. ಜಕ್ಕಣಾರ್ಯ ಅದನ್ನು ಪ್ರತಿಭಟಿಸಿ, ಹದಿನೆಂಟು ಮತದವರು ತಲೆದೂಗುವಂತೆ ಆ ವಚನಕ್ಕೆ ವ್ಯಾಖ್ಯಾನ ಮಾಡುತ್ತಾನೆ. ಅದಕ್ಕೆ ಮೆಚ್ಚಿದ ಪ್ರೌಢರಾಯ ಜಕ್ಕಣಾರ್ಯನಿಗೆ ತ್ರಿಸರದ ಪದಕ ಮತ್ತು ರುದ್ರಕಂಕಣ ಕೊಡಲುದ್ಯುಕ್ತನಾದಾಗ, ಮುಕುಂದಪೆದ್ದಿ ದೊರೆಯನ್ನು ತಡೆದು, ದೊರೆಯೆ ಜಕ್ಕಣಾರ್ಯನ ಮಾತನ್ನು ಒರೆಹಚ್ಚಿ ನೋಡಬೇಕು. ಅವರ ಶರಣರು ಮಾಯೆ ಮೋಹಕ್ಕೆ ಬೆರಸಿಹರೊ ಇಲ್ಲವೊ ಎಂಬುದನ್ನು ಕೇಳಿ, ಆ ಮೇಲೆ ಮನ್ನಣೆ ಮಾಡಬೇಕೆಂದು ಹೇಳಿದಾಗ, ಅಲ್ಲಿಯೆ ಇದ್ದ ಚಾಮರಸ ಅವನ ಆಹ್ವಾನವನ್ನು ಸ್ವೀಕರಿಸಿ ಒಂದು ಪಕ್ಷದ ಒಳಗಿನ ಅವಧಿಯಲ್ಲಿ ಮುಕುಂದಪೆದ್ದಿಯ ಪ್ರಶ್ನೆಗೆ ಉತ್ತರ ತರುವುದಾಗಿ ಹೇಳಿ ಮನೆಗೆ ಹೋಗುತ್ತಾನೆ. ಅದೇ ಅಲೋಚನೆಯಲ್ಲಿ ಮಲಗಿದಾಗ ಸ್ವಪ್ನದಲ್ಲಿ ವೀರಭದ್ರೇಶ ಕಾಣಿಸಿಕೊಂಡು ಪ್ರಭುಲಿಂಗಲೀಲೆಯನ್ನು ಬರೆಯುವಂತೆ ತಿಳಿಸುತ್ತಾನೆ. ಅವನು ಹೇಳಿದಂತೆ ಚಾಮರಸ ದಿನಕ್ಕೆ ೧೦೧ ರಂತೆ (ಮುದ್ರಿತ ಪ್ರತಿಯಲ್ಲಿ ನೂರಹನ್ನೊಂದೆಂದಿದೆ) ಹನ್ನೊಂದು ದಿನಗಳಲ್ಲಿ ೧೧೧೧ ಪದ್ಯಗಳ ಪ್ರಭುಲಿಂಗಲೀಲೆ ರಚಿಸಿ ಪ್ರೌಢರಾಯನ ಸಭೆಯಲ್ಲಿ ಅದನ್ನು ಜಕ್ಕಣಾರ್ಯನಿಗೆ ಒಪ್ಪಿಸುತ್ತಾನೆ. ದೊರೆಯ ಇಚ್ಛೆಯ ಮೇರೆಗೆ ಜಕ್ಕಣಾರ್ಯ ಅದರ ಅರ್ಥವನ್ನು ಎಲ್ಲರೂ ಮೆಚ್ಚುವಂತೆ ವಿವರಿಸಿ ಹೇಳಿದಾಗ ದೊರೆ ಮೆಚ್ಚಿ ಅವನನ್ನೂ ಚಾಮರಸನನ್ನೂ ಸನ್ಮಾನಿಸುತ್ತಾನೆ.

ಭೈ. ಕಾ. ಕ. ಸೂ. ರತಾನಕರದಲ್ಲಿಯೂ ಇದು ಬರುತ್ತದೆ. ಇಲ್ಲಿ ಮುಕುಂದಪೆದ್ದಿ ತನ್ನ ಮಾತಿನ ಸಮರ್ಥನೆಗೆ "ನಾವೆಂದರೆ ದ್ರೋಹವೆಂದಿರಿ, ನಿಮ್ಮ ಹಂಪೆಯ ಹರಿಯಣ್ಣ ಪಂಡಿತರ ರಗಳೆಯ ಪದ್ಯದಲಿ ಉಂಟಾಗಿದೆ" ಎಂದು ಹರಿಹರನ

ಅಲ್ಲಮಪ್ರಭುದೇವರ ರಗಳೆಯಲ್ಲಿ ಬರುವ ಅಲ್ಲಮ ಮತ್ತು ಕಾಮಲತೆಯರ ಪ್ರಸಂಗವನ್ನು ಹೇಳುತ್ತಾನೆ. ಆಗ ಜಕ್ಕಣಾರ್ಯ "ಶೈವಮತದ ಕವಿಗಳಿಗೆಯು.... ವೀರಶೈವಪ್ರಮಥರ ಮಹತ್ವ ತಿಳಿಯದು" ಎಂದು ತಿಳಿಸಲು ಮುಕುಂದಪೆದ್ದಿ "ನಮ್ಮ ಭಾರತವ ಸತ್ತ ಕಥೆಯೆಂದಿರಿ, ಹರೀಶ್ವರನ ಪದ್ಯ ಅಬದ್ಧವೆಂದಿರಿ, ಸತ್ತವರಲ್ಲದೆ ನಿತ್ಯರಾದವರ ಕಥೆಯನು ವೀರಶೈವರು ಮಾಡಿದ ನಿಮ್ಮ ಗಣಂಗಳ ಕಥೆಯನು ತನ್ನಿರಿ" ಎಂದು ಆಹ್ವಾನಿಸುತ್ತಾನೆ. ಅದನ್ನು ಜಕ್ಕಣಾರ್ಯಾದಿಗಳು ಸ್ವೀಕರಿಸುತ್ತಾರೆ. ಮುಂದೆ ಬರುವ ಕಥೆ ಪ್ರೌಢದೇವರಾಯನಲ್ಲಿದ್ದಂತೆಯೆ ಇದೆ.

ಇನ್ನೊಂದು ಕಥೆಯ ಪ್ರಕಾರ (ಗುರುರಾಜ ಚಾರಿತ್ರ ೧೩–೨೭ ರಿಂದ ೩೩) ಚಾಮರಸ ಮತ್ತು ಕುಮಾರವ್ಯಾಸ ಭಾವ ಮತ್ತು ಭಾವಮೈದುನರು. ಪ್ರೌಢರಾಯನ ಅಪೇಕ್ಷೆಯಂತೆ ಇಬ್ಬರೂ ಭಾರತ ಬರೆದರು. ಆದರೆ ರಾಜಮನ್ನಣೆ ಗಳಿಸಿದುದು ಚಾಮರಸನ ಕೃತಿ. ಇದರಿಂದ ಖಿನ್ನರಾದ ಕುಮಾರವ್ಯಾಸ ತನ್ನ ಹೆಂಡತಿ (ಚಾಮರಸನಿಗೆ ತಂಗಿ)ಗೆ ಹೇಳಿ ಚಾಮರಸನ ಕೃತಿಯನ್ನು ಸುಡಿಸಿದ. ಅದನ್ನು ತಿಳಿದು ಚಾಮರಸನಿಗೆ ಅಸಮಾಧಾನವಾಯಿತು. ಚಿಂತಿತನಾಗಿದ್ದ ಅವನು ಹಾಗೇ ಮಲಗಿದ್ದಾಗ, ವೀರಭದ್ರ ಕನಸಿನಲ್ಲಿ ಬಂದು ಪ್ರಭುಲಿಂಗಲೀಲೆ ಬರೆಯಲು ಆದೇಶಿದ. ಅದರಂತೆ ಚಾಮರಸ ಪ್ರಭುಲಿಂಗಲೀಲೆ ಬರೆದು ಪ್ರಸಿದ್ಧನಾದ.

ಇಂಥ ಕಥೆಗಳ ಸತ್ಯಾಸತ್ಯತೆ ಏನೇ ಇರಲಿ. ಇವು ಅಂದಿನ ಯುಗಧರ್ಮಕ್ಕೆ ಪ್ರತಿಮೆಗಳಾಗಿ ಬಂದಿವೆಯೆಂದು ಹೇಳಬೇಕೆನಿಸುತ್ತದೆ. ಹನ್ನೆರಡನೆಯ ಶತಮಾನದ ಶರಣರ ಬಗ್ಗೆ ಅವರ ಸಾಹಿತ್ಯದ ಬಗ್ಗೆ, ಶಿಷ್ಟರೆನಿಸಿಕೊಂಡವರಲ್ಲಿ ಎಂತಹ ಭಾವನೆಗಳಿದ್ದವೆಂಬುದನ್ನು ಮತ್ತು ವೀರಶೈವರು ಅವಕ್ಕೆ ಹೇಗೆ ಪ್ರತಿಕ್ರಿಯೆ ತೋರಿದರೆಂಬುದನ್ನು ಇವು ಪ್ರತಿಮಿಸುತ್ತವೆ.

ಇಲ್ಲಿ ನಮ್ಮ ಗಮನ ಸೆಳೆಯುವ ಇನ್ನೊಂದು ಅಂಶವಿದೆ. ಚಾಮರಸನ ಕನಸಿನಲ್ಲಿ ವೀರಭದ್ರ ಬಂದು ಪ್ರಭುವಿನ ಚರಿತ್ರೆಯನ್ನೇ ಏಕೆ ಬರೆಯಲು ಹೇಳುತ್ತಾನೆ? ಬೇರೆಯವರ ಚರಿತ್ರೆ ಬರೆಯಲು ಏಕೆ ಹೇಳುವುದಿಲ್ಲ? ಇಂದಿನ ವಿರಕ್ತರು ಪ್ರಭುದೇವನನ್ನೇ ತಮ್ಮ ಪರಂಪರೆಗೆ ಮೂಲಪುರುಷನನ್ನಾಗಿ ಇಟ್ಟುಕೊಂಡಿರುವುದನ್ನು ನೆನೆದಾಗ ಈ ಬಗ್ಗೆ ಕೆಲವು ಸಾಧಾರ ಊಹೆಗಳನ್ನು ಮಾಡಬಹುದೆನಿಸುತ್ತದೆ.

**ಚಾಮರಸನ ಕಾಲದ ಪರಿಸರ:**

ಹನ್ನೆರಡನೆ ಶತಮಾನದ ಶರಣರ ಅಂದೋಲನದ ಪೂರ್ವದ ಮತ್ತು ಅದರ ಅನಂತರದ ಧಾರ್ಮಿಕ ಇತಿಹಾಸವನ್ನು ಇಲ್ಲಿ ಪರಿಶೀಲಿಸುವುದು ಅಗತ್ಯ. ನಮಗೆ ತಿಳಿದಿರುವಂತೆ ಬಸವಪೂರ್ವಯುಗದಲ್ಲಿ ಲಕುಲೀಶಪಾಶುಪತರು ಕರ್ನಾಟಕದಲ್ಲಿ ಬಹಳ ಪ್ರಬಲರಾಗಿದ್ದರು. ಇದಕ್ಕೆ ಶಾಸನಗಳು ಸಾಕ್ಷಿಯಾಗಿವೆ. ಬಸವಯುಗವನ್ನು ಲಕುಲೀಶ ಪಾಶುಪತದ ಪರಿಷ್ಕೃತಯುಗವೆನ್ನಬಹುದು. ಈ

ಕಾಲದ ಲಕುಲೀಪಾಶಪತವು ಶರಣರ ಧೋರಣೆಗಳಿಂದ ಪ್ರಭಾವಿತವಾಗಿ ಒಂದಿಷ್ಟು ಪ್ರಗತಿಪರ ನಿಲುವು ಪಡೆದಂತೆ ತೋರುತ್ತದೆ. ಶಾಸನಗಳಲ್ಲಿ ಬರುವ "ಪಾಶುಪತಸಮಯ ಸಮುದ್ಧರಣರುಂ" "ಅಭಿನವಪಾಶುಪತ" ಎಂಬ ಮಾತುಗಳನ್ನು ಇಲ್ಲಿ ಗಮನಿಸಬೇಕು. ಹನ್ನೆರಡನೆಯ ಶತಮಾನದ ಕ್ರಾಂತಿಯ ಅನಂತರ ಲಕುಲೀಶಪಾಶುಪತದಲ್ಲಿದ್ದ, ಸ್ಥಾನಾಚಾರ್ಯ ಮತ್ತು ತಪೋಧನ ಪಂಗಡಗಳಲ್ಲಿ, ತಪೋಧನಪಂಗಡ ಶರಣರ ವಿಚಾರಧಾರೆಯಿಂದ ಪ್ರಭಾವಿತವಾಗಿ ಹೆಚ್ಚು ಪ್ರಗತಿಗಾಮಿಯಾದಂತೆ ತೋರುತ್ತದೆ. ಅದರ ಫಲವಾಗಿ ಅದು ಶರಣಧರ್ಮದತ್ತ ವಾಲಿತು. ಇವೆರಡರ ಧ್ರುವೀಕರಣ ಹದಿನೈದನೆಯ ಶತಮಾನದಲ್ಲಿ ನಡೆಯಿತು. ಈ ಧ್ರುವೀಕರಣ ಪ್ರಕ್ರಿಯೆಯಲ್ಲಿ ಪಾಲುಗೊಂಡವರು ಜಕ್ಕಣಾರ್ಯ, ಮಹಲಿಂಗದೇವ, ಚಾಮರಸರಂತಹರು. "ಹದಿನೈದನೆಯ ಶತಮಾನದಲ್ಲಿ ಇವರ (ಸ್ಥಾನಚಾರ್ಯ ಮತ್ತು ತಪೋಧನರ) ಮಧ್ಯೆ ತಲೆದೋರಿದ ತಾತ್ವಿಕಭಿನ್ನತೆಯಿಂದಾಗಿ, ಬಹುದೊಡ್ಡ ಬಿರುಕು ಹುಟ್ಟಿತು, (ಲಕುಲೀಶಪಾಶುಪತದ) ತಪೋಧನರೆ ಇಂದಿನ ವಿರಕ್ತರು. ಹೀಗೆ ಹೊರಬಿದ್ದ ಪ್ರಗತಿಗಾಮಿ ವಿರಕ್ತವರ್ಗದವರು ಬಸವಣ್ಣನವರ ಪ್ರಗತಿಗಾಮಿ ಧೋರಣೆಯತ್ತ ವಾಲಿದರು. ಚಾಮರಸನದು ವಿರಕ್ತವರ್ಗಪರವಾದ ನಿಲುವು" (ಎಂ.ಎಂ. ಕಲಬುರ್ಗಿ : ಮಾರ್ಗ, ಸಂಪುಟ ೧, ಪುಟ ೩೫೬)

ಹೀಗೆ ಶರಣ ತತ್ವವನ್ನು, ಅವರ ಧೋರಣೆಗಳನ್ನು ಒಪ್ಪಿಕೊಂಡ ನಕುಲೀಶ ಪಾಶುಪತದ ಪ್ರಗತಿಗಾಮಿ ತಪೋಧನರಿಗೆ ಅಥವಾ ವಿರಕ್ತವರ್ಗಕ್ಕೆ ಒಂದು ಪೀಠ ಪರಂಪರೆ ಬೇಕಿತ್ತು. ಆ ಪರಂಪರೆಗೆ "ಮೂಲಪುರುಷನನ್ನು ಹುಡುಕಲು ತೊಡಗಿದ ಅವರಿಗೆ ಸೂಕ್ತ ಕಂಡ ವ್ಯಕ್ತಿ ಪ್ರಭುದೇವ" ಎನ್ನುತ್ತಾರೆ ಕಲಬುರ್ಗಿ.

ಚಾಮರಸನ ಕನಸಿನಲ್ಲಿ ವೀರಭದ್ರ ಕಾಣಿಸಿಕೊಂಡು, ಪ್ರಭುದೇವನನ್ನೇ ಕುರಿತು ಕಾವ್ಯ ಬರೆಯುವಂತೆ ಕಲ್ಪಿಸಿರುವುದನ್ನು, ಶಾಪದಿಂದ ಭೂಲೋಕದಲ್ಲಿ ಪ್ರಭುದೇವ ಹುಟ್ಟಿದನೆಂಬ ಹರಿಹರನ ಅಭಿಪ್ರಾಯವನ್ನು ವಿರೋಧಿಸಿರುವುದನ್ನು, ಅವನ ವ್ಯಕ್ತಿತ್ವವನ್ನು ಕವಿಗಳು ವೈಭವೀಕರಿಸಲು ಪ್ರಯತ್ನಿಸಿರುವುದನ್ನು, ನೆನೆದಾಗ ಕಲಬುರ್ಗಿ ಅವರ ಅಭಿಪ್ರಾಯ ಬಹುಮಟ್ಟಿಗೆ ಸರಿಯೆನಿಸುತ್ತದೆ. ಇದರ ಜೊತೆಗೆ, ಪ್ರಭುವಿನ ಜನನದ ಬಗ್ಗೆ, ಅವನು ಹೆಣ್ಣಿನೊಡನೆ ಸಂಸಾರ ನಡೆಸಿದ ಬಗ್ಗೆ, ಹಿಂದಣ ಕವಿಗಳು ಹೇಳಿರುವುದು ತಮ್ಮ ಪರಿಕಲ್ಪನೆಯ ಪ್ರಭುದೇವನಿಗೆ ಹೊಂದುವದಿಲ್ಲವೆಂಬ ಭಾವನೆಯಿಂದ ಅವುಗಳನ್ನು ನಿರಾಕರಿಸಿ, ಪ್ರಭುದೇವನ ಪಾತ್ರದ ಪುನರ್ರಚನೆಗೂ ತೊಡಗಿರುವುದು ಕಂಡುಬರುತ್ತದೆ.

ಗುಮ್ಮಳಾಪುರದ ಸಿದ್ಧಲಿಂಗ ತನ್ನ ಶೂನ್ಯಸಂಪಾದನೆಯಲ್ಲಿ, ಪ್ರಭುದೇವನ ಜನನವನ್ನು ಕುರಿತು ಹರಿಹರನ ಹೇಳಿಕೆಯನ್ನು ಖಂಡಿಸುತ್ತ "ಇದೇನು ಕಾರಣ ಮರ್ತ್ಯಕ್ಕೆ ಬಂದರೆಂದು ಸಂಕಲ್ಪಿಸಿ ಶಾಪದಿಂದ ಬಂದರೆಂದು ಅವನೊಬ್ಬನು

ನುಡಿವುತಿದ್ದಾನು. ಅವನು ಇಪ್ಪತ್ತೆಂಟುಕೋಟಿವರ್ಷ ನರಕದಲ್ಲಿ ರವಿ ಶಶಿಗಳಿಹನ್ನಬರ ನರಕವನನುಭವಿಸುತಿಪ್ಪನು" ಎಂದು ಹೇಳಿರುವುದನ್ನು*, ಹಾಗೆಯೆ ಹಿಂದೆ ಹೇಳಿದಂತೆ ಭೈ. ಕಾ. ಕ. ಸೂ. ರತ್ನಾಕರದಲ್ಲಿ ಬರುವ ಜಕ್ಕಣಾರ್ಯ ಮತ್ತು ಮುಕುಂದಪೆದ್ದಿಗಳ ವಾದಪ್ರಸಂಗದಲ್ಲಿ "ಕೋಣನ ಕೊಂಬಿನ ಮೇಲೆ ಏಳುನೂರೆಪ್ಪತ್ತು ಸೇದುವ ಬಾಯಿ" ಎಂಬ ವಚನವು ಅಲ್ಲಮ, ಕಾಮಲತೆಯ ಮರಣದಿಂದ ಹುಚ್ಚನಾದ ಪ್ರಸಂಗವನ್ನು ಸೂಚಿಸುತ್ತದೆಂದು ಮುಕುಂದಪೆದ್ದಿ ಹೇಳಿ ತನ್ನ ವಾದಸಮರ್ಥನೆಗೆ ಹರಿಹರನ ಉದಾಹರಣೆ ಕೊಟ್ಟಾಗ ಜಕ್ಕಣಾರ್ಯ "ಶೈವ ಮತದ ಕವಿಗಳಿಗೆ.... ವೀರಶೈವ ಪ್ರಮಥರ ಮಹತ್ವ ತಿಳಿಯದು" ಎಂದು ಹೇಳಿರುವುದನ್ನೂ ನೆನೆದಾಗ ಮೇಲಿನ ಮಾತಿಗೆ ಸಮರ್ಥನೆ ದೊರೆಯುತ್ತದೆ.

ಇನ್ನು ಪ್ರಭುವಿನ ಪಾತ್ರದ ವೈಭವೀಕರಣವನ್ನು ಕಾಣಲು ಚಾಮರಸನ ಪ್ರಭುಲಿಂಗಲೀಲೆಗೆ ಬರಬೇಕು. ಹರಿಹರ ಮತ್ತು ಶಿವಗಣ ಪ್ರಸಾದಿ ಮಹಾದೇವಯ್ಯಗಳು ಹೇಳುವ ಪ್ರಭುದೇವ, ಕಾಮಲತೆಯರ ಪ್ರಸಂಗವನ್ನು ಅವನು ಖಂಡಿಸಲು ಹೋಗದೆ, ಕಾಮಲತೆಯ ಜಾಗದಲ್ಲಿ ಪಾರ್ವತಿಯ ತಾಮಸ ಕಳೆಯಾದ ಮಾಯಾದೇವಿಯನ್ನು ತಂದು, ಅವಳು ರಾಜನ ಮಗಳಾಗಿದ್ದರೂ, ಮದ್ದಳಿಗನಾದ ಅಲ್ಲಮನನ್ನು ವ್ಯಾಮೋಹಿಸಿ, ಅವನನ್ನು ಕೂಡುವ ಪ್ರಯತ್ನದಲ್ಲಿ ವಿಫಲಳಾದರೆ, ಅಲ್ಲಮ ಮಾಯಾಕೋಲಾಹಲನಾಗಿ ವೈಭವೀಕರಣಗೊಂಡಿದ್ದಾನೆ.

ಅಲ್ಲಮನ ವೈಭವೀಕರಣದ ಇನ್ನೊಂದು ಉದಾಹರಣೆ ಚಾಮರಸನಲ್ಲಿ ಬರುವ ಸಿದ್ಧರಾಮ, ಅಲ್ಲಮಪ್ರಭುಗಳು ಪರಸ್ಪರ ಮೊದಲಸಲ ಭೆಟ್ಟಿಯಾದ ಪ್ರಸಂಗವೆಂದು ಹೇಳಬಹುದು. ಈ ಪ್ರಸಂಗ ಚಾಮರಸನಿಗಿಂತ ಮೊದಲು ಆಗಿಹೋದ ರಾಘವಾಂಕನ "ಸಿದ್ಧರಾಮ ಚಾರಿತ್ರ"ದಲ್ಲೂ ಬರುತ್ತದೆ. ರಾಘವಾಂಕನ ಸಿದ್ಧರಾಮ ಶಾಂತಿ, ಸೌಜನ್ಯಗಳ ಸಾಕಾರಮೂರ್ತಿ. ತಾನು ಅನುಸರಿಸುತ್ತಿರುವ ತತ್ವವನ್ನು ಪ್ರಭುದೇವನಿಗೆ ಶಾಂತಚಿತ್ತದಿಂದಲೇ ವಿವರಿಸುತ್ತಾನೆ. ಅವನಲ್ಲಿ ಯಾವ ಹಮ್ಮು

---

* ಪ್ರಥಮ ಶೂನ್ಯಸಂಪಾದನಾಕಾರ ಶಿವಗಣ ಪ್ರಸಾದಿ ಮಹಾದೇವಯ್ಯ, ಕಾಮಲತೆ ಒಬ್ಬ ಶಿವಭಕ್ತೆಯಾಗಿದ್ದು, ನೃತ್ಯ ವಿದ್ಯಾಭ್ಯಾಸದಲ್ಲಿ ತೊಡಗಿದ ಅವಳು "ಅಲ್ಲಮಂಗೆ ಸತಿಯಾಗಿ.... ಆ ಪುರದ ಗುಹೇಶ್ವರನೆಂಬ ಮೂಲಸ್ಥಾನದ ಪರಿಚರ್ಯದಿಂದರ್ವರುಂ ಇರಲ್" ಎಂದು ಹೇಳಿ ಅಲ್ಲಮ ಕಾಮಲತೆ ಇಬ್ಬರೂ ರಂಗಭೋಗದ ಕಲಾವಿದರಾಗಿದ್ದರೆಂಬ ಬಗ್ಗೆ ಸೂಚನೆ ಕೊಡುತ್ತಾನೆ. ಗುಹೇಶ್ವರ ದೇವಾಲಯದಲ್ಲಿ ಅಲ್ಲಮ ಮದ್ದಳಿಗನಾಗಿದ್ದರೆ, ಕಾಮಲತೆ ಅಲ್ಲಿಯ ನೃತ್ಯಗಾತಿ. ಆದರೆ ಹರಿಹರನಲ್ಲಿ ಕಾಮಲತೆ ಧನದತ್ತನ ಮಗಳಾಗಿದ್ದು ಅವಳು ಶಿವಭವನಕ್ಕೆ ನಮಸ್ಕರಿಸಲು ಬಂದು ಅಲ್ಲಮನನ್ನು ಕಂಡು ಸೋಲುತ್ತಾಳೆ. ಇವಳನ್ನು ಕಂಡು ಅವನೂ ಸೋಲುತ್ತಾನೆ. ಕಾಮಲತೆ ನೃತ್ಯಗಾತಿಯೆಂಬ ಸ್ಪಷ್ಟಸೂಚನೆ ಹರಿಹರನಲ್ಲಿ ಇಲ್ಲ.

ಬಿಮ್ಮುಗಳಿಲ್ಲ. ಪ್ರಭುದೇವ ತನ್ನನ್ನು ಒಡ್ಡರೆರೆಯನೆಂದು ಕರೆದರೂ ಅವನು ಕುಪಿತನಾಗುವುದಿಲ್ಲ. "ಬಡವ ಮಡಗಿದ ಕಡವರದ ತೆರದ ಮಕುಟದ ಮರೆಯ" ಲಿಂಗವನ್ನು ತೋರಿಸಲು ಕುಲುಕುಲು ನಗುತ್ತಲೇ ಬರುತ್ತಾನೆ. ಪ್ರಭುದೇವ ಕೂಡ ಅಷ್ಟೇ ಸಮಾಧಾನದಿಂದ ಅವನ ವಾದವನ್ನು ಕೇಳಿ ಅದಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸುತ್ತಲೇ "ಜಡರ ನಡುವಿರಲ್ ಅವರ ಸಂಗದಿಂ ಕಾಯಗುಣವಿಡಿದು ಬಳಲುವರು.... ಮಾನವರ ನಡುವಿರಲು ಬೇಡ ಸಿದ್ಧೇಂದ್ರ" ಎಂಬ ಎಚ್ಚರಿಕೆಯ ಮಾತನ್ನು ಮೆತ್ತಗೆ ಹೇಳಿ ಹೋಗುತ್ತಾನೆ. ಆದರೆ ಚಾಮರಸನ ಪ್ರಭುಲಿಂಗಲೀಲೆಯಲ್ಲಿ, ಅಲ್ಲಮಪ್ರಭು ಸಾಮಾನ್ಯ ಗುಡ್ಡರನ್ನು ಉದ್ದೇಶಿಸಿ ಆಡುವ ಮಾತು, ಹಾಗೆಯೆ ಸಿದ್ಧರಾಮ ಕೋಪಾತುರನಾಗಿ "ಆರು ನಮ್ಮನು ಜರೆದವನು ಜಂಭಾರಿಯೊ, ದನುಜಾರಿಯೊ ಕಾಮಾರಿಯೊ ತೋರವನ ಹೆಡತಲೆಗುಗಿವೆ ನಾಲಗೆಯ ಬೇರು ಸಹಿತವೆ ಕೀಳುವೆನು" ಎಂದು ಗಜರಿ ಗರ್ಜಿಸುವುದು, ಪ್ರಭುದೇವ ಸಿದ್ಧರಾಮನಿಗೆ "ಸುಡುಯತಿತ್ವವನು..... ಕೋಪ ನಿಮ್ಮ ಸಂಪ್ರದಾಯ ಕಲಾಪದಲ್ಲಿ ಶಾಶ್ವತವಲಾ... ಯೋಗಿಯಹುದೈ ನೀನು ಹಿಂಸಾಧರ್ಮಕರ್ಮದಲಿ, ರಾಗದಿಂದುರಿದೇಳುತಿಹ ಭವರೋಗಿ ನಿನ್ನಲಿ ಮಾತನಾಡಲಿಕಾಗದೆಮಗೆ" ಎಂದು ಆವೇಶಕ್ಕೊಳಗಾದವನಂತೆ ನುಡಿಯುವುದು –ಇವೆಲ್ಲ ಎರಡೂ ಪಾತ್ರಗಳ ಘನತೆಗೆ ಒಪ್ಪುವ ಮಾತುಗಳಲ್ಲ. ಮುಂದೆ ಸಿದ್ಧರಾಮ ತನ್ನ ಹಣೆಗಣ್ಣನ್ನು ತೆರೆದಾಗ ಕಿಡಿಗಾರುತ್ತ ಹೊರಟ ಉರಿಯನ್ನು ಪ್ರಭುದೇವ ತನ್ನ ಅಂಗಾಲಲ್ಲಿ ಅಡಗಿಸಿಕೊಳ್ಳುತ್ತಾನೆ. ಸಿದ್ಧರಾಮ ಕ್ಷಮೆ ಯಾಚಿಸಿದಾಗ ಅವನನ್ನು ಮನ್ನಿಸಿ, ಅವನಿಗೆ ಕಾಯಕರಣದ ಸಂದುಸಂಬಂಧವನ್ನು ಸೂಚಿಸಿ, ಜೀವ ಪರಮರನು ಒಂದು ಮಾಡುವ ಶಕ್ತಿ–ಭಕ್ತಿಗಳನ್ನುಪದೇಶಿಸಿ ಕಲ್ಯಾಣಕ್ಕೆ ಹೊರಡುತ್ತಾನೆ.

ಪ್ರಭುದೇವನ ಔನ್ನತ್ಯದ ವೈಭವೀಕರಣದ ಭರದಲ್ಲಿ ಸಿದ್ಧರಾಮನಂತಹ ಶಿವಸಿದ್ಧನನ್ನು ಕೆಳಗಿಳಿಸುವುದು ಸರಿಯೇ? ರಾಘವಾಂಕನ ಸಿದ್ಧರಾಮಚಾರಿತ್ರವನ್ನು ಚಾಮರಸ ನೋಡಿರಲಿಲ್ಲವೆ? ಹದಿನೈದನೆಯ ಶತಮಾನದ ಕೆಲವರು ತಮ್ಮ ಪರಿಕಲ್ಪನೆಯ ಅಲ್ಲಮನಿಗೆ ಹರಿಹರಾದಿಗಳ ಕೆಲವು ಹೇಳಿಕೆಗಳು ಸರಿಹೋಗುವುದಿಲ್ಲವೆಂಬ ಭಾವನೆಯಿಂದ ಅವುಗಳನ್ನು ಖಂಡಿಸಿದಂತೆ ರಾಘವಾಂಕನ ಸಿದ್ಧರಾಮನಂತಹ ಆ ಉದಾತ್ತ ಪಾತ್ರವನ್ನು ಅಲ್ಲಮನಿಗಿಂತ ಬಹಳ ಕೆಳಗಿಳಿಸಿ, ಅಲ್ಲಮನನ್ನು ಮೇಲೇರಿಸಿ, ಅವನನ್ನು ವೈಭವೀಕರಿಸುವುದು ಚಾಮರಸನ ಉದ್ದೇಶವಾಗಿತ್ತೆ?

ಇಷ್ಟು ಹಿನ್ನೆಲೆಯೊಡನೆ ಇನ್ನು ಚಾಮರಸನ ಪ್ರಭುಲಿಂಗಲೀಲೆಯತ್ತ ಹೊರಳಬಹುದು.

**ಚಾಮರಸನ ಕಾಲ :**

ಚಾಮರಸ ವಿಜಯನಗರದ ಪ್ರೌಢರಾಯನ ಕಾಲದಲ್ಲಿದ್ದ ಬಗ್ಗೆ ಹಲವಾರು ಕೃತಿಗಳು ಉಲ್ಲೇಖ ಬರುತ್ತದೆ. ಪ್ರೌಢರಾಯ ರಾಜ್ಯವಾಳಿದುದು ೧೪೧೯ (೧೪೨೪?) ರಿಂದ ೧೪೪೬. ಆದುದರಿಂದ ಚಾಮರಸನ ಕಾಲವನ್ನು ೧೪೩೦ ಎಂದು ಇಟ್ಟುಕೊಳ್ಳಬಹುದು. ಕಾಲದ ಬಗ್ಗೆ ಹೆಚ್ಚು ಭಿನ್ನಾಭಿಪ್ರಾಯವಿಲ್ಲ.

**ಪ್ರಭುಲಿಂಗಲೀಲೆಯ ಕಥಾವಿಮರ್ಶೆ :**

ಚಾಮರಸನ ಪ್ರಕಾರ ಅಲ್ಲಮ, ಪರಶಿವನ ಸಕಲ–ನಿಷ್ಕಲರೂಪ. ಅಂತಹ ಅದ್ಭುತವ್ಯಕ್ತಿಯ ಮೂರ್ತಿಸ್ವರೂಪವನ್ನು ರೇಖಿಸಲು ಹೊರಟ ಚಾಮರಸ ತನ್ನ ಕಾವ್ಯವನ್ನು, ಶಿವನು ಒಡ್ಡೋಲಗಂಗೊಟ್ಟ ಸನ್ನಿವೇಶದಿಂದಲೇ ಆರಂಭಿಸಿರುವುದ ಸರಿಯಾಗಿಯೆ ಇದೆ. ಅದಕ್ಕೂ ಮೊದಲು ಗುರುಗುಹೇಶ್ವರ, ಬಸವ, ಚೆನ್ನಬಸವ, ಸಿದ್ಧರಾಮ, ಅಕ್ಕಮಹಾದೇವಿ, ಮಡಿವಾಳ ಮಾಚಯ್ಯ ಇವರನ್ನು ಒಂದೊಂದು ಪದ್ಯದಲ್ಲಿ ಸ್ಮರಿಸಿ, ಮರುಳಶಂಕರ, ಕಿನ್ನರಿಯ ಬೊಮ್ಮಯ್ಯ, ಏಲೇಶ್ವರದ ಕೇತಯ್ಯಾದಿಗಳೆಲ್ಲರನ್ನು ಒಂದೇ ಪದ್ಯದಲ್ಲಿ ನೆನೆದಿದ್ದಾನೆ. ಈ ನಾಂದಿಪದ್ಯಗಳಲ್ಲಿರುವ ಒಂದು ವಿಶೇಷತೆಯಂದರೆ, ಆಯಾವ್ಯಕ್ತಿಗಳು ಮಾಡಿರುವ ಕಾರ್ಯವನ್ನು ಬೆರಳಿಟ್ಟು ತೋರಿಸಿರುವುದು, ಉಳಿದ ಕಾವ್ಯಕೃತಿಗಳಲ್ಲಿ ಬರುವಂತೆ ಅವು ಕೇವಲ ವಿಶೇಷಣಗಳ ಸರಮಾಲೆಯಾಗಿಲ್ಲ.

ಗುರುಗುಹೇಶ್ವರ ನುಡಿಸಿದ ಈ ಕಾವ್ಯ ಸತ್ತವರ ಕಥೆಯಲ್ಲ. ಹೊತ್ತು ಹೋಗದ ಪುಂಡರು ಕೇಳುವ ಮತ್ತಮತಿಗಳ ಗೋಷ್ಠಿಯಲ್ಲ, ಮುಂತಾಗಿ ತನ್ನ ಕೃತಿಯ ಘನತೆ ಬಗ್ಗೆ ತಿಳಿಸಿ, ಶಿವನ ಒಡ್ಡೋಲಗದಲ್ಲಿ ನಡೆದ ಒಂದು ಘಟನೆಯಿಂದ ಅಲ್ಲಮಪ್ರಭುಸಂಪ್ರದಾಯದ, ಪ್ರಭುವಿನ ಕಥೆಗೆ ಶ್ರೀಕಾರ ಹಾಕುತ್ತಾನೆ.

ಶಿವನ ಒಡ್ಡೋಲಗ ಸೇರಿದೆ. ಅಲ್ಲಿ ಪಾರ್ವತೀ ಪರಮೇಶ್ವರರು ವಿರಾಜಮಾನರಾಗಿದ್ದಾರೆ. ಆಗ ಪಾರ್ವತಿ ಪರಮೇಶ್ವರನಿಗೆ "ಶಿವನೆ ನಿನ್ನ ಒಡ್ಡೋಲಗದಲ್ಲಿ ಒಪ್ಪುವ ಘನಮಹಿಮರೆಲ್ಲರು ಭವಕೆ ಬಾರದೆ ನಿತ್ಯಸುಖದಿಂದಿರುವರೊ ಅಥವಾ ಅವರಿಗೂ ನೆಲೆಯಿಲ್ಲವೊ?" ಎಂದು ಪ್ರಶ್ನಿಸಿದಾಗ ಶಿವನು, ನಾಮ, ರೂಪ, ಕ್ರಿಯೆಗಳನ್ನು ಗೆಲ್ಲದ ಹೊರತು ನಿತ್ಯಸುಖದ ಅನುಪಮಸಿದ್ಧಿ ಸಾಧ್ಯವಾಗದೆಂದೂ, ಅದಕ್ಕಾಗಿ ಭೂಮಿಯಲ್ಲಿ ಮಾನವ ಶರೀರಿಯಾಗಿ ಹುಟ್ಟಿ, ಸಾಧನೆ ಮಾಡಬೇಕೆಂದೂ ತಿಳಿಸುತ್ತಾನೆ. ಹಾಗೆಯೆ ತನ್ನ ನಿಜಸ್ವರೂಪನಾದ ಅಲ್ಲಮನು, ಭೂಲೋಕದಲ್ಲಿ ಸುಜ್ಞಾನಿ ನಿರಹಂಕಾರರಿಗೆ ಮಗನಾಗಿ ಹುಟ್ಟಿರುವ ಅಲ್ಲಮನು ನಿಜದ ನಿಲುವನ್ನು ತಿಳಿಸುವ ಗುರುವೆಂದೂ ಹೇಳುತ್ತಾನೆ. ಅವನ ಅನುಪಗುಣಗಳನ್ನು ಬಣ್ಣಿಸುತ್ತಾನೆ. ಪಾರ್ವತಿ; ಆಗ ಅಲ್ಲಮನನ್ನು ನಾನು ಬಲ್ಲೆ ಅವನನ್ನು ಸುಲಭವಾಗಿ

ಒಲಿಸಿಕೊಂಡು, ನಿಜದ ನಿಲುವನ್ನು ತಿಳಿಯುತ್ತೇನೆಂದು ಹೇಳಿ ಆ ಕಾರ್ಯವನ್ನು ಮಾಡಲು ತನ್ನ ತಾಮಸ ಕಳೆಯ ಮೂರುತಿಯಾದ ಮಾಯೆಯನ್ನು ಕಳಿಸಿಕೊಡುತ್ತಾಳೆ.

ಈ ಸನ್ನಿವೇಶ, ಮುಂದೆ ಮಾಯಾದೇವಿ ತನ್ನ ಸೌಂದರ್ಯಾದಿಗಳಿಂದ ಅಲ್ಲಮನನ್ನು ವಶಪಡಿಸಿಕೊಳ್ಳಲು ಮಾಡಿದ ಪ್ರಯತ್ನ, ಅಲ್ಲಮ ಮಾಯೆಗೊಳಗಾಗದೆ ಮಾಯಾ ಕೊಲಾಹಲನಾಗಿ ವಿಜೃಂಭಿಸುವುದು– ಇವೆಲ್ಲ ಚಾಮರಸನ ಸ್ವಂತ ಸೃಷ್ಟಿ. ಹಿಂದೆಲ್ಲಿಯೂ ಹೀಗೆ ಬಂದಿಲ್ಲ. ವಿರಕ್ತ ಪರಂಪರೆಗೆ ಮೂಲಪುರುಷನಾದ ಅಲ್ಲಮಪ್ರಭುವನ್ನು ವೈಭವೀಕರಿಸುವುದು ಇಲ್ಲಿ ಕವಿಯ ಮುಖ್ಯ ಉದ್ದೇಶ.

ಪಾರ್ವತಿಯಿಂದ ಆಜ್ಞಪ್ತಳಾದ ಮಾಯಾದೇವಿ ಭೂಲೋಕದಲ್ಲಿ ಬನವಸೆಯ ಅರಸನಾದ ಮಮಕಾರ ಮತ್ತು ಅವನ ಹೆಂಡತಿ ಮೋಹಿನೀದೇವಿಗೆ ಮಗಳಾಗಿ ಹುಟ್ಟುತ್ತಾಳೆ. ಅವಳು ಹುಟ್ಟಿದ ಕೂಡಲೆ ಜಪ ತಪಸಮಾಧಿಗಳಲ್ಲಿದ್ದ ತಪಸ್ವಿಗಳ ಮನಸ್ಸು ಕಾಮವಿಕಾರಕ್ಕೊಳಗಾಯಿತೆಂದು ಹೇಳಿರುವುದು ತುಂಬಾ ಧ್ವನಿಪೂರ್ಣವಾಗಿದ್ದು, ಮಾಯಾದೇವಿಯ ಪ್ರಭಾವವನ್ನು ಓದುಗರಿಗೆ ಮನವರಿಕೆ ಮಾಡಿಕೊಡುತ್ತದೆ. ಅವಳು ದಿನದಿಂದ ದಿನಕ್ಕೆ ಮೈ ಕೈ ತುಂಬಿಕೊಂಡು ಆಕರ್ಷಕವಾಗಿ ಬೆಳೆಯುತ್ತ ಹರೆಯಕ್ಕೆ ಬಂದುದರ ವರ್ಣನೆಯನ್ನು ಚಾಮರಸ ವಿರಕ್ತನಾಗಿದ್ದರೂ ಬಹಳ ಚೆನ್ನಾಗಿ ಮಾಡಿದ್ದಾನೆ. ಅವಳ ಲಗ್ನದ ಚಿಂತೆ ಮಾಡುತ್ತಿದ್ದ ಮಮಕಾರನಿಗೆ ಅವನ ಕುಲಗುರುವಾದ ಅಹಂಕಾರಾಚಾರ್ಯನು, ಮಾಯಾದೇವಿಗೆ ಶಿವನೇ ಯೋಗ್ಯನಾದ ಪತಿಯೆಂದು ಹೇಳಿ ಅವನನ್ನು ಒಲಿಸುವ ಉಪಾಯವನ್ನು ಮಾಯಾದೇವಿಗೆ ಹೇಳಿಕೊಡುವನು. ಅದರಂತೆ ಮಾಯಾದೇವಿ ನಿತ್ಯ ಮಧುಕೇಶ್ವರ ದೇವಾಲಯಕ್ಕೆ ಹೋಗಿ ಪೂಜಾಸಮಯದಲ್ಲಿ ಮಧುಕೇಶ್ವರನಿಗೆ ನೃತ್ಯಸೇವೆಯನ್ನು ಸಲ್ಲಿಸಿ ಪ್ರಸಾದ ಸೇವಿಸುತ್ತಿರುತ್ತಾಳೆ.

ಮುಂದೆ ಒಂದು ದಿನ ಅಲ್ಲಮನು ಮದ್ದಳೆಕಾರನಾಗಿ ದೇವಾಲಯಕ್ಕೆ ಬಂದು ಹೊರಗಡೆಯಲ್ಲಿ ನಿಂತು ಮದ್ದಳೆ ಬಾರಿಸುತ್ತಿರುವಾಗ ಮದ್ದಳೆಯ ದನಿಗೆ ಮನಸೋತ ಅವಳು ಅಲ್ಲಮನನ್ನು ಒಳಗೆ ಕರೆಸಿಕೊಂಡುದು, ಅವನ ರೂಪಕ್ಕೆ ಮರುಳಾಗಿ ಪರವಶಗೊಳ್ಳುವುದು, ಅವಳ ಅಂತರಂಗವನ್ನು ತಿಳಿದ ಅವಳ ಸಖಿಯರು, ಅಲ್ಲಮನನ್ನು ಹಲವು ಉಪಾಯಗಳಿಂದ ಒಪ್ಪಿಸಿ ಅವನನ್ನು ಅರಮನೆಗೆ ಕರೆದೊಯ್ದು ಅರಸನ ಅಪ್ಪಣೆ ಪಡೆದು, ಮಾಯಾದೇವಿಯ ನಾಟ್ಯಾಚಾರ್ಯನನ್ನಾಗಿ ನೇಮಿಸಿಕೊಳ್ಳುವುದು, ಮಾಯಾದೇವಿ ಅವನನ್ನು ಒಲಿಸಿಕೊಳ್ಳಲು ಹಲವಂದದಿಂದ ಪ್ರಯತ್ನಿಸುವುದು, ಅದಕ್ಕೆ ಸಖಿಯರು ಸಹಾಯ ಮಾಡುವುದು, ವಿರಹತಾಪ, ಕಾಮಬಾಧೆ ಸಹಿಸಿಕೊಳ್ಳಲಾರದೆ ಮಾಯಾದೇವಿ ಒಂದು ದಿನ ಅವನಿದ್ದಲ್ಲಿಗೆ ಹೋಗಿ ಅವನನ್ನು ಅಪ್ಪಿಕೊಳ್ಳಲು ಪ್ರಯತ್ನಿಸಿದಾಗ ಬಯಲನ್ನೇ ಚಪ್ಪರಿಸಿದ ಅನುಭವ

ಅವಳಿಗಾದುದು, ಮೋಹಿನೀದೇವಿಗೆ ಈ ಸುದ್ದಿ ತಿಳಿದು ರಾಜನಿಗೆ ತಿಳಿಯದಂತೆ ಬಹಳ ಜಾಗರೂಕತೆಯಿಂದಿರುವಂತೆ ಮಾಯಾದೇವಿಗೂ ಅವಳ ಸಖಿಯರಿಗೂ ಹೇಳಿದುದು. ಆಗ ಅಲ್ಲಮನಿಗೆ ಬೇರೆ ಬೀಡಾರದ ವ್ಯವಸ್ಥೆ ಮಾಡಿದುದು, ಮಾಯೆಯನ್ನು ಎಚ್ಚರಿಸಲು ಪಾರ್ವತಿ ವಿಮಲೆ ಎಂಬವಳನ್ನು ಭೂಲೋಕಕ್ಕೆ ಕಳುಹಿದುದು, ಅವಳು ಮಾಯಾದೇವಿಯನ್ನು ಕಂಡು, ಭೂಲೋಕಕ್ಕೆ ಅವಳು ಬಂದ ಕಾರಣವನ್ನು ನೆನಪಿಸುವುದು, ಎಚ್ಚರಗೊಂಡ ಮಾಯಾದೇವಿ ಮತ್ತು ವಿಮಳೆ, ಇಬ್ಬರೂ ಅಲ್ಲಮನನ್ನು ಕಾಣಲು ಹೊರಟಿದ್ದು, ಉದ್ದೇಶವರಿತ ಅಲ್ಲಮ ಮದ್ದಳೆಯನ್ನು ಬಿಸುಟು ಅವಳಿಗೆ ಸಿಗದೆ ಹೊರಟು ಹೋಗುವುದು, ಮಾಯಾದೇವಿ ಮತ್ತು ವಿಮಳೆ ಅಲ್ಲಮನನ್ನು ಅರಸುತ್ತ ಅವನ ಹಿಂದೆಯೆ ಕಾಡು ಮೇಡಗಳಲ್ಲಿ ಅಲೆಯುವುದು, ಅವರಿಗೆ ಕನಿಕರದೋರಿ ಅಲ್ಲಮ ಕಾಣಿಸಿಕೊಳ್ಳುವುದು, ಮಾಯಾದೇವಿ ತನ್ನ ಬಡಾಯಿ ಕೊಚ್ಚಿಕೊಳ್ಳುವುದು, ಅಲ್ಲಮ ಅದನ್ನು ಒಪ್ಪದೆ ಹೋಗುವುದು, ವಿಮಳೆ ಮತ್ತೊಮ್ಮೆ ಅಲ್ಲಮನಿಗೆ ಪ್ರಾರ್ಥಿಸಿಕೊಳ್ಳುವುದು, "ಮಾಯೆಗೆ ಪರಮ ತತ್ವಜ್ಞಾನವಿಲ್ಲ" ಎಂದು ನಿರ್ಧಾರಯುತವಾಗಿ ನುಡಿದು ಅವನು ಹೊರಟು ಹೋಗುವುದು, ವಿಮಳೆ, ಮಾಯೆಯ ವೃತ್ತಾಂತವನ್ನು ಅವಳ ತಂದೆ ತಾಯಿಗಳಿಗೆ ತಿಳಿಸಿ ಅವಳೊಡನೆ ಕೈಲಾಸಕ್ಕೆ ಹೋಗುವುದು, ಇವೆಲ್ಲ ಚಾಮರಸನ ಪ್ರಭುಲಿಂಗಲೀಲೆಯಲ್ಲಿ, ಎರಡನೆಯ ಗತಿಯ ಮೂವತ್ತನೆಯ ಪದ್ಯದಿಂದ ಮೊದಲುಗೊಂಡು, ಏಳನೆಯ ಗತಿಯ ಕೊನೆಯವರೆಗಿನ ಸುಮಾರು ೨೪೦ ಪದ್ಯಗಳಲ್ಲಿ ವಿಸ್ತಾರವಾಗಿ ನಿರೂಪಣೆಗೊಂಡಿವೆ.

ಇಲ್ಲಿ ಬರುವ ಮಾಯಾದೇವಿ, ಮೋಹಿನೀದೇವಿ, ಮದಮಾನಿ ಮೊದಲಾದ ಪಾತ್ರಗಳು, ಮಾನವೀಯ ಗುಣಗಳಿಂದ ಕೂಡಿದಂಥವುಗಳು. ನಮಗೆ ನಿಮಗೆ ಸಮೀಪವಾದವುಗಳು. ನೆಲದ ಮಣ್ಣಿನವು, ಆಕಾಶದೆತ್ತರಕ್ಕೆ ಹಾರಿದಂತಹವಲ್ಲ. ಅವರಿಗೆ ದೈಹಿಕಸುಖವೆ ಪರಮಸುಖ. ಅದನ್ನೇ ನಿಜವಾದ ಶಾಶ್ವತವಾದ ಸುಖವೆಂದು ಭ್ರಮಿಸಿ ಅದರ ಬೆನ್ನುಹತ್ತಿದವರು.

ಅಲ್ಲಮನನ್ನು ವಶಪಡಿಸಿಕೊಳ್ಳುವುದು ಸಾಧ್ಯವಾಗಿದೆ. ಸೋತು ವಿಮಳೆಯೊಡನೆ ಕೈಲಾಸಕ್ಕೆ ಬಂದ ಮಾಯಾದೇವಿಯನ್ನು ಕಂಡು ತನ್ನ ಪಂಥ ಪೂರ್ಣವಾಗದುದಕ್ಕೆ ಚಿಂತಿಸುತ್ತಿರುವ ಪಾರ್ವತಿಯನ್ನು ಕುರಿತು ಶಿವ ಅವಳಿಗೆ, ಅವಳ ಸಾತ್ವಿಕಾಂಶವನ್ನು ಭೂಮಿಗೆ ಕಳಿಸಿ ನಿಜದ ನಿಲುವನ್ನು ತಿಳಿಯಲು ಸೂಚಿಸುತ್ತಾನೆ. ಶಿವನು ತನ್ನ ಇಚ್ಛೆಯನ್ನು ಪೂರೈಸುವ ಹಾದಿಯನ್ನು ತೋರಿಸಿದುದಕ್ಕೆ ಸಂತಸಗೊಂಡ ಪಾರ್ವತಿ "ನಿನ್ನೊಲವಿನಿಂದಾನಿನ್ನು ಬದುಕಿದೆನು" ಎಂದು ಶಿವನಿಗೆ ಕೃತಜ್ಞತೆ ಸೂಚಿಸುತ್ತಾಳೆ.

ಈ ಪ್ರಸಂಗವನ್ನು ಚಾಮರಸ, ಒಂದಿಷ್ಟು ಬೆಳೆಸಿ, ಅದನ್ನು ಬಸವಣ್ಣ ಭೂಲೋಕದಲ್ಲಿ ಜನಿಸಲು ಕಾರಣವನ್ನಾಗಿ ಮಾಡಿಕೊಂಡಿರುವುದು ಪರಿಶೀಲನಾರ್ಹವಾಗಿದೆ. ನಿನ್ನೊಲವಿನಿಂದಾನು ಬದುಕಿದೆನೆಂಬ ಪಾರ್ವತಿಯ ಮಾತನ್ನೇ ಹಿಡಿದು ಅಲ್ಲಿಯೆ ಇದ್ದ ವೃಷಭೇಂದ್ರ "ಇದೇನನಾಡಿದೆ ತಾಯೆ... ನೀವೆಂದೂ ಶಿವನ ಕರುಣದಲಿ ಸುಖಿಗಳು" ಎಂದು ಪಾರ್ವತಿಗೆ ನುಡಿಯುತ್ತಾನೆ. ಅವನ ಆ ಮಾತಿನ ಮರೆಯಲ್ಲಿ ಹುದುಗಿರುವ ಬಯಕೆಯನ್ನು ಅರ್ಥೈಸಿಕೊಂಡ ಶಿವ ಅವನೂ ಅಲ್ಲಮನ ಸಂಗವಾಡಿ ನಿಜದ ನಿಲವನ್ನು ತಿಳಿಯಲು ಅಪೇಕ್ಷಿಸುತ್ತಿರುವುದು ಗೊತ್ತಾಗಿ ವೃಷಭೇಂದ್ರನಿಗೆ "ಅಲ್ಲಮನ ಸಮ್ಮೇಳದಲಿ ಸುಖಿಯಾಗು ಹೋಗು" ಎಂದು ಭೂಲೋಕಕ್ಕೆ ಹೋಗಲು ತಿಳಿಸುತ್ತಾನೆ. ಮತ್ತು ಭೂಲೋಕದಲ್ಲಿ ಅವನು ಮಾಡಬೇಕಾದ ಮತ್ತೊಂದು ಕರ್ತವ್ಯವನ್ನೂ ನಿರ್ದೇಶಿಸುತ್ತಾನೆ. "ನೀನು ಧರೆಯಲಿ ಮೆರೆಯದಿರ್ದಡೆ ಅಲ್ಲಮ ತಾನು ಸಿಕ್ಕುವವನಲ್ಲ. ನೀನು ಭಕ್ತಿಯ ಮಾಡಿ ಕಾಣಿಸೆ ನಿನ್ನ ಕತದಿಂದೆ ಸರ್ವರು ಸ್ವಾನುಭಾವಸುಖಸ್ವರೂಪ ನಿಧಾನವನು ಸಾಧಿಸಲಿ" ಎನ್ನುವುದೇ ಆ ನಿರ್ದೇಶನ.

ಕಾವ್ಯನಾಯಕನಾದ ಪ್ರಭುದೇವನ ಜನನ ಬಾಲ್ಯಗಳ ಕಥೆಯನ್ನು ಸ್ವತಃ ಪರಮೇಶ್ವರನೇ ಪಾರ್ವತಿಗೆ ಹೇಳಿದುದಾಗಿಯೂ, ಅದನ್ನು ವಿಮಳೆ ಕೇಳಿ, ಮಾಯಾದೇವಿಗೆ ತಿಳಿಸಿದುದಾಗಿಯೂ ಚಾಮರಸ ಕಲ್ಪಿಸಿದ್ದಾನೆ. ಪಾರ್ವತಿಯು ಹೇಳಿದ ಕಾರ್ಯವನ್ನು ಮರೆತು ಅಲ್ಲಮನಿಗೆ ಮರುಳಾಗಿ ಮಂಕಾಗಿದ್ದ ಮಾಯಾದೇವಿಗೆ, ಆ ಅಲ್ಲಮನೇ ನಿಜವಾದ ಅಲ್ಲಮನಾಗಿರಬೇಕೆಂದು ಹೇಳಿದಾಗ ಅವಳು ಅಲ್ಲಮನೆಂದರೆ ಯಾರು? ಎಂದು ಕೇಳುತ್ತಾಳೆ. ಆಗ ವಿಮಳೆ ಅದನ್ನು ಮಾಯಾದೇವಿಗೆ ತಿಳಿಸುತ್ತಾಳೆ. ಅದರ ಸಾರಾಂಶ ಇಷ್ಟು :

ಬನವಸೆ ಬಳ್ಳಿಗಾವೆಯಲ್ಲಿದ್ದ ನಿರಹಂಕಾರನಿಗೆ ಎಲ್ಲವೂ ಇದ್ದರೂ ಪುತ್ರಭಾಗ್ಯ ಮಾತ್ರ ಇರಲಿಲ್ಲ. ಅವನು ಬಯಸುತ್ತಿದ್ದುದು ಸಾಮಾನ್ಯ ಲೌಕಿಕರು ಬಯಸುವಂಥ ಮಗನನ್ನಲ್ಲ. "ಏಕವೆನಿಸುವ ನಿಜವನೀವ ನಿರಾಕುಳದ" ಮಗನನ್ನು. ಅಂಥ ಮಗನನ್ನು ಪಡೆಯಲು ನಿರಹಂಕಾರ–ಸುಜ್ಞಾನಿ ದಂಪತಿಗಳು "ಏಕಾಂತವಾಸಕ್ಕೆ ಹೊಕ್ಕು" ಯೋಗ ಸಮಾಧಿಯಲ್ಲಿ ಲೀನರಾಗುತ್ತಾರೆ. ಅದರ ವರ್ಣನೆ ಬಹಳ ಅರ್ಥಪೂರ್ಣವಾಗಿ ಪ್ರಭುಲಿಂಗ ಲೀಲೆಯಲ್ಲಿ ಬಂದಿದೆ (೬–೧೬ ರಿಂದ ೧೯). ಆ ಸಮಾಧಿಭಾವದಲ್ಲಿಯೆ ಅವರು ಒಂಬತ್ತು ತಿಂಗಳು ಕಳೆಯುತ್ತಾರೆ. ಆಗ ಅವರ ಮನದಲ್ಲಿ ಪ್ರಕಾಶಮಾನವಾದ ಶ್ರೀಮೂರ್ತಿಯೊಂದು ಕಾಣಿಸಿಕೊಳ್ಳುತ್ತದೆ. ಎಚ್ಚರಗೊಂಡು ನೋಡಿದಾಗ ಅವರ ಮುಂದೆ ತೇಜೋಮಯ ಕೂಸೊಂದು ವಿರಾಜಿಸುತ್ತಿರುತ್ತದೆ. ದೇವತೆಗಳು ಆ ಕೂಸಿನ ಮೇಲೆ ಹೂಮಳೆಗರೆಯುತ್ತಾರೆ. ಆನಂದತುಂದಿಲರಾದ ಆ ದಂಪತಿಗಳನ್ನು ಧನ್ಯತಾಭಾವವಾವರಿಸುತ್ತದೆ. ಸುಮತಿ

ಆ ಕೂಸನ್ನು ಎತ್ತಿಕೊಳ್ಳಲು ಅದಕ್ಕೆ ಭಾರವೇ ಇಲ್ಲದಿರುವುದನ್ನು ಕಂಡು ಚಕಿತಳಾಗುತ್ತಾಳೆ. ನಿರಹಂಕಾರ ಅದರ ಮಹಿಮೆಯನ್ನು ಸತಿಗೆ ತಿಳಿಸುತ್ತಾನೆ. ಕೂಸಿಗೆ ಅಲ್ಲಮ ಎಂಬ ಅರ್ಥಪೂರ್ಣ ಹೆಸರಿಡುತ್ತಾರೆ (೬–೨೮,೨೯). ಗಳಿಗೆಗಳಿಗೆಗೆ ಬೆಳೆಯುತ್ತಿರುವ ಕೂಸಿನ ಲೀಲೆಗಳ ವರ್ಣನೆ ತುಂಬಾ ಸಾಂಕೇತಿಕವಾಗಿ ಪ್ರಭುಲಿಂಗಲೀಲೆಯಲ್ಲಿ ಬಂದಿದೆ (೬–೩೦ ರಿಂದ ೩೨). ಆತನು ವೇದ ಶಾಸ್ತ್ರಗಳನ್ನು ಓದದಿದ್ದರೂ ಅವು ತಾವೇ ಬಂದು ಅವನ ನಾಲಗೆಯ ಮೇಲೆ ನಲಿಯುತ್ತಿದ್ದವಂತೆ. ಅದೆಲ್ಲವನ್ನು ಕಂಡು ತಂದೆ–ತಾಯಿಗಳು ಸಂತೋಷಪಡುತ್ತಿರುವಾಗಲೆ, ಪ್ರಭುದೇವ ತನ್ನ ಬಾಲಭಾವದ ಪರಿಯನ್ನು ಬಿಸುಟು ವರಗುರು ಶ್ರೀಮೂರ್ತಿಯಾಗಿ ಜನರಿಗೆ ಪರಮತತ್ವದ ಉಪದೇಶ ಮಾಡುವ ನಿರ್ಧಾರಕ್ಕೆ ಬರುತ್ತಾನೆ. ತನ್ನ ತಂದೆ–ತಾಯಿಗಳಿಗೆ "ನಿಮ್ಮಯ ಸಮಾಧಿಯ ಕೇಳಿಗೋಸುಗ ನಾನು ರೂಪಿಸಿ, ಬಾಲಚ್ಛವಿಯನ್ನು ತೋರಿದೆನು. ಇನ್ನು ನನ್ನ ನಿಜದ ನಿರಾಳ ನಿಶ್ಚಲ ನಿತ್ಯಸುಖದ ಸಮ್ಮೇಳದಲಿ ಆಡುತ್ತೇನೆ" ಎಂದು ತಿಳಿಸಿ, ಅವರಿಗೆ ತತ್ವವಿವೇಕವನ್ನಳವಡಿಸಿ, ನಿತ್ಯವನ್ನಿತ್ತು ಅವರ ಅಪ್ಪಣೆ ಪಡೆದು ಹೊರಟುಬಿಡುತ್ತಾನೆ.

ಇಲ್ಲಿ ಬರುವುದೆಲ್ಲವು ಅದ್ಭುತ, ಅಲೌಕಿಕ. ಚಾಮರಸ, ಪ್ರಭುದೇವನ ದಿವ್ಯ ಪಾತ್ರದ ನಿರೂಪಣೆಗೆ ಹಾಕಿಕೊಂಡ ಯೋಜನೆ, ಇಲ್ಲಿ ಧ್ವನಿತವಾಗುತ್ತದೆ. ಈ ಯೋಜನೆಗೆ ಅನುಗುಣವಾಗಿಯೆ ಚಾಮರಸ ಅಲ್ಲಮನ ಪಾತ್ರವನ್ನು ಮುಂದೆ ಭವ್ಯಗೊಳಿಸುತ್ತ ದಿವ್ಯಗೊಳಿಸುತ್ತ ಹೋಗಿದ್ದಾನೆ.

ಹೀಗೆ ಮಹಾದೇವಿ ಮತ್ತು ಬಸವ ಇಬ್ಬರೂ ಕೈಲಾಸದಲ್ಲಿ ಮಾಡಿದ ತಪ್ಪಿನಿಂದಾಗಿ ಭೂಲೋಕದಲ್ಲಿ ಜನಿಸಿದರೆಂಬ ಹರಿಹರನ ಹೇಳಿಕೆಯನ್ನು ಇಲ್ಲಿ ಚಾಮರಸ ಸಾರಾಸಗಟಾಗಿ ನಿರಾಕರಿಸಿ, ಅವರು ಒಂದು ಒಳ್ಳೆಯ ಉದ್ದೇಶದ ಈಡೇರಿಕೆಗಾಗಿ ಶಿವ–ಪಾರ್ವತಿಯರಿಂದ ಆಜ್ಞಪ್ತರಾಗಿ ಬಂದವರೆಂದು ಹೇಳಿ ಆ ಪಾತ್ರಗಳನ್ನು ಎತ್ತರಕ್ಕೇರಿಸಿದ್ದಾನೆ. ಜೊತೆಗೆ ಪ್ರಭುದೇವನ ಪಾತ್ರದ ಘನತೆಯನ್ನೂ ತನ್ಮೂಲಕ ಪ್ರಸ್ಥಾಪಿಸಲು ಪ್ರಯತ್ನಿಸಿದ್ದಾನೆ. ಶಿವನು ವೃಷಭೇಂದ್ರನಿಗಿತ್ತ ಆದೇಶದಲ್ಲಿ ಅವನು ಅನುಭವ ಮಂಟಪ ಸ್ಥಾಪಿಸಬೇಕೆನ್ನುವ ಸೂಚನೆ ಇರುವುದನ್ನು ಗಮನಿಸಬೇಕು.

ಇಲ್ಲೆಲ್ಲ ತನ್ನ ಉದ್ದೇಶಕ್ಕನುಗುಣವಾಗಿಯೆ ಚಾಮರಸ ಸನ್ನಿವೇಶಗಳನ್ನು ಕಲ್ಪಿಸಿಕೊಂಡಿರುವುದು ಯುಕ್ತಿ–ಯುಕ್ತವಾಗಿದ್ದರೂ, ಇದರಿಂದ ಬಸವಣ್ಣ ಮತ್ತು ಅಕ್ಕಮಹಾದೇವಿಯರು ಸಮಾನವಯಸ್ಕರಾಗಿ ಬಿಡುತ್ತಾರೆ. ಅತ್ತ ಅವನ ಲಕ್ಷ್ಯ ಹೋದಂತಿಲ್ಲ.

ಇಲ್ಲಿ ಇನ್ನೂ ಒಂದು ಗಮನಿಸಬೇಕಾದ ಅಂಶವಿದೆ. ಶಿವನು ಬಸವಣ್ಣನನ್ನು ಕುರಿತು, ನೀನು ಭಕ್ತಿಯ ಮಾಡಿ ಅಲ್ಲಮನನ್ನು ಎಲ್ಲರಿಗೂ ಕಾಣಿಸು ಎಂದು

ಹೇಳಿದುದು ಶಿವಸಭೆಯಲ್ಲಿದ್ದ ಕೆಲವರಿಗೆ ಪಥ್ಯವಾಗದೆ ಅದನ್ನು ಆಡಿಯೂ ತೋರಿಸುತ್ತಾರೆ. ವೃಷಭರಾಜನ ಭಕ್ತಿಯ ಪರಿಯ ಪರಿಚಯವಿಲ್ಲದೆ ಆಡಿದ ಅವರ ಮಾತನ್ನು ಶಿವನು ಕೇಳಿ, ಅವನ ಭಕ್ತಿಯ ಉನ್ನತಿಯನ್ನು ಅವರು ತಿಳಿಯಲಿ ಎಂಬ ಉದ್ದೇಶದಿಂದ ಅವರನ್ನೂ ಭೂಲೋಕಕ್ಕೆ ಕಳಿಸಿಕೊಡುತ್ತಾನೆ. ಏಳುನೂರೆಪ್ಪತ್ತು ಪ್ರಮಥಗಣಂಗಳೊಡನೆ ವೃಷಭೇಂದ್ರ ಭೂಲೋಕಕ್ಕೆ ಬರುತ್ತಾನೆ.

ಹೀಗೆ ಚಾಮರಸನ ಮಹಾದೇವಿ, ಹರಿಹರನು ಹೇಳುವಂತೆ ಪಾರ್ವತಿ ಕೊಟ್ಟ ಶಾಪದಿಂದ ಭವಿಯ ಸಂಗ ಮಾಡಲು ಭೂಲೋಕಕ್ಕೆ ಬಂದ ಒಬ್ಬ ರುದ್ರಕನ್ಯೆಯಲ್ಲ. ಶಿವನ ನಿಜಸ್ವರೂಪದ ನಿಲುವನ್ನು ಅಲ್ಲಮನಿಂದ ತಿಳಿಯಲು ಭೂಲೋಕಕ್ಕೆ ಬಂದ ಸಾಕ್ಷಾತ್ ಪಾರ್ವತಿಯ ಸಾತ್ವಿಕ ಕಳೆ. ಆದುದರಿಂದ ಚಾಮರಸನಿಗೆ ಅವಳ ಬಾಲ್ಯ ಯೌವನ, ಕೌಶಿಕನ ಪ್ರಸಂಗ–ಇವುಗಳ ಸುದೀರ್ಘ ವಿವರ ಮುಖ್ಯವಲ್ಲ. ಅವಳು ಪ್ರಭುದೇವನನ್ನು ಕಂಡ ಪ್ರಸಂಗವೇ ಮುಖ್ಯ. ಎಂತಲೆ ಅವುಗಳೆಲ್ಲಕ್ಕೂ ಒಂದು ಗತಿಯನ್ನು, ಪ್ರಭುದೇವನನ್ನು ಕಂಡ ಪ್ರಸಂಗ ಒಂದಕ್ಕೇ ಒಂದು ಗತಿಯನ್ನು ಚಾಮರಸ ಮೀಸಲಾಗಿರಿಸಿದ್ದಾನೆ.

ಉಡುತಡಿಯ ವೀರಶಿವಾಗಮಿಕ ದಂಪತಿಗಳಾದ ನಿರ್ಮಲ–ಸುಮತಿಯರ ಮಗಳಾಗಿ ಹುಟ್ಟಿದ ಪಾರ್ವತಿಯ ಸಾತ್ವಿಕಕಳೆಯಾದ ಮಹಾದೇವಿಗೆ, ತಂದೆಯೆ ಹಸ್ತಮಸ್ತಕಸಂಯೋಗ ಮಾಡಿ ಪಂಚಾಕ್ಷರಿಮಂತ್ರವನ್ನುಪದೇಶಿಸುತ್ತಾನೆ. ಹಣೆಗೆ ವಿಭೂತಿಯಿಟ್ಟು ಕೊರಳಲ್ಲಿ ಲಿಂಗ ಕಟ್ಟುತ್ತಾನೆ. 'ಮಹಾದೇವಿ' ಎಂಬ ನಾಮಕರಣವಾಗುತ್ತದೆ. ಮಹಾದೇವಿ ಬೆಳೆಯಲಾರಂಭಿಸುತ್ತಾಳೆ. ಹೀಗೆ ನಾಲ್ಕುವರೆ ಪದ್ಯಗಳಲ್ಲಿ ಅವಳ ಜನನ ಬಾಲ್ಯ ಮುಗಿದುಹೋಗುತ್ತವೆ. ಅಕ್ಕನ ಯೌವನದ ವರ್ಣನೆಗೆ ಎರಡೇ ಎರಡು ಪದ್ಯಗಳು ಮೀಸಲಾಗಿವೆ. ಆದರೆ ಅವೆರಡರಲ್ಲಿಯೆ ಮಹಾದೇವಿಯ ಉದಾತ್ತ ಪವಿತ್ರ ವ್ಯಕ್ತಿತ್ವದ ಸಾರಸರ್ವಸ್ವವನ್ನೇ ಹರಳುಗಟ್ಟಿಸಿರುವುದು ಪರಿಭಾವನಾರ್ಹವಾಗಿದೆ. ಉದಾಹರಣೆಗಾಗಿ "ತುಂಬಿಲಿಂಗದ ನಿಷ್ಠೆಯೊಡನೆ" ಎಂದು ಆರಂಭವಾಗುವ ಪದ್ಯ ನೋಡಬಹುದು. ಹರಿಹರನ ರಗಳೆಯಲ್ಲಿ ಸುದೀರ್ಘವಾಗಿ ಬರುವ ಅಕ್ಕನ ಯೌವನದ ವರ್ಣನೆಯನ್ನು, ಇದರೊಡನೆ ಹೋಲಿಸಿ ನೋಡಿದಾಗ ಇಬ್ಬರಲ್ಲಿರುವ ದೃಷ್ಟಿಭಿನ್ನತೆ ಎದ್ದುಕಾಣುತ್ತದೆ.

ಮುಂದೆ ಕೌಶಿಕ ಅಕ್ಕಮಹಾದೇವಿಯ ಸೌಂದರ್ಯಕ್ಕೆ ಮಾರುವೋಗಿ ಅವಳನ್ನು ವಿವಾಹವಾಗಬಯಸಿ, ನಿರ್ಮಲ–ಸುಮತಿಯರ ಬಳಿ ತನ್ನ ಹಗ್ಗಡಿತಿಯರನ್ನು ಕಳಿಸಿದಾಗ, ಅವರು "ನೃಪಕುಲದವರಿಗೆ ಕೊಡೆವು" ಎಂದು ಖಡಾಖಂಡಿತವಾಗಿ ಹೇಳುತ್ತಾರೆ. ಹೆಗ್ಗಡಿತಿಯರು ಹಾಕಿದ ಭೀತಿ, ತೋರಿದ ಆಸೆ ಯಾವುವೂ ಅವರ ಮೇಲೆ ಪರಿಣಾಮ ಬೀರುವುದಿಲ್ಲ. "ತಾಯ ಮಾರಿಯೆ ತೊತ್ತುಕೊಂಬ ಈ ದಾಯವನು ಸುಡು.... ವಿಷಮಕುಲದ ಕೊಳುಕೊಡೆಯ ಮಾಡಿದಡೆ ನಾಯಕನರಕ

ತಪ್ಪವು" ಎಂದು ಖಚಿತವಾಗಿ ನುಡಿದು ತದನಂತರ ಇದು ತಮಗಿಂತ ತಮ್ಮ ಮಗಳಿಗೇ ಹೆಚ್ಚು ಸಂಬಂಧಿಸಿದುದೆಂಬ ವಿಚಾರ ಮೂಡಿ, ಮಹಾದೇವಿಯನ್ನೇ ವಿಚಾರಿಸಲು ತಿಳಿಸುತ್ತಾರೆ. ಮಗಳು ಒಪ್ಪಿದರೆ ಅದಕ್ಕೆ ತಮ್ಮ ಅಭ್ಯಂತರವೇನೂ ಇಲ್ಲವೆನ್ನುತ್ತಾರೆ. ಹರಿಹರನ ರಗಳೆಯಲ್ಲಿ ಅಕ್ಕನ ತಂದೆ ತಾಯಿಗಳು ಈ ಸಂದರ್ಭದಲ್ಲಿ ನಡೆದುಕೊಳ್ಳುವ ರೀತಿಯನ್ನು ಹೋಲಿಸಿ ನೋಡಿದಾಗ ಯಾವುದು ಉಚಿತವೆಂಬುದು ತಾನಾಗಿ ಹೊಳೆಯುತ್ತದೆ. ಅಲ್ಲಿ ದೊರೆಯ ಕಡೆಯವರು ಬಂದು ಮಹಾದೇವಿಯ ತಂದೆ ತಾಯಿಗಳನ್ನು ಹೆದರಿಸಿದಾಗ ಅವರು ತಮ್ಮ ಮಗಳಿಗೆ "ಅರಸ ಕೌಶಿಕನೊಡನೆ ಸಮಸುಖದೊಳಿರು ಮಗಳೆ, ಪಿರಿದಪ್ಪ ಸಂಪದವ ನಿನಗೀವನೆಲೆ ಮಗಳೆ" ಎಂದು ಉಪದೇಶಿಸುತ್ತಾರೆ. ಮತ್ತೊಮ್ಮೆ ಅರಸನ ಕಡೆಯವರು ಬಂದು ಜೀವದ ಭೀತಿ ತೊರಿದಾಗ ತಂದೆ ತಾಯಿಗಳು ಮಗಳನ್ನು ಉದ್ದೇಶಿಸಿ "ನಿನ್ನಯ ದೂಸರಿಂದೆಮಗ ದುರ್ಮರಣವೇನೆಂಬೆ..... ಏಕೆಮ್ಮನೀವಿಧಿಗೆ ತಂದಪ್ಪೆ ಬೇಡವ್ವ" ಎಂದು ನುಡಿಯುತ್ತಾರೆ. ಇಲ್ಲಿ ನಮ್ಮ ಗೌರವಕ್ಕೆ ಪಾತ್ರರಾಗುವವರು ಚಾಮರಸನ ನಿರ್ಮಲ–ಸುಮತಿಯರು.

ಅಕ್ಕಮಹಾದೇವಿ ಚಾಮರಸನಲ್ಲಿ ಸ್ವತಃ ರಾಜನೇ ಬಂದು ತನ್ನನ್ನು ಕರೆದೊಯ್ಯಬೇಕೆಂದೂ, ತಾನು ಹೇಳಿದುದನ್ನು ಮಾಡುವುದಾಗಿ ಕೌಶಿಕನು ಶಪಥಮಾಡಬೇಕೆಂದೂ ತಿಳಿಸುತ್ತಾಳೆ. ಅದರಂತೆ ಕೌಶಿಕ ತಾನೇ ನಿರ್ಮಲನ ಮನೆಗೆ ಬಂದು ಮಹಾದೇವಿಯನ್ನು ಕರೆದೊಯ್ಯುತ್ತಾನೆ. ಅವರಿಬ್ಬರ ವಿವಾಹದ ಬಗ್ಗೆ ಚಾಮರಸ ಸ್ಪಷ್ಟವಾಗಿ ಹೇಳಿಲ್ಲ. ತಾನು ಹೇಳಿದ್ದನ್ನು ರಾಜನು ತಕ್ಷಣ ನಡೆಸಿಕೊಡದಿದ್ದರೆ ಅವನನ್ನು ಬಿಟ್ಟು ಹೋಗುವುದಾಗಿ ಒಂದೇ ಷರತ್ತನ್ನು ಇಲ್ಲಿ ಮಹಾದೇವಿ ಹಾಕಿದ್ದಾಳೆ. ಅರಮನೆಗೆ ಹೋದ ಮೇಲೆ ಮಹಾದೇವಿಯನ್ನು ಒಂದು ದಿನ ಕೌಶಿಕ ತುಡುಕಲು, ಅವಳು "ನೀನು ಸಲೆ ಶಿವಭಕ್ತನಾದೊಡೆ ಕೂಡುವೆನು ನಿನ್ನ" ಎಂದು ತಿಳಿಸುತ್ತಾಳೆ. ಅವನು ಒಪ್ಪದಿದ್ದಾಗ "ನಮಗೆ ನಿಮ್ಮ ಸಂಗವಳವಡದು... ಎಮಗೆ ನಿಮ್ಮ ಬಂಧನ ಬಿಟ್ಟುದು" ಎಂದು ಹೇಳುತ್ತ "ಆ ಕ್ರಮದಲುಟ್ಟುಡುಗೆಯನು ತೊಡುಗೆಯನು" ಅರಸನಿಗೆ ಕೊಟ್ಟು ಬಿಡುತ್ತಾಳೆ. ಕೌಶಿಕ ಸೀರೆಯನ್ನು ಹಿಡಿದೆಳದ ಮಾತನ್ನು ಚಾಮರಸ ಹೇಳಿಲ್ಲ. ಮಹಾದೇವಿಯಕ್ಕ, ಕೌಶಿಕನನ್ನು ಕೆಲವು ಶರತ್ತುಗಳೊಂದಿಗೆ ಲಗ್ನವಾದ ಬಗ್ಗೆಯೂ, ಅವಳು ಅವನೊಡನೆ ಸಂಸಾರ ಸುಖವನ್ನನುಭವಿಸಿದ ಬಗ್ಗೆಯೂ ಹರಿಹರ ಸ್ಪಷ್ಟವಾಗಿ ಹೇಳಿದ್ದಾನೆ. ಗಂಡ–ಹೆಂಡತಿ ಮಲಗಿದ ವೇಳೆಯಲ್ಲಿ ಜಂಗಮನೊಬ್ಬ ಬಂದಾಗ ಮಹಾದೇವಿ ಧಡಕ್ಕನೆದ್ದು ಅವನನ್ನುಪಚರಿಸಲು ಬರುತ್ತಾಳೆ. ಜಂಗಮನೇ ಅವಳನ್ನು ಎಚ್ಚರಿಸುತ್ತಾನೆ. ಅವಳು ಸೀರೆಯನ್ನು ತೆಗೆದುಕೊಳ್ಳಲು ಕೈಹಾಕಿದಾಗ ಕೌಶಿಕ ನಿನ್ನಂತಹ ವಿರಕ್ತೆಗೆ ಸೀರೆಯ ಗೊಡವೆಯೇಕೆಂದು ನುಡಿಯುತ್ತಾನೆ. ಆಗ ಅವಳು ರಾಜನಿಗೆ ಅವನು ಮಾಡಿದ

ಕೊನೆಯ ತಪ್ಪೆಂದು ನೆನಪಿಸಿ ಹಾಗೆಯೇ ಹೊರಟು ಬಿಡುತ್ತಾಳೆ. ಇಲ್ಲಿಯ ಸನ್ನಿವೇಶದಲ್ಲಿ ಹೆಚ್ಚು ಸಹಜತೆಯಿದೆ.

ಲಿಂಗವನ್ನು ತಿಳಿಯಬಯಸಿ ಅನೇಕ ಭಕ್ತಜನಂಗಳು ಪ್ರಭುದೇವನ ಬರವನ್ನು ಹಾರೈಸುತ್ತಿದ್ದರೆಂಬ ಮಾತು ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಬರುತ್ತದೆ. ಪ್ರಭುದೇವನನ್ನು ಚಾಮರಸ ಕಂಡಿರುವ ದೃಷ್ಟಿ ಹರಿಹರನಿಗಿಂತ ಹೇಗೆ ಭಿನ್ನವಾಗಿದೆಯೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಪ್ರಭುವಿನ ಪಾತ್ರದ ವೈಭವೀಕರಣದ ಇಂತಹ ಮಾತುಗಳನ್ನು ಪ್ರಭುಲಿಂಗಲೀಲೆಯಲ್ಲಿ ಚಾಮರಸ ಮತ್ತೆ ಮತ್ತೆ ಹೇಳಿರುವುದು ಕಂಡುಬರುತ್ತದೆ. ತನ್ನ ಬರವನ್ನು ಹಾರೈಸಿ ಹಂಬಲಿಸುತ್ತಿರುವ ಅಂತಹ ಭಕ್ತಜನರ ಅಂತರಂಗದಲ್ಲಿ ಮನೆಮಾಡಿರುವ ಅಜ್ಞಾನದ ಕತ್ತಲೆಯನ್ನು ತನ್ನ ಕಟಾಕ್ಷಕಾಂತಿಯಿಂದ ದೂರಮಾಡಬಯಸಿ ಕಾರಣಕಾಯದಲಿ ಸುಳಿಯುತ್ತ ನಡೆದ ಪ್ರಭುದೇವನಿಗೆ ಮೊದಲು ಭೆಟ್ಟಿಯಾದ ವ್ಯಕ್ತಿಯೆ ಗೊಗ್ಗಯ್ಯ. ಈ ಗೊಗ್ಗಯ್ಯನ ಪ್ರಸಂಗ ಮೊಟ್ಟಮೊದಲ ಬರುವುದೆ ಪ್ರಭುಲಿಂಗಲೀಲೆಯಲ್ಲಿ. ಗೊಗ್ಗಿದೇವನೊಬ್ಬ ಕೃಷಿಕ. ಆದುದರಿಂದ ಪ್ರಭುದೇವ ಮೊದಲು ಉದ್ದರಿಸಿದುದು ಒಬ್ಬ ಕೃಷಿಕನೆಂಬುದು ಗಮನಾರ್ಹ. ತೋಟದ ಕೆಲಸದಲ್ಲಿ ನಿರತನಾಗಿದ್ದ ಅವನು ಸರಳ ನಿರ್ಮಲ ಸ್ವಭಾವದವ. ಸತ್ಯಶುದ್ಧಕಾಯಕದಿಂದ ಬಂದುದನ್ನು ಗುರುಲಿಂಗ ಜಂಗಮರಿಗೆ ಸಮರ್ಪಿಸಿ ಅವರ ಒಕ್ಕು ಮಿಕ್ಕ ಪ್ರಸಾದವನ್ನು ಉಂಡು ಸುಖಿಸುವುದೇ ಶಿವಭಕ್ತಿಯೆಂಬ ಅಭಿಪ್ರಾಯ ಅವನದು. ಇಂತಹ ಭಕ್ತಿಯಿಂದ ಕೈಲಾಸಪ್ರಾಪ್ತಿ. ಕೈಲಾಸ ಪ್ರಾಪ್ತಿಯಿಂದ ನೋವು ಸಾವುಗಳಿಂದ ವಿಮುಕ್ತಿಯೆಂಬ ಸರಳ ತತ್ತ್ವಶಾಸ್ತ್ರವವನದು. ಪ್ರಭುದೇವ ಅವನಿಗೆ ವ್ಯವಸಾಯದಿಂದ ಜೀವಹಿಂಸೆ ತಪ್ಪದು, ನೀನು ಗುರುಲಿಂಗ ಜಂಗಮದ ಸೇವೆಯಿಂದ ಕೈಲಾಸಕ್ಕೆ ಹೋದರೂ ಮತ್ತೆ ಇಲ್ಲಿಗೆ ಬರಲೇಬೇಕು. ಬಾಹ್ಯದ ಗುರುಲಿಂಗಜಂಗಮ ಸೇವೆಯಿಂದ ಅಂತರಂಗದ ಗುರುಲಿಂಗ ಜಂಗಮವನ್ನು ಅರಿಯಬೇಕು ಎಂದು ಹೇಳಿದ. ಗೊಗ್ಗಯ್ಯ ತನ್ನ ಭಕ್ತಿ ಹೊಲ್ಲವಾಯಿತಲ್ಲ, ಎಂದು ಚಿಂತಿಸುತ್ತಿರುವಾಗ ಪ್ರಭುದೇವ ಅದನ್ನು ಒಂದು ಹೆಂಟೆಯ ಕೆಳಗೆ ಒಂದು ಹೊಳೆಯುವ ಕಲಶ ಕಾಣುವಂತೆ ಮಾಡುತ್ತಾನೆ. ಮಣ್ಣನ್ನು ಸರಿಸಿದಾಗ ಸುಂದರ ದೇವಾಲಯ ಕಾಣುತ್ತದೆ. ಇಬ್ಬರೂ ಒಳಹೊಕ್ಕು ನೊಡಿದಾಗ ಅಲ್ಲಿ ಲಿಂಗದಲ್ಲಿಯೆ ನೆಟ್ಟದೃಷ್ಟಿಯ ಅನಿಮಿಷ, ಲಿಂಗಯೋಗದಲ್ಲಿರುವುದು ಕಾಣಿಸುತ್ತದೆ. ಪ್ರಭುದೇವ ಆಗ ಗೊಗ್ಗಯ್ಯನನ್ನುದ್ದೇಶಿಸಿ "ಇದು ಕಣಾ ಶಿವಲಿಂಗಭಕ್ತಿಯನು ಸಾಧಿಸುವ ಪರಿ" ಎಂದು ಹೇಳಿ, ತಾನು ನರನೆಂಬಂತೆ ನಟನೆ ಮಾಡುತ್ತ, ಅನಿಮಿಷದೇವನನ್ನು ಪ್ರಾರ್ಥಿಸುತ್ತ ಸಮೀಪ ಹೋಗಲು, ಅನಿಮಿಷನ ಕೈಯ ಲಿಂಗ ಪ್ರಭುದೇವನನ್ನು ಸೇರುತ್ತದೆ. ಸಚ್ಚಿದಾನಂದಸ್ವರೂಪನಾದ ಅಲ್ಲಮನ ಅಂಶವೆ ಆ ಲಿಂಗವಾದುದರಿಂದ ಅದು ಪ್ರಭುದೇವನನ್ನು ಸೇರಿತೆಂದು

ಚಾಮರಸ ಹೇಳಿರುವುದನ್ನು ಇಲ್ಲಿ ಗಮನಿಸಬೇಕು. ಅವನ ದೃಷ್ಟಿಯಲ್ಲಿ ಪ್ರಭುದೇವ ಸಚ್ಚಿದಾನಂದ ಅರ್ಥಾತ್ ಪರಶಿವಸ್ವರೂಪ. ಮತ್ತೆ ಇಲ್ಲಿ ಪ್ರಭುವಿನ ವೈಭವೀಕರಣ.

ಅದೆಲ್ಲವನ್ನು ಕಂಡ ಗೊಗ್ಗಯ್ಯ, "ಈ ಕೃಪಾಳು ದೇವನಾಗಬೇಕು" ಎಂದು ಉದ್ಗರಿಸಿ "ಶಿವಲಿಂಗಭಕ್ತಿಯ ದಾರಿಯನು ನಾನನಿಮಿಷನ ಸಾಕಾರದಲಿ ನಿನ್ನ ಕತದಿಂದ ಕಂಡರಿದೆನು, ಸಾರಜಂಗಮಲಿಂಗವೆಂಬಾ ಕಾರಣದಲಿ ಈ ಪರಿ ನೀನು ಸುಳಿಯುತೆ ಧಾರುಣಿಯ ಭಕ್ತರನು ಸಲಹು" ಎಂದು ಪ್ರಾರ್ಥಿಸುತ್ತಾನೆ. ಹಾಗೆಯೇ ಮುಂದುವರಿದು ನೀನು ಇದೆಲ್ಲವನ್ನು "ನುಡಿದು ತೋರಲದೇಕೆ ನೀನೇ ನಡೆದು ತೋರಿಸಿ ಲಿಂಗನಿಷ್ಠೆಯ ಹಿಡಿಹುಗೊಳಿಸುವುದು" ಎಂದು ಪ್ರಾರ್ಥಿಸುತ್ತಾನೆ. ಪ್ರಭುದೇವ ಅವನ ಸೂಚನೆಯ ಪ್ರಕಾರ ಲೋಕಹಿತಕಾರ್ಯಕ್ಕೋಸುಗ ಮುಂದೆ ಹೋಗುತ್ತಾನೆ. ಅಲ್ಲಮಪ್ರಭುನಿರ್ದೇಶಿತ ಲಿಂಗಭಕ್ತಿಯಲ್ಲಿ ಗೊಗ್ಗಯ್ಯ ನಿರತನಾಗುತ್ತಾನೆ.

ಹರಿಹರನ ರಗಳೆಯಲ್ಲಿಯೂ ಅನಿಮಿಷಯ್ಯನ ಪ್ರಸಂಗ ಬರುತ್ತದೆ. ಅಲ್ಲಿ ಅದು ಅಲ್ಲಮನ ಜೀವನಕ್ಕೆ ಹೊಸತಿರುವು ಕೊಡುವ ಸನ್ನಿವೇಶವಾಗಿ ಬಂದರೆ ಇಲ್ಲಿ ಅದು ಗೊಗ್ಗಯ್ಯನ ಜೀವನಕ್ಕೆ ಹೊಸ ತಿರುವು ಕೊಡುವ ಸನ್ನಿವೇಶವಾಗಿ ಬಂದಿದೆ. ಹರಿಹರ, ಅನಿಮಿಷನನ್ನು ಪ್ರಭುದೇವರ ಗುರುವೆಂಬಂತೆ ಚಿತ್ರಿಸಿದ್ದರೆ, ಚಾಮರಸ ಅವನನ್ನು ಗೊಗ್ಗಯ್ಯನಿಗೆ ಒಂದು ನಿದರ್ಶನವಾಗಿಸಿದ್ದಾನೆ. ಪ್ರಭುದೇವ ಅವನನ್ನು ಪ್ರಾರ್ಥಿಸುವುದು ಜಗತ್ತಿಗೆ ತೊರುವ ನಟನೆಯೆಂದು ಚಾಮರಸ ಹೇಳುವುದನ್ನು ನೋಡಿದಾಗ, ಅನಿಮಿಷನು ಅಲ್ಲಮನ ಗುರುವೆಂಬುದನ್ನು ಚಾಮರಸ ಒಪ್ಪುತ್ತಾನೊ ಇಲ್ಲವೊ ಎಂಬ ಸಂಶಯ ಓದುಗರಲ್ಲಿ ಮೂಡಬಹುದಾಗಿದೆ. ಇದು ವೈಭವೀಕರಣದ ಪರಾಕಾಷ್ಠೆ. ಸ್ವತಃ ಪ್ರಭುದೇವ ಅನಿಮಿಷನನ್ನು ತನ್ನ ಗುರುವೆಂದು ತನ್ನ ವಚನದಲ್ಲಿ ಹೇಳಿರುವುದನ್ನು ನೆನಪಿಸಿಕೊಳ್ಳಬೇಕು. ಅಲ್ಲದೆ ಕೃಷಿಕಾಯಕವನ್ನು ಅಲ್ಲಗೆಳೆಯುವ ಸೂಚನೆ ಪ್ರಭುದೇವ ಗೊಗ್ಗಯ್ಯನಿಗೆ ಕೊಡುವ ತತ್ವೋಪದೇಶದಲ್ಲಿದೆ. ಅಲ್ಲಮನ ಈ ಧೋರಣೆಯ ಅಂತರಾರ್ಥ ಹೊಳೆಯದೆ ಹೋದಾಗ ಅದನ್ನು ಒಪ್ಪದಿರುವ ಸಾಧ್ಯತೆಯೂ ಇದೆ.

ಭಕ್ತರನ್ನುದ್ಧರಿಸಲು ಕೈಕೊಂಡ ಪ್ರಭುದೇವನ ಸಂಚಾರ ಸಂದರ್ಭದಲ್ಲಿ ಅವನಿಗೆ ಭೆಟ್ಟಿಯಾದ ಎರಡನೆಯ ವ್ಯಕ್ತಿ ಮುಕ್ತಾಯಕ್ಕ. ಮತ್ತೊಬ್ಬರಿಗೆ ಉಪದೇಶಿಸುವ ಇಲ್ಲವೆ ಬೋಧಿಸುವ ಅಲ್ಲಮನ ಯೋಗ್ಯತೆಯನ್ನೇ ಪ್ರಶ್ನಿಸಿದ ಧೀರೆಯವಳು. ಗುಪ್ತಭಕ್ತನಾದ ತನ್ನ ಸೋದರ ಅಜಗಣ್ಣ ಲಿಂಗೈಕ್ಯನಾದುದಕ್ಕೆ ಮುಕ್ತಾಯಕ್ಕ ದುಃಖಿಸುತ್ತಿರುವ ಸಂದರ್ಭದಲ್ಲಿ ಪ್ರಭುದೇವ ಅವಳನ್ನು ಕಾಣುತ್ತಾನೆ. ಸೋದರ ಅಜಗಣ್ಣನಿಗಾಗಿ ಅವಳು ಅಳುತ್ತಿರುವುದನ್ನು ತಿಳಿದ ಪ್ರಭುದೇವ "ತಾಯೆ ಭಕ್ತರಿಗುಂಟೆ ಚಿಂತೆಗಳಾಯಸಂಗಳು.... ಬರಿದೆಗೆ ಹಲವ ಹಂಬಲಿಸಿ ಬಾಯಬಿಡಲಹುದೆ ವೃಥಾ ನಿಃಕಾಯದಜಗಣ್ಣಂಗೆ ಮರುಳೆ ಮೋಹವಿದೇತಕೌ" ಎಂದು ಸಂತೈಸಿ, ಗುಹೇಶ್ವರ

ಲಿಂಗದ ಶರಣನಾದ ಅಜಗಣ್ಣನು ಮೊದಲು ಇದ್ದು ಆಮೇಲೆ ಹೋದವನಲ್ಲ. ಆತನು ನಿತ್ಯನು" ಎಂದು ತಿಳಿವನ್ನು ನೀಡುತ್ತಾನೆ. ಮುಕ್ತಾಯಕ್ಕ ಆಗ "ನಮಗಿನ್ನು ಗತಿಮತಿ ಯಾವುದು?" ಎಂದು ಕೇಳಿದ ಪ್ರಶ್ನೆಗೆ ಪ್ರಭುದೇವ ಮೆಚ್ಚಿ "ಲಿಂಗಮಾರ್ಗವನು ಹೊಕ್ಕು, ಹೋರಟೆಯೆಲ್ಲವನು ಹೊಯ್ದಿಕ್ಕಿ ಸುಖವಡುವಂತು ನಿಜದೈಕ್ಯ ನಿನಗಹುದು" ಎಂದು ತಿಳಿಸಿ ಮುಂದುವರಿದು "ಲಿಂಗವನರಿವವರು ಕರ್ಮೇಂದ್ರಿಯಂಗಳ ಒಯ್ಯನೆ ಓಸರಿಸಿ, ಹೊರಗೆ ಮಾಡುವ ಮಾಟವ ತೊರೆಯುವುದು, ಅಂತರ್ಮಾಗವೊಂದನೆ ಹೋಗುವುದು ಅದೇ ಶಿವಭಕ್ತಿ" ಎಂದು ಬೋಧಿಸುತ್ತಾನೆ. ಆಗ ಮುಕ್ತಾಯಕ್ಕ ಪ್ರಭುವಿಗೆ ಹಾಕುವ ಪ್ರಶ್ನೆ ಬಹಳ ಮಾರ್ಮಿಕವಾಗಿದೆ. "ದೇಹಿಗಳು ಕರ್ಮೇಂದ್ರಿಯವ ಜರೆದರೆ, ಜೀವವು ಆವ ಆಶ್ರಯದಲಿಹುದು? ಮನಸು ಮಚ್ಚುವುದೆಂತು? ಪಟುವಾಗಿ ಬಯಲು ತಾನಹ ಪರಿಯದಾವುದು?" ಎಂಬುದೇ ಆ ಪ್ರಶ್ನೆ. ಅದಕ್ಕೆ ಪ್ರಭುದೇವ ತಾಯಿಯೊಬ್ಬಳ ಮೊಲೆ ಹಾಲೇ ಮಗುವಿಗೆ ಜೀವನವಾದರೂ, ಮೆಲ್ಲ ಮೆಲ್ಲನೆ ಮೊಲೆಯುಣ್ಣುವದನ್ನು ಮರೆಸಿ ಅನ್ನವನ್ನುಣಿಸುವುದನ್ನು ಕಲಿಸುವಂತೆ ಸಾಧಕನೂ ಮೆಲ್ಲ ಮೆಲ್ಲನೆ ಹೊರಗನು ಮರೆದು ನಿರಾಳದಲ್ಲಿ ನಿಲ್ಲುವುದನ್ನು ತಿಳಿಯಬೇಕೆಂದು ಹೇಳುತ್ತಾನೆ. ಮುಕ್ತಾಯಕ್ಕ ಅದನ್ನು ಒಪ್ಪುತ್ತಲೆ ಮತ್ತೊಂದು ಮಹತ್ವದ ಪ್ರಶ್ನೆ ಹಾಕಿ, ಬೋಧಿಸುವ ಅವನ ಅಧಿಕಾರವನ್ನೇ ಪ್ರಶ್ನಿಸುತ್ತಾಳೆ. ಅದು ಹೀಗಿದೆ "ಪರಮತತ್ವವನ್ನು ನುಡಿದು ಹೇಳುವ ಗುರುವೆ, ನಿನ್ನಲ್ಲಿ ಇನ್ನೂ ಮನವಾಕ್‌ಕಾಯಗಳು ಕರ್ಮ ಮಾಡುತ್ತಿರುಲು, ಬಹಳ ಬಲ್ಲವನಂತೆ ಜಾಣ್ಮೆಯಾ ಮಾತಿನ ರಚನೆ ಮಾಡಿದರೆ ನಮಗೆ ನಂಬುಗೆಯಾಗುವುದೆಂತು?" ಆಗ ಪ್ರಭುದೇವ ಬೆಂದನುಲಿಯ ಉದಾಹರಣೆ ಕೊಟ್ಟು ಅದು ಹಗ್ಗದಂತೆ ಕಂಡರೂ ಅದರಲ್ಲಿ ಹಗ್ಗದ ಗುಣಗಳಿಲ್ಲದಿರುವಂತೆ, ತನ್ನ ಕರ್ಮೇಂದ್ರಿಯಗಳಿವೆಯೆಂದು ಹೇಳುತ್ತಾನೆ. ಅದಕ್ಕೆ ಮುಕ್ತಾಯಕ್ಕ "ಪಿಂಡಮಯ ತನುವಿಲ್ಲದಿದ್ದರೆ ತಾಳೋಷ. ಸಂಪುಟಸಂಗಶಬ್ದಗಳು ಎಲ್ಲಿ ಸಂಜನಿಸಿದವು? ಎಂದು ಪ್ರಭುವನ್ನು ಮಾತಿನ ತೊಡಕಿನಲ್ಲಿ ಮತ್ತೊಮ್ಮೆ ಸಿಕ್ಕಿಸುತ್ತಾಳೆ. ಪ್ರಭುದೇವ ಅವಳ ತಿರುಳ್ಮಾತಿನ ಪ್ರಶ್ನೆಗೆ ಮೆಚ್ಚಿ "ಪೃಥ್ವಿಯ ತನು ಮುಗಿಲಿಗಿಲ್ಲದಡೇನು ಗರ್ಜಿಸದೆ?" ಮುಂತಾಗಿ ಹೇಳಿ ಅವಳನ್ನು ಸುಮ್ಮನಾಗಿಸುತ್ತಾನೆ. ಮುಕ್ತಾಯಿಗೆ ತನ್ನ ಸೀಮಿತ ಜ್ಞಾನದ ಅರಿವಾಗಿ ಮುಂದೆ ಪ್ರಭುದೇವನ ಸೂಚನೆಯಂತೆ ನಡೆದು "ನೂಲ ಹಿಡಿದು ಬೆಟ್ಟವನೇರುವಂತೆ" ನಿಜದ ನಿರಾಳವನ್ನು ಸಾಧಿಸುತ್ತಾಳೆ.

ಇಲ್ಲಿ ಬರುವ ಸಂವಾದ, ಪ್ರಶ್ನೆ, ಪ್ರತಿಪ್ರಶ್ನೆಗಳನ್ನು ಓದುತ್ತಿರುವಾಗ ಬೆಳಗು ಬೆಳಗು ಹಳಚಿದ ಅನುಭವವಾಗುತ್ತದೆ. ಮುಕ್ತಾಯಿ ತನ್ನ ಸೋದರನ ಗರಡಿಯಲ್ಲಿ ಪಳಗಿದವಳು. ಮತ್ತೊಬ್ಬರು ಹೇಳಿದುದನ್ನು ಒರೆಗೆ ಹಚ್ಚಿ ಪರೀಕ್ಷಿಸುವ ಜಾಯಮಾನ ಅವಳದು. ತನಗೆ ಸರಿಕಾಣದಿದ್ದಾಗ ಅದನ್ನು ನಿರ್ಭಯದಿಂದ ಆಡಿ ತೋರುವ

ಧೀಮಂತೆಯಾದ ಅವಳು, ತನ್ನ ಅಭಿಪ್ರಾಯ ತಪ್ಪೆಂಬುದು ಮನವರಿಕೆಯಾದಾಗ ತಕ್ಷಣ ಒಪ್ಪಿಗೊಳ್ಳುವ ಒಳ್ಳೆಯ ಗುಣದವಳೂ ಆಗಿದ್ದಳು. ತನ್ನ ಅರೆಕೊರೆಯನ್ನು ತುಂಬಿಕೊಳ್ಳುವ ಗುಣವೂ ಅವಳಲ್ಲಿತ್ತು. ಪ್ರಭುದೇವನಿಗೇ ಪ್ರಶ್ನೆ ಹಾಕಿದ ಮುಕ್ತಾಯಕ್ಕ ನಮ್ಮ ನೆನಪಿನಲ್ಲಿ ಸದಾ ಹಸಿರಾಗಿರುವ ವ್ಯಕ್ತತ್ವದವಳು.

ಮುಕ್ತಾಯಕ್ಕನಿಗೆ ವೀರಶೈವೋಪದೇಶಮಾಡಿ, ಅವಳು ಆ ಮಾರ್ಗದಲ್ಲಿ ನಡೆದು ನಿಜದ ನಿಲುವಿನ ಪರಿಯನ್ನು ಕಾಣಲು ತಿಳಿಸಿ ಮುಂದೆ ನಡೆದ ಪ್ರಭುದೇವ ಸೊನ್ನಲಾಪುರಕ್ಕೆ ಬಂದು ಅಲ್ಲಿ, ಕೆರೆ ದೇವಾಲಯಗಳನ್ನು ಕಟ್ಟಿಸುವ ಕಾರ್ಯದಲ್ಲಿ ನಿರತನಾದ ಸಿದ್ಧರಾಮನನ್ನು ಕಾಣುತ್ತಾನೆ. ಸಿದ್ಧರಾಮ ಯೋಗಮಾರ್ಗದಲ್ಲಿ ಬಲ್ಲಿದನಾಗಿದ್ದನೆಂಬ ತಿಳಿವಳಿಕೆ ಚಾಮರಸನಿಗಿದೆ. ಆದರೆ ಅವನು "ಪಿಂಡದೊಳು ಪಿರಿದೆನಿಪ ನಾಡೀಮಂಡಲಂಗಳ ತಾನೆ ಸಾಧಿಸಿ ಕಂಡ" ಜ್ಞಾನ, ಖಂಡಜ್ಞಾನವಾಗಿತ್ತಲ್ಲದೆ ಅಖಂಡಜ್ಞಾನವಾಗಿರಲಿಲ್ಲವೆಂಬ ಅಭಿಪ್ರಾಯ ಪ್ರಭುದೇವನದು. ಕೆರೆ, ದೇಗುಲಗಳ ನಿರ್ಮಾಣದಂತಹ ಜನಹಿತಕಾರ್ಯಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ ಸಿದ್ಧರಾಮ, ಪ್ರಭುದೇವನಿಗೆ "ನೂಲ ಸಂಕಲೆಗಡಿದು ಕನಕದ ಕೋಳವನು ಕಾಲಿಂಗೆ ಕೀಲಿಪ" ಕಾಳು ಮತಿಯವನಂತೆ. "ಗೋಳು ಮಂಡೆಯ ಕೀರ್ತಿಗೋಸುಗ" ಕೋಳು ಹೋದವನಂತೆ ಕಾಣಿಸುತ್ತಾನೆ. ಚಿಕ್ಕ ಸಂಸಾರವನ್ನು ಸಡಿಲಿಸಿ ಹಿರಿಯ ಸಂಸಾರವನ್ನು ಹೊಕ್ಕ ಸಿದ್ಧರಾಮನಿಗೆ ಶಿವಯೋಗದ ರಹಸ್ಯ ತಿಳಿಸಿಕೊಡುವ ಉದ್ದೇಶ ಪ್ರಭುವಿನದು. ಅದಕ್ಕಾಗಿ ಮೊದಲು ಅವನು ಕೆರೆ ಕಟ್ಟುವ ಕಾರ್ಯದಲ್ಲಿ ತೊಡಗಿದ ಸಿದ್ಧರಾಮನ ಗುಡ್ಡರನ್ನು ಕೆಣಕುವ ಮೂಲಕ ಸಿದ್ಧರಾಮನನ್ನು ಕೆಣಕುತ್ತಾನೆ. ಮುಂದೆ ಅವರಿಬ್ಬರಲ್ಲಿ ನಡೆವ ಸಂವಾದ ಒಂದು ಬಗೆಯ ವೈಯಕ್ತಿಕ ಸಂಘರ್ಷಣೆಯಂತೆ ಮೊದ ಮೊದಲು ತೋರಿದರೂ ತದನಂತರ ಅದು ತಾತ್ವಿಕ ವಿವೇಚನೆಯಾಗಿ ಪರಿಣಮಿಸಿರುವುದನ್ನು ಕಾಣಬಹುದು. ತನ್ನ ಹಣೆಗಣ್ಣ ಉರಿಯನ್ನು ಪ್ರಭುದೇವ ತನ್ನ ಕಾಲ ಅಡಿಯಲ್ಲಿ ಅಡಗಿಸಿಕೊಂಡುದನ್ನು ಸಿದ್ಧರಾಮ ಕಂಡಾಗ ಅವನ ಕಣ್ಣು ತೆರೆಯುತ್ತದೆ. ತನ್ನ ತಪ್ಪನ್ನು ಮನ್ನಿಸುವಂತೆ ಸಿದ್ಧರಾಮ ಬೇಡಿಕೊಳ್ಳುತ್ತಾನೆ. "ಕರ್ಮದ ಕಳವಳಕೆ ಬೇಸತ್ತೆ. ಖಂಡಜ್ಞಾನಮಾರ್ಗದಲಿ ಹೊಲಬುಗೆಟ್ಟೆನು.... ದೇವ ನೀನೆ ಸಲಹಬೇಕು" ಎಂದು ಸಿದ್ಧರಾಮ ನಮಸ್ಕರಿಸುತ್ತಾನೆ. ಅವನ ಮೇಲೆ ಕರುಣದೋರಿದ ಪ್ರಭುದೇವ, "ಸಬುದಾಗಮಂಗಳ ಶಿಕ್ಷೆ ನಿನಗೆ ಬೇಕಾಗಿಲ್ಲ, ನೀನು ಸಂಸ್ಕಾರಿ" ಎಂದು ಸಿದ್ಧರಾಮನನ್ನು ಹೊಗಳುತ್ತ ಅವನಿಗೆ "ಏಕಾಂತದಲಿ ಮುದದಿಂದಲೊಪ್ಪುವ ಕಾಯ ಕರಣದ ಸಂದು ಸಂಬಂಧವನು ಸೂಚಿಸಿ ಜೀವ ಪರಮರನು ಒಂದುಗೂಡುವ ಶಕ್ತಿ ಭಕ್ತಿಯ ಹೊಂದಿಗೆಯನ್ನು" ಉಪದೇಶಿಸುತ್ತಾನೆ.

ರಾಘವಾಂಕನ 'ಸಿದ್ಧರಾಮಚಾರಿತ್ರ'ದಲ್ಲಿ ಬರುವ ಈ ಪ್ರಸಂಗದ ಜೊತೆ ಪ್ರಭುಲಿಂಗಲೀಲೆಯ ಪ್ರಸಂಗವನ್ನು ತೌಲನಿಕವಾಗಿ ಪರಿಶೀಲಿಸಿ, ಪ್ರಭುದೇವನ ಪಾತ್ರದ ವೈಭವೀಕರಣ ಚಾಮರಸನಲ್ಲಿ ಹೇಗೆ ನಡೆದಿದೆ ಎಂಬುದರ ವಿವರ ಹಿಂದೆ ಬಂದಿರುವುದರಿಂದ ಹೆಚ್ಚು ವಿಸ್ತಾರ ಇಲ್ಲಿ ಅನವಶ್ಯಕ. ಮುಂದೆ ಸಿದ್ಧರಾಮನನ್ನು ಕರೆದುಕೊಂಡು ಪ್ರಭುದೇವ ಕಲ್ಯಾಣದತ್ತ ಬಸವಣ್ಣನನ್ನು ಕಾಣಲು ಹೊರಡುತ್ತಾನೆ.

ಪ್ರಭುದೇವ ಕಲ್ಯಾಣಕ್ಕೆ ಹೋಗುವ ಉದ್ದೇಶ ಕೂಡ "ಭಕ್ತರು ಬೇಡಿದಿಷ್ಟಾರ್ಥಂಗಳನು ಕೈಗೂಡಿಸುವುದೇ" ಆಗಿದೆ. ಬಸವನರಮನೆಯ ಮುಂದೆ ಬಂದು ನಿಂತ ಪ್ರಭುದೇವ ಸಿದ್ಧರಾಮರನ್ನು ಕಂಡ ಹಡಪದಪ್ಪಣ್ಣ ಆ ಸುದ್ದಿಯನ್ನು ಲಿಂಗಪೂಜಾನಿರತ ಬಸವಣ್ಣನಿಗೆ ತಿಳಿಸುವುದು, ಅವರನ್ನು ಸ್ವಾಗತಿಸಿ ಒಳಗೆ ಕರೆದು ತರುವಂತೆ ಬಸವಣ್ಣ ಅಪ್ಪಣ್ಣನಿಗೆ ಸೂಚಿಸುವುದು, ಅಪ್ಪಣ್ಣ ಬಂದು ಕರೆದಾಗ ಪ್ರಭುದೇವ ಒಳಗೆ ಹೋಗದಿರುವುದು, ಮಡಿವಳ ಮಾಚಯ್ಯ, ಚೆನ್ನಬಸವಣ್ಣ ಇಬ್ಬರೂ ಹೊರಗೆ ಬಂದವರಾರೆಂದು ಸೂಚಿಸುವುದು– ಇವೆಲ್ಲ ನಡೆದ ಮೇಲೆ ಬಸವಣ್ಣ ಶಿವಗಣ ಸಹಿತ ಎದ್ದುಬಂದು ಅಲ್ಲಮನಿಗೆ ನಮಸ್ಕರಿಸಿ "ನಾನು ಮರವೆಯ ಮರುಳು ನೀನು ಅರಿವಿನ ತಿರುಳು, ನಾನು ರಂಜಕನು ನೀನು ನಿರಂಜನನು, ನಾನು ಪಶು ನೀನು ಪಶುಪತಿ, ನನ್ನ ತಪ್ಪನು ನೀನೆ ತಿದ್ದುವುದು" ಎಂದು ಪ್ರಾಂಜಲ ಮನಸ್ಸಿನಿಂದ ಪ್ರಭುದೇವನನ್ನು ಬಸವಣ್ಣ ಬೇಡಿಕೊಳ್ಳುವುದು ಅವನ ವಿನೀತ ಭಾವನೆಯ ದ್ಯೋತಕವಾಗಿದೆ. ಅವನ ಸಹನೆ ತಾಳ್ಮೆಗಳ ಪರಿಚಯವನ್ನು ಚಾಮರಸ ಹಿಂದೆಯೆ ಅವನ ಜನನಕ್ಕೆ ಕಾರಣ ಹೇಳುವ ಸಂದರ್ಭದಲ್ಲಿ ನಮಗೆ ಮಾಡಿಕೊಟ್ಟಿದ್ದಾನೆ. ಇಲ್ಲಿ ಅವನ ಮತ್ತೊಂದು ಸದ್ಗುಣದ ಪರಿಚಯ ನಮಗಾಗುತ್ತದೆ.

ಬಸವಣ್ಣ ಎಷ್ಟೆಲ್ಲ ಬೇಡಿದರೂ, ಪ್ರಭುದೇವ ಒಳಬರಲು ಒಪ್ಪುವುದಿಲ್ಲ. ಚೆನ್ನಬಸವಣ್ಣ, ಮಡಿವಾಳಯ್ಯ, ಉಳಿದ ಶಿವಭಕ್ತರು ಬಸವಣ್ಣನ ಪರವಾಗಿ ನಿಂತು ಬೇಡಿಕೊಂಡರೂ ಪ್ರಭುದೇವ ಜಗ್ಗುವುದಿಲ್ಲ. ಸ್ವತಃ ಸಿದ್ಧರಾಮನೇ ಬಸವಣ್ಣನ ತಪ್ಪನ್ನು ಕ್ಷಮಿಸಬೇಕೆಂದು ಮತ್ತೊಮ್ಮೆ ಬೇಡಿಕೊಳ್ಳುತ್ತಾನೆ. ಚೆನ್ನಬಸವಾದಿಗಳು ಕೂಡ "ಮುನ್ನ ನಿರುಪಾಧಿಯಲಿ ಕರುಣಿಸಿ, ನಿನ್ನ ಲೀಲೆಯೊಳೊಲಿದು ನೀ ಬಂದಿನ್ನುಪಾಧಿಯನರಸುವುದು ಮರಿಯಾದೆಯಲ್ಲ" ಎಂದು ಪ್ರಭುದೇವನಿಗೆ ಹೇಳಿ ಒಳಗೆ ಬರುವಂತೆ ವಿನಂತಿಸುತ್ತಾರೆ. ಅವರನ್ನು ಹೆಚ್ಚು ಪೀಡಿಸುವುದು ಸಾಕೆಂದು ಭಾವಿಸಿದ ಅಲ್ಲಮಪ್ರಭು "ನಡೆವಳಿಗಳೇನಾದಡಾಗಲಿ ನುಡಿವಳಿಯಲತಿ ಜಾಣರಾದಿರಿ... ನಡೆಯಿರಿ ಶಿವಲಿಂಗಭಕ್ತಿಯ ಬೆಡಗನೇಕಾಂತದಲಿ ನಿಮಗೆ ಹೇಳುವೆ" ಎಂದು ಅವರೆಲ್ಲರನ್ನು ಕರೆದುಕೊಂಡು ಒಳಗೆ ಹೋಗುತ್ತಾನೆ.

ಇಲ್ಲಿ ವೀರಶೈವದ ಒಂದು ಮುಖ್ಯತತ್ವವನ್ನು ಅಲ್ಲಮಪ್ರಭು ಬಸವನಿಗೆ ತಿಳಿಸಿಕೊಟ್ಟಿದ್ದಾನೆ. ನಡೆದಾಡುವ ಲಿಂಗವಾದ ಜಂಗಮ ಮನೆಗೆ ಬಂದಾಗ

ಲಿಂಗಪೂಜೆಗೆ ಮಹತ್ವವಿಲ್ಲವೆಂಬುದೇ ಆ ತತ್ವ. ಅದನ್ನು "ಜಂಗಮ ಒಲಿದು ನಡೆತರಲು ಪಾಡನೇ ಪರುಠವಿಸಿ ನುಡಿವ ಸಫಾಡಿಕೆಯನೆ ಒಡ್ಡಯಿಸಿ ತಮ್ಮಯ ಖೋಡಿಯನೆ ತಾವರಿಯರು" ಎಂದು ಪ್ರಭುದೇವ ಸಿದ್ಧರಾಮಯ್ಯನನ್ನುದ್ದೇಶಿಸಿ ಹೇಳುವ ಮಾತಿನಲ್ಲಿ ಸೂಚ್ಯವಾಗಿ ತಿಳಿಸಿರುವುದನ್ನು ಗಮನಿಸಬೇಕು.

ಎಲ್ಲರೂ ಸೇರಿ ಬಸವನ ಮನೆಯ ಅಂಗಳದ ಮೂಲಕ ಹೋಗುತ್ತಿರುವಾಗ ಅಲ್ಲಿಯ ಪ್ರಸಾದಕುಂಡದ ತೀರದಲ್ಲಿ ಕುಳಿತ ವ್ಯಕ್ತಿಯೊಬ್ಬ ಎದ್ದು ಬಂದು ಪ್ರಭುದೇವನಿಗೆ ಸಾಷ್ಟಾಂಗಪ್ರಣುತನಾಗುತ್ತಾನೆ. ಅವನೇ ಮರುಳಶಂಕರದೇವ. ನೆಲದ ಮರೆಯ ನಿಧಾನದಂತೆ ಮರುಳ ವೇಷದಲ್ಲಿ ಸಾಕಾರಶಂಕರನೆ ತನ್ನ ಮನೆಯ ಅಂಗಳದಲ್ಲಿರುವುದನ್ನು ಬಸವ ಗುರುತಿಸದೆ ಹೋದ ವಿಚಾರವನ್ನು ತಿಳಿಸಿ, ಸಿದ್ಧರಾಮನನ್ನುದ್ದೇಶಿಸಿ "ಯಾರು ಯಾವ ವೇಷದ ಮರೆಯಲಿಹರೊ, ಯಾರು ಮೆರೆಯುವ ಭಕ್ತರ ಮನವನ್ನು ಪರೀಕ್ಷಿಸಲು ತಮ್ಮ ನಿಜವೇಷವನ್ನು ಮರೆಸಿಹರೊ ಅಂಥವರ ನಿಜವನ್ನು ತಿಳಿಯದೆ ಭಕ್ತಿಸುಖ ಸಾಧ್ಯವಿಲ್ಲ' ಎಂದು ಮಾರ್ಮಿಕವಾಗಿ ನುಡಿಯುತ್ತಾನೆ. ಬಸವಣ್ಣನಿಗೆ ಹೇಳಬೇಕಾದುದನ್ನು ಪ್ರಭುದೇವ ಇಲ್ಲಿ ಪರ್ಯಾಯವಾಗಿ ಸಿದ್ಧರಾಮನಿಗೆ ಹೇಳಿದ್ದಾನೆ. ಬಸವಣ್ಣ, ಅಲ್ಲಮನ ಆ ಮಾತನ್ನು ನೆನಪಿನಲ್ಲಿಟ್ಟುಕೊಂಡುದನ್ನು ನಾವು ಮುಂದೆ ಅಲ್ಲಮನು ಅರೆಹುಚ್ಚನಂತೆ ಬಂದಾಗ ಅವನನ್ನು ಗುರುತಿಸುವ ಸಂದರ್ಭದಲ್ಲಿ ಕಂಡುಕೊಳ್ಳುತ್ತೇವೆ. ಹೀಗೆ ಇಲ್ಲಿ ಪ್ರಭುದೇವ ಬಸವನಲ್ಲಿರುವ ಕೊರತೆಯನ್ನು ಎತ್ತಿ ತೋರಿಸಿ ಅದನ್ನು ತಿದ್ದಿಕೊಳ್ಳುವಂತೆ ಪರ್ಯಾಯವಾಗಿ ಸೂಚಿಸಿರುವುದು ಪರಿಭಾವನಾರ್ಹವಾಗಿದೆ. ಪ್ರಭುದೇವನ ಉಪದೇಶದ ಹಲವಾರು ವಿಧಾನಗಳಲ್ಲಿ ಇದೂ ಒಂದು.

ಬಸವಣ್ಣನ ಮಹಾಮನೆಯಲ್ಲಿ ಹಲವಾರು ವರ್ಷಗಳಿಂದ ಗುಪ್ತಭಕ್ತಿಯನ್ನು ಆಚರಿಸುತ್ತಿದ್ದ ಆ ಮರುಳಶಂಕರನ ಹೊಸಪರಿಯ ರೀತಿಯನ್ನು ಸಿದ್ಧರಾಮ ತಿಳಿಯಬಯಸಿದಾಗ ಪ್ರಭುದೇವ "ತನ್ನ ಹೊಟ್ಟೆಯ ಪಾಡಿಗಾಗಿ ಯಾವ ಕೆಲಸವನ್ನೇ ಮಾಡಿದರೂ ಜೀವಜಾಲಕ್ಕೆ ನೋವು ತಪ್ಪದೆಂದು ಭಾವಿಸಿದ ಇವನು, ಶಿವಲಿಂಗಭಕ್ತರು ಸೇವಿಸಿದ ಶೇಷಪ್ರಸಾದವನ್ನೇ ಆಧರಿಸಿದ ಮಹಾತ್ಮ, ಈಶಪ್ರಸಾದವನ್ನು ಮೆಚ್ಚಿದ ಮಹಿಮ, ಅರಿವಿನ ತಿರುಳು, ಲಿಂಗಾಗಮದ ಹೊಳಹಿನ ಹುರುಳು, ನಿರ್ಮಲ ಧರ್ಮದ ಚಾರುಚಾರಿತ್ರ, ಪರಮಪಾವನ ಮೂರ್ತಿ" ಮುಂತಾಗಿ ಅವನ ಮಹಿಮೆಯನ್ನು ಬಿತ್ತರಿಸುತ್ತಾನೆ. ಮುಂದುವರಿದು "ಬಸವಣ್ಣ ನಿನ್ನ ಭಕ್ತಿವೃಕ್ಷದ ಪಸರಣೆಯನ್ನು ಆಶ್ರಯಿಸಿಬಯಸಿ ಬಂದ ಮಹಾತ್ಮರು ಹಲವಾರು ಜನ, ಆದರೆ ಈ ಮರುಳಶಂಕರನಿಗೆ ಸಮಾನರಾದವರು ಯಾರೂ ಇಲ್ಲ. ಇಂತಹ ಮಹಾತ್ಮರು ನಿನ್ನ ಮನೆಯ ಬಾಗಿಲ ಮುಸುರಿಕೊಂಡಿರುವುದರಿಂದ ನೀನೇ ಕೃತಾರ್ಥ." ಎಂದು ಬಸವಣ್ಣನನ್ನು ಕೊಂಡಾಡುತ್ತಾನೆ. ತದನಂತರ ಮರುಳಶಂಕರನಿಗೆ ಪ್ರಭುದೇವ

ಐಕ್ಯ ಪದವೀಯನ್ನಿಯುತ್ತಾನೆ. ಗುಪ್ತಭಕ್ತಿಯ ಮೇರುಶಿಖರದಂತಿದ್ದ, ಆ ಶಿವಶರಣ ಪ್ರಸಾದಜೀವಿಯಾಗಿ ಪ್ರಸಾದಕಾಯನಾಗಿದ್ದ, ಮರುಳಶಂಕರನಂತಹರಿಗೂ ಐಕ್ಯಪದವಿಯನ್ನೀಯುವ ಘನತೆ ಅಲ್ಲಮಪ್ರಭುವಿನದು.

ಆಮೇಲೆ ಪ್ರಭುದೇವ, ಬಸವಣ್ಣನ ಅರಮನೆಯ ಅನುಭವಮಂಟಪದಲ್ಲಿ, ಬಸವಾದಿಗಳಿಗೆ ಇಷ್ಟಲಿಂಗ, ಪ್ರಾಣಲಿಂಗ, ಷಟ್‌ಸ್ಥಲ, ದೇಹಾದಿಗಳ ವಿವರವನ್ನು ಬೋಧಿಸುತ್ತಾನೆ. ದೇಹವನ್ನು ಕುರಿತು, ಪ್ರಭುದೇವ "ಹಾಲು ಹಯನು ಇದ್ದಾಗ ಹಬ್ಬವನ್ನು ಹೇಳದೆ ಕೇಳದೆ ಮಾಡಬೇಕು. ಗಾಳಿ ಬೀಸುವಾಗಲೆ ಹೊಟ್ಟು ತೂರಬೇಕು. ಅದರಂತೆ ಕಾಲು, ಕೈ, ಕಣ್ಣು ದೇಹವಿರುವಾಗಲೆ ಮರಣವನ್ನು ನಿವಾರಿಸಿ ಮೇಲುಗತಿಯನರಸಬೇಕು. ಅವನೇ ಜಾಣ" ಎಂದೂ, ನಿಜಭಕ್ತನ ಲಕ್ಷಣವನ್ನು ಕುರಿತು "ಕೈಯೊಗಳಗೆ ಶಿವಲಿಂಗವಿಪ್ಪಡೆ ಮೈಯ ಸೋಂಕಿರಬೇಕು. ವಸ್ತ್ರದ ಹುಯ್ಯಲಿಗೆ, ಹೂಪತ್ರೆಗಳ ಜಂಜಡಕೆ ಹೋಗದೆ ತನ್ನಲ್ಲಿರುವ ಮೂರುಮೈಗಳನ್ನೇ ಲಿಂಗದೇವನಿಗೆ ವಸ್ತ್ರವನ್ನಾಗಿ ಮಾಡುವವನೆ ನಿಜಭಕ್ತನು" ಎಂದು ಹೇಳಿರುವುದು ಮನನೀಯವಾಗಿದೆ. ವೀರಶೈವಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳ ವಿವರಣೆ ಗತಿ ೧೬ರಲ್ಲಿ ವಿಸ್ತಾರವಾಗಿ ಬಂದಿದೆ. ವೀರಶೈವ ತತ್ವಾರ್ಥವಿವೇಚನೆಯಲ್ಲಿ ಅದರ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳ ವಿವರಣೆಯಲ್ಲಿ ಪ್ರಭುದೇವ ತುಂಬ ಬಲ್ಲಿದನಾಗಿದ್ದನೆಂಬುದನ್ನು ತೋರಿಸುವುದೇ ಇಲ್ಲಿ ಚಾಮರಸನ ಪ್ರಮುಖ ಉದ್ದೇಶವಾಗಿದೆ.

ಹೀಗೆ ಶಿವಾನುಭವಮಂಟಪದಲ್ಲಿ ಅಲ್ಲಮ ಬಸವಾದಿಗಳೊಡನೆ, ವೀರಶೈವ ತತ್ವಗಳ ಚರ್ಚೆಯಲ್ಲಿ ತೊಡಗಿದ್ದಾಗ ನಿಜದ ನಿಲುವನ್ನು ತಿಳಿಸಿಕೊಡಬಲ್ಲ ಗುರುವನ್ನು ಅರಸುತ್ತ ಮಹಾದೇವಿ ಕಾಡು ಮೇಡುಗಳನ್ನು ದಾಟಿ, ಕಾಯವನ್ನು ಕಂದಿಸುತ್ತ, ಕಲ್ಯಾಣಕ್ಕೆ ಬಂದು ಅನುಭವಮಂಟಪವನ್ನು ಪ್ರವೇಶಿಸಿ ಅಲ್ಲಿ ವಿರಾಜಮಾನನಾಗಿದ್ದ ಪ್ರಭುದೇವನನ್ನು ಕಂಡಾಗ ಅವಳ ಕಂಗಳ ಬರ ಹಿಂಗಿಹೋಗುತ್ತದೆ. ಆಗ ಅವಳಿಗಾದ ಸಂತಸ ಹೇಗಿದ್ದಿತೆಂಬುದನ್ನು ಚಾಮರಸ "ಅರಲುಗೊಂಡವರು ಇದಿರಲಿ ಅಮೃತದ ತೊರೆಯನೇ ಕಂಡಂತೆ, ಕುರುಡಗೆ ಮೆರೆವ ರೋಮದ ಕೂಪವೆಲ್ಲ ಕಣ್ಣಾದಂತೆ" ಎಂಬ ಎರಡು ಅರ್ಥಪೂರ್ಣ ಉಪಮೆಗಳ ಮೂಲಕ ಸ್ಪಷ್ಟಪಡಿಸಿದ್ದಾನೆ. ಅಲ್ಲಿಯ ಶರಣರಿಗೆಲ್ಲ ಶರಣೆಂದು ನಿಂತ ಅವಳು ಭಕ್ತಿಯ ಗೂಡಿನಂತೆ ಅವರಿಗೆ ಕಾಣಿಸುತ್ತಾಳೆ. ಅವಳನ್ನು ಬಸವಾದಿಗಳಿಗೆ ಪರಿಚಯಿಸುತ್ತ "ಬಸವಣ್ಣಾ, ಭಕ್ತಿಬೇಟದ ಬೆಸನದಲಿ ಮೈಮೆರೆತು ಲಜ್ಜೆಯ ಹೆಸರ ಹೆಮ್ಮೆಯ ಕೆಡಿಸಿ, ತನುಮೋಹವನು ಪಲ್ಲಟಿಸಿ ಹಸಿವು ತೃಷೆಗಳ ಹರವರಿಗಳನು ಭಂಗಿಸಿ ದಿಗಂಬರಿಯಾಗಿರುವ ಮಹಾದೇವಿಯರನು ನೋಡ" ಎಂದು ಪ್ರಭುದೇವ ಹೇಳಿರುವ ಮಾತಿನಲ್ಲಿ ಅವಳ ವ್ಯಕ್ತಿತ್ವವೆಲ್ಲ ಕೆನೆಗಟ್ಟಿರುವುದನ್ನು ಕಾಣಬಹುದು. ಮುಂದೆ ಪ್ರಭುದೇವನಿಂದ ಅವಳ ಪರೀಕ್ಷೆ ಆರಂಭವಾಗುತ್ತದೆ. ಅವಳ ಬತ್ತಲೆಯ ಬಗ್ಗೆ, ಅವಳು ಜಗಭರಿತನಿಗೆ ಒಲಿದ ಬಗ್ಗೆ,

ರೂಪು ನಿರೂಪದ ಮೇಳದ ಬಗ್ಗೆ, ತುಂಬಾ ಗಂಭೀರವಾದ ಪ್ರಶ್ನೆಗಳನ್ನು ಪ್ರಭುದೇವ ಅವಳಿಗೆ ಹಾಕುತ್ತಾನೆ. ಅವೆಲ್ಲಕ್ಕೂ ಅವಳು ಸಮರ್ಪಕ ಉತ್ತರವೀಯುತ್ತಾಳೆ. ಶರಣರೆಲ್ಲ ಅವಳ ಉತ್ತರಗಳನ್ನು ಮೆಚ್ಚುತ್ತಾರೆ. ಅವಳು ಆಧ್ಯಾತ್ಮಸಾಗರದ ಅನರ್ಘ್ಯರತ್ನವೆಂಬುದು ಅವರೆಲ್ಲರಿಗೆ ಮನವರಿಕೆಯಾಗಿ ಅವಳನ್ನು ಕೊಂಡಾಡುತ್ತಾರೆ. ತನ್ನಲ್ಲಿರುವ ಒಳ್ಳೆಯದಕ್ಕೆಲ್ಲ ಶರಣರೆ ಕಾರಣರೆಂದು ಮಹಾದೇವಿ ತುಂಬಾ ವಿನೀತಭಾವನೆಯಿಂದು ನುಡಿಯುತ್ತಾಳೆ. ಮಹಾದೇವಿಯ ಚಿತ್ತ ಅತಿನಿರ್ಮಲವಾದುದನ್ನು ಅರಿತ ಪ್ರಭುದೇವ ತನ್ನಲ್ಲಿ ತಾನೇ ಮುಕ್ತಿಯನ್ನರಿವ ವಿಧಾನವನ್ನು ತಿಳಿಸಿಕೊಡುತ್ತ "ಅನು ನೀನೆಂಬುಭಯ ಸಂಧಾನವನು ಮಿಗೆ ಮೀರಿ, ಸಮಸಂಸ್ಥಾನದಲಿ ಸುಯಿದಾನಿಯಾಗಿ ನಿರಾಳದಲ್ಲಿ ನಿಂದು, ಜ್ಞಾನಜ್ಯೋತಿಯ ಬೆಳಗಿ, ಕಾಯದನೂನ ಕದಳಿಯ ಗೆಲಿದು ನಿನ್ನಲಿ ನೀನೆ ಮುಕ್ತಿಯನರಿವುದೌ" ಎಂದು ಹೇಳುತ್ತಾನೆ. ಮಹಾದೇವಿ ಶರಣರೆಲ್ಲರಿಗೆ ನಮಸ್ಕರಿಸಿ, ಅವರ ಹರಕೆಗಳನ್ನು ಕೈಕೊಳ್ಳುತ್ತ, ಅಲ್ಲಮನಿಂದ ಬೀಳ್ಕೊಂಡು ಶ್ರೀಶೈಲದತ್ತ ಪಯಣ ಬೆಳೆಸುತ್ತಾಳೆ. ಹರಿಹರನಲ್ಲಿ ಮಹಾದೇವಿ ಪ್ರಭುವನ್ನು ಕಂಡ ಸನ್ನಿವೇಶ ಬರುವುದಿಲ್ಲ.

ಅಧ್ಯಾತ್ಮದಲ್ಲಿ ಎಂತಹ ಉನ್ನತ ಮಟ್ಟ ಮುಟ್ಟಿದ್ದಳೆಂಬುದನ್ನು ವಿಶದೀಕರಿಸುವ ಈ ಸನ್ನಿವೇಶದ ವಿವರಣೆಗೆ ಚಾಮರಸ ಹೆಚ್ಚಾಗಿ ವಚನಗಳನ್ನೇ ಆಧರಿಸಿರಿವುದರಿಂದ ಅದರ ಗಾಂಭಿರ್ಯ ಹೆಚ್ಚಿದೆ.

ಪ್ರಭುಲಿಂಗಲೀಲೆಯ ಹದಿನೆಂಟನೆಯ ಗತಿ ಸಂಪೂರ್ಣ ವೀರಶೈವ ತತ್ವವಿವೇಚನೆಗೆ ಮೀಸಲಾಗಿದೆ. ಮಹದೇವಿಯಕ್ಕನಿಗೆ ನಿರ್ವಯಲ ಸಮಾಧಿಯಲ್ಲಿ ನಿಲ್ಲಲು ತಿಳಿಸಿ ಅವಳನ್ನು ಶ್ರೀಶೈಲಕ್ಕೆ ಕಳಿಸಿದ ಪ್ರಭುದೇವ ಬಸವರಾಜನಿಗೆ "ಶಿವತತ್ವ ಭಕ್ತಿಯ ಬಳಕೆಯನ್ನು ಭಾವದ ವಿವೇಕಸ್ಥಳವನ್ನು" ಅರುಹಲು ಮನಸ್ಸು ಮಾಡುತ್ತಾನೆ. ಬಸವಣ್ಣನೂ ಆಗ ತನಗೆ ಸಹಜಭಕ್ತಿಯ ಪರಿಯನ್ನು ತಿಳಿಸಿಕೊಡುವಂತೆ ವಿನಂತಿಸುತ್ತಾನೆ.

"ಭಕ್ತಿಯ ಹಾದಿಗೆ ಬೇಕಾದ ಒಂದೇ ಒಂದು ಕೀಲು ದೇಹ, ಆ ದೇಹವನ್ನು ಹಿಡಿದೇ ಎಲ್ಲವನ್ನೂ ಕಾಣಬೇಕು.... ತನ್ನೊಳಗೇ ಇರುವ ಗುರು, ಲಿಂಗ, ಜಂಗಮ, ಪಾದೋದಕ ಪ್ರಸಾದ ಸಮಸ್ತವನ್ನು ಅರಿಯದೆ ಇದಿರಲ್ಲಿ ಅವುಗಳನ್ನು ಅರಸುವವನು ಭವಿ. ಆದುದರಿಂದ ಹೃದಯದಲ್ಲಿ ಗುರು ಲಿಂಗ ಜಂಗಮಾದಿಗಳನ್ನು ಕಾಣುವವರೆಗೆ ಅವರ ಪ್ರತಿನಿಧಿಯೆಂದು ಬಾಹ್ಯದಲ್ಲಿ ಅವರನ್ನು ಪೂಜಿಸಬೇಕೆಂದು ಪೂರ್ವಪುರುಷರು ನಿಯಮಿಸಿದ್ದಾರೆ..... ವ್ಯಾಧಿಗಳನ್ನು ಗೆದ್ದು, ಶೀತೋಷ್ಣಾದಿಗಳನ್ನು ಪರಿಹರಿಸಿ ತಾಗುನಿರೋಧಗಳನ್ನು ನೀಗಿ, ನಿಂದೆಸ್ತುತಿಗಳನ್ನು ಸಮನಾಗಿ ಭಾವಿಸಿ ಅಯ್ದು ಮುಖದಲ್ಲಿ ಹರಿವ ಮನಸ್ಸನ್ನು ಸೇದಿ ನಿಶ್ಚಲವಾಗಿ ಮಾಡುವವನೆ ಭಕ್ತನೆನಿಸುತ್ತಾನೆ. ಮನವನ್ನು ಒಬ್ಬುಳಿಮಾಡದೆ, ತನುವಿನ ಒಳಗನ್ನು ಕಾಣಲು

ಬರುವುದಿಲ್ಲ. ತನುವಿನ ಒಳಗನ್ನು ಕಾಣದಿದ್ದರೆ ಭಕ್ತಿರತಿಯಿಲ್ಲ, ಭಕ್ತಿರತಿಯ ಕಾಣದೆ ಘನವಸ್ತುವಿನ ಬಳಿಗೆ ಹೋಗಲಾಗದು, ಆ ಘನವಸ್ತುವ ಬೆರಸದೆ ಮುಕ್ತಿ ದೊರೆಯದು..... ಮಾಯೆಯೆಂಬುದು ಮನವು, ಆ ಮನವೇ ವಾಯು. ಎಂದರೆ ಆ ಮನಸ್ಸೇ ವಾಯುರೂಪಾಗಿರುತ್ತದೆ. ಆ ವಾಯು ಹರಿದಾಡಿ ಕಾಯವನು ಕಂಗೆಡಿಸಿ ಭಕ್ತಿಯ ಮುಖ ಕಾಣದಂತೆ ಮಾಡುತ್ತದೆ. ಆ ವಾಯುವನ್ನು ಗೆದ್ದವನೇ ಭಕ್ತನಾಗುತ್ತಾನೆ. ಮನಸ್ಸೆನ್ನುವುದೊಂದು ಹಕ್ಕಿಯಿದ್ದಂತೆ. ಕಣ್ಣಾಲಿಗಳೇ ಆ ಹಕ್ಕಿಯ ಕಾಲುಗಳು. ಈಡೆ ಪಿಂಗಳ ನಾಡಿಗಳಲ್ಲಿ ಹರಿದಾಡುವ ಗಾಳಿಯೆ ಅದರ ರೆಕ್ಕೆಗಳು. ಆದುದರಿಂದ ಆಲಿಯೆ ಸಾಧನಕೆ ಸಾಧನ. ಆಲಿ ನಿಂದರೆ ಸುಳಿದು ಸೂಸುವ ಗಾಳಿ ನಿಲ್ಲುತ್ತದೆ. ಗಾಳಿ ನಿಂದರೆ ಮನಸ್ಸು ನಿಲ್ಲುತ್ತದೆ. ಮನಸ್ಸು ನಿಂದರೆ ಬಿಂದು ನಿಲ್ಲುತ್ತದೆ. ಬಿಂದು ನಿಂದರೆ ಕಾಲಕರ್ಮವ ಗೆದ್ದು ಮಾಯೆಯ ಹೇಳಹೆಸರಿಲ್ಲೆನಿಸಬಹುದು..... ಬಿಂದು ಫಲವನ್ನು ಕಾಮನಿಗೆ ಕೊಡದೆ ಅದನ್ನು ವಿಮಲವೆನಿಸಿ ಗಡಣಿಸಿಕೊಂಡವನು ಭಕ್ತನೆನಿಸುತ್ತಾನೆ." ಹೀಗೆ ಪ್ರಭುದೇವನ ಉಪದೇಶ ಉದ್ದಕ್ಕೂ ಹದಿನೆಂಟನೆಯ ಗತಿಯಲ್ಲಿ ಬರುತ್ತದೆ. ಮುಂದುವರಿದು ಪ್ರಭುದೇವ ದೇಹದಲ್ಲಿರುವ ಆರುಚಕ್ರಗಳು, ಅವುಗಳಿಗಿರುವ ಪ್ರಥವಿಯಾದಿ ಭೂತಗಳು, ಅವುಗಳ ದೇವತೆಗಳು, ಗುರು, ಲಿಂಗ, ಜಂಗಮದ ಸ್ಥಲಗಳು, ಶಕ್ತಿ, ಭಕ್ತಿಗಳ ಸ್ಥಾನಗಳು, ಅವುಗಳನ್ನು ಒಂದುಗೂಡಿಸುವ ಬಗೆ – ಇವೇ ಮೊದಲಾದ ಯೋಗಕ್ಕೆ ಸಂಬಂಧಿಸಿದ ಅಂಶಗಳನ್ನು ಶರಣರಿಗೆ ತಿಳಿಸಿಕೊಡುತ್ತಾನೆ. ಮತ್ತು ತಾನು ತೋರಿಸಿದ ಮಾರ್ಗದಲ್ಲಿ ಸಾಧನೆ ಮುಂದುವರಿಸುವಂತೆ ಹೇಳಿ, ಸಂಚಾರದಿಂದ ತಾನು ಹಿಂದಿರುಗಿ ಬಂದು ಅವರವರ ಅನುಭವದ ಪರಿಯನ್ನು ಪರೀಕ್ಷಿಸುವುದಾಗಿ ತಿಳಿಸುತ್ತಾನೆ. ಇಲ್ಲಿ ಬಂದಿರುವ ತತ್ವವಿವೇಚನೆ ತುಂಬ ಸುಲಭ ಮತ್ತು ಸರಳ ಕನ್ನಡದಲ್ಲಿದೆ. ಆಧ್ಯಾತ್ಮಿಕ ವಿಷಯಗಳ ವಿವರಣೆಗೆ ಕನ್ನಡ ಸಮರ್ಥ ಮಾಧ್ಯಮವಾಗಬಲ್ಲದೆಂಬುದನ್ನು ಚಾಮರಸನು ಇಲ್ಲಿ ಸಿದ್ಧಮಾಡಿ ತೋರಿಸಿದ್ದಾನೆ.

ಆಮೇಲೆ ಪ್ರಭುದೇವ, ದೇಶವೆಲ್ಲವನ್ನು ಸಂಚರಿಸುತ್ತ ಭಕ್ತರನ್ನು ಉದ್ಧಾರಮಾಡಲು ಹೊರಡುತ್ತಾನೆ. ಇಲ್ಲಿಂಯುವರೆಗೆ ಕಲ್ಯಾಣದಲ್ಲಿ, ಬಸವಾದಿಶರಣಸಂಗದಲ್ಲಿದ್ದ ಸಿದ್ಧರಾಮ, ಸೊನ್ನಲಾಪುರಕ್ಕೆ ಹೋಗುತ್ತಾನೆ. ಬಸವಾದಿಗಳು ಪ್ರಭುವಿನ ನಿರ್ದೇಶನದಂತೆ ತಮ್ಮ ತಮ್ಮ ಸಾಧನೆಯಲ್ಲಿ ತೊಡಗುತ್ತಾರೆ.

ಪ್ರಭುವಿನ ಸಂಚಾರಸಮಯದಲ್ಲಿ ಅವನ ಪಾದಸ್ಪರ್ಶ ಪಡೆದ ನದಿಗಳು ಪುಣ್ಯನದಿಗಳಾದವಂತೆ, ಅವನು ನಿಂದ ಸ್ಥಳಗಳೆಲ್ಲವು ಪವಿತ್ರ ಕ್ಷೇತ್ರಗಳಾದವಂತೆ! ಇದು ಪ್ರಭುವಿನ ಪಾತ್ರದ ವೈಭವೀಕರಣದ ಚಾಮರಸನ ಮತ್ತೊಂದು ರೀತಿ. ಸಂಚರಿಸುತ್ತ ಶ್ರೀಶೈಲಕ್ಕೆ ಬಂದ ಪ್ರಭುದೇವ ಅಲ್ಲಿಯ ಅದ್ಭುತದೃಶ್ಯಗಳನ್ನು ಕಂಡು ಬೆರಗಾಗುತ್ತ ಮುಂದೆ ನಡೆಯಲು ಅಲ್ಲಿ ಒಂದೆಡೆ ಗೋರಕ್ಷನನ್ನು ಕಾಣುತ್ತಾನೆ.

ಅವನು ಪ್ರಭುವಿಗೆ ನಮಸ್ಕರಿಸದೆ ಸುಮ್ಮನೆ ಕೈಮುಗಿದು ಕೂಡಲು ಹೇಳುತ್ತಾನೆ. ಇಬ್ಬರೂ ಮಾತಿಗಾರಂಭಿಸುತ್ತಾರೆ. ಪ್ರಭುವಿನ ಮಾತಿನಲ್ಲಿರುವ ಬೆಡಗು ಗೋರಕ್ಷನಿಗೆ ಹೊಳೆಯದೆ "ನಿಮ್ಮ ಪರಿ ಹೊಸತಲಾ" ಎನ್ನುತ್ತಾನೆ. ಆಗ ಪ್ರಭುದೇವ ತಮ್ಮನ್ನು ತಾವು ತಿಳಿಯದವರು ಮತ್ತೊಬ್ಬರ ಅಂತಸ್ಥವನ್ನೇನು ತಿಳಿಯುತ್ತಾರೆ ಎಂದು ಛೇಡಿಸುತ್ತಾನೆ. ಮಾತಿಗೆ ಮಾತು ಬೆಳೆದು ತಾನು ತನುಸಿದ್ಧನೆಂದೂ ಹಠಯೋಗ ಸಾಧನೆಯಿಂದ ತನ್ನ ಕಾಯವನ್ನು ವಜ್ರಕಾಯವಾಗಿಸಿಕೊಂಡಿರುವೆನೆಂದೂ ಗೋರಕ್ಷ ಹೆಮ್ಮೆಯಿಂದ ಹೇಳಿಕೊಳ್ಳುತ್ತ, ಪ್ರಭುವಿನ ಕೈಯಲ್ಲಿ ಖಡ್ಗವನ್ನಿತ್ತು ತನಗೆ ಹೊಡೆಯಲು ತಿಳಿಸುತ್ತಾನೆ. ಪ್ರಭುದೇವ ಆ ಖಡ್ಗದಿಂದ ಗೋರಕ್ಷನನ್ನು ಹೊಡೆಯಲು ಅವನ ಒಂದು ಕೂದಲು ಕೂಡ ಕೊಂಕಾಗದೆ ಹೋಗುತ್ತದೆ. ಖಡ್ಗವನ್ನು ಬಿಸುಟುನಿಂತ ಪ್ರಭುವನ್ನುದ್ದೇಶಿಸಿ ವಜ್ರದಂತಿರುವ ತನ್ನ ಶರೀರವು ಸಿದ್ಧಿಯಲ್ಲದೆ ಮತ್ತೇನು? ಎಂದು ಕೇಳುತ್ತಾನೆ. ಆಗ ಪ್ರಭುದೇವ ಗೋರಕ್ಷನ ಕೈಯಲ್ಲಿ ಖಡ್ಗವನ್ನು ಕೊಟ್ಟು ತನಗೆ ಹೊಡೆಯಲು ತಿಳಿಸುತ್ತಾನೆ. ಅವನು ಹಾಗೆ ಮಾಡಿದಾಗ, ಆ ಖಡ್ಗ ಪ್ರಭುವಿನ ದೇಹದಲ್ಲಿ ಈಸಾಡಿದಂತಾಗುತ್ತದೆ. ಸಪ್ಪಳ ಸಹಿತ ಹೊರಡುವುದಿಲ್ಲ. ಪ್ರಭುದೇವ ಬಯಲು ದೇಹಿಯಾಗಿರುವುದನ್ನು ತಿಳಿದ ಗೋರಕ್ಷ ದಿಗ್ಭ್ರಮೆಗೊಂಡು "ಇದಾವ ಮಹಿಮೆಯ ಗುಣವೊ ನಮಗಿದನರಿಯಬಾರದು ಪ್ರಭುವೆ ಹೇಳಿ" ಎಂದು ಬೇಡಿಕೊಳ್ಳುತ್ತಾನೆ. ಆಗ ಪ್ರಭುದೇವ "ಕಾಯ ಬಲಿದಡೆ ಮಾಯೆ ಬಲಿವುದು ಮಾಯೆ ಬಲಿದಡೆ ಛಾಯೆ ಬಲಿವುದು. ಕಾಯ, ಮಾಯೆ, ಛಾಯೆ ಬಲಿದಡೆ ಅವನು ಸಿದ್ಧನಲ್ಲ. ಅವೆಲ್ಲವನ್ನು ಕಳೆದುಳಿದನಾದಡೆ ಅವನು ಸಿದ್ಧರಲ್ಲಿ ರಾಯನೆನಿಸುತ್ತಾನೆ" ಎಂದು ಗೋರಕ್ಷನಿಗೆ ತಿಳಿಸಿ ಹೇಳುತ್ತಾನೆ. ಪ್ರಭುವಿನ ಮಹಿಮೆಯನ್ನು ಮನವರಿಕೆ ಮಾಡಿಕೊಂಡ ಗೋರಕ್ಷ ತನ್ನ ತಪ್ಪನ್ನು ಕ್ಷಮಿಸುವಂತೆ ಬೇಡಿಕೊಂಡು "ಮುಂದೆ ತಾನಾವ ಗತಿಯಲಿ ನಿಲುವೆನು" ಎಂದು ದೀನನಾಗಿ ಕೇಳುತ್ತಾನೆ. ಅದಕ್ಕೆ ಪ್ರಭುದೇವ "ಅಖಿಳಜೀವರ ಹೃದಯವಲ್ಲಭನೇ ಗುಹೇಶ್ವರ. ಈ ಗುಟ್ಟನ್ನು ತಿಳಿದು ಸೋಹಂ ಭಾವದಿಂದ ಸದಮಲಜ್ಞಾನೈಕನಾದರೆ ನಿತ್ಯಮುಕ್ತಿಯ ನಿಧಿಯನ್ನು ಕಾಣುತ್ತಾನೆ" ಎಂದು ಬೋಧಿಸುತ್ತಾನೆ. ಆಗ ಗೋರಕ್ಷ "ನೀನೇ ಗುಹೇಶ್ವರನಾದರೆ ನಿನ್ನ ಕೈಯಲ್ಲಿ ಕುರುಹಿನ ಲಿಂಗವೇಕೆ" ಎಂಬ ಮಾರ್ಮಿಕ ಪ್ರಶ್ನೆಯನ್ನು ಪ್ರಭುದೇವನಿಗೆ ಹಾಕುತ್ತಾನೆ. ಆಗ ಪ್ರಭುದೇವ ಈ ಪ್ರಕಾರದ ಲಿಂಗನಿಷ್ಠೆಯಿಂದ ಸಾಧಕರಿಗೆ ಮುಕ್ತ್ಯಂಗನೆಂಬ ಮದುವೆಯನ್ನು ಮಾಡಿಸುವೆನಾದುದರಿಂದ ಅವರಿಗೆ ತೋರಿಸಲಿಕ್ಕೆ ಲಿಂಗಧರಿಸಿದ ನಟನೆ ಮಾಡುತ್ತಿರುವೆನೆಂಬರ್ಥ ಬರುವ ಮಾತನ್ನು ಗೋರಕ್ಷನಿಗೆ ಹೇಳುತ್ತಾನೆ. ಆಮೇಲೆ ಗೋರಕ್ಷನಿಗೆ ವೀರಶೈವೋಪದೇಶ ಮಾಡಿ ತನ್ನ ಸಂಚಾರವನ್ನು ಮುಂದುವರಿಸುತ್ತಾನೆ.

ಈ ಹತ್ತೊಂಬತ್ತನೆಯ ಗತಿಯಲ್ಲಿ ಬರುವ "ಸತ್ತನಾದಡೆ ಬಲ್ಲಿತಹ ಗೋರಕ್ಷನನು ನಾವಿಲ್ಲಿ ಸೃಜಿಸುವೆವು" (ಪದ್ಯ ೨೮) "ಹಂಬಲಿಸಲೇಕೆ ಆ ಗೂಹೇಶ್ವರನೆಂಬವನೆ ನಾನು ಇದಕೆ ಸಂಶಯವಿಲ್ಲ" ಎಂಬಂತಹ ಮಾತುಗಳನ್ನು ಪರಿಶೀಲಿಸಿದಾಗ ಪ್ರಭುವಿಗೆ ಸತ್ತವರನ್ನು ಬದುಕಿಸುವ ಸಾಮರ್ಥ್ಯವಿದ್ದು ಜೊತೆಗೆ, ಅವನು ಪರಬ್ರಹ್ಮಸ್ವರೂಪನೂ ಆಗಿದ್ದನೆಂಬುದು ವಿದಿತವಾಗುತ್ತದೆ. ಪ್ರಭುವಿನ ಪಾತ್ರವನ್ನು ಚಾಮರಸ ಎಷ್ಟರಮಟ್ಟಿಗೆ ವೈಭವೀಕರಿಸಿರುವನೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಮುಂದೆ, ತನ್ನ ಪ್ರಯಾಣದಲ್ಲಿ ಪ್ರಭುದೇವ, ಬೇಟೆಯಾಡುತ್ತಿದ್ದ ಕಿರಾತನೊಬ್ಬನನ್ನು ಕಂಡು, ಜೀವಹಿಂಸೆ ಮಹಾಪಾಪವೆಂದು ಬೋಧಿಸಿ ಅವನನ್ನು ಸನ್ಮಾರ್ಗಕ್ಕೆ ಹಚ್ಚುತ್ತಾನೆ. ಕಾಡಿನಲ್ಲಿ ಜಪತಪಾದಿಗಳನ್ನು ಮಾಡಿಕೊಂಡು ಕಾಷ್ಠವ್ಯಸನದಲ್ಲಿದ್ದ ಮುನಿಗಳನ್ನು ಕಂಡು, ಸ್ನಾನ, ಜಪ, ತಪ, ವೇದಾಧ್ಯಯನ, ಯಜ್ಞವಿಧಿಗಳಿಂದ ಏನೂ ಸಾಧಿಸಲಾಗದು, ಆದರಿಂದ ಜೀವನ್ಮುಕ್ತಿ ಸಾಧ್ಯವಿಲ್ಲವೆಂಬುದನ್ನು ತಿಳಿಸಿಕೊಟ್ಟು "ಲೇಪಿಸಿದ ಅಹಂಕಾರವೆ ಪಶು, ಮನಸ್ಸೇ ಯೂಪಕಂಬ, ಪವನಸ್ಥಾಪಿತವೆ ಬಂಧಿಸುವ ಪಾಶ, ವಿವೇಕವೆ ಶಾಸ್ತ್ರ, ವ್ಯಾಪಿಸಿದ ಸುಜ್ಞಾನವೆ ಅಗ್ನಿ, ಸದಾ ಪುನೀತಮಯ ಆತ್ಮನೇ ಅಧ್ವರಿ. ಹೋಮದಾಹುತಿಯೆಲ್ಲವು ಮಿಥ್ಯ. ಶೇಷಪ್ರಸಾದವೆ, ತಥ್ಯ, ನಿಜದ ಪರಮಾನಂದವೇ ತೃಪ್ತಿ, ಸತ್ಯ ಶಾಶ್ವತ ಸ್ವರೂಪದ ತತ್ವವೆ ತಾನು – ಎಂದು ತಿಳಿಯುವುದೆ ಫಲವೃತ್ತಿ." ಯಾಗಕೆ ಆತ್ಮಯಾಗವನು..... ದೇವಾರ್ಚನೆಗೆ ಹೃದಯವನು, ಉಪನಯನಕೆ ಆ ನಿಜನಿರೀಕ್ಷಣೆಯನು, ಮಾಡಬೇಕೆಂದು ಉಪದೇಶಿಸಿ ಕಲ್ಯಾಣದತ್ತ ನಡೆಯುತ್ತಾನೆ. ಯಜ್ಞದ ನಿಷ್ಫಲತೆ, ಪ್ರಸಾದದ ಮಹತ್ವ ಎರಡನ್ನೂ ಚಾಮರಸ ತೌಲನಿಕವಾಗಿ ಇಲ್ಲಿ ಪರಾಮರ್ಶಿಸಿದ್ದಾನೆ.

ಈ ಹೊತ್ತಿಗೆ ಬಸವಣ್ಣ ಕಲ್ಯಾಣ ಪಟ್ಟಣದಲ್ಲಿ ಶೂನ್ಯಸಿಂಹಾಸನ ರಚಿಸಿ ಪ್ರಭುದೇವನ ಆಗಮನವನ್ನೇ ಕಾಯುತ್ತಿರುತ್ತಾನೆ. ಈ ಅಧ್ಯಾತ್ಮಿಕ ಸಿಂಹಾಸನದ ವರ್ಣನೆಗೆ ಒಂದು ಗತಿಯನ್ನೇ ಚಾಮರಸ ಮೀಸಲಿರಿಸಿದ್ದಾನೆ. ಹನ್ನೆರಡು ವರ್ಷಗಳವರೆಗೆ ಬಸವಣ್ಣ ತಾನು ಮಾಡಿದ ಅಧ್ಯಾತ್ಮ ಸಾಧನೆ ಮತ್ತು ರಾಜಯೋಗದ ಅನುಷ್ಠಾನದ ಸಂದರ್ಭದಲ್ಲಿ ತಾನು ಅಂತರಂಗದಲ್ಲಿ ಅನುಭವಿಸಿದ ಆತ್ಮಿಕ ಅನುಭವಗಳ ಪ್ರತೀಕವಾಗಿ ಅದು ಬಾಹ್ಯದಲ್ಲಿ ರೂಪುಗೊಂಡಿತ್ತು. "ಅನುಗೊಳಿಸಿದನು ಶೂನ್ಯಸಿಂಹಾಸನವಿದೆಂದದಕ್ಕೆ ಹೆಸರಿಟ್ಟು, ವಿನುತಪಶ್ಚಿಮ ಮಾರ್ಗದಲಿ ತಾಕಂಡುದೆಲ್ಲವನು" ಎಂಬ ಚಾಮರಸನ ಮಾತನ್ನು (ಗತಿ ೨೧, ಪದ್ಯ ೯) ಇಲ್ಲಿ ನೋಡಬಹುದು. ಜೊತೆಗೆ "ಸ್ವಾನುಭಾವ ಆಧಾರ ಸ್ವಾದಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯದ ಸ್ಥಾನಗಳ ನೆಲೆಗೊಳಿಸಿ, ಬ್ರಹ್ಮಸ್ಥಾನವನು ಮೇಲೆನಿಸಿ, ಮಾನನಿಧಿ ಬಸವಣ್ಣನೀಪರಿ ರಚಿಸಿದ ಶೂನ್ಯಪೀಠವನು" (೨೧–೧೩).

"ಪರಿವಿಡಿಯಲಿ ಇಳೆ ಸಲಿಲ, ಪಾವಕ, ಮರುತ, ಗಗನ, ಆತ್ಮ, ನಿರಾಳದ ತರತರದ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯರ ಭಾವದ ನೆಲೆಗಳ ನೆರವಿಯಂತಿರೆ ಶೂನ್ಯಪೀಠವ ಬಸವ ನಿರ್ಮಿಸಿದ" (೨೧–೧೪), ಪೃಥ್ವಿಯ ನೆಲೆಯಲ್ಲಿ ಕಠಿಣತರವನು, ಜಲದ ನೆಲೆಯಲ್ಲಿ ರಸಮಯವನು ಅಗ್ನಿಯ ನೆಲೆಯಲ್ಲಿ ಬಿಸಿಯನು, ಮರುತನ ನೆಲೆಯಲ್ಲಿ ಮಾರುತನನು, ಆಕಾಶದ ನೆಲೆಗೆ ಅಂಬರವನು, ಮನನಿಲುಕದ ಅನುಪಮದೆಡೆಗೆ ಶೂನ್ಯವನು ನಿಲಿಸಿ ಬಸವನು ಶೂನ್ಯಸಿಂಹಾಸವ ನಿರ್ಮಿಸಿದ (೨೧–೧೫) – ಈ ಪದ್ಯಗಳನ್ನು ಓದಿದಾಗ ರಾಜಯೋಗದ ಅನುಷ್ಠಾನದ ಸಂದರ್ಭದಲ್ಲಿ ದೇಹದ ಆವಾವ ನೆಲೆಗಳಲ್ಲಿ ಏನನ್ನು ಬಸವಣ್ಣ ಅನುಭವಿಸಿದ್ದನೊ ಅದನ್ನೇ ಶೂನ್ಯಸಿಂಹಾಸನ ಪ್ರತಿಮಿಸುತ್ತಿತ್ತೆಂದು ಹೇಳಬಹುದು.

ರಾಜಯೋಗದ ಮೇಲಣ ನಿರ್ಗುಣಯೋಗವನ್ನು ಕಾಣುವ ಬಯಕೆ ಬಸವಣ್ಣನದು. ಅದನ್ನು ತಿಳಿಸಿಕೊಡುವ ಮಹಾನುಭಾವಿ ಪ್ರಭುದೇವ. ಅವನ ಬರುವಿಕೆಗಾಗಿ ಬಸವಣ್ಣ ಹಂಬಲಿಸಿದ. ಪ್ರಭುದೇವ ಬಂದ. ಆದರೆ ವೇಷಮರೆಸಿ ಬಂದ. ಮೊದಲಸಲ ಸಿದ್ಧರಾಮನೊಡನೆ ಪ್ರಭುದೇವ ಕಲ್ಯಾಣಕ್ಕೆ ಬಂದಾಗ ಬಸವಣ್ಣ ಆತನನ್ನು ಗುರುತಿಸದೆ ಹೋಗಿದ್ದ. ತನ್ನ ಮನೆಯ ಅಂಗಳದಲ್ಲಿ ಮರುಳನಂತಿದ್ದ, ಸಾಕಾರಶಿವ ಮರುಳಶಂಕರದೇವರನ್ನು ಬಸವಣ್ಣ ಗುರುತಿಸಿರಲಿಲ್ಲ. ಅಂಥವರನ್ನು ಗುರುತಿಸಿ ಗೌರವಿಸಬೇಕೆಂಬ ಎಚ್ಚರವನ್ನು ಪ್ರಭುದೇವ ಆಗ ಬಸವಣ್ಣನಿಗೆ ಕೊಟ್ಟಿದ್ದ. ಆ ಎಚ್ಚರದ ಉಪದೇಶ ಬಸವನಲ್ಲಿ ಫಲಿಸಿದೆಯೆ ಎಂಬುದನ್ನು ಪರೀಕ್ಷಿಸಿ ನೋಡುವ ಅಪೇಕ್ಷೆ ಪ್ರಭುವಿನದು. ಎಂತಲೆ ಹುಚ್ಚನ ವಿಕಾರರೂಪದಲ್ಲಿ ಪ್ರಭುದೇವ ಬರುತ್ತಾನೆ. ಅದರ ವರ್ಣನೆ ಚಾಮರಸನಲ್ಲಿ ಕಣ್ಣಿಗೆ ಕಟ್ಟುವಂತೆ ಬಂದಿದೆ. ಬಸವಣ್ಣ ಪ್ರಭುದೇವನನ್ನು ಗುರುತಿಸಿ ಸಕಲ ಸೌರಂಭದಿಂದ ಎಲ್ಲರೊಡಗಡಿ ಹೋಗಿ ಅವನನ್ನು ಸ್ವಾಗತಿಸಿ ಕರೆತಂದ. ಇಂಥ ಬಾಗಿಲಿನಿಂದ ಪ್ರವೇಶಿಸಿ ಹೀಗೆ ಸಿಂಹಾಸನವೇರಿದರೆ ಅವನೇ ಅಲ್ಲಮಪ್ರಭುವಾಗಿರುತ್ತಾನೆಂದು ಬಸವಣ್ಣ ಹೇಗೆ ಆಲೋಚಿಸಿದ್ದನೊ ಅದೇ ರೀತಿಯಲ್ಲಿ ಪ್ರಭುದೇವ, "ಹಗಲುಗತ್ತಲೆಯೆನಿಸಿ ಹಲಬರ ಬೆಗಡುಗೊಳಿಸುವ" ಶೂನ್ಯಪೀಠವನ್ನು ನಗುತ್ತಲೇ ಏರಿ ಅದರ ಮೇಲೆ ವಿರಾಜಮಾನನಾಗುತ್ತಾನೆ. ಬಸವಣ್ಣ ಸಿದ್ಧಪಡಿಸಿದ ಶೂನ್ಯಸಿಂಹಾಸನದ ವಿನ್ಯಾಸವನ್ನು ಒಂದಿಷ್ಟು ಸುದೀರ್ಘವೆನ್ನುವಂತೆ, ಕಣ್ಗೆಡ್ಡವಾಗಿ ಬರುತ್ತದೆ ಪ್ರಭುಲಿಂಗಲೀಲೆಯಲ್ಲಿ. ಶೂನ್ಯಸಿಂಹಾಸವನ್ನೇರಿದ ಪ್ರಭುವಿನ ಪಾದಪೂಜೆಯನ್ನು ಶರಣರೆಲ್ಲ ಸೇರಿ ನೆರವೇರಿಸುತ್ತಾರೆ. ಹೆಣ್ಣುಮಕ್ಕಳು ಆರತಿ ಬೆಳಗುತ್ತಾರೆ. ಶರಣರು ಪ್ರಭುವಿನ ಸ್ತೋತ್ರ ಮಾಡುತ್ತಾರೆ. ಬಸವಣ್ಣ ಅದೆಲ್ಲವನ್ನು ನೋಡಿ ನಿಬ್ಬೆರಗಾಗುತ್ತಾನೆ. ಅವನಲ್ಲಿ ಧನ್ಯತಾಭಾವವಾವರಿಸುತ್ತದೆ.

ಇನ್ನು ಪ್ರಭುವಿನ ಆರೋಗಣೆ ನಡೆಯಬೇಕು. ಅದಕ್ಕೆಲ್ಲ ಸಕಲಸಿದ್ಧತೆಗಳಾಗಿವೆ. ಆದರೆ ಪ್ರಭುದೇವನನ್ನು ಸ್ವಾಗತಿಸುವ, ಅವನನ್ನು ಪೂಜಿಸುವ ಸಂಭ್ರಮದಲ್ಲಿ ನಿತ್ಯ ಆರೋಗಣೆಗೆಂದು ಬರುತ್ತಿದ್ದ ಜಂಗಮರನ್ನು ಬಸವಣ್ಣ ಮರೆತೇಬಿಟ್ಟಿರುತ್ತಾನೆ. ಅವರು ಸಿಟ್ಟಿನಿಂದ ಹೊರಟುಹೋಗಿರುತ್ತಾರೆ. ಅದನ್ನು ತಿಳಿದು ಬಸವಣ್ಣ ಚಿಂತಿಸುತ್ತಿರಲು ಪ್ರಭುದೇವ ತನಗೆ ಆರೋಗಣೆ ಮಾಡಿಸಿ ತೃಪ್ತಿಪಡಿಸಿದರೆ ಎಲ್ಲ ಜಂಗಮರು ತೃಪ್ತರಾಗುವರೆಂದು ತಿಳಿಸಿ, ತನಗೆ ಎಡೆಮಾಡಲು ಬಸವಣ್ಣನಿಗೆ ಹೇಳುತ್ತಾನೆ. ಪ್ರಭುವಿನ ಮತ್ತು ಭಕ್ತರ ಆರೋಗಣೆ ಆರಂಭವಾಯಿತು. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆಂದು ಸಿದ್ಧಪಡಿಸಿದ ಅಡಿಗೆ ಉಗ್ರಾಣದಲ್ಲಿರುವ ಸಾಮಗ್ರಿ ಎಲ್ಲವನ್ನೂ ಪ್ರಭುದೇವ ಊಟಮಾಡಿದರೂ, ಅವನ ಹಸಿವೆ ಹಿಂಗದಿರಲು ಮಡಿವಾಳಯ್ಯ ಹಾಗೂ ಚೆನ್ನಬಸವಣ್ಣ ಇವರ ಸಲಹೆಯ ಮೇರೆಗೆ ತನ್ನನೇ ತಾನು ಬಸವಣ್ಣ ಪ್ರಭುದೇವನಿಗೆ ಅರ್ಪಿಸಿಕೊಳ್ಳಲು ಸಿದ್ಧನಾಗುತ್ತಾನೆ. ಆಗ ಪ್ರಭುದೇವ ತೃಪ್ತನಾಗಿ "ಹಸಿದು ಬಂದವನಲ್ಲ ಅರ್ಥದ ದೆಸೆಗೆ ಬಂದವನಲ್ಲ..... ನಾ ನಿನ್ನ ಹಸರಿಸಿದ ದಾಸೋಹತನವನು ಸಸಿನೆ ಮಾಡಲು ಬಂದೆನಲ್ಲದೆ ಅಶನದಾಸೆಗಳೆನ್ನಲುಂಟೆ?..... ನಿನ್ನ ಮನದೊಳು ಮಾಟಕೂಟದ ಬುದ್ಧಿ ಮಮಕರಿಸೆ ನನ್ನ ಹಸು ಹುರಿದುಂಡುದಲ್ಲದೆ, ನಿನ್ನ ಮನದೊಳು ಮಾಟಕೂಟದ ಬುದ್ಧಿ ಮಮಕರಿಸೆ ನನ್ನ ಹಸು ಹುರಿದುಂಡುದಲ್ಲದೆ, ನಿನ್ನ ಮನದಲಿ ಮಾಟವಿಲ್ಲದಡೆ ಎನ್ನ ತನುವಿಗೆ ಊಟವಿಲ್ಲ" ಎಂದು ಹೇಳಿ ಊಟಮುಗಿಸಿ ಸಿಟ್ಟಿಗೆದ್ದು ಹೋದ ಜಂಗಮರನ್ನು ಊಟಕ್ಕೆ ಕರೆತರಲು ಹೇಳುತ್ತಾನೆ. ಬಸವಣ್ಣ ಆ ಜಂಗಮರ ಬಳಿ ಹೋಗಿ ಪ್ರಸಾದ ಸ್ವೀಕರಿಸಲು ಬರಬೇಕೆಂದು ಬೇಡಿಕೊಂಡಾಗ ಅವರು, ಎಂದಿಗಿಂತ ಹೆಚ್ಚಾಗಿ ಈ ದಿನ ನಮಗೆ ಊಟವಾಗಿದೆ. ಇದು ನಿನ್ನ ಮಹಿಮೆಯೊ, ನಿನ್ನ ಗುರುವಿನ ಮಹಿಮೆಯೊ ತಿಳಿಯದೆಂದು ಹೇಳುತ್ತಾರೆ. ಆಶ್ಚರ್ಯಚಕಿತನಾದ ಬಸವಣ್ಣ ಪ್ರಭುದೇವರ ಬಳಿ ಬಂದು ಅವರ ಮಹಿಮಾಪ್ರಭಾವವನ್ನು ಮುಕ್ತಕಂಠದಿಂದ ಹೊಗಳುತ್ತಾನೆ. ಆಗ ಪ್ರಭುದೇವ "ನಿನ್ನ ಭಾವನೆ ಇದ್ದ ಪರಿಯಲಿ ನಿನ್ನ ಜಂಗಮ ತುಷ್ಟರಾದಡೆ ನನ್ನನೇತಕೆ ರಟ್ಟುಮಾಡುವೆ ಬರಿದೆ ಬಯಲಿಂಗೆ. ನಿನ್ನ ಕತದಿಂದ ನಾನಾದೆನಲ್ಲದೆ, ಮುನ್ನ 'ನಾನು' ಎಂಬ ವಾಸನೆ ನನ್ನಲ್ಲಿದ್ದಿತೆ?" ಎಂದು ಹೇಳಿ ಬಸವನಿಗೆ ಪ್ರಭುದೇವ ಭಕ್ತ–ಜಂಗಮದ ಸಂದು–ಸಂಬಂಧವನ್ನು ಆದಿಬುನಾದಿಯಿಂದಲೂ ಅವರಲ್ಲಿದ್ದ ಗಂಟು ನಂಟನ್ನು ಸೂಕ್ಷ್ಮವಾಗಿ ತಿಳಿಯಪಡಿಸುತ್ತಾನೆ.

ಈ ಸನ್ನಿವೇಶದಲ್ಲಿಯೂ ಚಾಮರಸ ಪ್ರಭುದೇವನ ಆ ಭವ್ಯವ್ಯಕ್ತಿತ್ವವನ್ನೇ ಎತ್ತಿ ತೋರಿಸಿದ್ದಾನೆ. ಪ್ರಭುಲಿಂಗಲೀಲೆಯ ಉದ್ದಕ್ಕೂ ಅವನು ಮಾಡಿರುವುದು ಇದನ್ನೇ.

ಮುಂದೆ ಪ್ರಭುದೇವರು ಬಸವಾದಿಗಳಿಗೆ ಜ್ಞಾನೋಪದೇಶ ಮಾಡಿದ ವಿವರ ಏಳನೆಯ ಗತಿಯಲ್ಲಿ ಬಂದಿದೆ. ಉಪದೇಶಾನಂತರ "ಬಸವ ಮಾಡಿದಡಾಯ್ತು ಗುರುನೆಲೆ, ಬಸವ ಮಾಡಿದಡಾಯ್ತು ಲಿಂಗವು, ಬಸವ ಮಾಡಿದಡಾಯ್ತು ಜಂಗಮವು, ಬಸವನಿಂದಾತ್ಮವೆ ಪಸರಿಸಿತು ಲೋಕದೊಳು. ಆದುದರಿಂದ ಬಸವನೇ ಪರದೈವ" ಎಂದು ಬಸವಣ್ಣನ ಮಹಾತ್ಮೆಯನ್ನು, ಅವನಿಗೆ ಉಳಿದ ಶರಣ ಶರಣೆಯರು ಏನಾಗಿರುವರೆಂಬುದನ್ನು ತಿಳಿಸಿ, ಎಲ್ಲರಿಗೂ ಪರಮಪದವಿಯನ್ನು ಅನುಗ್ರಹಿಸಿ ಅಲ್ಲಿಂದ ಹೊರಡುತ್ತಾನೆ.

ಹೀಗೆ ಭೂಮಿಯಲ್ಲಾದುದನ್ನು ಕೈಲಾಸದಲ್ಲಿ ಶಿವನು ಪಾರ್ವತಿಗೆ ತಿಳಿಸಿದಾಗ ಅವಳು ಬಹಳ ಸಂತೋಷಪಟ್ಟು "ದೇವ ನೀನೆಂದಂತೆ ಪ್ರಭುದೇವ ಘನಮಹಿಮಾವಲಂಬನು ಇದು ದಿಟ" ಎಂದು ಹೇಳುತ್ತಾಳೆ, ಪ್ರಭುದೇವನ ಘನ ಮಹಿಮೆಯನ್ನು ಮೊದಲು ಒಪ್ಪದ ಪಾರ್ವತಿಯಿಂದಲೂ ಹೀಗೆ ಅದನ್ನು ಒಪ್ಪುವಂತೆ ಮಾಡಿದಾಗಲೆ ಚಾಮರಸನಿಗೆ ತೃಪ್ತಿ. ಆ ಕಾರ್ಯವನ್ನು ಕೊನೆಗೆ ಮಾಡಿ ಕಾವ್ಯಕ್ಕೆ ಮಂಗಳ ಹಾಡಿದ್ದಾನೆ.

ಪ್ರಭುಲಿಂಗ ಲೀಲೆಯುದ್ದಕ್ಕೂ, ಪ್ರಭುದೇವನ ದಿವ್ಯವ್ಯಕ್ತಿತ್ವ ವಿಜೃಂಭಿಸಿರುವುದು, ಅವನನ್ನು ವೈಭವೀಕರಿಸುವುದು, ಚಾಮರಸನಿಂದ ನಡೆದೇ ಇದೆ. ತನ್ನ ಕೃತಿಗೆ ಅವನು ಇಟ್ಟಿರುವ ಹೆಸರು 'ಪ್ರಭುಲಿಂಗಲೀಲೆ'. 'ಲೀಲೆ' ಮಾಡುವವನು ಶಿವ. ಅವನು ಮಾಡಿದ ಲೀಲೆಗಳು ಇಪ್ಪತ್ತೈದು. ಪ್ರಭುಲಿಂಗಲೀಲೆಯಲ್ಲಿಯೂ ಇಪ್ಪತ್ತೈದು ಗತಿಗಳಿವೆ. ಇದರಿಂದ ಚಾಮರಸನ ದೃಷ್ಟಿಯಲ್ಲಿ ಅವನು ಪರಶಿವ. ತಾನು ಗುಹೇಶ್ವರನೆಂದು, ಪರಬ್ರಹ್ಮವೆಂದು ಪ್ರಭುದೇವನಿಂದ ಚಾಮರಸ ಹೇಳಿಸಿದ್ದಾನೆ. ಪ್ರಭುದೇವನ ಸುಳಿಯುತ್ತಾನೆ, ನಮ್ಮ ನಿಮ್ಮಂತೆ ನಡೆಯುವುದಿಲ್ಲ. ಅವನು ಶಿವನ ಸಕಲ ನಿಷ್ಕಲರೂಪನೆಂದು ಅನೇಕ ಕಡೆ ತನ್ನ ಕಾವ್ಯದಲ್ಲಿ ಹೇಳಿದ್ದಾನೆ. ಅವನು ಬಯಲುದೇಹಿಯೂ ಅಹುದು, ಮಾಯಾದೇವಿಯೊಬ್ಬಳನ್ನು ಬಿಟ್ಟರೆ ಎಲ್ಲರೂ ಅವನ ಕೃಪೆಗೆ ಪಾತ್ರರಾಗಿದ್ದಾರೆ. ಕೆಲವರಿಗೆ ಅವನನ್ನು ನೋಡಿದರೆ ಸಾಕು ಧನ್ಯತಾಭಾವವಾರಿಸುತ್ತದೆ. ಅವನು ಹೇಳಿದ್ದಕ್ಕೆ ಹೌದೆನ್ನುತ್ತಾರೆ. ಮುಕ್ತಾಯಕ್ಕ, ಗೋರಕ್ಷ, ಸಿದ್ದರಾಮ, ಮೊದಲು ಮೊದಲು ವಾದಿಸಿದರೂ ಕೊನೆಗೆ ಅವನ ಮಹತ್ವವನ್ನು ಒಪ್ಪಿಕೊಳ್ಳುತ್ತಾರೆ. ಬಸವಾದಿ ಪ್ರಮಥರಂತೂ ಸರಿಯೆ, ಸಾಕ್ಷಾತ್ ಪರಮೇಶ್ವರನೆ ಅವನ ಮಹಿಮೆಯನ್ನು ಕಾವ್ಯದ ಆರಂಭದಲ್ಲಿಯೆ ಪಾರ್ವತಿಗೆ ತಿಳಿಸಿಕೊಟ್ಟಿದ್ದಾನೆ. ಪಾರ್ವತಿ ಅದನ್ನು ಆಗ ಒಪ್ಪದಿದ್ದರೂ ಮುಂದೆ ಒಪ್ಪಿಕೊಳ್ಳುತ್ತಾಳೆ. ಪ್ರಭುದೇವನ ತಂದೆ ನಿರಹಂಕಾರ, ಪ್ರಭುದೇವ ಹುಟ್ಟಿದಾಗ ಅವನ ಲಕ್ಷಣಗಳನ್ನು ಕಂಡು, ಅವನು ಪೃಥ್ವಿ, ಅಪ್ಪು, ತೇಜ, ವಾಯುಗಳಂತಹ ಭೂತತತ್ವಗಳಿಗೇ ವಿದೂರ, ಪರಮಾನಂದ ರಸಭರಿತ, ಜಾತನಲ್ಲ, ವಿಚಾರಿಸಿದರೆ ಅಜಾತನೂ ಅಲ್ಲ ಎಂದು

ಹೇಳಿರುವುದನ್ನು ನೋಡಿದಾಗ ಅವನು ಸಾಧನೆಯಿಂದ ನಿಜದ ನಿಲುವನ್ನು ನಿಲುಕಿಸಿಕೊಂಡ ಸಿದ್ದನಾಗಿರದೆ ಹುಟ್ಟಿನಿಂದಲೇ ಸಿದ್ಧನಾಗಿದ್ದನೆಂಬುದು ಹೊಳೆಯುತ್ತದೆ.

ಇಂತಹ ಸಹಜ ಸಿದ್ಧನೂ, ಶಿವಾಂಶಿಕನೂ ಆಗಿದ್ದ ಪ್ರಭುದೇವ ತಾನೊಬ್ಬನೆ ನಿಜದ ನಿಲುವನ್ನು ಅರಿದರೆ ಸಾಲದು ಅದು ಸಾಧನೆಯ ವಿವಿಧ ಹಂತದಲ್ಲಿದ್ದವರಿಗೆ, ಬೇಗ ನಿಲುಕುವಂತಾಗಬೇಕು, ಅವರಲ್ಲಿ ಏನಾದರೂ ನ್ಯೂನತೆ, ಕೊರತೆಗಳಿದ್ದರೆ ಅವುಗಳ ನಿವಾರಣೆಯಾಗಿ ಅವರಿಗೂ ಅದು ಸಾಧ್ಯವಾಗಬೇಕು ಎಂಬ ಸದುದ್ದೇಶದಿಂದ ತಾನೇ ಅಂಥವರನ್ನು ಹುಡಿಕಿಕೊಂಡು ಹೋಗುತ್ತಾನೆ. ಯಾರು ಯಾವ ಮಾರ್ಗ ಅಥವಾ ಕಾಯಕದಲ್ಲಿಹರೋ ಅದರ ಮೂಲಕವೆ ಅವರಿಗೆ ನಿಜಸುಖವನ್ನನುಭವಿಸುವ ಮಾರ್ಗವನ್ನು ನಿರ್ದೇಶಿಸುತ್ತಾನೆ. ಸಿದ್ಧರಾಮನಂತಹರಿಗೆ ಗೋರಕ್ಷನಂಥವರಿಗೆ ಝಂಕಿಸಿ ಮಾರ್ಗ ತೋರಿದರೆ ಮಹಾದೇವಿಯಂಥವರಿಗೆ ತುಂಬಾ ನಯವಾಗಿ ಮಾರ್ಗದರ್ಶನ ಮಾಡಿದ್ದಾನೆ.

ಚಾಮರಸ ಹೀಗೆ ಪ್ರಭುದೇವನನ್ನು ಎಲ್ಲಂದದಿಂದ ವೈಭವೀಕರಿಸಿ, ಅವನಿಗೆ ಸಮಾನರಾರೂ ಇಲ್ಲೆಂಬಂತೆ ಚಿತ್ರಿಸುವ ಮುಖ್ಯ ಉದ್ದೇಶ. ಮೊದಲೇ ಹೇಳಿದಂತೆ ಅವನನ್ನು ಒಂದು ಪರಂಪರೆಗೆ ಮೊದಲಿಗನನ್ನಾಗಿ ಮಾಡುವುದೇ ಆಗಿರಬೇಕೆನಿಸುತ್ತದೆ. ಅವನ ಉದ್ದೇಶ ಆ ಕಾಲಕ್ಕೆ ಸರಿಯೆಸಿತು, ಇಂದೂ ಅದು ಸರಿಯೆನ್ನುವವರಿದ್ದಾರೆ. ಆದರೆ ಸಾಮಾನ್ಯರಿಗೆ ಅದೊಂದು ಅನುಕರಿಸಲು ಸಾಧ್ಯವಾಗದ ಕೇವಲ ಆದರ್ಶ ಪಾತ್ರವಾಗಿ ಉಳಿದುಬಿಟ್ಟಿದೆ. ಆದರೂ ಪ್ರಭುದೇವನ್ನು ಕುರಿತು, ಶಿವನು ಪಾರ್ವತಿಗೆ,

"ಆತನಲ್ಲಮ ಸಕಲಸಮಯ
ಪ್ರೀತಿನಲ್ಲಿಯು ಶೈವದಲಿ ಸಂ
ಪ್ರೀತನದರೊಳು ವೀರಶೈವದಲತಿ ಮಹಾಪ್ರೀತಿ

(ಗತಿ ೨೫–ಪದ್ಯ ೯)

ಎಂದು ಹೇಳಿರುವದು ಪ್ರಭುದೇವನು ಎಲ್ಲ ಧರ್ಮಗಳನ್ನು ಗೌರವಿಸುವ ವ್ಯಕ್ತಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಇಂಥ ವ್ಯಕ್ತಿತ್ವದ ಮಹಾತ್ಮರೇ ಇಂದು ಅಗತ್ಯ.

ಇಲ್ಲಿ ನಾನು, ಕಥಾಸಾರವನ್ನು ಕೊಡುತ್ತಲೆ, ಆಯಾ ಪಾತ್ರ ಮತ್ತು ಸನ್ನಿವೇಶಗಳ ವಿಮರ್ಶೆ ಮಾಡುತ್ತ ಹೋಗಿದ್ದೇನೆ. ಆದುದರಿಂದ ಬಿಡಿ ಬಿಡಿಯಾಗಿ ಅವುಗಳನ್ನು ನಿರೂಪಿಸಲಿಕ್ಕೆ ಹೋಗಿಲ್ಲ. ಪ್ರಭುಲಿಂಗಲೀಲೆಯ ರಸವಿಮರ್ಶೆ, ಸನ್ನಿವೇಶ ನಿರ್ಮಾಣ ಇತ್ಯಾದಿಗಳ ಬಗ್ಗೆ ಒಂದಿಷ್ಟು ಹೇಳಬಹುದಿತ್ತು. ಆದರೆ ಈಗಾಗಲೆ ಆ ಕುರಿತು ಸಾಕಷ್ಟು ಸಾಹಿತ್ಯ ಬಂದಿರುವುದರಿಂದ ತೌಲನಿಕವಾಗಿ ಮತ್ತು ವೈಚಾರಿಕವಾಗಿ ಕೆಲವು ಮಾತುಗಳನ್ನು ಮಾತ್ರ ಹೇಳಿದ್ದೇನೆ.

ಈ ಕೃತಿಯನ್ನು ಸಿದ್ಧಪಡಿಸಲು ನಾನು ಮುಖ್ಯವಾಗಿ ಧಾರವಾಡದ ಎಲ್. ಇ. ಅಸೋಶಿಯೇಶನ್‌ದ ಸಾಹಿತ್ಯ ಸಮಿತಿಯು ೧೯೬೪ರಲ್ಲಿ ಪ್ರಕಟಿಸಿದ ಪ್ರಭುಲಿಂಗಲೀಲೆ ಮತ್ತು ಕರ್ನಾಟಕ ವಿಶ್ವವಿದ್ಯಾಲಯವು ೧೯೭೨ರಲ್ಲಿ ಪ್ರಕಟಿಸಿದ ಪ್ರಭುಲಿಂಗಲೀಲೆ ಇವುಗಳನ್ನು ಆಧಾರವಾಗಿ ಇಟ್ಟುಕೊಂಡಿದ್ದೇನೆ. ಪಾಠಗಳ ಬಗ್ಗೆ ಸಂಶಯ ಬಂದಾಗ ಕೆಲವೊಮ್ಮೆ ನನ್ನ ಬಳಿ ಇರುವ ಪ್ರಭುಲಿಂಗಲೀಲೆಯ ತಾಡೋಲೆಯ ಪ್ರತಿ ಮತ್ತು ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿದ (೧೯೪೦) ಪ್ರಭುಲಿಂಗಲೀಲೆಯ ಸಂಗ್ರಹ ಇವುಗಳ ಸಹಾಯವನ್ನು ಪಡೆದಿದ್ದೇನೆ. ಇದು ಜನಪ್ರಿಯ ಆವೃತ್ತಿಯೆಂಬ ಭಾವನೆಯಿಂದ ಪಾಠಾಂತರಗಳನ್ನು ಕೊಟ್ಟಿಲ್ಲ, ಶಕಟರೇಫಗಳನ್ನೂ ಬಳಸಿಲ್ಲ. ಪ್ರತಿಯೊಂದು ಗತಿಯ ಆರಂಭದಲ್ಲಿ ಬರುವ ವಚನಗಳ ಆಯ್ಕೆಯಲ್ಲಿ ಒಂದಿಷ್ಟು ವ್ಯತ್ಯಾಸ ಮಾಡಿಕೊಂಡಿದ್ದೇನೆ. ತಪ್ಪುಗಳು ನುಸುಳದಂತೆ, ಮುದ್ರಣದೋಷಗಳು ಉಳಿಯದಂತೆ ಸಾಧ್ಯವಾದಷ್ಟು ಪ್ರಯತ್ನಿಸಿದ್ದೇನೆ, ಪರಿಶ್ರಮಿಸಿದ್ದೇನೆ. ಇನ್ನೂ ಅವು ಇದ್ದುದಾದಲ್ಲಿ ಕ್ಷಮಿಸಿ, ಅವುಗಳನ್ನು ತಿದ್ದಿಕೊಂಡು ಓದಬೇಕಾಗಿ ವಿನಂತಿ.

ನಾನು ಸಂಪಾದಿಸಿದ ಈ ಕೃತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಮರುಮುದ್ರಣಕ್ಕೆ ಎತ್ತಿಕೊಂಡಿರುವುದಕ್ಕೆ ಕೃತಜ್ಞನಾಗಿದ್ದೇನೆ. ಇದು ಮೊದಲು ಪ್ರಕಟವಾದದ್ದು ಗದುಗಿನ ಶ್ರೀ ತೋಂಟದಾರ್ಯ ಸಂಸ್ಥಾನ ಮಠದಿಂದ (೧೯೯೯).

ಧಾರವಾಡ **ಬಸವಲಿಂಗಯ್ಯ ಮಲ್ಲಾಪುರ**

# ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಅಧ್ಯಕ್ಷರ ಮಾತು | v |
| ಹೊನ್ನುಡಿ | vi |
| ಎರಡು ನುಡಿ | vii |
| ಪ್ರಕಾಶಕರ ಮಾತು | viii |
| ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ | x |
| ಪ್ರಸ್ತಾವನೆ | xi |
| ಗತಿ ೧ ಮಂಗಲಾಚರಣ | ೧ |
| ಗತಿ ೨ ಪಾರ್ವತೀಪರಮೇಶ್ವರ ಸಂವಾದ | ೮ |
| ಗತಿ ೩ ಮಾಯೆಯ ಜನನ | ೨೦ |
| ಗತಿ ೪ ಮಾಯೆಯ ಮಧುಕೇಶ್ವರನ ಪೂಜೆ | ೩೩ |
| ಗತಿ ೫ ಮುದ್ದಳೆಗೆ ಕುಣಿದಳಾ ಮಾಯೆ | ೫೦ |
| ಗತಿ ೬ ಬಂದಳಾ ವಿಮಳೆ | ೬೯ |
| ಗತಿ ೭ ಮಾಯಾಕೋಲಾಹಲ | ೮೧ |
| ಗತಿ ೮ ಧರೆಗಿಳಿದರಾ ಬಸವಾದಿ ಪ್ರಮಥರು | ೧೦೪ |
| ಗತಿ ೯ ಶಿವಭಕ್ತರಿದ್ದರು ಕೂಡೆ ಧಾತ್ರಿಯಲಿ | ೧೧೪ |
| ಗತಿ ೧೦ ಮಹಾದೇವಿ ನಡೆದಳು ಭಕ್ತಿಭಾವದಲಿ | ೧೨೪ |
| ಗತಿ ೧೧ ಅಲ್ಲಮನ ಹೊಗಳಿದನು ಗೊಗ್ಗಯ್ಯ | ೧೩೪ |
| ಗತಿ ೧೨ ಇರ್ದಳು ಸದ್ಯೋನ್ಮುಕ್ತೆ ಮುಕ್ತಾಯಿ | ೧೪೫ |
| ಗತಿ ೧೩ ಅಲ್ಲಮಲಿಂಗನೊಲಿದನು ಸಿದ್ಧರಾಮಂಗೆ | ೧೫೩ |
| ಗತಿ ೧೪ ಮಣಿದನು ಬಸವನಲ್ಲಮಗೆ | ೧೭೪ |
| ಗತಿ ೧೫ ಮರುಳಶಂಕರಗೊಲಿದ ಪ್ರಭುದೇವ | ೧೮೬ |
| ಗತಿ ೧೬ ಇಷ್ಟಲಿಂಗದ ಮಾರ್ಗವನು ಬೋಧಿಸಿದ ಭಕ್ತರಿಗೆ | ೧೯೫ |

| | | |
|---|---|---|
| ಗತಿ ೧೭ | ಬೀಳ್ಕೊಂಡಳಲ್ಲಮನ ಮಹದೇವಿ | ೨೧೧ |
| ಗತಿ ೧೮ | ಅನುಭವವನನವರತ ಮಾಡುತಿಹುದು | ೨೨೩ |
| ಗತಿ ೧೯ | ಮೋಕ್ಷದೀಕ್ಷೆಯನಿತ್ತ ಗೋರಕ್ಷಂಗೆ ಪ್ರಭುರಾಯ | ೨೩೫ |
| ಗತಿ ೨೦ | ಪಾವನವ ಮಾಡಿದನು ಸರ್ವರನು | ೨೫೧ |
| ಗತಿ ೨೧ | ಶೂನ್ಯಪೀಠವ ಬಸವ ನಿರ್ಮಿಸಿದ | ೨೬೩ |
| ಗತಿ ೨೨ | ಅಲ್ಲಮಪ್ರಭು ಮೂರ್ತಗೊಂಡನು ಶೂನ್ಯಪೀಠದಲಿ | ೨೭೩ |
| ಗತಿ ೨೩ | ತಾನುಂಡಖಿಳಜೀವರ ಹಸಿವನೂಂಕಿದ | ೨೯೦ |
| ಗತಿ ೨೪ | ಹರಗಣಂಗಳ ಮನದ ವಾಸನೆ ಹರಿದುಹೋಯಿತು | ೩೧೦ |
| ಗತಿ ೨೫ | ಅಲ್ಲಮಪ್ರಭು ಇರ್ದನೆಲ್ಲರ ಹೃದಯಕಮಲದಲಿ | ೩೨೨ |
| | ಪದ್ಯಗಳ ಅಕಾರಾದಿ | ೩೩೦ |
| | ಕಠಿಣ ಪದಗಳ ಅರ್ಥಕೋಶ | ೩೭೧ |

ಚಾಮರಸ ವಿರಚಿತ

# ಪ್ರಭುಲಿಂಗ ಲೀಲೆ

# ಪ್ರಭುಲಿಂಗ ಲೀಲೆ

## ಗತಿ ೧
## ಮಂಗಲಾಚರಣ

**ವಚನ**

ಸಹಜದಿಂದ ನಿರಾಲಂಬವಾಯಿತ್ತು
ನಿರಾಲಂಬದಿಂದ ನಿರಾಳವಾಯಿತ್ತು
ನಿರಾಳದಿಂದ ನಿರವಯವಾಯಿತ್ತು
ನಿರವಯದಿಂದ ಆದಿಯಾಯಿತ್ತು
ಆ ಆದಿಯ ಮೂರ್ತಿಯಿಂದಲೊಬ್ಬ ಶರಣನಾದ
ಆ ಶರಣನ ಮೂರ್ತಿಯಿಂದ ಸದಾಶಿವನಾದ
ಆ ಸದಾಶಿವ ಮೂರ್ತಿಯಿಂದ ಈಶ್ವರನಾದ
ಆ ಈಶ್ವರನ ಮೂರ್ತಿಯಿಂದ ರುದ್ರನಾದ
ಆ ರುದ್ರನ ಮೂರ್ತಿಯಿಂದ ವಿಷ್ಣುವಾದ
ಆ ವಿಷ್ಣುವಿನ ಮೂರ್ತಿಯಿಂದ ಬ್ರಹ್ಮನಾದ
ಆ ಬ್ರಹ್ಮನ ಮೂರ್ತಿಯಿಂದಲಾದವು ಸಕಲ ಜಗದ ಜೀವಜಂತುಗಳು
ಇಂತಿವರೆಲ್ಲ ನಮ್ಮ ಗುಹೇಶ್ವರನ ಕರಸ್ಥಲದ ಹಂಗಿನಲ್ಲಿ ಬೆಳೆದರು. ॥೧॥

**ಸೂಚನೆ**

ಶ್ರೀಮದಮೃತಾಂಶುಪ್ರಮೌಳಿ
ಪ್ರೇಮಿಗಳಿಗಾನಂದ ನಿತ್ಯವ
ನೇಮಿಸಿದನೆಮ್ಮಲ್ಲಮಪ್ರಭು ಗುರು ಗುಹೇಶ್ವರನು ॥

ಶ್ರೀ ಮದಮಲಜ್ಞಾನಭಕ್ತಿ ।
ಪ್ರೇಮ ವೇದಪುರಾಣಶಾಸ್ತ್ರ ।
ಸ್ತೋಮನುತ ನತಚಾರುಚರಣಾಂಭೋಜ ಘನಮಹಿಮ ॥
ನಾಮ ರೂಪ ಕ್ರಿಯಾಕಳಾಪವಿ ।
ರಾಮನನುಪಮದಿವ್ಯತೇಜೋ ।
ವ್ಯೋಮಮೂರುತಿ ಗುರು ಗುಹೇಶ್ವರಲಿಂಗ ಶರಣಾರ್ಥಿ ॥೧॥

ಕಾಯದೊಳು ಗುರುಲಿಂಗಜಂಗಮ ।
ದಾಯತವನರಿಯಲ್ಕೆ ಸುಲಭೋ ।
ಪಾಯದಿಂದಿದಿರಿಟ್ಟು ಬಾಹ್ಯಸ್ಥಲಕೆ ಕುರುಹಾಗಿ ॥
ದಾಯದೋರಿ ಸಮಸ್ತಭಕ್ತನಿ ।
ಕಾಯವನು ಪಾವನವ ಮಾಡಿದ ।
ರಾಯ ಪೂರ್ವಾಚಾರ್ಯ ಸಂಗನಬಸವ ಶರಣಾರ್ಥಿ ॥೨॥

ವೀರಶೈವಾಚಾರಮಾರ್ಗವಿ ।
ಚಾರದಭ್ಯಂತರದೊಳೀಪರಿ ।
ಯೋರಣಿಸಿ ಹರಕರ್ಮಭಕ್ತಿಜ್ಞಾನವಿಹುದೆಂದು ॥
ಧಾರುಣಿಯಲರಿವಂತೆ ಕರುಣಾ ।
ಕಾರನಾಗಿ ಷಡುಸ್ಥಲವನು ।
ದ್ಧಾರಿಸಿದ ಗುರು ಚೆನ್ನಬಸವಣ್ಣಂಗೆ ಶರಣಾರ್ಥಿ ॥೩॥

ಕಂತುವನೆ ಕಂಗೆಡಿಸಿಯೊಳಪೊ ।
ಕ್ಕಂತರಂಗವಿಚಾರವೆಲ್ಲವ ।
ಸಂತೆಯಂಗಡಿಯಂತೆ ಸೊನ್ನಲಪುರದೊಳೊಡ್ಡೈಸಿ ॥
ಚಿಂತಿತಾರ್ಥವನರ್ಥಿಗಿತ್ತು ನಿ ।
ರಂತರಖಿಳರಿಗರಿವನೀವ ಮ ।
ಹಂತನೆನಿಸಿದ ಸಿದ್ಧರಾಮಯ್ಯಂಗೆ ಶರಣಾರ್ಥಿ ॥೪॥

ಗೋಮುಖವ್ಯಾಘ್ರಂಗಳಂದದ ।
ಕಾಮ ಮೊದಲಾದಖಿಳ ವಿಷಯ ।
ಸ್ತೋಮವನು ಮುರಿದಿಕ್ಕಿ ಮಂಬರಿದಂತರಂಗದಲಿ ॥
ಆ ಮಹಾಶಿವಲಿಂಗಸಂಗ ।
ಪ್ರೇಮಿಯಾಗಿ ಶಿವೈಕ್ಯಪದವನು ।
ನೇಮಿಸಿದ ಮಹದೇವಿಯಕ್ಕ[ಂಗಳಿಗೆ] ಶರಣಾರ್ಥಿ ॥೫॥

ಶರಣುವೊಕ್ಕ ಸಮಸ್ತರಂತಃ ।
ಕರಣದಲ್ಲಿಯನಾದಿಮಾಯಾಂ ।
ಬರದ ಮೈಲಿಗೆದೊಳೆದು ಭಕ್ತಿರಸಪ್ರವಾಹದಲಿ ॥
ಶರಣಪದವಿಗೆ ಸಲಿಸಿ ಪರಮೇ ।
ಶ್ವರನ ತೋರುವ ಸುಲಭ ಕರುಣಾ ।
ಶರಧಿ ಮಡಿವಳ ಮಾಚಿದೇವಯ್ಯಂಗೆ ಶರಣಾರ್ಥಿ ॥೬॥

ಮರುಳಶಂಕರದೇವರಿಗೆ ಕಿ ।
ನ್ನರಿಯ ಬೊಮ್ಮಯ್ಯಂಗೆಯೇಲೇ ।
ಶ್ವರದ ಕೇತಯ್ಯಂಗೆ ಗಾಣದ ಕನ್ನಪಯ್ಯಂಗೆ ॥
ಪರಿಪರಿಯ ಶಿವಲಿಂಗಭಕ್ತಿಯ ।
ಪರುಠವಿಸಿ ಕಾಲನ ನಿವಾರಿಸಿ ।
ಹರನನೊಚ್ಚತಗೊಂಡ ಶಿವಶರಣರಿಗೆ ಶರಣಾರ್ಥಿ ॥೭॥

ಅಲ್ಲಮಪ್ರಭುಸಂಪ್ರದಾಯದ ।
ಸಲ್ಲಲಿತ ಸನ್ಮಾರ್ಗವನು ನಾ ।
ನೆಲ್ಲರರಿವಂದದಲಿ ಪೇಳುವೆನುಚಿತ ವಚನದಲಿ ॥
ಸೊಲ್ಲಿನೊಳಗಣ ಸೊಂಪನಿಂಪನು ।
ಬಲ್ಲವರು ಭಾವಕರು ಭಕ್ತಿಯ ।
ಬಲ್ಲಿದರು ಲಾಲಿಸುವುದೀ ಪ್ರಭುಲಿಂಗಲೀಲೆಯಲಿ ॥೮॥

ದೇಗುಲವೆ ಮಾತಾಡುವಂದದೊ ।
ಳಾಗಿರದೆಯೊಳಗಿರ್ದು ನುಡಿದಡೆ ।
ಲೋಗರಿಗೆ ಪ್ರತಿಶಬ್ದದಿಂದಾ ಪರಿಯಲೆನ್ನೊಳಗೆ ॥
ಲಾಗಿನಿಂದಲಿ ಗುರು ಗುಹೇಶ್ವರ ।
ನಾಗಳೆನ್ನನು ನುಡಿಸಿದೊಡೆ ನುಡಿ ।
ದಾಗುಮಾಡಿಯೆ ಪೇಳ್ವೆನೀ ಪ್ರಭುಲಿಂಗಲೀಲೆಯನು ॥೯॥

ವಿವರಿಸುವಡೀ ಲೀಲೆಯನು ಹೇ ।
ಳುವನು ದಿಟ ನಾನಲ್ಲ ಮಿಗೆ ಕೇ ।
ಳುವರು ಮಾನವರಲ್ಲವಿದು ಸಾಮಾನ್ಯತರವಲ್ಲ ॥
ಶಿವನ ನಟನಾಟಕದ ಮಹಿಮೆಯ ।
ಶಿವನೆ ಬಲ್ಲನದಂತುಕಾರಣ ।
ಶಿವನ ಭಕ್ತರು ತಿಳಿವುದೀ ಪ್ರಭುಲಿಂಗಲೀಲೆಯನು ॥೧೦॥

ಬಾಯನುಡಿಗಳ ಕೇಳಿ ಕಿವಿಯೊಳ ।
ಗಾಯೆನುತ ಪರಿಣಮಿಸಿ ಹೋಹ ವಿ ।
ಡಾಯವಲ್ಲಿದು ತಮ್ಮ ತನುಮನಧನವನೆಲ್ಲವನು ॥
ಬೀಯ ಮಾಡಿಯೆ ಲಿಂಗದಲಿ ನಿಜ ।
ಕಾಯನಿಲುವಡೆ ನಿತ್ಯರಪ್ಪೊಡೆ ।
ದಾಯಿಗರು ಲಾಲಿಸುವುದೀ ಪ್ರಭುಲಿಂಗಲೀಲೆಯನು ॥೧೧॥

ಕಾಳಗದ ಕಥೆಯಲ್ಲ ವಿಷಯಗ ।
ಳೇಳಿಗೆಯ ವಿಧಿಯಲ್ಲ ಹೊಟ್ಟೆಯ ।
ಹೂಳಲಿಕೆ ಹಿಂಸೆಯನು ಮಾಡುವ ಹೊಲಬು ತಾನಲ್ಲ ॥
ಕಾಳಗವು ಕರಣದಲಿ ಸುರತದ ।
ಕೀಲು ಕುಂಡಲಿಯಲ್ಲಿ ತೃಪ್ತಿಯ ।
ದಾಳಿ ಗಗನದೊಳೆಂದು ಪೇಳುವುದೀ ಸುಬೋಧೆಯಲಿ ॥೧೨॥

ಸತ್ತವರ ಕಥೆಯಲ್ಲ ಜನನದ ।
ಕುತ್ತದಲಿ ಕುದಿಕುದಿದು ಕರ್ಮದ ।
ಕತ್ತಲೆಗೆ ಸಿಲುಕುವರ ಸೀಮೆಯ ಹೊಲಬು ತಾನಲ್ಲ ॥
ಹೊತ್ತು ಹೋಗದ ಪುಂಡರಾಲಿಪ ।
ಮತ್ತಮತಿಗಳ ಗೋಷ್ಠಿಯಲ್ಲಿದು ।
ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯನು ॥೧೩॥

ಕುರಿಗಳೋಪಾದಿಯಲಿ ಕಬ್ಬಿನ ।
ಹೊರಗಣೆಲೆಯನೆ ಮೇದಕಟ ಮೆಲ ।
ಕಿರಿವುತಲ್ಪಸುಖಕ್ಕೆ ಸೋಲದೆ ಕಬ್ಬಿನೊಳುರಸವ ॥
ನೆರೆ ಸವಿವ ಗಜದಂತೆ ಭಕ್ತಿಯ ।
ತೆರನ ತಿಳಿದಾಚರಿಸಬೇಕೆಂ ।
ದರಿವವರು ಲಾಲಿಸುವುದೀ ಪ್ರಭುಲಿಂಗಲೀಲೆಯನು ॥೧೪॥

ಪರುಷದಂಗಕೆ ಸಲೆ ಸುವರ್ಣಾ ।
ಭರಣ ಬೇಕೆಂದೇನು ವಿಧಿಯೇ ।
ಕರ ಕನಿಷ್ಠದ ಕಬ್ಬುನವ ತೊಡವಿಕ್ಕೆ ಹೊನ್ನಾಗೆ ॥
ವಿರಚಿಸಿದೆನಾನಂತುಕಾರಣ ।
ಗುರು ಗುಹೇಶ್ವರಲಿಂಗಲೀಲೆಯ ।
ನೊರೆವೆನೆನ್ನಯ ತೊದಲುನುಡಿಯಲಿ ಸೇವ್ಯಮಪ್ಪಂತೆ ॥೧೫॥

ಗಗನವನು ಮುಟ್ಟುವಡೆ ನೆಟ್ಟನೆ ।
ನಿಗುರಿ ನಿಂದಿರಲೇನು ಕಾರಣ ।
ಸಗುಣನಿರ್ಗುಣಭರಿತ ಚಿನುಮಯ ಗುರು ಗುಹೇಶ್ವರನ ॥
ಹೊಗಳಲಾತನನೆನ್ನ ಬಡನುಡಿ ।
ಮೊಗಸಿ ಮುಟ್ಟಿಹವೆಂದು ಪೇಳುವ ।
ಬಗೆಯಲುದ್ಯೋಗಿಸಿದೆನೀ ಪ್ರಭುಲಿಂಗಲೀಲೆಯನು ॥೧೬॥

ಆವುದಾನೊಂದನುಪಮದ ಮಹಿ ।
ಮಾವಲಂಬದ ನಿರ್ವಿಕಾರದ ।
ಕೇವಲಬ್ರಹ್ಮಸ್ವರೂಪಿನ ಲಿಂಗತತ್ತ್ವದಲಿ ॥
ತೀವಿ ರೂಪಾದನು ಸದಾಶಿವ ।
ದೇವನಾತಂಗಾದಳೊಬ್ಬಳು ।
ದೇವಿ ಪರಮಜ್ಞಾನಶಕ್ತಿಯೆನಿಪ್ಪಳಾತನಲಿ ॥೧೭

ಜ್ಞಾನಶಕ್ತಿ ಸದಾಶಿವಂಗೆ ಸು ।
ಖಾನುಭವ ಶಿವನಾದನಾತಗ ।
ನೂನದಿಚ್ಛಾಶಕ್ತಿಯಾದಳು ಬಳಿಕಲವರಿಂದೆ ॥
ತಾನೆಯಾದನು ರುದ್ರ ರುದ್ರಂ ।
ಗೇನ ಹೇಳುವೆನಾ ಕ್ರಿಯಾಶ ।
ಕ್ತ್ಯನುಗುಣಸತಿಯಾದಳೀ ಕ್ರಮದಿಂದಲಾದಿಯಲಿ ॥೧೮॥

ಬಗೆಯಲಾ ರುದ್ರ ಕ್ರಿಯಾಶ ।
ಕ್ತಿಗಳಲಾದನು ವಿಷ್ಣು ವಿಷ್ಣುವಿ ।
ಗಗಲದಿಹ ಮಹಲಕ್ಷ್ಮಿಯಾದಳು ಲಕ್ಷ್ಮಿ ವಿಷ್ಣುವಿಗೆ ॥
ನೆಗಳ್ದನಂತಾ ಬ್ರಹ್ಮನಾತಂ ।
ಗೊಗೆದು ತೋರಿದಳಾ ಸರಸ್ವತಿ ।
ಮಿಗೆ ಸರಸ್ವತಿ ಕಮಲಸಂಭವರಿರ್ದರೊಲವಿನಲಿ ॥೧೯॥

ಎನಿತು ತೋಜಿಕೆಯಾದ ತೋರಿಕೆ ।
ಯನಿತನೆಮ್ಮಯ ಗುರು ಗುಹೇಶ್ವರ ।
ನೆನಹು ಮಾತ್ರದಿ ಮಾಡಿ ದಿಟವೆಂಬಂತೆ ತೋರಿಸಿದ ॥
ಇನಿತರೊಳಗೆಲ್ಲರಿಗೆ ಮಿಗಿಲೆಂ ।
ದೆನಿಸಿ ತನ್ನಯ ಲೀಲೆಯಿಂದಲಿ ।
ವಿನುತ ಪದವಿಯ ಕೊಟ್ಟು ನಿಲಿಸಿದನಾದಿರುದ್ರಂಗೆ ॥೨೦॥

ಹುಟ್ಟಿಸುವ ಗುಣವೊಂದು ಬ್ರಹ್ಮಗೆ ।
ಹುಟ್ಟಿಸುವ ರಕ್ಷಿಸುವ ಗುಣವನು ।
ನೆಟ್ಟನಾ ವಿಷ್ಣುವಿಗೆ ರುದ್ರನೆನಿಪ್ಪ ಮಹಿಮಂಗೆ ॥
ಹುಟ್ಟಿಸುವ ರಕ್ಷಿಸುವ ಭಕ್ಷಿಪ ।
ಕಟ್ಟಳೆಯನಳವಡಿಸಿ ಪಟ್ಟವ ।
ಕಟ್ಟಿ ಕರುಣಿಸಿ ಮೆರೆದನೆಮ್ಮಯ ಗುರು ಗುಹೇಶ್ವರನು ॥೨೧॥

**ಅಂತು ಗತಿ ೧ಕ್ಕಂ ಪದನು ೨೧ಕ್ಕಂ ಮಂಗಳಂ**

## ಗತಿ – ೨
# ಪಾರ್ವತೀಪರಮೇಶ್ವರ ಸಂವಾದ

**ವಚನ**

ಬ್ರಹ್ಮವಿಷ್ಣುಗಳ ಮಾಯೆ ತೊತ್ತಳದುಳಿವಂದು ।
ದೇವದಾನವರ ಮಾಯೆ ಆಗಿದಗಿದು ತಿಂಬಂದು ।
ರುದ್ರಗಣ ಪ್ರಮಥಗಣರೆಂಬರ ಮಾಯೆ ಮರುಳ್ಮಾಡಿ ಕಾಡುವಂದು ॥
ನೊಸಲಕಣ್ಣು ಪಂಚಮುಖ ದಶಭುಜದವರಿಗೆ ಮಾಯೆ ಅರ್ಧಾಂಗಿಯಾದಂದು।
ಅಷ್ಟಾಶೀತಿ ಸಹಸ್ರ ಋಷಿಗಳ ಮಾಯೆ ತಪೋಮದದಲಿ ಕೆಡಹುವಂದು ।
ನಾನು ಮಾಯಾಕೋಳಾಹಳನಾಗಿರ್ದೆ ಕಾಣಾ ಗುಹೇಶ್ವರಾ ॥೧॥

**ಸೂಚನೆ**

ಪರಮ ನಿತ್ಯಾನಂದಸುಖವಹ ।
ಪರಿಯ ಕೇಳಿದಡೀಶ ಹೇಳಲು ।
ಗಿರಿಜೆ ಮಾಯೆಯನಿಳೆಗೆ ಕಳುಹಿದಳರಿವಡಲ್ಲಮನ ॥

ಪರಿಭವಂಗಳನೀಗಿಯಂತಃ ।
ಕರಣವನು ಶುದ್ಧೈಸಿ ಮುಂದಣ ।
ಮರಣಭಾಧೆಯನೊದೆದು ನಿಶ್ಚಿಂತೆಯಲಿ ಸುಖದಿಂದೆ ॥
ಪರಮ ಸುಜ್ಞಾನಾಮೃತವನಾ ।
ಧರಿಸಿ ನಿತ್ಯವನರಿವವರು ಸ ।
ತ್ಕರಿಸಿ ಕೇಳುವುದೀ ಮಹಾ ಪ್ರಭುಲಿಂಗಲೀಲೆಯನು ॥೧॥

ವರ ಸರಸ್ವತಿ ಕಮಲಸಂಭವ ।
ರಿರವಿನಿಂದೆ ಸಮಸ್ತ ಸಚರಾ ।
ಚರದ ನಾನಾ ಯೋನಿಜ ಸ್ತ್ರೀಪುರುಷರೆಂದೆಂಬ ॥
ಪರಿಪರಿಯಲಿಹ ಜೀವಜಾಲದ ।
ಹೊರಳಿ ಹುಟ್ಟಿತು ಕಮಲಜಾಂಡದ ।
ಹೊರೆಹೊರೆಗಳೆಡೆಗಳಲಿ ಕಿಕ್ಕಿರಿಗಿರಿದು ಸಂದಣಿಸಿ ॥೨॥

ಹರಿ ಸುರೇಂದ್ರಾದಿಗಳು ಮೊದಲಾ ।
ದರಿಗೆ ನಿರ್ಮಿತವಾದ ಬಹು ವಿ ।
ಸ್ತರದಲವರವರಿಗೆ ಚತುರ್ದಶ ಭುವನಭವನದಲಿ ॥
ಸುರನರೋರಗಮುಖ್ಯ ಸಚರಾ ।
ಚರರಿಗಿರಲಳವಡಿಕೆ ಮಾಡಿದ ।
ಪರುಠವಣೆ ಚೆನ್ನಾಯ್ತು ಚತುರಾನನನ ಚದುರಿನಲಿ ॥೩॥

ಆ ಸರೋಜಭವಾಂಡದೊಳಗತಿ ।
ಲೇಸೆನಿಸುವನುಪಮದ ಪರಶಿವ ।
ನಾ ಸದಾಶಿವನಾ ಶಿವನ ಮಹಿಮಾಭಿಧಾನಗಳ ॥
ಭಾಸುರವೆ ಸಾಕಾರವಾದ ವಿ ।
ಳಾಸತೆಯಲಿಪ್ಪಾದಿರುದ್ರಗೆ ।
ವಾಸವಾದುದು ತನಗೆ ತಾನೆ ಮಹಾಮಹತ್ವದಲಿ ॥೪॥

ಮಿಸುಪ ಸತ್ವಗುಣಪ್ರಭಾವ ।
ಪ್ರಸರವೇ ರಜತಾದ್ರಿಯೆಂಬೀ ।
ಹೆಸರ ಪೆತ್ತು ನವೀನ ವಿಮಲಾಕಾರ ವೃತ್ತಿಯಲಿ ॥
ದೆಸೆದೆಸೆಗೆ ದೇದೀಪ್ಯಮಾನದ ।
ಲೆಸೆದುದಂತಿಂತೆಂದು ಮಿಗೆ ಬ ।
ಣ್ಣಿಸಲು ಬಲ್ಲವನಾವನೈ ಕೈಲಾಸ ಪರ್ವತವ ॥೫॥

ನಿಗಮನಿಕರದ ಸುತ್ತುವಳಯದ ।
ಬಿಗಿದ ಕೋಂಟೆಯ ಶಾಸ್ತ್ರಸಂಚಯ ।
ದಗಳಿನಾಗಮಸಮುದಯಂಗಳ ದಾರವಟ್ಟಗಳ ॥
ಹಗಲಿರುಳು ಹಂಗಿಲ್ಲದತಿ ಮಹಿ ।
ಮೆಗಳಿಗಾಸ್ಪದವಾಗಿ ಮಿಗೆ ಝಗ ।
ಝಗಿಸುತಿರ್ದುದು ರಮ್ಯವೆನೆ ರಚನೆಯಲಿ ರಜತಾದ್ರಿ ॥೬॥

ಶಕ್ತಿಸಂಚವನರಿದ ಸದಮಲ ।
ಭಕ್ತಿಮಾರ್ಗದ ರಾಜಬೀದಿಯ ।
ಯುಕ್ತಿಗೊಪ್ಪುವ ಸೋಹಮೆಂಬೀ ಗುಡಿಯ ತೋರಣದ ॥
ವ್ಯಕ್ತಮಲ್ಲದ ತತ್ವಮಸಿಯೆಂ ।
ಬುಕ್ತಿಯುಪ್ಪರಿಗೆಯಲಿ ನೆರೆ ನಿ ।
ರ್ಮುಕ್ತ ಮಹಿಮೆಯ ಮನೆಗಳಲಿ ಮೆರೆಯಿತ್ತು ಕೈಲಾಸ ॥೭॥

ನಿರುತ ನಿಜಸುಖ ದೇವತಾಮಂ ।
ದಿರದ ಚಿತ್ತಸ್ಥಿರದ ಬಾಗಿಲ ।
ಪಿರಿದು ಪರಮಾನಂದದೊಡ್ಡೋಲಗದ ಚಾವಡಿಯ ॥
ನೆರೆದು ಶೋಭಿಸುವಷ್ಟಮಹದೈ ।
ಸಿರಿಯ ಮೊದಲಾಗಿರ್ದ ನಾನಾ ।
ಪರಿಯ ಸಂಪದ ಸಂದಣಿಸಿದುದು ಶಿವನ ಭವನದಲಿ ॥೮॥

ಹೊಳೆವ ಸಮ್ಯಗ್‌ಜ್ಞಾನಪೀಠ ।
ಸ್ಥಲದ ನಿತ್ಯಾನಂದ ನಿಜ ನಿ ।
ಶ್ಚಲ ನಿರಾಕುಳ ನಿರ್ವಿಕಾರ ನಿರಾಳ ನಿಶ್ಚಿಂತ ॥
ಬಳಸಬಾರದ ಬರಿಯ ಬೊಮ್ಮದ ।
ಹೊಳಹು ಸಾಕ್ಷಾತ್ಕರಿಸಿ ನೆರೆ ನಿ ।
ರ್ಮಲತೆವೆತ್ತಾ ರುದ್ರನಿರುತಿರ್ಪನು ವಿನೋದದಲಿ ॥೯॥

ಮೂಲತತ್ತ್ವವೆ ಮೋರೆ ವಾಯುವೆ ।
ತೋಳುವಾದಿಯನಾದಿಯೆಂಬಿವೆ ।
ಕಾಲು ಪಾವಕ ದಿವಸಪತಿ ಹಿಮಕರರೆ ಕಣ್ಣುಗಳು ॥
ಕೀಲಿಸಿದ ಹೃದ್ಬೀಜ ಬಿಂದು ಚ ।
ಢಾಳಿಸಿದ ಶೀತಾಂಶುವಾಗಲು ।
ಮೇಳವಿಸಿ ತನುವೊಪ್ಪುತಿರ್ದುದು ಪಾರ್ವತೀಪತಿಯ ॥೧೦॥

ಕಾಲು ಕಲ್ಪವಿಕಲ್ಪಗಳು ನಳಿ ।
ತೋಳು ಮೋಹಸ್ನೇಹಗಳು ನಡು ।
ವಾ ಲಸನ್ಮದ ವೃತ್ತಕುಚವೇ ಕಾಮಲೋಭಗಳು ॥
ಲಾಲಿತಾಸ್ಯವೆ ಮಮತೆ ತೊಳಗುವ ।
ಲೋಲಲೋಚನವರುಹು ಕುರುಹು ಸ ।
ಮೇಳವಾಗಿಹ ಗಿರಿಜೆ ಮೆರೆದಳು ಶಂಕರಾಂಕದಲಿ ॥೧೧॥

ಉರಗನಾಭರಣದ ಲಸನ್ಮಣಿ ।
ವಿರಚಿಸುವ ಭೂಷಣದ ಕಾಯದ ।
ಪರಮ ಶುದ್ಧಸ್ಫಟಿಕಕಾಂತಿಯ ದಿವ್ಯತನುರುಚಿಯ ॥
ಗಿರಿಸುತೆಯನೀಕ್ಷಿಸುವ ನೋಟದ ।
ಹರನ ನೋಡುವ ವರಕಟಾಕ್ಷದ ।
ಬೆರಕೆಯಪ್ಪಿನ ದೇವ ದೇವಿಯರಿರ್ದರೊಲವಿನಲಿ ॥೧೨॥

ಸಸಿಯ ಶೀತಳದಂತೆ ಕಪ್ಪುರ ।
ದೆಸೆವ ಕಂಪುಗಳಂತೆ ಕನಕದ ।
ಮಿಸುಪಲೋಹಸುವರ್ಣದಂತೆ ಸುಧಾಂಶುರುಚಿಯಂತೆ ॥
ಲಸಿತ ಮಿಥುನಾಳಾಪ ಹೊರಗಾ ।
ಣಿಸದೆ ಶಕ್ತಿಸಮೇತ ಶಂಕರ ।
ನೊಸೆದು ಕುಳ್ಳಿತು ಮೆರೆವುತಿರ್ದನು ದಿವ್ಯತೇಜದಲಿ ॥೧೩॥

ಜೆಡೆಗಳೇ ಬೇರುಗಳು ಗಂಗೆಯ ।
ಮಡುವೆ ಬೆಳೆನೀರಂಗವೇ ತರು ।
ತೊಡವೆ ಪರ್ಣಗಳಭಯವರದವೆ ಕುಸುಮಸಂಫಲವು ॥
ಒಡಲನಪ್ಪಿದ ಮಡದಿಯೇ ಬಿಡ ।
ದಡರಿ ಹಬ್ಬಿದ ಲತೆಯೆನಲ್ಕಾ ।
ಮೃಡನೆನಿಪ ಮೂಲಾತ್ಮವೃಕ್ಷ ಮಹಾ ವಿರಾಜಿಸಿತು ॥೧೪॥

ವರ ಸುಗಂಧದ ಭೂಷಣದ ಸೀ ।
ಗುರಿಯ ವಸ್ತ್ರದ ಪಾದುಕೆಯ ಚಾ ।
ಮರದ ಹಡಪದ ಕನ್ನಡಿಯ ಪರಿಚರ್ಯದೂಳಿಗದ ॥
ಪರಮಸುಕೃತಿಗಳಿದ್ದರಾ ಶಂ ।
ಕರನ ಶರ್ವಾಣಿಯ ಸಮೀಪದ ।
ಹೊರೆಯಲಗ್ಗದ ರುದ್ರಗಣಗಳು ರುದ್ರಕನ್ಯೆಯರು ॥೧೫॥

ಬೆಸನ ಹಾರುವ ಪಾರ್ವತಿಯ ತಾ ।
ಮಸ ರಜೋ ಸಾತ್ವಿಕ ಗುಣಂಗಳು ।
ಹೆಸರುವಡೆದಬಲಾಕೃತಿಯಲೋಲೈಸಿಕೊಂಡಿಹವು ॥
ಎಸೆವ ಮಾಯಾನಾಮವೇ ತಾ ।
ಮಸಗುಣಾನ್ವಿತೆಯಾಗಿ ಮಿಗೆ ರಂ ।
ಜಿಸಿದಳವರೊಳು ಮಂಗಳೆಯ ಮನ್ನಣೆಯ ಮಹಿಮೆಯಲಿ ॥೧೬॥

ಕೆಂಜೆಡೆಯ ಮಕುಟಗಳ ತನುವಿನ ।
ರಂಜಿಸುವ ಚಾತುರ್ಭುಜಂಗಳ ।
ಕೆಂಜುರಿಯ ಹಣೆಗಣ್ಣುಗಳ ವಾಮಾಂಗಶಕ್ತಿಗಳ ॥
ಕುಂಜರನ ಚರ್ಮಾಂಬರದ ಭವ ।
ಭಂಜನರು ಮುಂದಿನಲಿ ತೇಜಃ ।
ಪುಂಜನೊಡ್ಡೋಲಗದೊಳಿರ್ದರು ರುದ್ರಕೋಟಿಗಳು ॥೧೭॥

ಪ್ರೇಮದಿಂದಲಿ ನೀಲಮೇಘ ।
ಶ್ಯಾಮಕಾಯರು ಸಾತ್ವಿಕಸ್ಥಿತ ।
ನಾಮಧೇಯರು ಕೌಸ್ತುಭೋರಸ್ಥಳದ ಚೆನ್ನಿಗರು ॥
ಶ್ರೀ ಮಹಾಲಕ್ಷ್ಮೀಸಮೇತರು ।
ಕಾಮಜನಕರು ಕಮಲನೇತ್ರರು ।
ವಾಮದಲಿ ಶಿವಸಭೆಯೊಳಿರ್ದರು ವಿಷ್ಣುಕೋಟಿಗಳು ॥೧೮॥

ಚತುರತೆಯ ಚತುರಾನಂದ ಶಾ ।
ಶ್ವತ ರಜೋಗುಣರಚಿತ ಮೂರ್ತಿಯ ।
ನುತ ಸುವರ್ಣಚ್ಛವಿಯ ನಿರ್ಮಲಕಾಯಕಾಂತಿಗಳ ॥
ಅತಿಶಯದ ಸಾಕ್ಷಾನ್ಮಹಾ ಭಾ ।
ರತಿ ಸಮೇತದ ಮಹಿಮರಾ ಪಶು ।
ಪತಿಯ ಬಲದಲಿ ನೆರೆದುದತುಳ ಬ್ರಹ್ಮಕೋಟಿಗಳು ॥೧೯॥

ಸುರರು ಖಚರರು ಸಿದ್ಧ ವಿದ್ಯಾ ।
ಧರರು ಮನುಗಳು ಯಕ್ಷ ರಾಕ್ಷಸ ।
ಗರುಡ ಗಂಧರ್ವಾದಿ ನಾನಾ ದೇವಯೋನಿಜರು ॥
ಉರಗ ನರರೊಡಗೂಡಿ ದೇವೇಂ ।
ದ್ರರುಗಳಗಣಿತ ಕೋಟಿ ನೆರೆದುದು ।
ಸರಸಿಜಾಸನನಪರದೆಸೆಯಲಿ ಶಿವನ ಸಭೆಯೊಳಗೆ ॥೨೦॥

ಚಂದ್ರಕಳೆಗಳನೆಯ್ದೆ ಕರಗಿಸಿ ।
ತಂದು ಕರುವಿನೊಳೆರೆದರೋ ಮೇ ।
ಣಿಂದುಮೌಳಿಯ ದರಹಸಿತವೇನೊಂದು ರೂಪಾಯ್ತೊ ॥
ಎಂದೆನಲು ಪರಮೇಶ್ವರಂಗಾ ।
ನಂದದಾಶ್ರಯವೆನಿಪ ಮಹಿಮೆಯ ।
ನಂದಿಕೇಶ್ವರನಿರ್ದ ಸಮ್ಮುಖದಲ್ಲಿ ಶಂಕರನ ॥೨೧॥

ಜವನ ಜವಗೆಡಿಸುವ ಮಹಾಮೃ ।
ತ್ಯುವಿನ ಮೆಟ್ಟುವ ಮಿಡಿದ ಕಾಲನು– ।
ರವಣೆಯನು ಠಕ್ಕಿಸುವ ಕರ್ಮಭ್ರಮೆಯ ಭಂಗಿಸುವ ॥
ಶಿವಪದದ್ರೋಹಿಗಳ ಸರ್ರನೆ ।
ಸವರಿ ಸೀಳ್ದಪ್ಪಳಿಸುವಧಟಿನ ।
ತವಕ ತೆಕ್ಕೆಯ ವೀರಭದ್ರನು ಮುಂದೆ ಮೋಹಿಸಿದ ॥೨೨॥

ಹರನ ಹರುಷದ ಹಕ್ಕೆ ಪರಮೇ ।
ಶ್ವರನ ಪರಿಣಾಮದ ಪಸರ ಶಂ ।
ಕರನ ಸೌಖ್ಯದ ಸಾಲೆ ಮೃಡನೀಕ್ಷಿಸುವ ಮುಖಮುಕುರ ॥
ಪರಮ ಭಕ್ತಿಯ ಭಾವಭಂಗಿಯ ।
ಕರುವೆನಿಸುವಾ ಭೃಂಗಿನಾಥನ ।
ಪರಿ ವಿರಾಜಿಸುತಿರ್ದುದಾ ಶಶಿಧರನ ಸಭೆಯೊಳಗೆ ॥೨೩॥

ಕಡಲನಾದೊಡೆ ಕಂಗಳಿಂದವೆ ।
ಕುಡಿವ ತತ್ತಡೆ ಮೇರುಗಿರಿಯನು ।
ಮಿಡಿದು ಮೀಂಟುವ ಮುಳಿದಡಬುಜಭವಾಂಡ ಮಂಡಲವ ॥
ಹಿಡಿದು ಹಿಸುಕುವ ವೀರವೃತ್ತಿಯ ।
ಕಡುಹಿನುಗ್ರಸಮಗ್ರರಿರ್ದರು ।
ಮೃಡನ ಮುಂದೆಸೆಯಲ್ಲಿ ಭೂತಪ್ರಮಥಗಣನಿಕರ ॥೨೪॥

ವರ ವಿನಾಯಕ ದುರ್ಗೆ ಭೈರವ ।
ನೆರೆದ ವೇತಾಳಿಯರು ಕರ ಭೀ ।
ಕರದ ಶಾಕಿನಿ ಡಾಕಿನಿಯರುಗಳಾದಿಯಾಗಿರ್ದ ॥
ಪರಿಪರಿಯ ಪೆಸರವರನೇಕರು ।
ನೆರೆದರಾ ಶಂಕರನ ಸಭೆಯೊಳು ।
ಹಿರಿದು ಹರುಷಂಗಳಲಿ ಸಚರಾಚರರು ಸಂದಣಿಸಿ ॥೨೫॥

ಅತ್ರಿ ಭಾರದ್ವಾಜ ವಿಶ್ವಾ ।
ಮಿತ್ರ ಗೌತಮ ಗಾರ್ಗ್ಯ ನಿರ್ಮಳ ।
ಗಾತ್ರನಾರದ ಭೃಗು ಪುಲಸ್ತ್ಯ ವಶಿಷ್ಠ ದೂರ್ವಾಸ ॥
ಚಿತ್ರತರವೆನಿಸುವ ಪವಿತ್ರ ಚ ।
ರಿತ್ರರಾ ಶಿಖಿ ರವಿ ಸುಧಾಕರ ।
ನೇತ್ರನೊಡ್ಡೋಲಗದೊಳಿರ್ದುದು ಪರಮ ಮುನಿನಿಕರ ॥೨೬॥

ಓಲಗಿಸುವ ನವಗ್ರಹಗಳ ।
ಸಾಲುಗಳ ಸೌರಂಭಗಳ ದಿ ।
ಕ್ಪಾಲಕರ ಸಂದಣಿಯ ಸಡಗರದಖಿಳ ಸಂಭ್ರಮದ ॥
ಮೇಲೆ ಮೇಲುಪ್ಪುಡಿಪ ಪಾಠಕ ।
ರೋಳಿಗಳ ಗಡಬಡೆಯ ಗಡಣದ ।
ಮೇಳದಲಿ ಮೆರೆದಿರ್ದುದಾ ಶಶಿಮೌಳಿಯಾಸ್ಥಾನ ॥೨೭॥

ನೀಡಿದರೆ ಮುಕುಳಿತ ಕರಂಗಳು ।
ಮೂಡುವವು ಮಣಿಮುಕುಟದಲಿ ಮಾ ।
ತಾಡಿದರೆ ತನತನಗೆ ಜೀಯ ಹಸಾದವೆಂದೆನುತ ॥
ಕೂಡೆ ಮಣಿವರು ಮೌಳಿಗಳನಾ ।
ರೂಢಿಯಾದ ವೃಷಧ್ವಜನ ಮನ ।
ವಾಡಿದಂತಾಡುತ್ತಮಿರ್ದುದು ಸಭೆ ಸಘಾಟದಲಿ ॥೨೮॥

ಬೆಳಗುಮಣಿಭೂಷಣದಿನತಿ ಮೆ ।
ಯ್ವೆಳಗು ಭೂಷಣ ಮೆಯ್ವೆಳಗಿನಿಂ ।
ಬೆಳಗು ನಖನಯನಂಗಳಾಸ್ಥಾನದ ಮಹೋತ್ತಮರ ॥
ಬೆಳಗು ಬೆಳೆದಾ ಶಿವನ ಮೂರ್ತಿಯ ।
ಬೆಳಗಿನೊಳು ಬೆರಸಿದೊಡೆ ಸಭೆಯದು ।
ಬೆಳಗುತಿರ್ದುದು ಶುದ್ಧಜ್ಯೋತಿರ್ಲೋಕವೆಂಬಂತೆ ॥೨೯॥

ಇರುತಲೊಂದಾನೊಂದು ದಿನ ವಿ ।
ಸ್ತರವಿನೋದಂಗಳಲಿ ಸಭೆಯೊಳು ।
ಹರಕಲಸಿ ದಂತಚ್ಛವಿಯ ಬೆಳುದಿಂಗಳನು ಸುರಿವ ॥
ಕರ ಚೆಲುವ ಬಾಯ್ದೆರೆಯ ಪರಮೇ ।
ಶ್ವರಿ ನಿಜಾಂತಃಕರಣಜನಿತ ।
ಸ್ಮರಣೆಯನು ಬಿನ್ನೈಸಲುದ್ಯೋಗಿಸಿದಳಭವಂಗೆ ॥೩೦॥

ಶಿವನೆ ನಿನ್ನೊಡ್ಡೋಲಗದೊಳೊ ।
ಪ್ಪುವ ಮಹಾಘನಮಹಿಮರೆಲ್ಲರು ।
ಭವಕೆ ಬಾರದೆ ನಿತ್ಯಸುಖದಿಂದಿಪ್ಪರೋ ಮೇಣು ॥
ಇವರಿಗೆಯು ನೆಲೆಯಿಲ್ಲವೋ ಪೇ ।
ಳಿವರವಸ್ಥೆಯನೆನುತ ಕೇಳಲು ।
ಶಿವೆಗೆ ತಿಳಿವಂದದಲಿ ಬಳಿಕಾ ಶಂಭುವಿಂತೆಂದ ॥೩೧॥

ಗಿರಿಜೆಯಹುದೌ ನಿನ್ನ ಬುದ್ಧಿಯ ।
ಪರಿಯದೊಳ್ಳಿಹ ಪ್ರಶ್ನೆಯಾಯಿತು ।
ಹರಿ ವಿರಿಂಚಿಗಳಾದಿಯಾದವರಾದಡೆಯು ತುದಿಗೆ ॥
ವಿರಚಿಸುತ್ತಿಹ ನಾಮ ರೂಪಗ ।
ಳೊರೆದ ತತ್ತ್ವಿಯೆಯಿದ್ದವಾದಡೆ ।
ದೊರಕಲರಿಯದು ನಿತ್ಯಸುಖವಗಜಾತೆ ಕೇಳೆಂದ ॥೩೨॥

ಆಗಲಾದಡೆ ನಾಮ ರೂಪ ।
ಕ್ರೀಗಳನು ಗೆಲಬಲ್ಲ ವಿಮಲೋ ।
ದ್ಯೋಗವಾವುದು ಕರುಣಿಸದ ನಾನರಿಯಬೇಕೆನಲು ॥
ನಾಗಭೂಷಣ ದುರಿತಭೀಷಣ ।
ರಾಗಶೋಷಣ ಭಜಕಪೋಷಣ ।
ನಾಗಳಾ ಪಾರ್ವತಿಗೆ ಕರುಣಿಸಿ ಶಂಭುವಿಂತೆಂದ ॥೩೩॥

ಭೋಗಭೂಮಿಯ ಭೋಗತನುವಿನ ।
ಲಾಗದನುಪಮಸಿದ್ಧಿ ಕರ್ಮೋ ।
ದ್ಯೋಗಭೂಮಿಯ ಕರ್ಮತನುವಿನಲಲ್ಲದದರಿಂದೆ ॥
ಯೋಗಯೋಗ್ಯರು ಯೋಚಿಸುತ ಭೂ ।
ಭಾಗದಲಿ ಮಾನವಶರೀರಗ ।
ಳಾಗಿ ಸಾಧಿಸಿ ನಿಜವನರಿವನು ಗಿರಿಜೆ ಕೇಳೆಂದ ॥೩೪॥

ಎನೆ ಹಸಾದವದಪ್ಪುದಾದಡೆ ।
ಮನುಜಲೋಕದೊಳಾವ ಪರಿಯಿಂ ।
ದನುಭವಸ್ಥಿತಿಗತಿಯನುಪದೇಶಿಸುವ ಗುರುವಾರು ॥
ಎನಗೆ ತಿಳಿವಂದದಲಿ ಪೇಳೆನ ।
ಲಿನಿಯಳಿಗೆ ವಿಸ್ತರಿಸಬೇಕೆಂ ।
ದನುಕರಿಸಿದನು ಶಂಭು ತತ್ವೋದ್ಯೋಗದಾಯಿಗನ ॥೩೫॥

ಏನ ಹೇಳುವೆನಾದಿಯಲಿ ಸು ।
ಜ್ಞಾನ ನಿರಹಂಕಾರರೆಂಬರ ।
ನೂನತಪವನು ಮಾಡಲೆನ್ನ ನಿಜಸ್ವರೂಪವರ ॥
ಸೂನುವೆಂಬಂದದಲಿ ಸುಳಿದನು ।
ತಾನೆಯಲ್ಲಮನೆಂಬ ಪೆಸರೊಳು ।
ಮಾನಿನಿಯೆ ಕೇಳಾ ಮಹಾತ್ಮನೊಳರಿವುದರಿವುಗಳ ॥೩೬॥

ಅಲ್ಲಮಪ್ರಭುವೆನಿಪನಾತನ ।
ಬಲ್ಲೆ ನಾನೀಗರಿದೆ ಬಳಿಕಿ ।
ನ್ನಲ್ಲಿ ನಿಜತತ್ವಸ್ವರೂಪವನರಿವಡೇನರಿದು ॥
ಒಳ್ಳಿತಾಯಿತು ತಿಳಿಯಬೇಕೆಂ ।
ಬೆಲ್ಲರಿಗೆ ಕರಸುಲಭವೆನುತಲಿ ।
ಭುಲ್ಲವಿಸಿ ಗಿರಿಜಾತೆ ನುಡಿಯಲು ಶಂಭುವಿಂತೆಂದ ॥೩೭॥

ಖಾತಿಗೊಳ್ಳದಿರಾಡಿ ತೋರಿದ ।
ಡೀತ ನಿಷ್ಠುರನೆನ್ನದಿರು ಬರು ।
ಮಾತುಮಾತಿಗೆ ಸಿಕ್ಕನಾರಾರಾವ ಭಕ್ತಿಗಳ ॥
ರೀತಿಗಳಲಿಹರವರಿಗವರಾ ।
ಪ್ರೀತಿಯಲಿ ರೂಪಾಗಿ ತೋರುವ ।
ನಾತನನುಪಮನಗಜೆ ಕೇಳ್ ಸಾಮಾನ್ಯನಲ್ಲೆಂದ ॥೩೮॥

ಇದು ಯಥಾರ್ಥದ ವಾಕ್ಯವದು ತ ।
ಪ್ಪದು ವಿಚಾರಿಸಲುಳಿದವರಿಗಾ ।
ಗದು ಮಹಾ ದುಸ್ತರತೆಯೆನ್ನಯ ಚಾರುಚತುರತೆಗೆ ॥
ಹೃದಯವನು ತೋರಿಸದೆಯಲ್ಲಮ ।
ಹದುಳ ಹೋಹನೆ ಕಾಂಬೆನೆನುತಲಿ ।
ಮದಮತಿಯಲಾ ಗಿರಿಜೆ ನುಡಿದಡೆ ಶಂಭುವಿಂತೆಂದ ॥೩೯॥

ರಾಣಿಯಹುದೌ ನಿನ್ನ ಬುದ್ಧಿಯ ।
ಕಾಣಬಹುದಿನ್ನಾದಡೀಪರಿ ।
ಹೂಣಿಕೆಯ ನುಡಿದಿನ್ನು ಹೋದಡೆ ಸೋಲು ನಿನಗೆನಲು ॥
ಮಾಣು ಬರುಮಾತುಗಳನೆನುತಾ ।
ಪ್ರಾಣವಲ್ಲಭಗೆಂದಳಾ ಶ ।
ರ್ವಾಣಿಯೆನ್ನಯ ಪೈಜೆಯಿದೆಯಹುದೆಂದಳಧಟಿನಲಿ ॥೪೦॥

ಬಳಿಕಲಂಬಿಕೆ ತನ್ನ ತಾಮಸ ।
ಕಳೆಯೆ ಮೂರುತಿಯಾದ ಮಾಯೆಯ ।
ನಿಳೆಯೊಳುದಯಿಸಿಯಲ್ಲಮನ ನೀನರಿದು ಬಾಯೆನಲು ॥
ತಿಳಿವೆನಾತನ ನಿಜವನಥವಾ ।
ಸೆಳೆದನಾದಡೆ ಮುಟ್ಟಿ ಹಿಡಿಕೊಂ ।
ಡೆಳೆದು ತಹೆನಾನೆನುತ ಪೈಜೆಯ ನುಡಿದಳಾ ಮಾಯೆ ॥೪೧॥

ಇಂತು ನುಡಿದುನ್ಮತ್ತವೃತ್ತಿಯ ।
ಭ್ರಾಂತಿಯಲಿ ತನ್ನಳವನರಿಯದೆ ।
ಕಂತುಹರನಾಸ್ಥಾನದಲಿ ಬೀಳ್ಕೊಂಡು ಬಿಂಕದಲಿ ॥
ಮುಂತೆ ಮಲೆವುತ ನಲಿದು ಭೂಲೋ ।
ಕಾಂತರವ ನಿಶ್ಚೈಸಿ ಮಯಾ ।
ಕಾಂತೆ ಕರಭರವಸದಲೈದಿದಳತಿ ವಿನೋದದಲಿ ॥೪೨॥

**ಅಂತು ಗತಿ ೨ಕ್ಕಂ ಪದ ೬೩ಕ್ಕಂ ಮಂಗಳಂ**

## ಗತಿ – ೩
# ಮಾಯೆಯ ಜನನ

**ವಚನ**

ಬ್ರಹ್ಮ ಘನವೆಂಬೆನೆ ಬ್ರಹ್ಮನ ನುಂಗಿತ್ತು ಮಾಯೆ
ವಿಷ್ಣು ಘನವೆಂಬೆನೆ ವಿಷ್ಣುವ ನುಂಗಿತ್ತು ಮಾಯೆ
ರುದ್ರ ಘನವೆಂಬೆನೆ ರುದ್ರನ ನುಂಗಿತ್ತು ಮಾಯೆ
ತಾ ಘನವೆಂಬೆನೆ ತನ್ನ ನುಂಗಿತ್ತು ಮಾಯೆ
ಸರ್ವವು ನಿಮ್ಮ ಮಾಯೆ ಒಬ್ಬರನೊಳಕೊಂಡಿತ್ತೆ ಹೇಳಾ ಗುಹೇಶ್ವರಾ ॥೧॥

**ಸೂಚನೆ**

ಭೂವಳಯದೊಳು ಜನಿಸಿ ಮಾಯಾ ।
ದೇವಿ ಬೆಳೆಯುತ್ತಿರ್ದಳೊಪ್ಪುವ ।
ಹಾವಭಾವವಿಲಾಸವಿಭ್ರಮದಿಂದೆ ಮಿಗೆ ಸೊಗಸಿ ॥

ಚಿತ್ತವಿಸುವುದು ಸಕಲ ಶಿವಭ ।
ಕ್ತೋತ್ತಮರು ಮುಂದಣ ಕಥಾ ಸದ್ ।
ಬಿತ್ತರವನಮರಾದ್ರಿಗೊಪ್ಪುವ ತೆಂಕದಿಕ್ಕಿನಲಿ ॥
ಸತ್ಯದಲಿ ಸದ್ಭಕ್ತಿಯಲಿ ಸ ।
ದ್ವೃತ್ತಿಯಲಿ ಸಚ್ಚರಿತದಲಿ ಸಂ ।
ಪತ್ತಿನಲಿ ಸಲೆ ಸೊಗಸಿ ಬೆಳುವಲದೇಶ ಮೆರೆದಿಹುದು ॥೧॥

ಅದರೊಳವನೀಕಾಂತೆಗೊಪ್ಪುವ ।
ವದನವೋ ಶೃಂಗಾರಸಾರದ ।
ಸದನವೋ ಸೊಬಗಿನ ಸುಮಾನದ ಸುಖದ ನೆಲೆವೀಡೋ ॥
ಸುದತಿರತ್ನಗಳೊಗೆದ ಚೆಲುವಂ ।
ಬುಧಿಯೊ ಪೇಳೆನೆ ಸಕಲ ಸೌರಂ ।
ಭದಲಿ ಸೊಗಸಿಹುದಲ್ಲಿ ಬನವಸೆಯೆಂಬ ಪಟ್ಟಣವು ॥೨॥

ಆವ ಕಾಲದಲಾದಡೆಯು ಫಲ ।
ವೀವುತಿಹ ಪಲಸುಗಳು ನೇರಿಲು ।
ಮಾವು ದಾಡಿಮ ತೆಂಗು ನಾರಂಗಾದಿ ತರುಲತೆಯ ॥
ತೀವಿ ಚರಿಸುವ ಶುಕಪಿಕಭ್ರಮ ।
ರಾವಳಿಯ ನಾನಾವಿಧದ ಶೋ ।
ಭಾವಹವೆ ತಾನಾದುದಾ ಬನವಸೆಯಲುದ್ಯಾನ ॥೩॥

ಕೇರಿಕೇರಿಯ ತರವಿಡಿದು ಗುಡಿ ।
ತೋರಣಂಗಳ ಪರಿಮಳಿಸುತಿಹ ।
ಸಾರಣೆಯ ಕಾರಣೆಯ ಗಂಧೋದಕದ ಚಳೆಯಗಳ ॥
ಸೌರಭದ ಪೂವಲಿಗಳಲಿ ಶೃಂ ।
ಗಾರಿಸಿದ ಬೀದಿಗಳ ಸೊಬಗಿನ ।
ಸಾರದಲಿ ಸಮನಿಸಿದುದತಿ ಸೌರಂಭ ಬನವಸೆಯ ॥೪॥

ವೇದ ಶಾಸ್ತ್ರಾಗಮ ಪುರಾಣವ ।
ನೋದುವ ಧ್ವನಿಯಿಂದೆ ಕಳನೊಳು ।
ಕಾದಿ ಗೆಲಿದತಿಬಳರ ಕೈವಾರಿಸುವ ಧ್ವನಿಯಿಂದೆ ॥
ಬೀದಿಬೀದಿಗಳಲ್ಲಿ ವಿಗಡನಿ ।
ರೋಧಮದಗಜತತಿಯ ಬೃಂಹಿತ ।
ನಾದದಲಿ ಕಳಕಳತೆವೆತ್ತಿಹುದಾಗಳಾ ಪುರವು ॥೫॥

ನುಡಿದು ಜಾಣರು ಸಕಲ ಶಬ್ದವ ।
ನಡೆದು ಜಾಣರು ನಿಖಿಳ ರೀತಿಯ ।
ಕುಡಲು ಜಾಣರು ಕುಂದದಂತಿರಲರ್ಥಿಗರ್ಥವನು ॥
ಪೊಡವಿಗಿದು ಪೊಸತೆಂಬ ಜನಪದ ।
ವಿಡಿದು ಕಿಕ್ಕಿರಿಗಿರಿದ ಬನವಸೆ ।
ಗೊಡೆಯನಾಗಿರುತಿಪ್ಪನೈ ಮಮಕಾರ ಭೂಪಾಲ ॥೬॥

ಆರು ಬಣ್ಣಿಸಬಲ್ಲರಾ ಮಮ ।
ಕಾರನೃಪನ ಮಹಾಪ್ರತಾಪವ ।
ಶೂರತೆಯ ಸಾಹಸವನಾತನ ಸಕಲಗುಣಗಣವ ॥
ಧಾರುಣಿಯಲಪ್ರತಿಮನಾಗಿಯು ।
ದಾರತೆಯಲಿರುತಿಪ್ಪನಾತಗೆ ।
ನಾರಿಯಾಗಿಹಳೊಬ್ಬ ಮಾನಿನಿ ಮೋಹಿನೀದೇವಿ ॥೭॥

ಕುಸುಮಬಾಣನೊ ರತಿಯೊ ಮೇಣಾ ।
ಶಶಿಯೊ ರೋಹಿಣಿದೇವಿಯೋ ಮೇ ।
ಣೆಸೆವ ಸುರಪನೊ ಶಚಿಯೊ ಮೇಣ್ಪುರುಷೋತ್ತಮನೊ ಸಿರಿಯೋ ॥
ಹೆಸರಿಡಲು ಹವಣಲ್ಲವೆಂಬೊಂ ।
ದಸಮ ಸಮ್ಮೇಳದ ಸಗಾಢದ ।
ಬೆಸುಗೆಯಲಿ ಮಮಕಾರನೃಪ ಮೋಹಿನಿಯರೆಸೆದಿಹರು ॥೮॥

ಅವರು ಮಕ್ಕಳ ಬಯಸಿ ಭರದಲಿ ।
ವಿವಿಧ ಗೌರೀವ್ರತವು ಮೊದಲಾ ।
ದವನು ನಾನಾಶಕ್ತಿದೇವತೆಗಳ ಸಮೂಹವನು ॥
ಶಿವಪದಪ್ರಾಂತವನು ಸಾರದೆ ।
ಕವಲುವಟ್ಟೆಗಳಲ್ಲಿ ಜಡದೈ ।
ವವನು ಮಿಗೆ ಮಮಕಾರನೃಪ ಮೋಹಿನಿಯರರ್ಚಿಪರು ॥೯॥

ಭಾವಿಸಲು ಮಮಕಾರ ಮೋಹಿನಿ ।
ದೇವಿಯರ ಬಸುರಿನಲಿ ವರ ರಾ ।
ಜೀವಲೋಚನೆ ರಚಿತರಂಜನೆ ಸಕಲಸಂಪನ್ನೆ ॥
ದೇವ ದಾನವ ಮಾನವರುಗಳ ।
ಡಾವಣಿಯ ದನವಾಗಿ ಕಟ್ಟುವ ।
ಭಾವೆ ಮಾಯಾದೇವಿ ಹುಟ್ಟಿದಳಖಿಳ ವಿಭವದಲಿ ॥೧೦॥

ಸೂಳವಿಸಿದುವು ಗಡಣದಲಿ ನಿ ।
ಸ್ಸಾಳ ಗಿಡಿಬಿಡಿ ಕೊಂಬು ಚಂಬಕ ।
ಡೊಳ್ಳು ಡೌಡೆ ಡಮಾಮಿ ಜಾಗಟಿ ಮದ್ದಳಾದಿಗಳು ॥
ಓಳಿಯಲಿ ಘೀಳಿಟ್ಟು ಚೀಱುವ ।
ಕಾಳೆಗಳು ಮೊದಲಾದ ವಾದ್ಯದ ।
ಮೇಳ ಮೆರೆದಿರ್ದುದು ಕುಮಾರಿಯ ಹೆತ್ತ ಹರುಷದಲಿ ॥೧೧॥

ಹಲವು ಕಾಲಕೆ ಹರಸಿ ಹೆತ್ತರು ।
ಲಲಿತಗಾತ್ರೆಯ ವಿಮಳನೇತ್ರೇಯ ।
ವಿಲಸಿತವ್ಯಾಮೋಹ ನವರಸಭರಿತಪಾತ್ರೆಯನು ॥
ಬಳಿಕ ಬುಧರಿಗೆ ಸಕಲರಿಗೆ ಪೊಂ ।
ಗಳನು ಭೂಷಣ ವಸ್ತ್ರರತ್ನವ ।
ನೊಲಿದು ದಾನವ ಮಾಡಿದನು ಮಮಕಾರಭೂಪಾಲ ॥೧೨॥

ಇತ್ತಲಿಂತೀ ಮಾಯೆ ಹುಟ್ಟಿದ ।
ಡತ್ತಲಖಿಳಬುಧವ್ರಜಂಗಳ ।
ಚಿತ್ತಗಳು ಪಲ್ಲಟಿಸಿಯಾಶಾಪಾಶವೆಗ್ಗಳಿಸಿ ॥
ಮುತ್ತು ನೆರೆತಿಹ ಜೀವಜಾಳರಿ ।
ಗೆತ್ತಿ ಕಾಮಗ್ರಹವಿಕಾರತೆ ।
ಮುತ್ತಿ ಮುರುಟಿಸುತಿರ್ದುದೇನೆಂದೆಂಬೆನಚ್ಚರಿಯ ॥೧೩॥

ಊರ ತೊರೆದಡವಿಯೊಳು ಗಂಗಾ ।
ತೀರದೊಳು ಗಿರಿಹ್ವರಂಗಳ ।
ಘೋರತರಗುಹೆಗಳೊಳು ಜಲ ಪಂಚಾಗ್ನಿಮಧ್ಯದೊಳು ॥
ಧೀರಮುನಿಗಳು ದಿಟ್ಟಸಿದ್ದರು ।
ದಾರ ಯೋಗೀಶ್ವರರು ಭಯದಲಿ ।
ಭೋರನೆದೆಗುಂದಿದರು ಮಾಯೆಯ ಜನನಕಾಲದಲಿ ॥೧೪॥

ಬೆತ್ತ ಬಿದಿರಿಡಿದಿರ್ದ ತರುಲತೆ ।
ಹುತ್ತ ಬೆಳೆದ ಸಮಾಧಿವಂತರ ।
ಚಿತ್ತ ಸಂಚಲವಾಗಿ ನೆನಹಿನ ನೇಮ ನೆಲೆಗೆಡಲು ॥
ಎತ್ತಲಿಂದೀ ಮಾಯೆ ಹುಟ್ಟಿತೆ ।
ನುತ್ತ ಚಿಂತಾಕ್ರಾಂತರಾಗಿರೆ ।
ಸತ್ಯನಿಧಿ ದೂರ್ವಾಸನಾ ಪ್ರಸ್ತಾವದಲಿ ಸುಳಿದ ॥೧೫॥

ವಿನಯ ಮಿಗೆ ಬಳಿಕರ್ಘ್ಯಪಾದ್ಯಾ ।
ಸನಗಳಿಂ ಸತ್ಕರಿಸಿ ಮುದದಲಿ ।
ತನತನಗೆ ಸಾಧಕರು ಸಿದ್ಧರು ವರತಪೋಧನರು ॥
ಇನಿತು ಕಾಲದೊಳಿಲ್ಲದೀಗಲು ।
ಮನಸು ಸಂಚಲವಾದುವೆಮಗೆಂ ।
ದೆನುತ ಪೇಳಿದರವರುಗಳು ದೂರ್ವಾಸಮುನಿಪತಿಗೆ ॥೧೬॥

ಹೂಣಿಸಿಯೆ ಹುರಿಗೊಂಡು ನೆರೆ ಗೀ ।
ರ್ವಾಣರೆಲ್ಲರ ಮುಂದೆ ಮಿಗೆ ರು ।
ದ್ರಾಣಿ ತನ್ನಯ ತಾಮಸಾಂಗದ ಮಾಯೆಯನು ಕಳುಹೆ ॥
ಮಾಣದಿಳೆಯೊಳು ಜನಿಸಿ ಬಂದಳು ।
ಕಾಣಿರೇ ಬಳಿಕಲಿ ಸಮಾಧಿ ।
ತ್ರಾಣಿಗಳಿಗೆಲ್ಲಿಯದು ತರಹರವೆಂದನಾ ಮುನಿಪ ॥೧೭॥

ಅಲ್ಲದಿರ್ದಡೆ ನಮಗಿದೆತ್ತಣ ।
ತಲ್ಲಣವು ಬರಲೇನು ಕಾರಣ ।
ವಿಲ್ಲ ನಿಮ್ಮ ನಿರೂಪವಿದು ದಿಟುವೆನುತ ಮುನಿನಿಕರ ॥
ಒಳ್ಳಿತಾಯಿತು ನೀವು ಕೃಪೆಯಿಂ ।
ದಿಲ್ಲಿಗೈತಂದುದು ನಿಮಿತ್ತದ ।
ಲೆಲ್ಲ ಸಂಶಯವಳಿದುದೆಂದರು ಮುನಿಗಳಾತಂಗೆ ॥೧೮॥

ಮತ್ತೆ ಮಾಣದೆ ಕೇಳಿದರು ಮುನಿ ।
ಪೋತ್ತಮರು ದೂರ್ವಾಸ ಮುನಿಯನು ।
ಚಿತ್ತಿವಿಸು ತನ್ಮಾಯೆ ಜನಿಸಿದಳೇನು ಕಾರಣವು ॥
ಎತ್ತಣದು ಸಾಂಗತ್ಯ ನಮಗೀ ।
ಬಿತ್ತರವನರುಪೆಂದಡವರಿಗೆ ।
ತಥ್ಯವನು ವರಮುನಿಗಳಿಗೆ ದೂರ್ವಾಸನಿಂತೆಂದ ॥೧೯॥

ಮಾತು ಮಾತಿನೊಳೋಲಗದೊಳಗ ।
ಜಾತೆ ಶಿವನೊಳು ಗೋಷ್ಠಿ ಮಾಡುತ ।
ಲಾತನನು ನಿಜರೂಪ ಕೇಳಿದಡಲ್ಲಮಪ್ರಭುವ ॥
ಭೂತಳದೊಳರಿದಲ್ಲಿ ತಿಳಿಯೆನೆ ।
ಭೂತನಾಥನು ಬಳಿಕ ಪಾರ್ವತಿ ।
ಪ್ರೀತಿಯಿಂದಟ್ಟಿದಳು ನಿಜ ತಾಮಸದ ಮಾಯೆಯನು ॥೨೦॥

ಇದುವೆ ಕಾರಣ ಮಾಯೆ ತಾ ಹು ।
ಟ್ಟಿದಳು ಬಳಿಕಿನ್ನಾರಿಗಾದಡೆ ।
ವಿದಿತವಾಗಿಹುದಲ್ಲಮಪ್ರಭುಲಿಂಗ ಸಂಗವನು ॥
ಹೃದಯದೊಳು ಹುರಿಗೊಳಿಸುವಡೆ ಬಳಿ ।
ಕದರ ಮಹಿಮೆಯನೇನ ಹೇಳುವೆ ।
ಸದಮಳಸ್ವಾತಂತ್ರ್ಯನಿಜವಹರೆಂದನಾ ಮುನಿಪ ॥೨೧॥

ಎಂದು ಪೇಳ್ದೆಲ್ಲರಿಗೆ ಮನದ ತ ।
ಮಂಧವನು ಪರಿಹರಿಸಿ ಬಳಿಕಾ ।
ನಂದದಲಿ ದೂರ್ವಾಸಮುನಿ ಹೋದನು ನಿಜಾಶ್ರಮಕೆ ॥
ಅಂದು ಮೊದಲಾಗರಿವವರು ಮನ ।
ಬಂದ ಪರಿಯಲಿ ಭಕ್ತಿಯುಕ್ತಿಗ ।
ಳಿಂದ ಸಾಧಿಸುತಿರ್ದರೆಮ್ಮಯ ಗುರು ಗುಹೇಶ್ವರನ ॥೨೨॥

ಮತ್ತೆ ಮನದಲಿ ತಮ್ಮ ತಮ್ಮಯ ।
ಚಿತ್ತದೊಳಗಲ್ಲಮನ ನೆನೆವುತ ।
ಸುತ್ತಿ ಸುಳಿಯದೆ ಮುನ್ನಿನಂತಿರ್ದರು ತಪೋಧನರು ॥
ಇತ್ತಲೀ ಮಮಕಾರನೆಂಬ ನೃ ।
ಪೋತ್ತಮನ ಸುಕುಮಾರಿ ಮಿಗೆ ಬೆಳೆ ।
ವುತ್ತಲಿರ್ದಳು ಗಳಿಗೆ ಸಂಖ್ಯೆಗೆ ಸಕಲ ಸುಖದಿಂದೆ ॥೨೩॥

ಸಿಸುವ ನೋಡಿದ ಕಣ್ಗೆ ಮಾಯವೆ ।
ಮುಸುಕುವುದು ಮನ ಮಚ್ಚುವುದು ಮೋ ।
ಹಿಸುವುದೀ ಪರಿ ಜನನಿಜನಕಾದ್ಯರುಗಳೆಲ್ಲರಿಗೆ ॥
ವಸುಮತೀಪತಿ ಬಳಿಕಲತಿಸಂ ।
ತಸದಲಾತ್ಮಜೆಗಖಿಲ ವಿಭವದಿ ।
ಹೆಸರನಿಟ್ಟನು ಮಾಯೆಯೆಂಬ ನವೀನ ನಾಮವನು ॥೨೪॥

ಉಲಿವ ಗೆಜ್ಜೆಯ ಕಾಲ ಕಡಗದ ।
ಘಲಘಲಿಸುವಂದುಗೆಯ ರತುನದ ।
ಲುಳಿಯ ಕಟಿಸೂತ್ರದ ಝಣತ್ಕಾರಿಸುವ ಕಂಕಣದ ॥
ಹುಲಿಯುಗುರ ಬಂದಿಯ ಸುಢಾಳದ ।
ಲೊಲೆವ ಮಾಗಾಯಿಗಳ ಪೊಳೆವರ ।
ಳೆಲೆಯ ಮಿಸುಗುವ ಬಾಲದೊಡಿಗೆಯ ಮಾಯೆಗಿಕ್ಕಿದರು ॥೨೫॥

ಹೆಚ್ಚು ನೀರೆರೆದಿಟ್ಟು ತೊಟ್ಟಿಲೊ ।
ಳೊಚ್ಚೆರಗ ದುಗುಲದಲಿ ಹೊಕ್ಕುಳ ।
ಮುಚ್ಚಿ ಸೊಡರ್ವಕ್ಕಿನಲಿ ಬೊಟ್ಟಿಟ್ಟೊಲವಿನಲಿ ಹರಸಿ ॥
ನಿಚ್ಚದಲಿ ತೂಪಿರಿದು ತೂಗುವ ।
ನಚ್ಚುಮಚ್ಚಿನ ದಾದಿಗಾಗಳು ।
ಮೆಚ್ಚನೀವುತ ಹೆಚ್ಚುತಿರ್ದಳು ಮೋಹಿನೀದೇವಿ ॥೨೬॥

ಹಲಗೆ ಮಾಣಿಕದೊಟ್ಟಿಲಲಿ ಮ ।
ಗ್ಗುಲಿಸಿ ಮಲಗಿ ನಿರೀಕ್ಷಿಸುತೆ ಮಾ ।
ರ್ಪೊಳೆವ ತನ್ನನೆ ಕಂಡು ನಲಿವುತ ನಗುತ ಕೈದುಡುಕಿ ॥
ಸೆಳೆದು ತೆಗೆದರೆ ಬಾರದಿರಲಾ ।
ನೆಲಲನೊದೆವುತ ಕಾಲ ಗೆಜ್ಜೆಗ ।
ಳುಲುಹನಾಲಿಪ ಮಾಯೆ ಮೆರೆದಳು ಬಾಲಲೀಲೆಯಲಿ ॥೨೭॥

ಹೊಡಮರಳ ಕಲಿತರೆ ವಿರಕ್ತರ ।
ದೃಢತೆ ಹೊಡೆಗೆಡೆಯಿತ್ತು ದಟ್ಟಡಿ ।
ಯಿಡಲು ಕೆಟ್ಟುವು ಶೌಚ ಬಾಲಬ್ರಹ್ಮಚಾರಿಗಳ ॥
ನುಡಿಗಲಿಯೆ ಮೌನಿಗಳ ಬಾಯ್ಗಳ ।
ಲಿಡಿದ ಮುದ್ರೆಗಳೊಡೆದುವೆಂದೆನೆ ।
ನುಡಿವೆ ನಾನಿನ್ನೇನ ಮಾಯೆಯ ಬೆಳವಿಗೆಯ ಬಲುಹ ॥೨೮॥

ಆಡಿಸುವ ಕೆಳದಿಯರ ಸಂಜ್ಞೆಯ ।
ಲಾಡಿ ಪರಿದಪ್ಪಪ್ಪೆನುತ್ತಲಿ ।
ಕೂಡೆ ನಡೆತಂದಪ್ಪಿ ಮೇಲುದ ಸೆರಗಿನೊಳಗಡಗಿ ॥
ನೋಡುತಲಿ ದಾ ಎನುತ ಚೈ ಮುಂ ।
ಡಾಡಿ ಮುಂದಲೆವಿಡಿದು ಕುಣಿಕುಣಿ ।
ದಾಡಿ ಸೌಖ್ಯವನೀಯುತಿರ್ದಳು ಮಾಯೆ ಮೋಹಿನಿಗೆ ॥೨೯॥

ಒಮ್ಮೆ ಮಮಕಾರವನಿಪನನೊ ।
ಮ್ಮೆಮ್ಮೆ ಮೋಹಿನಿದೇವಿಯನು ಮ ।
ತ್ತೊಮ್ಮೆ ತನ್ನುವನಾಡಿಸುವ ತರುಣಿಯರ ತಂಡವನು ॥
ಹೆಮ್ಮೆಗೊಳಿಸುತ ಸುಖಮುಖವ ಹೊರ ।
ಹೊಮ್ಮಿಸುತ ನೆರೆ ಬಾಲಲೀಲೆಯ ।
ಸೊಮ್ಮ ಸೂರೆಯ ಕೊಡುತಲಿರ್ದಳು ಮಾಯೆ ಮಹಿಯೊಳಗೆ ॥೩೦॥

ಬೀರುತಿರ್ದಳು ಮುದ್ದುತನವನು ।
ಹೇರುತಿರ್ದಳು ಸಕಲ ಚೆಲುವನು ।
ತೋರುತಿರ್ದಳು ಜಗದ ಜಂಗುಳಿಗಾಡುವೊಲನಾಗಿ ॥
ಸಾರುತಿರ್ದಳು ಸಕಲಸೊಬಗನು ।
ಮೀರುತಿರ್ದಳು ದಿನದಿನಕೆ ಕಳೆ ।
ಯೇರುತಿರ್ದಳು ಮಾಯೆ ವಿವಿಧವಿಲಾಸವೃತ್ತಿಯಲಿ ॥೩೧॥

ಹಿಡಿಹಿಡಿದುಕೊಂಡರ್ತಿಯಲಿ ಬೆಂ ।
ಬಿಡದೆ ಶಿಕ್ಷಾಚಾರ್ಯತನದಲಿ ।
ಜಡಿದು ಝಂಕಿಸಿ ಮುದ್ದುತನ ಮಿಗೆ ಮಾಯೆ ತನ್ನಂತೆ ॥
ನಡೆಯ ಕಲಿಸಿದಳಂಚೆವಿಂಡಿಗೆ ।
ನುಡಿಯ ಕಲಿಸಿದಳರಗಿಳಿಗೆ ಸರ ।
ವಿಡಲು ಕಲಿಸಿದಳಾಕೆ ತನ್ನರಮನೆಯ ಕೋಗಿಲೆಗೆ ॥೩೨॥

ಮನದ ಮಾತಿನ ರೀತಿಗಳು ಕ ।
ಣ್ಣಿನಲಿ ಕೈಗಳ ಸಂಜ್ಞೆಗಳು ಹು ।
ಬ್ಬಿನಲಿ ಸೊಬಗಿನ ಸೌಮ್ಯತೆಯ ಸಂಗ್ರಹವು ಮೊಲೆಗಳಲಿ ॥
ಅನುಕರಿಸಿ ಮೊನೆದೋರುತಿರ್ದುವು ।
ದಿನದಿನಕೆ ಹೆಚ್ಚುತಲಿ ಮಾಯಾ ।
ವನಿತೆಗಂಕುರಿಸಿತ್ತು ಜವ್ವನ ಜಗವ ಝೋಂಪಿಸುತ ॥೩೩॥

ಆ ನಟಣೆಯಾ ರೀತಿಯಾ ನಿಲ ।
ವಾ ನಡೆವ ಗತಿ ಗಮಕವಾ ತೊಡೆ ।
ಯಾ ನಿತಂಬಗಳಾ ನಡುವಿನಸಿದಾ ಮೊಲೆಯ ಚೆಲುವು ॥
ಆ ನಯದ ತೋಳಾ ಮುಖಾಂಬುಜ ।
ವಾ ನಯನವಾ ನೋಟವಾ ತುರು ।
ಬಾ ನವೀನತೆಯುಡಿಗೆಯೇಂ ನೆಲಸಿದವೊ ಮಾಯೆಯಲಿ ॥೩೪॥

ಮಾಡಿಸಿದನು ಕುಮಾರಿತಿಗೆ ಮಣಿ ।
ಮಾಡ ನಾನಾಪರಿಯ ಮಂಟಪ ।
ಖೇಡಕುಳಿಯುಪವನಗಳೋಲಗಶಾಲೆ ಮೊದಲಾದ ॥
ರೂಢಿಸಿದ ವಿನಿಯೋಗ ಕೇಳಿಗೆ ।
ಜೋಡಿಸಿದ ಮನೆಗಳನು ಕನ್ನೆಗೆ ।
ಮಾಡವೊಂದನು ರಚನೆಯಲಿ ಮಮಕಾರಭೂಪಾಲ ॥೩೫॥

ಆಕೆ ಕನ್ಯಾಮಾಡದೊಳು ನಾ ।
ನಾ ಕುಶಲಶಾಸ್ತ್ರವನು ವಿದ್ಯಾ ।
ನೀಕವನು ಪರಿಚರಿಸಿ ಪರಿಣತೆಯಾಗಿ ಸುಖದಿಂದೆ ॥
ಆ ಕುಮಾರಿತಿಯಿರುತಿರಲು ಬಳಿ ।
ಕಾ ಕಳಾನಿಧಿ ನೃಪತಿ ಮಾಯೆಗೆ ।
ಬೇಕೆನುತಲಾಳಾಪಿಸಿದ ಮದುವೆಯನು ಮನದೊಳಗೆ ॥೩೬॥

ಲಾಳ ಗುಜ್ಜರ ಬೋಟ ಕರಹಟ ।
ಚೋಳ ಪಾಂಡ್ಯ ಕಳಿಂಗ ಚೀನ ಕ ।
ರಾಳ ಕೊಂಕಣ ಮಲಹ ಮಗಧ ಮರಾಟ ನೇಪಾಳ ॥
ಮಾಳವರು ಮೊದಲಾದ ಭೂಮೀ ।
ಪಾಲರೊಳುಯೆನ್ನಯ ಕುಮಾರಿಯ ।
ತೋಳದೊಡವಿನ್ನಾರೆನುತ ಚಿಂತಿಸಿದನವನೀಶ ॥೩೭॥

ಇರುತಿರಲು ಮಮಕಾರಭೂಮೀ ।
ಶ್ವರನ ವಿಮಲಾನ್ವಯಕೆ ನೆಟ್ಟನೆ ।
ಗುರುವೆನಿಪಹಂಕಾರನೆಂಬಾಚಾರ್ಯನೈತಂದು ॥
ಅರಸ ಮಾಡುವ ವಂದನೆಯನಾ ।
ದರಣೆಯನು ಕೈಕೊಳೆತ ಕೇಳಿದ ।
ಕರುಣದಿಂದಲಿ ಭೂಮಿಪನ ಸುಕ್ಷೇಮ ಕುಶಲವನು ॥೩೮॥

ಕೇಳಿ ಹರುಷಿತನಾದ ಭೂ ।
ಪಾಲಕನ ಸುಕ್ಷೇಮ ಕುಶಲವ ।
ನಾಲಿಸುತಲವನಿಪನ ಕೆಲದ ಕುಮಾರಿಯನು ಕಂಡು ॥
ಆ ಲತಾಂಗಿಯ ರೂಪರೇಖಾ ।
ಜಾಲವನು ಚೆನ್ನಾಗಿ ತಿಳಿದು ಕೃ ।
ಪಾಳು ನಿಶ್ಚೈಸಿದನು ಕಾರಣಕನ್ನೆಯಿವಳೆಂದು ॥೩೯॥

ಇನಿತು ನೆಯ್ದಿಲಗಣ್ಣ ಕೋಕ ।
ಸ್ತನದ ತೊಳಪ ಮೃಣಾಳನಾಳದ ।
ತನುಲತೆಯ ಮಿಸುಗುವ ತರಂಗದ ನಿರಿಯ ನಿರಿಗೆಗಳ ॥
ಇನಿತು ಚೆಲುವಿನಲಿಪ್ಪ ಮಾಯಾಂ ।
ಗನೆಯ ಲಾವಣ್ಯಾಂಬುಸರಸಿಯ ।
ಲನುಚರಿಸುವಂತಪ್ಪ ಹಂಸನ ಕೇಳ್ದನಾಚಾರ್ಯ ॥೪೦॥

ಕೇಳಲಾಚಾರ್ಯಂಗೆ ಧರಣೀ ।
ಪಾಲ ಬಿನ್ನೈಸಿದನು ನೀವೇ ।
ಹೇಳಬೇಹುದು ದೇವ ವರನಾರೀ ಕುಮಾರಿತಿಗೆ ॥
ಲಾಲಿಸುವುದಮರೇಂದ್ರಸುರನರ ।
ಜಾಳದೊಳು ಸಾದೃಶ್ಯಸದ್ಗುಣ ।
ಶೀಲರಾರೆನಲರಸಗೊಲಿದಾಚಾರ್ಯನಿಂತೆಂದ ॥೪೧॥

ಫಲಿತ ಚೂತದ ಮರನ ಸಿರಿ ಕೋ ।
ಗಿಲೆಗೆ ನೆಟ್ಟನೆ ಹಾಲು ಹಂಸೆಗೆ ।
ಲಲಿತ ಕುಸುಮದ ಕಂಪು ತುಂಬಿಗೆ ಸವಿಯನೀವಂತೆ ॥
ಉಳಿದ ಖಗ ಬಕ ಕಡುದುರುಗಳಿ ।
ಗಳವಡುವುದೆ ಸದಾಶಿವಂಗೀ ।
ಲಲನೆಯಲ್ಲದೆ ನರರಿಗುಚಿತವೆ ಭೂಪ ಕೇಳೆಂದ ॥೪೨॥

ಶಿವನೆ ಪತಿಯಹನೆಂದು ನೀವ್ ಚಿ ।
ತ್ತವಿಸಿದಿರಿಯಾ ಶಿವನು ದಿಟ ಮಾ ।
ನವಶರೀರಗಳಿಗೆ ಸುಸಾಧ್ಯನೆ ದೇವ ಪೇಳೆನಲು ॥
ಶಿವನು ಶಿವಭಕ್ತಿಯನು ಮಿಗೆ ಮಾ ।
ಡುವರಿಗವರವರಿಚ್ಛೆಯನು ಸಲಿ ।
ಸುವನು ಸತ್ಯವಿದೆಂದನೊಲಿದಾಚಾರ್ಯನರಸಿಂಗೆ ॥೪೩॥

ಎನುತ ಸಂಭ್ರಮದಿಂದ ಮಾಯಾಂ ।
ಗನೆಗೆಯುಪದೇಶವನು ಮಾಡಿದೊ ।
ಡನುಕರಿಸಿ ಮಾಡುತ್ತಲಿರ್ದಳು ಭಕ್ತಿಯನು ಬಳಿಕ ॥
ಜನಪತಿಯೆ ಸುಖದಿಂದಲಿರಿಯೆಂ ।
ದೆನುತಹಂಕಾರ್ಯ ಬೀಳ್ಕೊ ।
ಟ್ಟನುಗತಿಯಲ್ಯೈದಿದನು ತನ್ನಯ ನಿಜನಿವಾಸವನು ॥೪೪॥

ಧರಣಿಪಾಲಕನಿತ್ತ ಸುಖದಿಂ ।
ದಿರುತಲಿರ್ದನು ಈ ಕುಮಾರಿತಿ ।
ಹರುಷದಿಂದಲಿ ನಿತ್ಯ ನೇಮವ ಹಿಡಿದು ಛಲದಿಂದೆ ॥
ಪುರಕೆ ಘಟಿಕಾಸ್ಥಾನವೆನಿಸುವ ।
ಪರಮ ಸಿದ್ಧಿಯನೀವ ಮಧುಕೇ ।
ಶ್ವರನ ಪೂಜಿಸುತಿರ್ದಳಿನಿಯನ ಬಯಸಿ ಭಕ್ತಿಯಲಿ ॥೪೫॥

ಅಷ್ಟವಿಧದರ್ಚನೆಗಳಿಂದುಭ ।
ಯಾಷ್ಟವಿಧದುಪಚಾರದಿಂದಲ ।
ಭೀಷ್ಟವೆನಿಸುವ ನಿಜ ಮನೋವಲ್ಲಭನ ಬಯಕೆಯಲಿ ॥
ಶ್ರೇಷ್ಠವೆನಿಸುವ ಮಧುಕನಾಥನು ।
ತುಷ್ಟಿವಡುವಂತರ್ಚಿಸಿದಳೀ ।
ಸೃಷ್ಟಿಯೊಳು ಸಾಂಗದಲಿ ಮಾಯಾದೇವಿ ಮನವೊಲಿದು ॥೪೬॥

**ಅಂತು ಗತಿ ೩೯ಕ್ಕಂ ಪದನು ೧೦೯ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ–೪
# ಮಾಯೆಯ ಮಧುಕೇಶ್ವರನ ಪೂಜೆ

**ವಚನ**

ಹೊತ್ತಾರೆ ಎದ್ದು ಅಗ್ಗವಣಿ ಪತ್ರಿಯ ತಂದು
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು
ಹೊತ್ತು ಹೋಗದ ಮುನ್ನ ಮೃತ್ಯು ಒಯ್ಯದ ಮುನ್ನ
ತೊತ್ತುಗೆಲಸವ ಮಾಡು ಕೂಡಲಸಂಗಮದೇವನ ॥೧॥

ಅಚ್ಚುಗವೇಕಯ್ಯ ಸಂಸಾರದೊಳಗೆ
ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವುದು
ಬೇಗ ಬೇಗ ಅರ್ಚನೆ ಪೂಜೆಯ ಮಾಡುವುದು
ಕೂಡಲಚೆನ್ನಸಂಗವ ಕೂಡುವುದು ॥೨॥

ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವುದು
ಮಾಡಿದ ಪೂಜೆಯ ನೋಡುವುದಯ್ಯಾ
ಶಿವತತ್ವಗೀತವ ಪಾಡುವುದು
ಶಿವನ ಮುಂದೆ ನಲಿದಾಡುವುದಯ್ಯಾ
ಭಕ್ತಿಸಂಭಾಷಣೆಯ ಮಾಡುವುದು ನಮ್ಮ ಸಂಗಯ್ಯನ ಕೂಡುವುದು ॥೩॥

**ಸೂಚನೆ**

ಮಾಯೆ ಮನದೊಳು ತನಗೆ ಪ್ರಾಣ ।
ಪ್ರೀಯನನು ಮಿಗೆ ಬಯಸಿ ಭಜಿಸಿದ ।
ಳಾಯತಿಕೆಯಲಿ ಮಧುಕನಾಥನ ಪಾದಪಂಕಜವ ॥

ಧರಣಿಯೊಳು ಮಮಕಾರಭೂಮೀ ।
ಶ್ವರತನೂಭವೆ ನಿಚ್ಚನಿಚ್ಚಲು ।
ವಿರಚಿಸುವ ತೆರನಂತಿರೊಂದಾನೊಂದು ದಿವಸದಲಿ ॥
ಹರುಷದಿಂದಾ ಮಾಯೆ ತಾನಾ ।
ದರಿಸಿ ಮಾಡಿದ ನಿತ್ಯಪೂಜೆಯ ।
ಪರಿಯ ಪೇಳುವೆನೆಲ್ಲರರಿವಂದದಲಿ ವಿಸ್ತರಿಸಿ ॥೧॥

ಮಿಸುಗುವರುಣೋದಯದಲುಪ್ಪುವ ।
ಡಿಸುತ ನಿಜ ಕರತಳವನಾಲೋ ।
ಕಿಸುತ ನಿರ್ಮಳತರದ ಮಣಿದರ್ಪಣವನೀಕ್ಷಿಸುತ ॥
ಶಶಿಮುಖಿಯರೊಗ್ಗಾಗಿ ಮಿಗೆ ರಾ ।
ಗಿಸುವ ಮಂಗಳಗೀತಗಳನಾ ।
ಲಿಸುತ ಮಾಯಾದೇವಿ ಮಂಚವನಿಳಿದಳೊಲವಿನಲಿ ॥೨॥

ವಿನುತಭೂಷಣಗಂಧವಸ್ತ್ರವ ।
ಕನಕದರ್ಪಣ ಚಾಮರಂಗಳ ।
ಘನತರದ ವಿನಿಯೋಗಭಾರದ ಜಾತಿಬಾಲೆಯರು ॥
ತನತನಗೆ ನೆರೆದುದು ವಿಳಾಸಿನಿ ।
ಜನವು ತಂತಮ್ಮೊಳಿಗಂಗಳ ।
ನನುವಮಾಡಿಕೊಳುತ್ತೆ ಮಾಯೆಯ ಕನ್ನೆಮಾಡದಲಿ ॥೩॥

ವೇದಿಸಿಯೆ ಮಘಮಘಿಸುತಿಪ್ಪ ಜ ।
ವಾದಿಯಲಿ ಮುಡಿ ಹೂಸಿ ವರ ಗಂ ।
ಧೋದಕಂಗಳಲೊಲಿದು ಮಜ್ಜನಕೆರೆದು ಮಡಿಯುಡಿಸಿ ॥
ಆದರಿಸೆ ಕೆಳದಿಯರು ಕನಕದ ।
ಪಾದುಕೆಯಲಾ ಮಾಯೆ ಬಂದು ವಿ ।
ನೋದದಲಿ ಮಂಡಿಸಿದಳಾ ಮಣಿಮಯದ ಪೀಠದಲಿ ॥೪॥

ಸಸಿನೆ ಮುಡಿಯನು ಬಿಚ್ಚಿ ಬಿಟ್ಟಾ ।
ರಿಸಿಯನೇಕ ಕದಂಬ ಪರಿಮಳ ।
ಕುಸುಮಗಳನಳವಡಿಸಿ ಹೆಣೆಲಿಳಿಯಲು ನಿತಂಬಿನಿಗೆ ॥
ಕುಸುಮಶರಭಂಡಾರವನು ಕಾ ।
ದೆಸೆವ ಕಾಳೋರಗನಿದೆಂಬವೊ ।
ಲೆಸೆದುದಾ ಮಾಯಾಂಗನೆಯ ನಿಡುಜಡೆ ವಿರಾಜಿಸುತ ॥೫॥

ಬಗೆಗೆ ಸರಿಯೋ ಭಾವಿಸಲು ಮೇಣ್ ।
ಮಿಗಿಲೊ ರಾಣಿಯ ಚಾರುಚರಣಗ ।
ಳುಗುರ ಕಾಂತಿಯ ನೋಡಬೇಕೆನುತೊಬ್ಬಳರ್ತಿಯಲಿ ॥
ನಗುತಲೊಯ್ಯನೆ ತಂದು ಚೆಲುವಿಕೆ ।
ಮಿಗಲು ಮಾಯಾದೇವಿಯರ ಪಾ ।
ದಗಳ ಬೆರಳಿಗೆ ತೊಡಿಸಿದಳು ಮಣಿಮುದ್ರಿಕಾವಳಿಯ ॥೬॥

ಕಾಮನರಿವ ರಹಸ್ಯಶಾಸ್ತ್ರ ।
ಸ್ತೋಮಗತಿಯನು ನುಡಿದು ತೋರುವ ।
ರಾಮಣೀಯದ ನೇವುರವನಿಕ್ಕಿದರು ಚರಣದಲಿ ॥
ಸೀಮೆಯಿದಲಾ ಮದನತತ್ವ ।
ಪ್ರೇಮಿಗಳಿಗೆನುತಳವಡಿಸಿದರು ।
ಕಾಮಿನಿಯ ಕಾಲಿಂಗೆ ಕೆಲಬರು ಪಾಯವಟ್ಟವನು ॥೭॥

ಕಾಮಕರ್ಮದ ಕಾಮಭೋಗದ ।
ಭೂಮಿಗಿಂತಿದೆ ಭುವನಕೋಶದ ।
ಸೀಮೆಯೆಂದರಿಯಲಿಕೆ ಕುರುಹಿನ ಕಲ್ಲನೋಳಿಯಲಿ ॥
ನೇಮಿಸಿದರೆಂಬಂತೆ ಕಟಿಯಲಿ ।
ಕಾಮಿನಿಗೆ ಮಣಿಮಯದ ಕಾಂಚೀ ।
ದಾಮವನು ಕಟ್ಟಿದಳದೊಬ್ಬಳು ಚಪಳೆ ಚದುರಿನಲಿ ॥೮॥

ತೆಳುವಸುರ ಕೊಬ್ಬಿದ ಕುಚಂಗಳ ।
ಲಲಿತಕಂಬುಗ್ರೀವವನು ಕಂ ।
ಡಲಸದೀಕ್ಷಿಸುವವರ ಕಂಗಳ ಕಾಂತಿ ಕರುಗಟ್ಟಿ ॥
ಬಳಸಿನಲಿ ನೆಲಸಿರ್ದುವೆನೆ ಕೋ ।
ಮಳೆಯ ಕೊರಳಿನೊಬ್ಬಳಿಕ್ಕಿದ ।
ಳೊಲಿದು ಬೆಳಗುವ ತೊಳಪಮುತ್ತಿನ ತೋರಹಾರವನು ॥೯॥

ದರಹಸಿತಸಹವಾದ ಮುಖರಸ ।
ಪರಿದು ಬರುತ ಕುಚಾದ್ರಿ ತಡೆಯಲು ।
ತಿರುಗಿ ಬರುತಿಕ್ಕೆಲನ ಪರಿವೇಷ್ಟಿಸಿದುದೆಂಬಂತೆ ॥
ತರುಣಿಯೊಬ್ಬಳು ಹತ್ತೆಗಟ್ಟಿದ ।
ಕೊರಳೊಳೊಪ್ಪುವ ತೋರಮುತ್ತಿನ ।
ಸರದ ಸಮುದಯ ಸೊಗಸುತಿರ್ದುವು ಮಾಯೆಗತಿ ಮೆರೆದು ॥೧೦॥

ಸರಳುಗಳು ಚೆಲುವಾಗಿ ಬಲುಹಾ ।
ಗಿರಲು ಬೇಕೆಂದಂಗಜನು ವಿ ।
ಸ್ತರಿಸಿದೆಡೆಯಣಸುಗಳೊ ಪೇಳೆಂಬಂತ ಸೊಗಸಾಗೆ ॥
ಕರಯುಗಾಂಗುಲಿಗಳಿಗೆ ಶೋಭಾ ।
ಕರವೆನಿಸಿ ಮಣಿಮುದ್ರಿಕಾಳಿಯ ।
ತರುಣಿಯೊಬ್ಬಳು ತೊಡಿಸಿದಳು ಮಾಯೆಗೆ ವಿಳಾಸದಲಿ ॥೧೧॥

ಅಡಕಿಲಡಕಿಲುಗೊಂಡ ಭುವನದ ।
ಗಡಣದಲಿ ಸಂಸಾರಸಂಗವ ।
ಜಡಿದು ಜರಿವ ವಿರಕ್ತವೃತ್ತಿಯ ಸಿದ್ಧಸಾಧಕರ ॥
ಮೃಡ ಹರಿಬ್ರಹ್ಮಾದ್ಯರನು ಕೆಡೆ ।
ಬಡಿದು ಕಟ್ಟುವ ಕಾಮಪಾಶದ ।
ತೊಡವಿವೆನಲಿಕ್ಕಿದಳು ಮಾಯೆಗೆ ತೋಳತೊಡಗೆಗಳ ॥೧೨॥

ಮದನನೊಂದು ನವೀನವಹ ಶು ।
ಭ್ರದ ಸುರಂಗಭ್ರಮರವನು ರಚಿ ।
ಸಿದನೊ ಕನ್ಯೆಯ ನಾಸಿಕದ ನರುಗಂಪಿನಿಂಪಿಗೆ ॥
ಇದುವೆ ಸೋಜಿಗವೆನಲು ತಂದಿ ।
ಕ್ಕಿದಳದೊಬ್ಬಳು ತರುಣಿ ಮಾಯಾ ।
ಸುದತಿಗೊಪ್ಪಿರೆ ತೊಳಪ ಮುತ್ತಿನ ತೋರಮೂಕುತಿಯ ॥೧೩॥

ಕೀಳುಮಾಡುವೆನಿನ್ನು ನೋಡಾ ।
ಭಾಳನೇತ್ರನ ಬಲುಹನೆನುತಲಿ ।
ಗಾಲಿಗಳ ಕಂದರ್ಪ ಜೋಡಿಸುವಂತೆ ನಿಜರಥಕೆ ॥
ಮೇಳವಿಸಿ ನವರತ್ನತೆತ್ತಿಸಿ ।
ದೋಲೆಗಳ ತಂದಿಟ್ಟಳೊಬ್ಬಳು ।
ಬಾಲೆ ಮಾಯಾದೇವಿಗೊಪ್ಪುವ ಚೆಲುವ ಕಿವಿಗಳಿಗೆ ॥೧೪॥

ಸಡಗರಿಸಿ ಹರಿದೈದಿ ಸರಿದಿ ।
ಕ್ಕಡೆಗಳಲಿ ಸೇರಿದವೊ ಕನ್ನೆಯ ।
ನಿಡಿದುಗೊಂಡ ಕಟಾಕ್ಷಕಾಂತಿಯ ಮಡುಗಳೆಂಬಂತೆ ॥
ತೊಡೊಸಿದಳು ತಂದೊಬ್ಬಳಾಕೆಯ ।
ಕೊಡಕೆಯಲಿ ಹೊಸತಪ್ಪ ಮುತ್ತಿನ ।
ತೊಡಿಗೆಯನು ಮಾಯಾಂಗನೆಗೆ ಶೃಂಗಾರಶಾಲೆಯಲಿ ॥೧೫॥

ಸುತ್ತುವಳೆಯುವ ತೊಳಗಿ ಬೆಳಗುವ ।
ಮುತ್ತು ವಜ್ರದ ನಡುವೆ ಮಾಣಿಕ ।
ತೆತ್ತಿಸಿದ ಬೊಟ್ಟೊಂದ ಮಾಯಾಂಗನೆಯ ನೊಸಲಿನಲಿ ॥
ಕತ್ತುರಿಯ ವರ ತಿಲಕ ಮಧ್ಯದೊ ।
ಳೊತ್ತಿನಲಿ ಸಲೆ ಮೆರೆಯುತಿರ್ದುದು ।
ಚಿತ್ತಜಾತನ ವೀರಲಕ್ಷ್ಮಿಯ ನೊಸಲ ಕಣ್ಣಂತೆ ॥೧೬॥

ನಭದೊಳೊಪ್ಪುವ ತಾರಕಾವಳಿ ।
ವಿಭವದಲಿ ಸಂಪೂರ್ಣಚಂದ್ರನ ।
ಸಭೆಯಲೋಳಿಯಲೋಲಗಿಸೆ ನೆರೆದಿರ್ದುವೆಂಬಂತೆ ॥
ಅಭಿನವದ ಮುತ್ತುಗಳ ಪಣೆಗ ।
ಟ್ಟುಭಯ ಕರ್ಣಾಗ್ರದಲಿ ಸೇರಲು ।
ಶುಭತೆಯಾಗಿ ವಿರಾಜಿಸಿತು ಮಾಯಾಂಗನೆಯ ಮುಖಕೆ ॥೧೭॥

ಒಸೆದು ಕಾಮನ ಬಾಣದಲಿ ಲೇ ।
ಪಿಸುವ ಸಮ್ಮೋಹನದ ಬಾಷ್ಪದ ।
ಮಸಿಯೊ ಪೇಳೆನೆ ಕೋಮಳೆಯ ತೊಳತೊಳಪ ಕಂಗಳಿಗೆ ॥
ಎಸಳುಗಾಡಿಗೆರೇಖೆಯನು ಚಿ ।
ತ್ರಿಸಿದಳೊಬ್ಬಳು ಕಾಮುಕರ ಮೋ ।
ಹಿಸುವ ಮೋಹನಯಂತ್ರರೇಖೆಗಳಂತೆ ಚೆಲ್ವಾಗಿ ॥೧೮॥

ನೋಡುವರ ಕಣ್ಣಕ್ಕಜಂಗಳು ।
ಕಾಡದಂತಿರೆ ಬರೆದರೆಂದೆನೆ ।
ನೋಡಿ ಕುಚಮೂಲದಿ ಕಪೋಲಸ್ಥಲದಲಂಗನೆಗೆ ॥
ಕೂಡೆ ಕುಂಕುಮ ಮೃಗಮದಂಗಳ ।
ಗಾಢಗಂಧದ ಪಂಕದಲಿ ಕೈ ।
ಗೂಡಿ ಚಿತ್ರಿಸಿ ಮಕರಿಕಾಪತ್ರವನು ರಚಿಸಿದರು ॥೧೯॥

ಮಿಸುಪ ಕಂಪಿನ ಪದ್ಮರಾಗದ ।
ರಸದ ರೇಖೆಯ ದಡಿಗಳಲಿ ಚಿ ।
ತ್ರಿಸಿಯೆ ಸೆರಗಿಗೆ ಕುಮುದಕುಸುಮದ ಬಣ್ಣವನೆ ರಚಿಸಿ ॥
ಪಸರಿಸಿದ ಬೆಳದಿಂಗಳಿನ ಶೋ ।
ಧಿಸಿದ ರಸದಲಿ ತೊಳೆದರೆನೆ ರಂ ।
ಜಿಸುವ ವಿಮಲಾಂಬರವನಾಯತ ಮಾಡಿದರು ಬಳಿಕ ॥೨೦॥

ಪರಿವಿಡಿಯ ನಿರಿವಿಡಿದು ನಾಭಿಯ ।
ಸರಿಸದಲಿ ಪಸರಿಸುತ ಜಘನಕೆ ।
ಪರುಠವಿಸಿ ನಸುದೋರುವಂತಿರಲಂಗವಟ್ಟವನು ॥
ವಿರಚಿಸಿದಳುಡಿಗೆಯನು ಮಾಯಾ ।
ತರುಣಿ ತಾನಳವಡಿಸಿ ಕಾಮನ ।
ಬಿರುದ ಹಳವಿಗೆಯಂತೆ ನಟನೆಯ ಜಾತಿಜಾಣಿನಲಿ ॥೨೧॥

ಚೆನ್ನೆ ನೀನಲ್ಲದೆ ಬಳಿಕ್ಕಾ ।
ರಿನ್ನು ದಿಟವಿದಿರಿಟ್ಟು ತೋರಿಸ ।
ಲನ್ಯರುಂಟೇ ರೂಹಿಡಲು ನೆರೆ ನೋಡು ನೀನೆನುತ ॥
ಕನ್ನಡಿಯ ತೋರಿದಳದೊಬ್ಬಳು ।
ಕನ್ನೆ ಕಾಮಿನಿಗರ್ತಿಯಿಂದವೆ ।
ಕಣ್ಣುಗಳನಿದ್ದೆಸೆಗೆ ಸೂಸುತ ಮಾಯೆ ನೋಡಿದಳು ॥೨೨॥

ಮನಸಿಜನ ಮನೆದೇವಿ ಕುಸುಮಾ ।
ಸ್ತ್ರನ ಕುಲೋತ್ತಮೆ ರಾಜಗುರು ಕಾ ।
ಮನ ಭುಜಾಗ್ರದ ವಿಜಯಲಕ್ಷ್ಮಿಯನಂಗನಧಿದೈವ ॥
ವಿನಯಚಿತ್ತಜಯಂತ್ರ ಚೇಷ್ಟಾ ।
ವಿನುತ ಚೇತನಮೂರ್ತಿ ಕಂದ ।
ರ್ಪನ ಕರಾಸಿಯ ವೀರಸಿರಿಯೆನೆ ಮೆರೆದಳಾ ಮಾಯೆ ॥೨೩॥

ತರುಣಿ ನಡೆಯೌ ಮಧುಕನಾಥೇ ।
ಶ್ವರನ ಪೂಜೆಯ ಮಾಡಲಿಕೆ ಸಂ ।
ವರಿಸಿ ಬಂದವು ಸಕಲ ವಸ್ತುಗಳೆನುತಲಂದಣವ ॥
ತರಿಸಿದರು ಹೆಗ್ಗಡಿತಿಯರು ಸಾ ।
ದರದಲುತ್ಸಾಹಿಸುತ ರತ್ನೋ ।
ತ್ಕರದ ಗದ್ದುಗೆಯಿಂದಲೆದ್ದಳು ಮಾಯೆ ರಚನೆಯಲಿ ॥೨೪॥

ಎತ್ತಿ ನೆಗಹಿದ ತೊಳಪ ಮುತ್ತಿನ ।
ಸತ್ತಿಗೆಯ ಸಡಗರದ ಸರಿಸದೆ ।
ಸುತ್ತಿನಲಿ ಬಲನೆಡಕೆ ಚಿಮ್ಮುವ ಧವಳಚಾಮರದ ॥
ಚಿತ್ತಪಾಯವಧಾರು ಎನುತಲಿ ।
ಹತ್ತಿರುಗ್ಗಡಿಸುವಸಗಾಢದ ।
ತೆತ್ತಿಗರ ಸಂಭ್ರಮದಲಂದಣವೇರಿದಳು ಮಾಯೆ ॥೨೫॥

ಕಾಮರೇಖೆ ಕಳಾವಿಳಾಸಿನಿ ।
ಪ್ರೇಮಕಾರಿಣಿ ರಾಗಿ ಲೋಭಿಣಿ ।
ನಾಮನಿರ್ಮಿತೆ ಸಕಳಸಂಪದೆ ಭೋಗಿ ಮದಮಾನಿ ॥
ಹೇಮೆ ಹೆಕ್ಕಳೆಯೆನಿಪ ನಾನಾ ।
ನಾಮಗಳ ಹೆಗ್ಗಡತಿ ದಾದಿಯ ।
ರಾ ಮಹಾವಿನಿಯೋಗದಬಲೆಯರೈದಿದರು ಕೂಡಿ ॥೨೬॥

ಹಡಪ ಬೊಕ್ಕಸ ಛತ್ರ ಚಾಮರ ।
ಕುಡಿಯುದಕ ಬೀಸಣಿಗೆ ಹೊಂಗ ।
ನ್ನಡಿ ಸುಗಂಧ ವಿಲೇಪ ಹೂ ಹಾವಿಗೆಗಳೂಳಿಗವ ॥
ನಡೆಸುವವರೈದಿರು ಮಿಗೆ ಮುಂ ।
ಗುಡಿಯಲಣಿವರಿದೊಕ್ಕಲಿಕ್ಕುತ ।
ಮಡದಿಯರು ಮಾಯಾಂಗನೆಯ ದಂಡಿಗೆಯ ಬಳಸಿನಲಿ ॥೨೭॥

ಹೂವಿನಗ್ಗವಣಿಯ ಸುಗಂಧದ ।
ತೀವಿದುತ್ತಮ ಧೂಪ ವಸ್ತ್ರದ ।
ಪಾವನದ ಪರಿಕರದ ಗೀತದ ನೃತ್ಯವಾದ್ಯಗಳ ॥
ದೇವಪೂಜಾರ್ಥಕ್ಕೆ ಸಾಧನ ।
ಸೇವಕಾಂಗಿಯರೊಲಿದು ಬಂದರು ।
ಭಾವೆ ಮಾಯಾಮಾನಿನಿಯ ದಂಡಿಗೆಯ ಬಳಸಿನಲಿ ॥೨೮॥

ಉಲಿವ ನೇವುರ ಪಾಯವಟ್ಟದ ।
ಲಲಿತಕಂಕಣ ತೋಳಬಂದಿಯ ।
ಲುಳಿಯ ಪದಕದ ತೋರಮುತ್ತಿನ ಸರದ ಮೂಕುತಿಯ ॥
ತಳಿತ ಹೂವಿನ ಮುಡಿಯ ಪಟ್ಟಾ ।
ವಳಿಯ ಸೀರೆಯ ಚಲ್ಲಣದ ಕೋ ।
ಮಳೆಯರೆಯ್ದಿದರಂದು ಮಾಯಾಂಗನೆಯ ಬಳಸಿನಲಿ ॥೨೯॥

ಮುತ್ತಿನೋಲೆಯ ಸುತ್ತು ಸರಿಗೆಯ ।
ಹತ್ತೆಗಟ್ಟಿನ ಬಣ್ಣಸರಗಳ ।
ತೆತ್ತಿಸಿದ ನವರತ್ನಖಚಿತದ ಕಟಿಯ ಸೂತ್ರಗಳ ॥
ಉತ್ತಮದ ಚಿತ್ರಾಂಬರಂಗಳ ।
ಕತ್ತುರಿಯ ಹೆರೆನೊಸಲ ತಿಲಕದ ।
ಮತ್ತಗಜಗಮನೆಯರು ಬರುತಿರ್ದರು ವಿಳಾಸದಲಿ ॥೩೦॥

ವೀರಮುದ್ರೆಯ ಮೆಂಟಿಕೆಯ ವಿ ।
ಸ್ತಾರದಂಗುಲಿಯುಂಗರಂಗಳ ।
ದಾರೆಗಡಗದ ಹೊನ್ನಬಳೆಗಳ ಶಂಖದೋಲೆಗಳ ॥
ತೋರಮುತ್ತಿನ ಹಾರಗಳ ಕೇ ।
ಯೂರಗಳ ಧವಳಾಂಬರಂಗಳ ।
ನಾರಿಯರು ನಡೆತಂದರಾ ಮಾಯಾಂಗನೆಯ ಕೂಡೆ ॥೩೧॥

ನಿರಿಯನಳವಡಿಸುತ್ತ ಮೇಲುದ ।
ಸೆರಗ ಸಂವರಿಸುತ್ತ ಬಳಲುವ ।
ತುರುಬ ತಿದ್ದುತ ಚಪಳತೆಯ ಕಡೆಗಣ್ಣ ನೋಟದಲಿ ॥
ಸೆರೆವಿಡಿದು ಕುಸುಮಾಸ್ತ್ರನಿದಿರಿನ ।
ಕುರಿಗಳೆನಿಸುವ ನೋಟಕರನೀ ।
ತೆರದಲೈದಿದರೊಡತಿಯೊಡನೆ ವಿಳಾಸಿನೀನಿಕರ ॥೩೨॥

ಗತಿಯ ಗಮಕದಲಿಂದ್ರನ ವಾಕ್ ।
ಚತುರತೆಯಲಿ ವಿರಿಂಚಿಯನು ಪೂ ।
ರಿತ ಕಟಿಸ್ತನದುಬ್ಬಿನಲಿ ಖಗರಾಜವಾಹನನ ॥
ನುತ ಕಟಾಕ್ಷಕಳಾವಿಳಾಸೋ ।
ನ್ನತಿಯಲೀಶನ ಮರುಳುಮಾಡುವ ।
ಸತಿಯರೆಯ್ದಿದರಂದು ಮಾಯಾಂಗನೆಯ ಬಳಸಿನಲಿ ॥೩೩॥

ತರುಣಿಯರ ಮೈ ಸುಯ್ಯ ಕಂಪಿಗೆ ।
ಹರಿದು ಕವಿತಹ ತುಂಬಿಗಳ ವಿ ।
ಸ್ತರದ ಗಿಲುಕಿನ ಭೂಷಣಂಗಳ ನೆಲನನುಗ್ಘಡಿಪ ॥
ನೆರೆದ ಸದಮಳ ಕಾಂತೆಯರ ಸಡ ।
ಗರದ ಕೈವಾರಿಗಳ ಧ್ವನಿಗಳ ।
ಭರದ ಕಳಕಳ ಕೇಳಲಾದುದು ಪುರದ ಬೀದಿಯಲಿ ॥೩೪॥

ಇದು ಮನೋಜಬ್ರಹ್ಮ ತಾ ಮಾ ।
ಡಿದ ನವೀನದ ಸೃಷ್ಟಿಯೋ ಮೇ ।
ಣಿದು ರತೀವಲ್ಲಭನ ಜಂಗಮಲತೆಗಳೋ ಬಗೆಗೆ ॥
ಇದು ವಿಚಿತ್ರವೆನಲ್ಕೆ ರೂಪಿನ ।
ಚದುರತನದ ವಿಳಾಸವೃತ್ತಿಯ ।
ಸುದತಿಯರು ನಡೆತಂದರಾ ಮಾಯಾಂಗನೆಯ ಕೂಡೆ ॥೩೫॥

ಇದುವೆ ಕೈಲಾಸಾದ್ರಿಯೋ ಮೇ ।
ಣಿದು ಶಶಾಂಕನ ತಗಡಿನಲಿ ಹೊದಿ ।
ಸಿದ ವಿನೂತನಪುಷ್ಪಕವೊ ಪೇಳೆನಲು ತೊಳಗುತಲಿ ॥
ಹುದುಗಿ ಗುಡಿ ತೋರಣ ಪತಾಕೆಗ ।
ಳೊದವಿನಲಿ ಹೊಂಗಳಸದಲಿ ತೋ ।
ರಿದುದು ಮಾಯೆಗೆ ಮಧುಕನಾಥೇಶ್ವರನ ವರಭವನ ॥೩೬॥

ಬಂದಳಾ ದೇಗುಲಕೆ ಭರವಸ ।
ದಿಂದ ಬಳಿಕಾ ಮಾಯೆ ವಿಭವದ ।
ಲಂದಣವನೊಲಿದಿಳಿದು ಕರ ಪದ ವದನವನು ತೊಳೆದು ॥
ಇಂದುವದನೆ ವಿಲಾಸದಲಿ ಬಲ ।
ವಂದು ನಡೆದೊಳಪೊಕ್ಕು ಲಿಂಗದ ।
ಮುಂದೆ ಮೆಯ್ಯಿಕ್ಕಿದಳು ಪುಷ್ಪಾಂಜಲಿಯ ಪಸರಿಸುತ ॥೩೭॥

ಕರವ ಮುಗಿಯುತ ಮಧಕನಾಥೇ ।
ಶ್ವರನೆ ಶರಣೆನುತೆದ್ದು ಕುಳ್ಳಿತು ।
ವಿರಚಿಸುತಲಂದರ್ಘ್ಯಪಾದ್ಯಾಸನ ವಿಧಾನಗಳ ॥
ಪರುಠವಿಸಿ ಪಂಚಾಮೃತಂಗಳ ।
ನೆರೆದು ಪ್ರತ್ಯೇಕದಲಿ ಮಿಗೆ ವಿ ।
ಸ್ತರಿಸುತಿರ್ದಳು ಮಾಯೆ ಮುದದಲಿ ಮಧುಕನಾಥಂಗೆ ॥೩೮॥

ಸಾರಗಟ್ಟಿಯ ನೀಡಿದರು ಪ ।
ನ್ನೀರ ಹೊಂಗರಗದಲಿ ನಲಿದಾ ।
ನಾರಿಯರು ವಿರಚಿಸಿದರಭಿಷೇಕವನು ದೇವರಿಗೆ ॥
ಸಾರದಿವ್ಯಾಂಬರವನರ್ಪಿಸಿ ।
ಹಾರವಿಸುತಲಿ ಕುಂಕುಮದ ಕ ।
ರ್ಪೂರ ಮೊದಲಾದಷ್ಟಗಂಧವನೊಟ್ಟಿದಳು ಮಾಯೆ ॥೩೯॥

ಬಿ(ಇ?)ಂದುಕಳೆಯದ ಮುತ್ತುಗಳಲಾ ।
ನಂದದಿಂದಕ್ಷತೆಯನಿಟ್ಟಳು ।
ತಂದು ತರುಣಿಯರೀವ ಹೂವಿನ ದಂಡೆಯಿಂಡೆಯನು ॥
ಸಂದಿಸುತ ನಾನಾಪ್ರಕಾರದ ।
ಚಂದಚಂದದ ಪತ್ರೆ ದೂರ್ವೆಗ ।
ಳಿಂದೆ ಮಾಯಾದೇವಿ ಮಾಡಿದಳಭವಪೂಜೆಯನು ॥೪೦॥

ಹಿಡಿದು ಬಾರಿಪ ಘಂಟೆ ಶಂಖದ ।
ಗಡಣ ಜಾಗಟೆ ಜಗಳೆ ಮದ್ದಳೆ ।
ಜಡಿವ ಕಹಳೆ ಮೃದಂಗವಾವುಜ ಭೇರಿ ಕಂಸಾಳ ॥
ನುಡಿವ ಗಂಭೀರಧ್ವನಿಯಲತಿ ।
ಸಡಗರಿಸಿದುದು ನಗರ ಮಾಯಾ ।
ಮಡದಿ ಮಾಡುವ ದೇವಪೂಜೆಯ ರಭಸರಚನೆಯಲಿ ॥೪೧॥

ಹಲವುಪರಿಯ ಸುಗಂಧ ಧೂಪಂ ।
ಗಳನು ಧೂಪಿಸಿ ಬೆಂಬಳಿಯ ಮಂ ।
ಗಳ ಪದಂಗಳ ಹಾಡುತಾರತಿಗಳನನೇಕವನು ॥
ತೊಳಗಿ ಬೆಳಗುತಲೆತ್ತಿದಳು ಕೋ ।
ಮಳೆಯರುಘೆಯುಘೆ ಜಯತು ಜಯತೆಂ ॥
ದುಲಿಯುತಿರಲಾ ಮಧುಕನಾಥಗೆ ಮಾಯೆ ಭಕ್ತಿಯಲಿ ॥೪೨॥

ಸರಸ ಮಿಗೆ ತಾರಕಿಯ ನಿಗುಚಿದ ।
ಪರಿಯಲೋಗರ ಪುಷ್ಪರಾಗದ ।
ಸುರಸದಂತಿರೆ ತುಪ್ಪ ಚಂದ್ರಮನಂತೆ ಪಾಯಸವು ॥
ಥರಥರಂಗಳ ಮುಗಿಲಬಣ್ಣದ ।
ಪರಿಯಲೊಪ್ಪುವ ಭಕ್ಷ್ಯರಾಸಿಯ ।
ನಿರಿಸುತಿರ್ದರು ಹೊನ್ನ ಹರಿಯಾಣದಲಿ ಬೋನವನು ॥೪೩॥

ವರ ವಿನೂತನ ರತ್ನಗಳ ಮೃದು ।
ಕರಣಿಯಂಗವನರಿದು ಮಾಡಿದ ।
ಪರಿಯ ಬಾಳುಕ ಹಪ್ಪಳಂಗಳ ಪರಪು ಶಾಕಗಳ ॥
ಸುರುಚಿಯಾದ ಪಳಿದ್ಯಪಾನೋ ।
ತ್ಕರವನುಪ್ಪಿನಕಾಯಿ ಪಣ್ಗಳ ।
ವಿರಚಿಸುತ ದಧಿತಕ್ರಗಳ ಬಡಿಸಿದರು ಭಕ್ತಿಯಲಿ ॥೪೪॥

ಪರಿಮಳಂಗಳ ಪಸರಿಸುವ ಕ ।
ಚ್ಚರಿಯ ಪಚ್ಚಡಿಗಳ ಸುಸಾರೋ ।
ತ್ಕರದ ಸಾರಿನ ಸೀಕರಣೆಯನುಪಮ ಪಸುಂಬರಿಯ ॥
ಪರಿಪರಿಯ ಚಿನಿಪಾಲುಗಳ ಸ ।
ಕ್ಕರೆಗಳನು ನಾನಾ ಪದಾರ್ಥವ ।
ತರುಣಿಯರು ನೈವೇದ್ಯವನು ಬಡಿಸಿದರು ಭಕುತಿಯಲಿ ॥೪೫॥

ಲಿಂಗವವಧಾರೆನುತಲುಪಹಾ ।
ರಂಗಳನು ನೆರೆ ಮಧುಕನಾಥೇ ।
ಶಂಗೆ ಪುಷ್ಪಾಂಜಲಿಸಮೇತಾರ್ಪಣವ ಮಾಡುತಲಿ ॥
ಮಂಗಳ ಶ್ರೀ ಹಸ್ತಜಲವನು ।
ಸಂಗಳಿಸಿ ಕೈಗಟ್ಟಿ ಸಹಿತವೆ ।
ಸಾಂಗದಲಿ ಮಾಡಿದಳು ಮಾಯಾದೇವಿ ಪೂಜೆಯನು ॥೪೬॥

ಹೋಳಿಸಿರ್ದಡಕೆಗಳ ಭಾಗವ ।
ಮೇಳವಿಸಿ ಕರ್ಪೂರವ ಬೆಳ್ಳೆಲೆ ।
ಯೋಳಿಗವಳಿಗೆಗಳನು ಶುಭ್ರದ ಸುಣ್ಣ ಸಹವಾಗಿ ॥
ವೀಳೆಯವನಿತ್ತರ್ಥಿಯಿಂದಾ ।
ಬಾಲೆ ಮಾಯಾದೇವಿ ಮನದೊಂ ।
ದೇಳಿಗೆಯ ಭಾವನೆಯಲುಪ್ಪಾರತಿಯನೆತ್ತಿದಳು ॥೪೭॥

ಹಿಡಿದು ನವರತ್ನಂಗಳೊಪ್ಪುವ ।
ಕೊಡಕೆಗಂಗಳ ಕಾಂತಿಯನೆ ಬಲ ।
ನೆಡಕೆ ಸೂಸುತ ಧವಳ ಚಾಮರವನು ವಿಳಾಸದಲಿ ॥
ಮಡದಿಯರು ತಂದೆತ್ತುವಾರತಿ ।
ಗಡಣವೆಲ್ಲವನರ್ಪಿಸುತ ನಲಿ ।
ದೊಡನೊಡನೆ ಮೈಯಿಕ್ಕುತಿರ್ದಳು ಮಾಯೆ ಭಕುತಿಯಲಿ ॥೪೮॥

ದಣಿಯೆ ಪೂಜೆಯ ಮಾಡಿ ಮಣಿದ ।
ರ್ಪಣವ ತೋರಿಸಿ ಕೆಳದಿಯರ ಸಂ ।
ದಣಿಯ ತೊಲಗಿಸಿ ಲಿಂಗವನು ಬಲವಂದು ಭಕ್ತಿಯಲಿ ॥
ಮಣಿದು ಗರ್ಭಗೃಹವ ಹೊರವಂ ।
ಟಣಿವರಿದು ಕೈಗೂಡುವರೊಲಿದಿ ।
ಟ್ಟಣಿಸೆ ಬಂದಳು ಮಾಯೆ ವಿಭವದಿ ರಂಗಮಂಟಪಕೆ ॥೪೯॥

ಮಿಸುಪ ಧೂಪದ ಧೂಮದಲಿ ಕೆಂ ।
ಪೆಸೆವ ಲೋಚನವಾನತೆಯ ಭರ ।
ವಸಕೆ ಸೂಸಿದ ಸುಳಿಗುರುಳು ದೀಪಂಗಳುಬ್ಬೆಯಲಿ ॥
ಕುಸುರಿ ಬೆಮರಿಸುವಂಗ ಮಿಗೆ ರಂ ।
ಜಿಸಲು ಮಧುಕೇಶ್ವರನ ಸಂಭೋ ।
ಗಿಸಿಯೆ ಬಂದಳೊ ಪೇಳೆನಲ್ಮೆರೆದಿರ್ದಳಾ ಮಾಯೆ ॥೫೦॥

ನಿಲಿಸಿದರು ಗಡಬಡೆಯ ವಾದ್ಯದ ।
ಗಲಭೆಯನು ತರುಣಿಯರ ತಂಡಗ ।
ಳುಲುಹುಗಳನಲ್ಲಲ್ಲಿಗಾಗಳೆ ಕಂಬಿಕಾರ್ತಿಯರು ॥
ಬಳಿಕ ಚಲ್ಲಣವುಡಿಸಿ ನೆರೆ ಪರಿ ।
ಮಳದ ತುರುಬನು ಬಲಿದು ಬಣ್ಣಿಸಿ ।
ಲಲನೆಯರು ಲಾಸ್ಯಕ್ಕೆ ಮಾಯಾಂಗನೆಯ ರಚಿಸಿದರು ॥೫೧॥

ವಾಸಗಳ ಆವುಜೆಯ ಕಹಳೆಯ ।
ಲೇಸೆನಿಪ ಮದ್ದಳೆಯ ತಾಳದ ।
ಭಾಸುರದ ಗಾಯಕಿಯರೊಗ್ಗಿನ ವಿವಿಧ ವೀಣೆಗಳ ॥
ಹೂಸಿ ಹೊಮ್ಮುವ ಸರದುಪಾಂಗಾ ।
ವಾಸ ಮೇಳಾಪಗಳಲೊಯ್ಯನೆ ।
ದೇಸಿರಾಗವ ಮಾಯೆಯಾಳಾಪಿಸಿದಳೊಲವಿನಲಿ ॥೫೨॥

ಹಾಡುತಿರ್ದಳು ಹಾರವಿಸಿ ನೆರೆ ।
ನೋಡುತಿರ್ದಳು ಮಿಕ್ಕು ಮೋಹಿಸಿ ।
ಬೇಡುತಿರ್ದಳು ಮಾಯೆ ಮನದೊಳಗಿಷ್ಟಸಿದ್ಧಿಯನು ॥
ಕೂಡುತಿರ್ದಳು ನೆರೆದು ನಿಂದಿತು ।
ಕೂಡೆ ಕೇಳುವ ನೋಟಕರ ಮೆ ।
ಯ್ಗೂಡಿನಲಿ ಕಾಮಾಗ್ನಿಯನು ಸಂಗೀತ ಕೇಳಿಯಲಿ ॥೫೩॥

ಬಳಿಕಲೊಯ್ಯನೆ ಚರಣಚಾರಣ ।
ಚಳತೆಯಲಿ ನಿಜ ಹಸ್ತವಿಸ್ತರ ।
ದಳತೆಯಲಿ ಝಳಪಿಸುವ ಬೆರಳಿನ ಲುಳಿಯ ವಹಣಿಯಲಿ ॥
ಘುಲಘುಲಿಸುವಂದುಗೆಯ ಕಂಕಣ ।
ಗಳ ಝಣತ್ಕಾರದಲಿ ಮಾಯಾ ।
ಲಲನೆ ರಂಗಂಬೊಕ್ಕು ನಿಂದಳು ನಿಜದ ನಿರುಗೆಯಲಿ ॥೫೪॥

ಪಸರಿಸಿದ ಸರಿಪಾದಗಳು ಸಂ ।
ದಿಸಿದ ಮಡ ಸಮಲಾಗಿನಲಿ ಮೋ ।
ಹಿಸಿಯಗಲ್ದಿಹ ಜಾನು ತೋರುವ ಜಘನ ಕುಚಗಳಶ ॥
ಕುಸಿದು ಕೆಲವಿ(ಕಿ?)ಂಬಾದ ಕಾಲಿನ ।
ಲೆಸೆವ ನಳಿತೋಳುಗಳ ಭಾವದ ।
ಸಸಿನದಲಿ ಸಮನಿಸಿದ ಕಣ್ಣೊಪ್ಪಿದವು ಮಾಯೆಯಲಿ ॥೫೫॥

ತಾಳದಲಿ ತರಹರಿಸಿ ಮೆಲ್ಲನೆ ।
ಮೇಳದಲಿ ಮೈನಿಗುರಿ ಕರ ಸಂ ।
ಚಾಳಿಯಲಿ ಚಳಬಳಿಸಿ ತಿರುಪಿನ ಮಡುಪಿನಲಿ ಮಣಿದು ॥
ತೋಳ ಮೈಯಲಿ ತೊನೆದು ನೋಟದ ।
ಢಾಳದಲಿ ಧವಳಿಸಿ ವಿನೂತ ಮ ।
ರಾಳಗತಿಯಲಿ ಗಮಕಿಸುತಲೊಪ್ಪಿರ್ದಳಾ ಮಾಯೆ ॥೫೬॥

ನೇಮ ನೆಲೆ ಪಯಪಾಡು ಪಲ್ಲಟ ।
ಸೀಮೆ ಸೊಗಸತಿ ಬೆಡಗು ಬಿನ್ನಣ ।
ರಾಮಣೀಯತೆ ರೇಖೆಯಂತರ ಕರಣತಿರುಪಿನಲಿ ॥
ಕಾಮಿನಿಯೊ ತಾ ಭರತಸಂಭವ ।
ಭೂಮಿಯೋ ಪೇಳೆನಲು ಮೆರೆದಾ ।
ಭಾಮೆ ಮಾಯಾದೇವಿ ಮೋಹಿಸಿ ಪಾತ್ರವಾಡಿದಳು ॥೫೭॥

ಸುಳಿವ ಹಸ್ತದ ಜಾತಿಭಾವದ ।
ಬಳಿಯಲಾಡುವ ನೋಟ ನೋಟದ ।
ಲುಳಿಯವೊಲು ತೆಗೆದತ್ತ ತಿರುಗುವ ಕೊರಳು ಕೊರಳಂತೆ ॥
ಬಳುಕುತಿಹ ನಡು ನಡುವಿನಂದಕೆ ।
ಹೊಳೆವ ಪಾದದ ಪಾಡು ಪಾಡಿನ ।
ನಿಲುಕಡೆಯ ನಿರಿಗೆಯಲಿ ಮೆರೆದಳು ಮಾಯೆ ಲಾಸ್ಯದಲಿ ॥೫೮॥

ರತಿಯ ರೀತಿಯ ದಿವಿಜರಾಜನ ।
ಸತಿಯ ಸರಣಿಯ ಕಮಲಜನ ಭಾ ।
ರತಿಯ ಭಾವವನಾದಿನಾರಾಯಣಿಯ ನಟಣೆಯನು ॥
ಅತಿಶಯದ ಪಾರ್ವತಿಯ ಪಾವನ ।
ಗತಿಯನೆಲ್ಲವ ತೋರುತಿರ್ದಳು ।
ಚತುರೆ ಮಾಯಾದೇವಿ ತನ್ನಯ ಲಾಸ್ಯಲೀಲೆಯಲಿ ॥೫೯॥

ಮೃತ್ತಿಕೆಯ ಮಾಟಕದ ರೂಹಿನ ।
ಪುತ್ತಳಿಗಳನು ದೇಗುಲಕೆ ನೆರೆ ।
ತೆತ್ತಿಸಿದರೆಂಬಂತೆ ಮಾಯೆಯ ನೋಡುವರ್ತಿಯಲಿ ॥
ಸುತ್ತಿ ಮುತ್ತಿ ಗವಾಕ್ಷರಂಧ್ರದ ।
ಭಿತ್ತಿಯಲಿ ನೆರೆ ಕೀಲಿಸಿರ್ದರು ।
ಚಿತ್ತಜಗ್ರಹ ಸೋಂಕಿದಂತಿರೆ ಕೂಡೆ ನೋಟಕರು ॥೬೦॥

ಮೇಳಗಾನಧ್ವಾನದಿನಿದನು ।
ಕೇಳಿ ಸಿಕ್ಕದರಾರು ಪಾತ್ರದ ।
ಚಾಳಿಯಲಿ ಹೊಳೆವಂಗಭಂಗಿಯ ಕಂಡು ಮನಸಿಜಗೆ ॥
ಕೋಳುಹೋಗದರಾರು ನರಸುರ ।
ಜಾಳದೊಳಗೆಂದೆನಲು ರಂಜಿಸಿ ।
ಬಾಲೆ ಮಾಯಾದೇವಿ ಮೆರೆದಳು ಲಾಸ್ಯಕೇಳಿಯಲಿ ॥೬೧॥

ಹಲವು ಪರಿಗಳಲೀ ಪ್ರಕಾರದೊ ।
ಳೊಲವಿನಲಿ ಸರ್ವೋಪಚಾರಂ ।
ಗಳನು ವಿಸ್ತರವಾಗಿ ಮಾಡಿದ ಮಾಯೆಗುಚಿತದಲಿ ॥
ಬಳಿಕ ಶಿವಲಿಂಗಪ್ರಸಾದದ ।
ತಳಿತ ಹೂವಿನ ದಂಡೆಯನು ಕೋ ।
ಮಲೆಗೆ ಕೊಟ್ಟನು ಹರಸುತಲಿ ಪೂಜಾರಿಪುಂಗವನು ॥೬೨॥

ತರುಣಿ ಶಿವಲಿಂಗಪ್ರಸಾದಕೆ ।
ಶರಣೆನುತೆ ಕೈಕೊಂಡು ನಲಿದಾ ।
ದರಿಸಿ ವಿರಚಿಸಿ ದೇವರೋಲಗವಾಗಿ ಕುಳ್ಳಿರ್ದು ॥
ಇರುತಲಿರ್ದಳು ಬಳಿಕ ಸಚರಾ ।
ಚರರೊಳಂತರಯಾಮಿಯೆನಿಸಿದ ।
ಗುರು ಗುಹೇಶ್ವರನರಿದನಾಕೆಯ ಭಕ್ತಿಯನುಮತವ ॥೬೩॥

**ಅಂತು ಗತಿ ೪ಕ್ಕಂ ಪದನು ೧೬೨ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ–೫
# ಮುದ್ದಳೆಗೆ ಕುಣಿದಳಾ ಮಾಯೆ

**ವಚನ**

ಕಡಲ ನುಂಗಿದ ಕಪ್ಪಿನ ಪರಿ, ನವಸಾಸಿರ ಸಿಡಿಲು ಹೊಯ್ದು ಬಯಲಿಂಗೆ ಬಣ್ಣವುಂಟೆ?
ಕಂಗಳ ಮುಂದಣ ಕನಸು ಹಿಂಗದ ತುಂಬಿಯ ಪರಿಮಳ,
ಅಂಗವಿಲ್ಲದ ರೂಹಿಂಗೆ ಸಂಗವುಂಟೆ?
ಇದೇನೋ ಗಗನದ ಹಣ್ಣನೆ ಕೊಯ್ದು ಮುಗುದೆ ರುಚಿಯನರಿಯಳು
ಹಗರಣದ ಹಮ್ಮಾವಿನ ಹಯನು ಸಯವಪ್ಪುದೆ ಗುಹೇಶ್ವರಾ ॥

**ಸೂಚನೆ**

ಬಯಸಿ ಮಾಡಲು ಮಾಯೆ ಬರುಭ ।
ಕ್ತಿಯನು ನಟಿಸಿದನಾಕೆಯಲಿ ಸಂ ।
ಶಯದ ಸಂಗವನಲ್ಲಮಪ್ರಭು ಮನುಜವೇಷದಲಿ ॥

ಲಿಂಗಭಕ್ತರು ತಿಳಿವುದಿದನಾ ।
ವಂಗದಲಿ ಶರಣರುಗಳಾದವ ।
ರಂಗನೆಯರಳುಪಿಂಗೆ ನೆರೆ ನಿರ್ಲೇಪವೃತ್ತಿಯಲಿ ॥
ಸಂಗಿಯಂತಿರೆ ನಟಿಸಿ ತಾ ನಿ ।
ಸ್ಸಂಗಿಯಾಗಿಹ ಪರಿಯದೀ ಪ್ರಭು ।
ಲಿಂಗಲೀಲೆಯೊಳಾ ಸ್ವತಂತ್ರನ ಚಾರುಚರಿತೆಯಲಿ ॥೧॥

ಇರಲು ಮಾಯಾದೇವಿ ಮಧುಕೇ ।
ಶ್ವರನನೋಲಗಿಸುತ್ತ ಕಾಮಿಸಿ ।
ವರ ವಿಧಾವಂತರ ಕಳಾಕೇಳೀವಿನೋದದಲಿ ॥
ಪರಮನಂತರಿಯಾಮಿ ಕರುಣಾ ।
ಕರನು ಸದಮಲ ಸಗುಣ ನಿರ್ಗುಣ ।
ಭರಿತನಲ್ಲಮಲಿಂಗನರಿದಿಂತೆಂದ ತನ್ನೊಳಗೆ ॥೨॥

ಕಾಮಿತಾರ್ಥವನೀಯಬೇಹುದು ।
ಕಾಮಿನಿಗೆ ತಾನವಳು ಕಾಮ ।
ಪ್ರೇಮಭಕ್ತಿಯ ಮಾಡಿದದುಕಾರಣದಲೆಂದೆನುತ ॥
ಆ ಮಹಾಮಹಿಮಸ್ವರೂಪ ಸ ।
ನಾಮವನು ಮರೆಮಾಡಿಯಭಿನವ ।
ಕಾಮರೂಪಿನ ಪರಿಯನಲ್ಲಮಲಿಂಗ ಧರಿಸಿದನು ॥೩॥

ಕಂಗಳಲಿ ನೆರೆ ನೋಡಿದೊಡೆ ಹೆರೆ ।
ಹಿಂಗಬಾರದ ಚೆಲುವ ಮುಖದ ಸು ।
ರಂಗ ಸೂಸುವ ದಂತಪಂಕ್ತಿಯ ತೊಳಪ ಕಣ್ಣುಗಳ ॥
ಅಂಗವಟ್ಟದ ಸರಳಿಕೆಯ ಹ ।
ಸ್ತಂಗಳಂಘ್ರಿಯ ಕೋಮಳದ ಸ ।
ರ್ವಾಂಗಭಂಗಿಯ ಸೌಮ್ಯತೆಯ ಧರಿಸಿದನು ಪ್ರಭುರಾಯ ॥೪॥

ಹೂಸಿದಂತಿರೆ ತೊಡೆದ ತುಪ್ಪುಳು ।
ಮೀಸೆ ಮಿಂಚಿರಲುಟ್ಟ ಪಟ್ಟೆಯ ।
ಕಾಸೆ ತೋರುವ ಕನಕದುಡಿ ನೇವಳ ವಿರಾಜಿಸುತ ॥
ಲೇಸೆನಿಪ ಹದಿನಾರು ಹದಿನೆಂ ।
ಟೈಸು ವರುಷದ ಹರೆಯವೆಂಬ ವಿ ।
ಳಾಸವೇಷವನಲ್ಲಮಪ್ರಭುಲಿಂಗ ನಟಿಸಿದನು ॥೫॥

ತುರುಬು ಚಿಮ್ಮುರಿ ಚಿಂದಿ ಕಾಸೆಯ ।
ಸೆರಗು ನಸುಹೊದೆದೊಲ್ಲಿ ಮಿಂಚುವ ।
ಮಿರುಪ ಸುಲಿಪಲ್ಲಸಿಯ ಸೆಳ್ಳುಗುರುಲಿವ ಹೊಂದೊಡರು ॥
ಉರುವ ಗಂಧದ ಲೇಪ ಬೆನ್ನೊಳು ।
ಮೆರೆವ ಮದ್ದಳೆಸಹಿತ ಬಂದೀ ।
ತೆರನನಲ್ಲಮ ನಟಿಸಿ ನಿಂದನು ವಿಕೃತವೇಷದಲಿ ॥೬॥

ಎಡದ ಕಿವಿಯಲಿ ಮೆರೆವ ರತ್ನದ ।
ಕಡುಕು ತಾಯಿತ ಮಣಿಯ ಸರ ಹೊಂ ।
ದೊಡರ ಸರಪಳಿಗಳಲಿ ನೇಲುವ ಬಾವುಲಿಯ ಬೊಂಬೆ ॥
ಮುಡಿಯ ಹೂಸರ ಚುಕ್ಕೆಬೊಟ್ಟಿನ ॥
ಬೆಡಗುಸಹಿತವೆ ಧೂರ್ತವೇಷದ ।
ತೊಡಹವನು ತೊಟ್ಟಿಲ್ಲಮಪ್ರಭು ಬಂದು ನಿಂದಿರ್ದ ॥೭॥

ಕೊರಳ ಮುತ್ತಿನ ಕಂಠಮಾಲೆಯ ।
ವಿರಚಿಸುತ್ತಿಹ ಬಾಹುಪೂರದ ।
ಬೆರಳಿನುಂಗುರಗಳ ವಿಳಾಸದ ಮಡಿಲ ವೀಳೆಯದ ॥
ಧರಣಿಯೊಳು ಚೆಲುವಿಂಗೆ ತಾನೇ ।
ಬಿರುದ ಕಟ್ಟಿದನೆಂಬ ಸೊಬಗಿನ ।
ಪುರುಷವೇಷದಲಲ್ಲಮಪ್ರಭುರಾಯನೆಸೆದಿರ್ದ ॥೮॥

ನಿಂದು ನಾನಾಪರಿಯ ವಹಣಿಗ ।
ಳಿಂದ ತಾಳ ಸಮೇಳ ಸದ್ಗತಿ ।
ಯಿಂದಲುಗ್ಘಡಣೆಯ ಗಡಾವಣೆಯಿಂದಲಲ್ಲಮನು ॥
ಅಂದು ಮಧುಕೇಶ್ವರನ ಬಾಗಿಲ ।
ಮುಂದೆ ಬಾರಿಸುತಿರ್ದನೈ ಹಲ ।
ವಂದದಲಿ ಮದ್ದಳೆಯ ಕೇಳುವರೆಲ್ಲ ಬೆರಗಾಗೆ ॥೯॥

ಕಾರಮುಗಿಲಿನ ಗರ್ಜನೆಯ ಕಿವಿ ।
ಯಾರೆ ಕೇಳುವ ಸೋಗೆಯಂತಿರೆ ।
ಹಾರವಿಸುತಲಿಯಲ್ಲಮನ ಮದ್ದಳೆಯ ಧ್ವನಿಗೇಳ್ದು ॥
ನಾರಿ ಮಾಯಾದೇವಿ ನಲಿಯುತ ।
ದಾರು ಹೊರಕಡೆಯಲ್ಲಿ ತೂರ್ಯೋ ।
ದ್ಧಾರವನು ಮಾಡುವರೆನುತ ಕೇಳಿದಳು ಕೆಳದಿಯರ ॥೧೦॥

ಕೆಳದಿಯರು ತಾವರಿದು ಬಂದಾ ।
ಗಳೆ ವಿಚಾರಿಸಿ ಹೇಳಿದಡೆ ಕೋ ।
ಮಳೆ ಮನೋಮುದದಿಂದೆ ಕರಸಿಯೆ ಕಂಡಳಲ್ಲಮನ ॥
ಮೊಳೆತವಾಕ್ಷಣ ಕಾಮಬಾಣದ ।
ಹಿಳುಕುಗಳು ಹಿರಿದಾಗಿ ಚಿತ್ತಜ ।
ನಳವಿಯಲಿ ಸಿಲುಕಿದಳು ಮಾಯೆ ಮನೋನುರಾಗದಲಿ ॥೧೧॥

ಆವ ದೇಶದ ಪುರುಷನೈ ನಿನ ।
ಗಾವ ಹೆಸರೈ ನೀನು ನೆಲೆಗೊಂ ।
ಡಾವ ಠಾವಿನಲಿಪ್ಪೆಯೈಯೆಂದೆನುತ ವಿನಯದಲಿ ॥
ಭಾವೆಯರು ಬಳಿಕಾತನು ಸಂ ।
ಭಾವಿಸುತ ಕೇಳಿದೊಡೆಯಲ್ಲಮ ।
ದೇವನೊಲಿದಾ ಸತಿಯರಿಗೆ ನಸುನಗುತಲಿಂತೆಂದ ॥೧೨॥

ದೇಶವೆಮ್ಮದು ಹೇಳುವಡೆ ಪರ ।
ದೇಶ ಬಿರುದಿನ ಬಿಂಕಕಾರರ ।
ವಾಸಿಗರನಲ್ಲೆನಿಸುವಲ್ಲಮನೆಂಬ ಪೆಸರೆನಗೆ ॥
ಲೇಸುಮಾಡುವ ಠಾವುಗಳಲಭಿ ।
ಲಾಷೆಯಿಲ್ಲದೆ ಹೊದ್ದುವೆವು ಸುಖ ।
ವಾಸಿಗಳು ನಾವೆಂದನಲ್ಲಮನೊಲಿದು ಸತಿಯರಿಗೆ ॥೧೩॥

ಒಳ್ಳಿತಾಯಿತು ಕಾರ್ಯ ನೀನಿ ।
ನ್ನಲ್ಲಿಗಲ್ಲಿಗೆ ಹೋಹ ಬುದ್ಧಿಯ ।
ಸಲ್ಲವಿಡು ಸುಖದಿಂದಲೆಮ್ಮೊಡತಿಯ ಸಮೀಪದಲಿ ॥
ಬಲ್ಲ ವಿದ್ಯಾವಸ್ತುಗಳೊಳೆ ।
ಮ್ಮೆಲ್ಲರೋಪಾದಿಯಲಿ ಮನಬಂ ।
ದಲ್ಲಿ ನೀನಿಹುದೆಂದರಾ ಕಾಮಿನಿಯರಲ್ಲಮಗ ॥೧೪॥

ಮನದ ಗಂದೆಯ ತುರಿಸಿದಂತಿರೆ ।
ಮನಕೆ ಸಂತಸವಾದುದರಸನ ।
ತನುಜೆಗದ ತಾನರಿದು ಹಡಪದ ಭೋಗಿಯೆಂಬವಳು ॥
ವಿನಯದಿಂದಲ್ಲಮಗೆ ಬಳಿಕಲಿ ।
ವಿನುತ ಹೊಂಬಟ್ಟಲಲಿ ಮಾಯಾಂ ।
ಗನೆಯ ಕೈಯಲಿ ಕೊಡಿಸಿದಳು ಸಲೆ ಸಂತ ವೀಳೆಯವ ॥೧೫॥

ಆತನದ ಕೈಕೊಂಡು ನೋಡುವೆ ।
ನೀ ತರುಣಿ ತಾನೇನ ಮಾಡುವ ।
ಕೌತುಕವನೆಂದೆನುತ ವಿದ್ಯಾವಸ್ತು ತಾನಾಗಿ ॥
ಪ್ರೀತಿವಟ್ಟವನಂತೆ ನಟ್ಟುವ ।
ಜಾತಿರೀತಿಯ ನಟಿಸುತಿರ್ದನು ।
ಭೂತಳದೊಳೆಮ್ಮಲ್ಲಮಪ್ರಭು ತನ್ನ ಲೀಲೆಯಲಿ ॥೧೬॥

ಶರಣೆನುತಲಾ ಮಾಯೆ ಮಧುಕೇ ।
ಶ್ವರನ ಬಿಳ್ಕೊಂಡಾಗಳಾತನ ।
ಕರೆದುಕೊಳುತೈತಂದು ತಂದೆಯ ಸಮ್ಮುಖವ ಮಾಡಿ ॥
ಅರಸಗರಿಕೆಯ ಮಾಡಿ ಮಿಗೆ ಬಳಿ ।
ಕಿರಿಸಿಕೊಂಡಳು ನಾಗವಾಸದ ।
ನೆರವಿಯಲಿ ತಾ ಬೋವಗಾರಿಕೆತನದಲಲ್ಲಮನ ॥೧೭॥

ಹರುಷದಿಂದಲಿ ಕನ್ನೆಮಾಡದ ।
ಪಿರಿಯ ಚೌಮಾಳಿಗೆಯಲತಿ ವಿ ।
ಸ್ತರದಲೋಲಗಗೊಟ್ಟು ಕುಳ್ಳಿತು ಸಕಲವಿಭವದಲಿ ॥
ಭರತವಿದ್ಯಾದ್ಯಖಿಲಕಳೆಗಳ ।
ಪರಿಚರಿಯ ನೆವದಿಂದೆ ಮಾಯಾ ।
ತರುಣಿ ಮನದೊಳು ಸೊಗಸಿ ಮಾತಾಡಿಸಿದಳಲ್ಲಮನ ॥೧೮॥

ಮನದಲಾತುರವಿಹುದು ಬುದ್ಧಿಯ ।
ಮೊನೆಗೆ ನಾಚಿಕೆ ಬಹುದು ನಗೆಗ ।
ಣ್ಣಿನಲಿ ಕಳವಳವಿಹುದು ಕಾಯದಲಿಹುದು ನಸುಭೀತಿ ॥
ವಿನಯವಿಹುದೆರಕದಲಿ ಜಿಹ್ವೆಯ ।
ಕೊನೆಯಲಿಹುದನ್ಯಪ್ರಸಂಗತೆ ।
ಯಿನಿತು ಮಾಯೆಯಲಿರ್ದುದಂದಲ್ಲಮನ ಬೇಟದಲಿ ॥೧೯॥

ಸುಧೆಯ ಸೋನೆಯು ಸುರಿಯುತಿಹ ಕಾ ।
ಲದಲಿ ತೃಪ್ತಿಯನೆಯ್ದಲರಿಯದೆ ।
ಕ್ಷುಧೆಗೆ ತೃಷೆಗಳ ಮಾಡಿ ಕೋಟಲೆಗೊಂಬ ಮರುಳಂತೆ ॥
ಮುದದಲಲ್ಲಮ ಕರುಣಿಸಿದ ಕಾ ।
ಲದಲಿ ನಿತ್ಯವನರಿಯಲಯರಿದೆ ।
ಕುದಿದು ಕೋಟಲೆಗೊಳುತಲಿರ್ದಳು ಮಾಯೆ ಬೇಟದಲಿ ॥೨೦॥

ಕಿಬ್ಬದಿಯ ಕೀಲಿಸಿದ ಕಾಮನ ।
ನಿಬ್ಬರದ ಕೂರಂಬಿನಲಿ ತನು ।
ವಿಬ್ಬರಿವವೊಲು ನಿಮಿಷ ಕುಳ್ಳಿರಲಾರದಳವಳಿದು ॥
ಉಬ್ಬರದ ಮದನಾಗ್ನಿ ಮೈಯನು ।
ಹಬ್ಬಲೇಕಾಂತಕ್ಕೆ ಬಳಿಕೊ ।
ಬ್ಬಿಬ್ಬರಾಪ್ತರು ಸಹಿತ ಹೊಕ್ಕಳು ಮಾಯೆ ಮನಸೋತು ॥೨೧॥

ಮಲಗನೆಮ್ಮುತ ಗದ್ದುಗೆಯ ಮೇ ।
ಲೊಲಿದು ಕುಳ್ಳಿತು ತನ್ನ ಮನದಳ ।
ಬಳವನೊಯ್ಯನೆ ಸೂಚಿಸುವೆನಿನ್ನೋಜೆಯಿಂದೆನುತ ॥
ಕಳವಳಿಸಿ ತರಹರಿಸಲಾರದೆ ।
ಬಳಿಕಲಲ್ಲಮಗಾವ ಬೀಡಿನ ।
ನೆಲೆಯ ಮಾಡಿದಿರೆನುತ ಸಖಿಯರ ಕೇಳಿದಳು ಮಾಯೆ ॥೨೨॥

ಮಡದಿ ಮದನನ ಬಲೆಯ ಬಾಯಲಿ ।
ತೊಡಕಿ ಬಿರ್ದುದನರಿದರಾಗಳೆ ।
ಯೊಡತಿ ನಿಮ್ಮಯ ಬಗೆಯ ಬಯಕೆಯ ನಾಚದೆಮ್ಮೊಡನೆ ॥
ನುಡಿವೆಯಾದಡೆ ಬಳಿಕಲಲ್ಲಮ ।
ಗೆಡೆಗುಡುವೆವೊಂದೆಡೆಯ ಬೀಡಿನ ।
ಗುಡಿಯನೆನುತಾ ಮಾಯೆಗಿಂತೆಂದರು ವಿದಗ್ಧೆಯರು ॥೨೩॥

ದೇವಿ ನಿಮ್ಮಯ ತನು ಮನೋಮಯ ।
ಭಾವ ಕಾಮನ ಕೈಯ ಭಾರಿಯ ।
ಹೂವಿನಂಬುಗಳಿಂದ ಮಾರ್ಮೊನೆಗೊಂಡ ತೆರನಂತೆ ॥
ತೀವಿಕೊಂಡಿವೆ ಬರಿಯ ಬೇಟದ ।
ಬೇವಸದಲೆಮ್ಮೊಡನೆ ನಾಚದೆ ।
ಭಾವೆ ಹೇಳೆನುತೊಡತಿಯನು ಕೇಳಿದರು ಕೆಳದಿಯರು ॥೨೪॥

ಎನಲು ಕನ್ಯಾಭಾವಭಂಗಿಯ ।
ಮನದ ನಾಚಿಕೆಯೊಂದು ನೆಟ್ಟನೆ ।
ಜನಪತಿಯ ಮಗಳೆಂಬ ಹೆಕ್ಕಳ ಹೆಮ್ಮೆ ತಾನೆರಡು ॥
ತನಗೆ ಸಮ ಸಂಪ್ರಾಪ್ತನಲ್ಲದ ।
ಮನುಜಗಳುಪಿದೆನೆಂಬ ಮರವೆಯ ।
ಘನತೆ ಮೂರಿವಕಳುಕಿ ನಾಚುತಲಿರ್ದಳಾ ಮಾಯೆ ॥೨೫॥

ಒಡತಿ ನುಡಿಯದೆ ನಾಚಿರಲು ಹೆ ।
ಗ್ಗಡಿತಿ ಸಕಳೆಯಿದೇನು ರಾಣಿಯ ।
ನಡೆವ ನೋಡುವ ಹಾಡುವಾಡುವ ರೀತಿ ಹೊಸತಾಗಿ ॥
ಬೆಡಗು ಬಿನ್ನಾಣಿಸಿತಿದೆತ್ತಣ ।
ಗೊಡವೆಗೊಳಗಾಗಿದ್ದಳೆನುತಲಿ ।
ಮಡದಿಯೊಲಿದು ಕಳಾವಿಳಾಸಿಯ ಕೇಳಿದಳು ಬಳಿಕ ॥೨೬॥

ಹಲವು ಮಾತೇನೀಕೆ ಕಾಮನ ।
ಬಲೆಗೆ ಬಿದ್ದುದು ಸತ್ಯವಲ್ಲಮ ।
ಗಳುಪಿದುದು ದಿಟವವರಿವರನಿನ್ನೇನು ಕೇಳುವಿರಿ ॥
ಹೊಲಬಿದಾದಡೆ ತಪ್ಪದೆನುತಲಿ ।
ತಿಳಿಯನುಡಿದಳು ಸಕಳೆಗೊಡತಿಯ ।
ನೆಲೆಯನರಿದು ಕಳಾವಳಾಸಿನಿ ತನ್ನ ಸನುಮತವ ॥೨೭॥

ಆ ನುಡಿಯನಾಲಿಸುತ ಮಾಯಾ ।
ಮಾನಿನಿಯ ಮೊಗವಲರಿ ಸಲೆ ಸು ।
ಮ್ಮಾನದಲಿ ನಸುನಗುತ ನಾಚುವ ಭಾವಭಂಗಿಯನು ॥
ಆ ನಿತಂಬಿನಿಯರು ನಿಧಾನಿಸು ।
ತೇನು ಹುಸಿಯಲ್ಲೆನುತ ಶ್ರುತದೃ ।
ಷ್ಟಾನುಮಾನದಲರಿದರಲ್ಲಮಗಾಕೆಯೊಲಿದದನು ॥೨೮॥

ಈ ಕುಮಾರಿಯ ತಿಳಿವೆವೆಂಬುದ ।
ದೇಕೆ ಕಾಣಲು ಬಂದ ಕಾರಿಯ– ।
ವಾ ಕಳಾವಿದನನು ವಿಚಾರಿಸಬೇಕು ನಾವೆನುತ ॥
ಆಕೆಯರು ಮದಮಾನಿಯೆಂಬ ವಿ ।
ವೇಕಿಯರು ಕಳುಹಿದರೆ ಬಂದಳ ।
ನೇಕ ಚದುರಿನ ಚಪಳತನದಲಿಯಲ್ಲಮನ ಬಳಿಗೆ ॥೨೯॥

ನಾರಿ ಬಂದುದನರಿದು ಮೊದಲೇ ।
ದಾರಿದೋರುವೆ ನಾನೆನುತ ಬೀ ।
ಡಾರಕಿನ್ನಾವೆಯ್ದುಬೇಹುದು ನಮ್ಮನರಸಿದೊಡೆ ॥
ನಾರಿ ನೀನೀ ಹದನ ಹೇಳು ಕು ।
ಮಾರಿಗೆನುತವೆ ನಿಜ ವಿನೋದ ವಿ ।
ಚಾರದಿಂದಲಿ ನುಡಿದನಾ ಮದಮಾನಿಗಲ್ಲಮನು ॥೩೦॥

ನಿನಗೆ ಸಾಕಿನ್ನೇಕೆ ಬೀಡಿನ ।
ಮನೆ ವೃಥಾ ಬೇರೊಂದು ಸಂಕ ।
ಲ್ಪನೆಯ ಬಿಡು ನಮ್ಮೊಡತಿಯಾದಡೆ ಮುಟ್ಟಿ ಮೋಹದಲಿ ॥
ನಿನಗೆ ಕೃಪೆಯಾಗಿರ್ದಳೆಮ್ಮರ ।
ಮನೆಯೊಳಿರು ಸುಖಿಯಾಗಿ ನೀನೆಂ ।
ದೆನುತ ನಯದಲಿ ನುಡಿದಳಾ ಮದಮಾನಿಯಲ್ಲಮಗೆ ॥೩೧॥

ನಾವು ಪರದೇಶಿಗಳು ಬಡವರು ।
ನೀವು ದೊರೆಗಳು ಮೇಲೆ ನಿಮ್ಮಯ ।
ದೇವಿ ರಾಜಕುಮಾರಿ ನಾವೇ ಪುರುಷವೇಷಿಗಳು ॥
ನೀವು ಸತಿಯರು ನಿಮ್ಮೊಳಿಹುದೆಮ ।
ಗಾವ ಮರಿಯಾದೆಗಳು ದೂರದ ।
ಸೇವೆ ತಾ ನಮಗುಚಿತವೆಂದನು ನಗುತಲಲ್ಲಮನು ॥೩೨॥

ಕೂಡೆ ತಾ ಪತಿಕರಿಸಿ ಮರಳಿದು ।
ಮಾಡಬಲ್ಲಳೆ ಮಾಯೆ ಭೇದವ ।
ನೋಡು ನೀನೀಗಿರುತಿರುತಲಿನ್ನಾಕೆಯಂಗವನು ॥
ಅಡಿ ತೋರಲದೇಕೆ ನೀ ಕೈ ।
ಗೂಡಿ ಕಾಬುದು ನಿನಗೆ ನಾವೆನು ।
ತಾಡುತಿರ್ದಳು ಹಲವು ಬಿನ್ನಣ ಮಾತನಲ್ಲಮಗೆ ॥೩೩॥

ಅದೊಡೇನೌ ನಿನ್ನ ಮಾತಿನ ।
ಭೇದ ಬೇರೊಂದಾಗಿಯೆನ್ನೊಳು ।
ವೇದಿಸುತ್ತಿದೆ ನುಡಿಯಲಮ್ಮೆವು ನಿನಗೆ ಮನದೆರೆದು ॥
ಆದರಿಸುವಡೆ ಕೇಳುವೊಡತಿಯ ।
ರಾದವರ ದೂರದಲಿ ಸೇವಿಸಿ ।
ಹೋದಡೆಮಗದು ಸೌಖ್ಯವೆಂದನು ನಗುತಲಲ್ಲಮನು ॥೩೪॥

ನಗೆಯ ಮಾತಲ್ಲಣ್ಣ ಮಾಯೆಯ ।
ಬಗೆಗೆ ನಿನ್ನನು ಸೇವಕಾವ್ಯ ।
ತ್ತಿಗಳೊಳೆಣಿಸುವ ಪರಿಯ ಕಾಣೆನು ನಿನ್ನ ತನ್ನಿಂದ ॥
ಮಿಗಿಲು ಮಾಡುವ ಪರಿಯಲಿದ್ದಳು ।
ಹಗಲಿರುಳು ಹಂಬಲಿಸಿ ಕೇಳ್ಯೆ ।
ಬೆಗಡುಗೊಳ್ಳದಿರೆನುತ ಬೋಳ್ಯೆಸಿದಳು ಮದಮಾನಿ ॥೩೫॥

ಸೇವಕರ ಮೇಲೆರಕವಿದ್ದಡೆ ।
ಭಾವೆ ತಪ್ಪೇನೊಡತಿಯಾದವ ।
ರೋವಿ ಸಲಹಲು ಮೋಹ ಮಾಡುವರವರಿಗದು ಸಹಜ ॥
ನಾವು ನಮ್ಮಯ ಸೇವಕಾಂಗದ ।
ಭಾವದಿಂದಿರಬೇಕೆನುತ ನಾ ।
ನಾ ವಿಧದ ಢಾಳಕತನಂಗಳ ನುಡಿದನಲ್ಲಮನು ॥೩೬॥

ಸಾಕು ಜಾಣಿನ ಮಾತು ಮರೆ ।
ಯಿನ್ನೇಕೆ ನಿನ್ನೊಳು ಮಾಯೆ ಕಾಮೋ ।
ದ್ರೇಕದಲಿ ನೆರೆ ನಿನಗೆ ಸೋತಳು ಹಲವು ಮಾತೇನು ॥
ಲೋಕದೊಳು ನರ ದಿವಿಜ ದನುಜರ ।
ನೇಕರನು ಬಗೆಗೊಂಡು ಲೆಕ್ಕಿಸ ।
ದಾಕೆ ತಾನೇ ಸೋತಳ್ಯೆ ನಿನಗೆಂದಳಲ್ಲಮಗೆ ॥೩೭॥

ನೀವೆ ಬಲ್ಲಿರಿ ನಿಮ್ಮ ಮಾಯಾ ।
ದೇವಿಯಂತಸ್ಥವನು ಹೊಸಬರು ।
ನಾವು ಬಲ್ಲೆವೆಯಂತು ಕಾರಣ ಮನಸು ಬಂದಂತೆ ॥
ನೀವೆ ಮಾಡುವುದೆಮ್ಮ ಕೇಳುವು ।
ದಾವುದುಂಟೆಂದುನುತಲಲ್ಲಮ ।
ದೇವನಾ ಮದಮಾನಿಗೆಂದನು ಬಳಿಕ ನಸುನಗುತ ॥೩೮॥

ಆವ ಶಕುನವ ತಿದ್ದಿಕೊಂಡೆಲೆ ।
ಭಾವ ಬಂದೆಯೊ ಅಲ್ಲದಿರ್ದೊಡ ।
ದಾವ ಮೋಹನವಶ್ಯವಿದ್ಯೆಯ ಕಲಿತೆಯೋ ದಿಟಕೆ ॥
ದೇವಿಯನು ನೀ ಮರುಳುಮಾಡಿದೆ ।
ಜಾವಳಿಗನಲ್ಲೆನುತ ಬಂದಳು ।
ಭಾವೆ ನಗುತಲ್ಲಮನ ಬಳಿಯಿಂದೊಡತಿಯಿದ್ದೆಡೆಗೆ ॥೩೯॥

ಇತ್ತಲಾಗಳೆ ತೋಳು ತೊಡೆ ತುಟಿ ।
ವೃತ್ತಕುಚ ಕೊರಳರಳುಗಂಗಳು ।
ಕೆತ್ತುತಿದ್ದುವು ಮಾಯೆಗಿಚ್ಛೆಯ ಫಲವ ಸೂಚಿಸುತ ॥
ಚಿತ್ತದಲಿ ಹಾರೈಸಿ ನಗುತಲಿ ।
ಮತ್ತೆ ಸುಮ್ಮಾನದಲಿ ಬಂದಳು ।
ಮತ್ತಗಜಗತಿಯಿಂದಲಾ ಸಮಯದಲಿ ಮದಮಾನಿ ॥೪೦॥

ಏನು ನಿನ್ನಯ ಮುಸುಡ ಚೇಷ್ಟೆ ಸು ।
ಮಾನವನು ಸೂಚಿಸುತಲಿದೆ ಬಳಿ ।
ಕೇನು ಮಾಡಿದೆ ಹೇಳು ಕಾರ್ಯದ ಹದನ ನೀನೆನಲು ॥
ಆ ನಿತಂಬಿನಿಯಲ್ಲಮನ ಮಿಗೆ ।
ತಾನೊಡಂಬಡಿಸಿದುದನೆಲ್ಲವ ।
ನೂನವಿಲ್ಲದೆ ಹೇಳಿದಳು ಮದಮಾನಿ ವಿಸ್ತರಿಸಿ ॥೪೧॥

ನೀನಹುದು ಸಂಮೋಹನದ ಸಂ ।
ಧಾನವಿದ್ಯಾಜಾಣೆಯೆನುತಾ ।
ಮಾನಿನಿಯರುಗಳೊಲಿದು ಮಾಯಾಂಗನೆಯ ಕೈಯಿಂದೆ ॥
ಆ ನಿತಂಬಿನಿ ದಣಿವವೊಲು ಸ ।
ನ್ಮಾನಿಸುತ ಸಂತೋಷದಲಿ ಮದ ।
ಮಾನಿಗುಚಿತದಲೀಸಿ ಕೊಡಿಸಿದರಂಗಚಿತ್ತವನು ॥೪೨॥

ಕರುಬರಾದ ಕನಿಷ್ಠರಿಂತಿದ ।
ನರಿದರಾದಡೆ ಭೂಮಿಪಾಲಂ ।
ಗರುಹುವರು ಬಳಿಕರಸನೀ ಸೋಹೆಯನು ಕೇಳಿದಡೆ ॥
ಅರಿಯಬಾರದು ಮತ್ತೆ ಕಾರ್ಯದ ।
ತೆರನು ಹೇಗಹುದೆಂದೆನುತ್ತಲಿ ।
ನೆರೆ ವಿಚಾರಿಸಿ ಗುಪ್ತವನು ಮಾಡಿದರು ಕೆಳದಿಯರು ॥೪೩॥

ಅಂದಿನಿರುಳಿನಲಾರುವರಿಯದ ।
ಛಂದದಿಂದಲಿ ಬಳಿಕ ಸೆಜ್ಜೆಯ ।
ಮಂದಿರಕೆ ಸಡಗರಿಸಿ ಮಾಯೆಯನಲ್ಲಮನನೊಲಿದು ॥
ತಂದು ಬಿಜಯಂಗೆಯ್ಸಿದರು ಬಳಿ ।
ಕಿಂದು ಮುಖಿಯರು ತಮವ ತರಣಿಯ ।
ನೊಂದು ಮಾಡುವೆವೆಂಬ ಭಾವಭ್ರಮಿತಬುದ್ಧಿಯಲಿ ॥೪೪॥

ನೆಲಸಿ ಮಿಂಚಿನ ಮಿನುಗಿನೊಲು ಕಂ ।
ಗಳಿಗೆ ತೋರುವನಲ್ಲದಪ್ಪಿಗೆ ।
ನಿಲುಕನಂಬರದಂತೆ ಸೋಂಕಿಹನಲ್ಲದನುರತಿಗೆ ॥
ಉಲುಕನಕ್ಷರದಂತೆ ಬಾಯೊಳು ।
ನಲಿವನಲ್ಲದೆ ಚುಂಬನಕೆ ತಾ ।
ಸಿಲುಕನಲ್ಲಮನೀ ಪರಿಯ ನಟಿಸಿದನು ಮಾಯೆಯಲಿ ॥೪೫॥

ಬಯಲ ಚಪ್ಪಿರಿವಂತೆ ಚುಂಬನ ।
ಬಯಲನಪ್ಪುವವೊಲು ಸಮಪ್ಪಿಕೆ ।
ಬಯಲನೀಕ್ಷಿಸುವಂತೆ ನೋಟದ ಕೂಟದನುಭವಣೆ ॥
ಬಯಲುಗೊಂಡವು ಭಾವಿಸಲು ನಿ ।
ರ್ವಯಲಿನಲ್ಲಮಗೋತ ಕಾರಣ ।
ಬಯಲ ಬಿಹ್ವದ ಬಲೆಗೆ ಬಿದ್ದಳು ಮಾಯೆ ಸುರತದಲಿ ॥೪೬॥

ಮಳೆಗೆ ನೆನೆವುದೆ ಗಾಳಿ ಬೀಸಿದೊ ।
ಡೊಲೆವುದೇ ಬಲುಗಿಚ್ಚಿನುರಿಯಿಂ ।
ದಳಿವುದೇ ನಭವಾಪರಿಯ ಬಯಲಿಗನು ತಾನಾಗಿ ॥
ಕಳವಳದ ವಿಷಯಗಳ ವ್ಯಸನಗ ।
ಳೊಳಗೆ ಸಿಕ್ಕುವನಲ್ಲವಾತನ ।
ಹೊಲಬು ತಾ ಬೇರೊಂದು ಪರಿಯೇನೆಂಬೆನಲ್ಲಮನ ॥೪೭॥

ಜಗವನೇಡಿಸಿ ಕಾಡುವಾ ಮಾ ।
ಯೆಗೆ ನವೀನವೆನಿಪ್ಪ ಮಾಯಾ ।
ವಿಗನು ತಾನೆಂಬಂತಿರಿಲ್ಲದ ಬಯಲ ಬಗೆಗೊಳಿಸಿ ॥
ಅಗಲದಂತಿರಲಿದ್ದು ಸುರತದ ।
ಸೊಗಸಿಗಿಲ್ಲದೆ ಸುಳಿದನಾತನ ।
ಬಗೆಯನಂತಿಂತೆಂದು ಬಲ್ಲವರಿಲ್ಲವಲ್ಲಮನ ॥೪೮॥

ಅಕ್ಕಟಕ್ಕಟ ಈತಗಳುಪಿದ ।
ಕಕ್ಕುಲತೆ ಕೈಸಾರಿತಲ್ಲದೆ ।
ಹೊಕ್ಕು ಮೈಕೈಗೂಡಿ ಸುರತಸುಖಾತಿರೇಕದಲಿ ॥
ಒಕ್ಕಲಿಕ್ಕಿ ಸಮಸ್ತಭೋಗವ ।
ಮಿಕ್ಕು ಸವಿಯದೆಯೆನ್ನ ಭಾವನೆ ।
ಮುಕ್ಕುವೊದುದೆ ಎನುತ ಮನದೊಳು ಮರುಗಿದಳು ಮಾಯೆ ॥೪೯॥

ವನಿತೆ ಬೆರಗಾಗಿರ್ದಳಲ್ಲಮ ।
ತನಗೆ ರೂಹಿಸಿ ಸುರತಸುಖಭಾ ।
ವನೆಗೆ ಬಾರದೆ ಬಯಲುಗೊಂಡಿರೆ ಸುಯ್ದು ಮರೆದೊರಗಿ ॥
ಕನಸ ಕಂಡಂತಾಗಿ ಬಳಿಕಾ ।
ದಿನದ ಮರುದಿವಸದಲಿ ತನ್ನಯ ।
ಮನವೊಲಿದು ನಿಜಸಖಿಯರೊಡನಿಂತೆಂದಳಾ ಮಾಯೆ ॥೫೦॥

ನೋಡಿದಡೆ ರೂಪಾಗಿರಲು ಮೈ ।
ಗೂಡಲಿಕೆ ಸೋಂಕಿಲ್ಲದಿರ್ದಡೆ ।
ನೋಡಿ ನಾ ಬೆರಗಾಗಿ ಮರೆದೊರಗಿರಲು ಮನದೊಳಗೆ ॥
ಕೂಡುವಂತಿರಲೆನೆಗೆ ಮೋಹವ ।
ಮಾಡುವಂತಿರೆ ಕಂಡೆ ಕನಸನು ।
ನೋಡಿದಿರೆಯಲ್ಲಮನ ನಟನೆಯನೆಂದಳಾ ಮಾಯೆ ॥೫೧॥

ಮರುಳುಗೊಂಡಂತೆನೆಗೆ ಮೋಹದಿ ।
ಬೆರಳುಗಳನೊಲಿದಿತ್ತು ಕೀಲಿಸಿ ।
ಇರುಳು ಹಗಲೆಡೆವಿಡದೆ ಕಾದಿರುತಿರ್ದನೆಂಬಂತೆ ॥
ಹಿರಿಯ ಕನಸನು ಕಂಡೆ ನಾನಿ ।
ನ್ನಿರುಳೊಳೀ ಪರಿಯೆನುತ ಮಾಯಾ– ।
ತರುಣಿ ವಿಸ್ತರಿಸಿದಳು ತನ್ನಯ ಕೆಳದಿಯರ ಕೂಡೆ ॥೫೨॥

ಸುರತಸುಖದಲಿ ಮುಂದುಗೆಡದಿಹ ।
ಪುರಷನಿವನಿನ್ನಾರೊ ಸತಿಯರ ।
ಸರಸಪಾಶಕೆ ತೊಡಕಿ ಬೀಳದ ಮಹಿಮನಿವನಾರೊ ॥
ಪರಿಕಿಸುವೊಡಲ್ಲಮನ ಭೇದಿಸ ।
ಲರಿದಲಾ ಎಂದೆನುತ ಮಾಯಾ ।
ತರುಣಿಗಾ ಕೆಳದಿಯರು ಬಳಿಕಿಂತೆಂದರೊಲವಿನಲಿ ॥೫೩॥

ಇದಿರುಗನಸಿದು ಲೇಸು ನಿನಗ ।
ಭ್ಯುದಯವನು ಸೂಚಿಸುವುದೆನುತಲಿ ।
ಸುದತಿಯರು ಮಿಗೆ ಕನಸ ಮುರಿದರು ಮನಸುಬಂದಂತೆ ॥
ಅದನು ಕೇಳುತೆ ಮತ್ತೆ ಮರುಕಳಿ ।
ಸಿದುದು ನೆರೆಯಲ್ಲಮನ ಬೇಟದ ।
ಕುದಿಹ ಮಾಯೆಯ ತನು ಮನಂಗಳ ಕಂದಿ ಕುಂದಿಸುತ ॥೫೪॥

ಅಂದು ಬಳಿಕಾ ಹದನನಾಗಳೆ ।
ತಂದು ನೆರಹಲು ಕೆಲವು ಭರವಸ ।
ದಿಂದ ಮೋಹಿನಿದೇವಿ ತನ್ನಯ ಮಗಳ ಮಂದಿರಕೆ ॥
ಬಂದು ತಾನೇಕಾಂತದಲಿ ನಿಜ ।
ನಂದನೆಯನಾಪ್ತೆಯರ ಕರೆದಿಂ ।
ತೆಂದು ನುಡಿದಳು ತಾನು ಕೇಳಿದ ಗುಪ್ತವಾರ್ತೆಯನು ॥೫೫॥

ಮಗಳೆ ನೀ ನಿನಗಲ್ಲದಿರ್ದೋ ।
ಜೆಗಳ ನಡೆವರೆ ರಾಜಕುಲದಲಿ ।
ನಗೆಗೆಡೆಯ ಮಾಡುವರೆ ನಿಮ್ಮಯ ತಂದೆ ಕೇಳಿದಡೆ ॥
ಸೊಗಸುವನೆ ಮಿಗೆ ನಗುವವರ ಮಾ ।
ತುಗಳಿಗಾಸ್ಪದವಹರೆ ಅಕಟಾ ।
ನೆಗಳಲಹುದೇ ಪುರುಷಸಂಗವನೆಂದಳಾ ಜನನಿ ॥೫೬॥

ನೀತಿಯರಿಯದೆ ನಾನು ಮೊದಲಲಿ ।
ಕಾತರಿಸಿದುದದೊಂದು ಭಾವಿಸ ।
ಲಾತ ಸುರತದಲಂಗಸಂಗಕೆ ಸಿಕ್ಕದಿಹುದೊಂದು ॥
ಮಾತೆ ಕೇಳಿದುದೊಂದು ನಮಗಿ ।
ನ್ನೇತರದು ನುಡಿಯೆನುತ ಲಜ್ಜೆಯ ।
ಭೀತಿಯಲಿ ಬೆಂಬಿದ್ದು ಮೌನದೊಳಿರ್ದಳಾ ಮಾಯೆ ॥೫೭॥

ತರಳೆ ನೀನಕಟೇನ ಮಾಡುವೆ ।
ದುರುಳರಿವದಿರು ನಿನ್ನ ತೊತ್ತಿರು ।
ಮರುಳು ಮಾಡಿದಡೊಲಿದೆಯ್ಯೆಸಲೆ ಎನುತ ನಿಜಸುತೆಯ ॥
ಕರುಣದಲಿ ಮೋಹದಲುಪೇಕ್ಷೆಯ ।
ಭರದಲಾಕೆಯನೇನುವೆನ್ನದೆ ।
ಮುರಿದು ಮೋಹಿನಿದೇವಿ ನೆರೆ ನೋಡಿದಳು ಕೆಳದಿಯರ ॥೫೮॥

ಅರಸಿ ನುಡಿದಡೆ ನಾವು ಪ್ರತ್ಯು ।
ತ್ತರವ ಬಿನ್ನಹ ಮಾಡಬಾರದು ।
ತರುಣಿ ತಾನಲ್ಲಮನ ಕಾಣುತ ಕಾಮತಾಪದಲಿ ॥
ಮರುಳುಗೊಂಡಾಂತಗೆ ಮೋಹಿಸಿ ।
ಹರಣಮಾತ್ರವನುಳುಹಿಕೊಂಡಳು ।
ಹಿರಿದು ಮಾತಿನ್ನೇತಕೆಂದರು ಕೂಡೆ ಕೆಳದಿಯರು ॥೫೯॥

ಅಕಟ ಮಗಳಿಗಿದಾವ ದೆಸೆಯಲಿ ।
ವಿಕಳ ಬಂದುದೊ ಬರಿದೆ ಬಹು ಸೇ ।
ವಕರಿರಲು ಸಲೆ ಸಂತವಿಟ್ಟಿರಿದೆತ್ತಣಲ್ಲಮನು ॥
ಸಕಳೆ ಬುದ್ಧಿಯ ಬಲ್ಲೆ ನೀನೇ ।
ತಕೆ ವಿಚಾರಿಸದಾದೆಯೆನುತಾ ।
ಸಕಳೆಯನು ಮರುಳಾಡುತಿರ್ದಳು ಮೋಹಿನೀದೇವಿ ॥೬೦॥

ಮನುಜದೇಹವಪೂರ್ವವದರೊಳು ।
ಜನಪತಿಯ ಸುತೆಯಹುದಪೂರ್ವತೆ ।
ಯಿನಿತರೊಳು ಪಟುವಾಗಿ ಸಕಲ ಸುಖಂಗಳನು ತಿಳಿದು ॥
ಅನುಭವಿಸುವುದಪೂರ್ವವದರಿಂ ।
ಮನಸು ಬಂದಂತಿರಲಿ ಮಾಯಾಂ ।
ಗನೆಗದೇತಕೆ ಕಾಹು ಕಟ್ಟಳೆಯೆಂದಳಾ ಸಕಳೆ ॥೬೧॥

ಅಹುದು ತನುವುಳ್ಳಲ್ಲಿ ಸುಖದಿಂ ।
ದಿಹುದು ಬಳಿಕಲಿ ಬಯಸಿ ಬಾತೊಡೆ ।
ಬಹವೆಯದು ಕಾರಣದಲಾತ್ಮಜೆ ಮನಸು ಬಂದಂತೆ ॥
ಬಹಳ ಭೋಗವ ಕೊಳಲಿಯೆನುತಾ ।
ಗ್ರಹವನೀಡಾಡಿದಳು ನೀವೇ ।
ನಹಿತರೇ ಎನುತವರನುಪಚರಿಸಿದಳು ನೃಪರಾಣಿ ॥೬೨॥

ಅರಸನರಿಯದ ತೆರದಲಿನ್ನಾ ।
ಚರಿಸುವುದು ನೀವೆನುತ ಭಾವಿಸೆ ।
ಮರುಳರೇ ನಿಮ್ಮಿಂದ ಬಲ್ಲವರಾರು ಧಾತ್ರಿಯಲಿ ॥
ಇರುತಲಿರಿ ನಿಮ್ಮಿಚ್ಛೆಬಂದಾ ।
ಪರಿಯಲೆನುತಾ ರಾಣಿ ತಾ ತ ।
ನ್ನರಮನೆಗೆ ಹೋದಳು ಕುಮಾರಿಯನೊಲಿದು ಮನ್ನಿಸುತ ॥೬೩॥

ನೋಡಿದೌ ಲಾವಕರು ಮಾತೆಯ ।
ಕೂಡೆಯಾಗಳೆ ಹೋಗಿ ದೊಡ್ಡಿತ ।
ಮಾಡಿ ಹೇಳಿದರಾದೊಡಂಜಿಕೆಯೇನು ನಮಗಿದಕೆ ॥
ಬೇಡ ಬೇಕೆಂದೆನಗೆ ಶಿಕ್ಷೆಯ ।
ಮಾಡುವರೆ ಪರಸತಿಯೆ ಇದನಿಂ ।
ದಾಡಿಹೋದಳು ರಾಣಿಯೆಂದಳು ಸಕಳೆಗಾ ಮಾಯೆ ॥೬೪॥

ತರುಣಿ ಕೇಳೌ ನಿನಗೆ ಪರಮೇ ।
ಶ್ವರನೆ ಪತಿಯಹನೆಂದು ನೃಪಕುಲ ।
ಗುರುವೆನಿಪಹಂಕಾರನಾ ಮಮಕಾರ ಭೂಪತಿಗೆ ॥
ನಿರುತ ವಚನವ ನುಡಿದ ನೀನೀ ।
ಪರಿಯ ಗಾವಳಿಗಂಗೆ ಕೂರ್ತಡೆ ।
ಮರುಳುಗುಟ್ಟದೆ ಮಾಣ್ಬರೇ ಹೇಳೆಂದಳಾ ಸಕಳೆ ॥೬೫॥

ನೀರೆ ಕೇಳೌ ನಾವು ಮಾಡಿದ ।
ದೂರನೆಮ್ಮಯ ರಾಣಿ ಕೇಳಿದ ।
ಕಾರಣದಲಿದು ಜಾರಿತಲ್ಲದೆ ರಾಯ ಕೇಳಿದಡೆ ॥
ಗಾರಹೆವು ನಾವಿನ್ನು ನೀತಿಯ ।
ಮೀರದಿರಬೇಕಂತುಕಾರಣ ।
ಬೇರೆ ಬೀಡಿನಲಿರಲಿಯಲ್ಲಮನೆಂದಳಾ ಸಕಳೆ ॥೬೬॥

ಕೆಳದಿಯರು ತಮತಮಗೆ ಬುದ್ಧಿಯ ।
ಕಲಿಸುತಿರಲಾ ಮಾಯೆ ಚಿಂತಾ ।
ಕುಲತೆಯಿಂದಲಿ ಬೆರಗುಹೊಡೆದಿರಲಾಗಳೆಯ್ತಂದು ॥
ಲಲನೆಗೇತಕೆ ದುಗುಡವಾರು ।
ಮ್ಮಳಿಕೆಯನು ಮಾಡಿದರು ಹೇಳೆನು ।
ತೊಲಿದು ಕೇಳಿದನಂದು ಸಕಳೆಯನಲ್ಲಮನು ಬಳಿಕ । ॥೬೭॥

ಅಣ್ಣ ಕೇಳುದಕದಲಿ ಮುಳುಗಿದ ।
ಸುಣ್ಣಕಲ್ಲಂತಾಗಿ ಕುದಿಯುತ ।
ಬಣ್ಣವಳಿದಳು ಮಾಯೆ ಕಾಣುತ ನಿನ್ನ ಬೇಟದಲಿ ॥
ಕಣ್ಣುಗಾಣದೆ ಕಾಮನೇರಿನ ।
ಹುಣ್ಣಿನಲಿ ಹೊರಳಿದಡೆಯಾ ಸ್ಥಿತಿ ।
ಹಣ್ಣಿಹಬ್ಬಿತು ಪುರದೊಳೆಂದಳು ಸಕಳೆಯಲ್ಲಮಗೆ ॥೬೮॥

ಒಡತಿ ಮುಂತಾದರಮನೆಯಲಿಹ ।
ಮಡದಿಯರು ತಾವರಿದರೊಬ್ಬನೆ ।
ಪೊಡವಿಪಾಲಕನರಿಯನಲ್ಲಮ ನಮ್ಮ ಪುಣ್ಯದಲಿ ॥
ತೊಡಗಿತೀಪರಿ ರಟ್ಟು ಸಾಕಿ ।
ನ್ನೆಡೆಯ ಮಾಡೈ ನಿನಗೆ ಬೀಡಿನ ।
ಗುಡಿಯ ಹೊರಗೊಂದೆಡೆಯನೆಂದಳು ಸಕಳೆಯಲ್ಲಮಗೆ ॥೬೯॥

ಮಾಯೆಯಗಲಿದ ಬಳಿಕ ಭಾವಿಸೆ ।
ಕಾಯವುಂಟೇ ಪ್ರಾಣವಾಗಿಹ ।
ವಾಯು ನಡೆವುದೆ ಕಾಲು ಕೈ ಕಣ್ಣುಗಳು ಮಿಡುಕುವುವೇ ॥
ಬಾಯನುಡಿ ಬೆವಹಾರ ವ್ಯಸನಗ ।
ಳಾಯತವು ಬಳಿಕುಂಟೆ ಕೇಳೌ ।
ಸಾಯದಂತಿರೆ ಸತ್ತೆ ನಾನಕಟೆಂದನಲ್ಲಮನು ॥೭೦॥

ಎಂದ ಮಾತಿನ ಮರೆಯ ಬೆಡಗಿನ ।
ಸಂದಿಯಲಿ ಶಿವಕಾಮತತ್ತ್ವ ।
ದ್ವಂದ್ವವಿಪ್ಪುದನರಿಯಲರಿಯದೆಯೀಗಳೇನಾಯ್ತು ॥
ಮುಂದೆ ಮಾಯೆಯ ನಿನ್ನ ರಿಣ ಸಂ ।
ಬಂಧವುಳ್ಳಡೆ ತಾನೆ ಕೂಡೀ ।
ತೆಂದು ಮೆಲ್ಲನೆ ಜಾರಿ ನುಡಿದಳು ಸಕಳೆಯಲ್ಲಮಗೆ ॥೭೧॥

ಆಗಲೆನುತಲಿ ಬಳಿಕ ಪಾತ್ರದ ।
ಭೋಗದವರೊಳು ಮಧುಕನಾಥಗೆ ।
ಹೋಗಿ ಮಾಯಾಂಗನೆಯ ಲಾಸ್ಯದ ಕೇಳಿಯೂಳಿಗವ ॥
ಜೋಗವಿಸುತಿರುತಿರ್ದ ಭಕ್ತಿಯ ।
ಭಾಗೆಯಲಿ ತಾನೊಲಿದ ಕಾರಣ ।
ವಾ ಗರುವನೆಮ್ಮಲ್ಲಮಪ್ರಭು ಲಿಂಗಲೀಲೆಯಲಿ ॥೭೨॥

## ಗತಿ – ೬
# ಬಂದಳಾ ವಿಮಳೆ

**ವಚನ**

ಕೃತಯುಗದಲ್ಲಿ ಭಕ್ತಿಕಾರಣ ಸ್ಥೂಲಕಾಯನೆಂಬ ಗಣೇಶ್ವರನಾಗಿರ್ದೆ
ತ್ರೇತಾಯುಗದಲ್ಲಿ ಭಕ್ತಿಕಾರಣ ಶೂನ್ಯಕಾಯನೆಂಬ ಗಣೇಶ್ವರನಾಗಿರ್ದೆ
ದ್ವಾಪಾರಯುಗದಲ್ಲಿ ಭಕ್ತಿಕಾರಣ ಅನಿಮಿಷನೆಂಬ ಗಣೇಶ್ವರನಾಗಿರ್ದೆ
ಕಲಿಯುಗದಲ್ಲಿ ಭಕ್ತಿಕಾರಣ ಪ್ರಭುವೆಂಬ ಜಂಗಮನಾಗಿರ್ದೆ ಕಾಣಾ
ಗುಹೇಶ್ವರಾ ॥೧॥

ಆದಿಯಾಧಾರವಿಲ್ಲದಂದು
ಹಮ್ಮುಬಿಮ್ಮುಗಳಿಲ್ಲದಂದು
ಸುರಾಳನಿರಾಳವಿಲ್ಲದಂದು
ಶೂನ್ಯನಿಶ್ಶೂನ್ಯವಿಲ್ಲದಂದು
ಸಚರಾಚರವೆಲ್ಲ ರಚನೆಗೆ ಬಾರದಂದು
ಗುಹೇಶ್ವರನ ಶರಣನುದಯಿಸಿದನಂದು
॥೨॥

ಆದಿಯ ಸಂಗದಿಂದಾದವನಲ್ಲ,
ಸಂಗಸುಖದೊಳಗಿದ್ದವನಲ್ಲ,
ಇಬ್ಬರ ಸಂಗದಿಂದಾದವನಲ್ಲ
ರವಿಶಶಿಯ ಬೆಳಗಿನಿಂದ ಬೆಳೆದವನಲ್ಲ,
ನಾದಬಿಂದುಕಳೆ ಹುಟ್ಟದ ಮುನ್ನ
ಅಲ್ಲಿಂದತ್ತತ್ತ ಗುಹೇಶ್ವರಾ ॥೩॥

**ಸೂಚನೆ**

ಉಮೆಯ ನೇಮದಲಿಳೆಗೆ ಬಂದಾ ।
ವಿಮಳೆ ಪೇಳಲು ವಿಸ್ತರಿಸಿಯ ।
ಲ್ಲಮನ ಪರಿಯನು ಕೇಳುತಿರ್ದಳು ಮಾಯೆ ಮನವೊಲಿದು ॥

ಸದಮಲಜ್ಞಾನಿಗಳು ಶಾಶ್ವತ ।
ಪದದಲನುಭಾವಿಗಳು ಕೇಳುವು ।
ದಿದರೊಳಗೆ ಮೇಲೆನಿಸಿ ನಡೆವ ಕಥಾಕುತೂಹಲವ ॥
ಮಧುಕನಾಥನ ವಾದ್ಯಮೇಳಾ ।
ಪದಲಿ ಮೆರೆವಲ್ಲಮನ ಮಹಿಮೆಯ ।
ಹದನನಾದರದಿಂದಲೀ ಪ್ರಭುಲಿಂಗಲೀಲೆಯಲಿ ॥೧॥

ಧರಣಿತಳದೊಳು ನಿಚ್ಚ ಮಧುಕೇ ।
ಶ್ವರನನಭಿವಂದಿಸುತ ಕಾಮಾ
ತುರದಲಲ್ಲಮಗೋತು ಮಾಯಾದೇವಿಯಿರುತಿರಲು ॥
ಹಿರಿದು ದಿನಗಳು ಹೋದುವೆನುತಲಿ ।
ಗಿರಿಜೆ ಮಾಯೆಯ ಹದನನಾಲಿಸಿ ।
ಕರೆದು ತರಲಿಕೆ ಕಳುಹಿದಳು ಬೆಸನಿತ್ತು ವಿಮಳೆಯನು ॥೨॥

ತೊಳಪ ಕಂಗಳ ಕಾಂತಿ ಮಿಂಚಿನ ।
ಬಳಗವನು ಬೆಸಲಾಗುತಿರೆ ಕೋ ।
ಮಳದ ತನುವಿನ ಸಾರಸೌರಭವಿಡಿಯೆ ದೆಸೆಗಳನು ॥
ಸೆಳೆನಡುವಿನುನ್ನತಕುಚಂಗಳ ।
ಚೆಲುವಿಕೆಯ ದಿವ್ಯಾಂಗತೇಜದ ।
ಬಳಕೆಯಿಂದಲಿ ಬಂದಳವನಿಗೆ ವಮಳೆ ಕುಳ್ಳಿರಿಸಿ ॥ ॥೩॥

ಬಂದು ಭರವಸದಿಂದ ಕನ್ನೆಯ ।
ಮಂದಿರವನೊಳಪೊಕ್ಕು ಭೋಂಕನೆ ।
ಮುಂದೆ ನಿಂದಿರೆ ಕಾಣುತವೆ ಸತ್ಕರಿಸಿ ಕುಳ್ಳಿರಿಸಿ ॥
ಇಂದುಮುಖಿ ನೀನೆತ್ತಣಿಂದಲಿ ।
ಬಂದೆಯೇತಕೆ ನಿನ್ನ ಹೆಸರೇ ।
ನೆಂದು ಮಾಯಾದೇವಿ ಕೇಳಿದಳೊಲಿದು ವಿಮಳೆಯನು ॥೪॥

ಕೆಳದಿ ನಿನ್ನನು ನೋಡಲಂಬಿಕೆ ।
ಕಳುಹಿದರೆ ರಜತಾದ್ರಿಯಿಂದಾ ।
ನಿಳಿದು ಬಂದೆನು ವಿಮಳೆಯೆಂಬವಳಾನು ನೀನೀಗ ॥
ಇಳೆಯೊಳುದಯಿಸಿ ಮರೆದೆಯಾದೊಡೆ ।
ತಿಳುಹುವೆನು ನಾ ನಿನಗದೆಲ್ಲವ ।
ನೊಲಿದು ಕಾರಣಕಥನವನು ಕೇಳೆಂದಳಾ ವಿಮಳೆ ॥೫॥

ಏನು ಕಾರಣ ನಾನು ಹುಟ್ಟಿದೆ ।
ನೇನು ಕಾರಣ ನೀನು ಬಂದೆಯಿ ।
ದೇನು ಕಾರಣ ಗಿರಿಜೆ ಮಾಡಿದಳೆನಗೆ ಕರುಣವನು ॥
ತಾನು ದೇವತೆಯಾನು ಮಾನಿಸೆ ।
ಯೇನು ಸಂಭಾವನೆಗೆ ಕಾರಣ ।
ಮಾನಿನಿಯೆ ಹೇಳೆನುತಲಿದ್ದಳು ವಿಮಳೆಗಾ ಮಾಯೆ ॥೬॥

ಹರನ ನಿಷ್ಕಳರೂಪನಲ್ಲಮ ।
ನಿರವಿನಿಂದಲು ತಾನು ತಿಳಿವಾ ।
ತುರಕೆ ತನ್ನ ಗುಣಸ್ವರೂಪದ ಮಾಯೆ ನಿನ್ನುವನು ॥
ಧರೆಗೆ ಕಳುಹಲು ನೀನು ತಡೆದಿರು ।
ತಿರಲು ನಿನ್ನನು ತಿಳುಹಿ ತರಲಿಕೆ ।
ಗಿರಿಜೆ ಬಳಿಕಿಂತೆನ್ನ ಕಳುಹಿದಳೆಂದಳಾ ವಿಮಳೆ ॥೭॥

ಬಳಿಕ ಮಾಯಾಂಗನೆಯ ಮನಸಿಗೆ ।
ತಿಳಿವು ತಿಣ್ಣನೆ ತಿಟ್ಟವಿಟ್ಟಿತು ।
ಹೊಳವು ಹೊಮ್ಮಿತು ತನ್ನ ಪೂರ್ವದ ಕಥನ ಕಾರಣದ ॥
ಬೆಳವಿಗೆಗೆ ಬೆದೆಯಾಯ್ತು ನೆನಹಿನ ।
ನೆಳಲು ಮಿಂಚಿದುದೊಳಗೊಳಗೆ ನಿ ।
ರ್ಮಳೆಯ ಸಂಗವು ಕಳೆಯದಿಹುದೇ ಮನದ ಮೈಲಿಗೆಯ ॥೮॥

ಹರಿಹರಬ್ರಹ್ಮಾದಿ ದೇವಾ ।
ಸುರರು ಜನನಕೆ ಬರಲು ಜಾತಿ ।
ಸ್ಮರಣೆಯಿಲ್ಲೆನಲಾವು ಸತಿಯರು ನಮ್ಮ ಪಾಡೇನು ॥
ಪಿರಿದು ಪೂರ್ವಸ್ಥಿತಿಯ ಭಾವಿಸ ।
ಲರಿದು ನೀನದರಿಂದಲಲ್ಲಮ ।
ನಿರವನೆಲ್ಲವ ವಿರಚಿಸೆಂದಳು ವಿಮಳೆಗಾ ಮಾಯೆ ॥೯॥

ಆದೊಡಾಲಿಸುವೊಂದು ಬುದ್ಧಿಯ ।
ಲಾದರಿಸಿ ಕೇಳಭವ ತನ್ನ ವಿ ।
ನೋದದಿಂದಾ ಗಿರಿಜೆಗರುಹಿದ ಕಥನಕೌತುಕವ ॥
ಆದಿಯಲಿ ಸಾಕ್ಷಾತವಾಗಿಯೆ ।
ಮೇದಿನಿಯಲಿರುತಿರ್ದರಮಲ ಗು ।
ಣಾಧಿಕದ ಸುಜ್ಞಾನಿ ನಿರಹಂಕಾರರೆಂಬವರು ॥೧೦॥

ಒಳ್ಳಿತಾಗಿಯೆ ಚೆಲುವ ಬನವಸೆ ।
ಬಳ್ಳೆಗಾವಿಯ ಭಕ್ತಿಭಾವಕ ।
ರೆಲ್ಲರೊಳಗಭಿವಂದ್ಯನಾಗಿ ಸಮಸ್ತ ಭಾಗ್ಯದಲಿ ॥
ಬಲ್ಲಿದನು ತಾನೆನಿಸಿ ತನಗೊಂ ।
ದಿಲ್ಲವೆನುತಲಿ ಪುತ್ರಕಾಮ್ಯದ ।
ಭುಲ್ಲವಣೆಯಲಿ ಬಳಿಕ ನಿರಹಂಕಾರನಿಂತೆಂದ ॥೧೧॥

ದಾನವಿಲ್ಲದ ಧರ್ಮ ವಿಷಯ ।
ಧ್ಯಾನವಿಲ್ಲದ ತಪವು ಜೀವ ।
ಸ್ಥಾನದನುಸಂಧಾನವಿಲ್ಲದ ಯೋಗದಭ್ಯಾಸ ॥
ಜ್ಞಾನವಿಲ್ಲದ ಸಿದ್ಧಿ ವರಸಂ
ತಾನವಿಲ್ಲದ ಬಾಳ್ಕೆಯಲಿ ಸುಖ ।
ವೇನು ದೊರಕುವುದೆನುತ ನಿರಹಂಕಾರ ಚಿಂತಿಸಿದ ॥೧೨॥

ಲೌಕಿಕರು ಕಾಮಿಸುವರಿಹಪರ ।
ಲೋಕವನು ತಮಗೀವ ಪುತ್ರನ ।
ನೇಕೆಯಾ ಮಾಯಾಪ್ರಪಂಚಿನ ಬಳಕೆಗಳು ನಮಗೆ ॥
ಏಕವೆನಿಸುವ ನಿಜವನೀವ ನಿ ।
ರಾಕುಳದ ಸುಕುಮಾರನಾಗಲಿ ।
ಬೇಕು ನಮಗೆಂದೆನುತ ನಿರಹಂಕಾರ ಚಿಂತಿಸಿದ ॥೧೩॥

ಉಪಮಿಸಲು ಸತಿಸಂಗರಸದಲಿ ।
ಜಪದ ಜಂಜಡ ಜೋಕೆಯಲಿ ಮೇಣ್ ।
ತಪದ ತಾಮಸಭಾವದಲಿ ಮಾಯಾಪ್ರಪಂಚಿನಲಿ ॥
ವಿಪುಲ ವಿಜ್ಞಾನಾಕೃತಿಯ ನಿ ।
ಶ್ಚಪಳನಾದ ಕುಮಾರನಿಲ್ಲೆನು ।
ತಪರಿಮಿತದೆಣಿಕೆಗಳ ನಿರಹಂಕಾರ ಚಿಂತಿಸಿದ ॥೧೪॥

ಆದಡಂತಃಕರಣವೃತ್ತಿಯ ।
ಹಾದಿಯನು ಪಲ್ಲಟಿಸಿ ಮೆಲ್ಲನೆ ।
ನಾದ ಬಿಂದು ಕಳಾಪ್ರಬಂಧದ ಬಲೆಗಳಲಿ ನುಸುಳಿ ॥
ಆದರಿಸಿಯೆನಗಚಲಪದವನು ।
ವೇದಿಸುವ ಸತ್ಪುತ್ರನೊಬ್ಬನ ।
ಸಾಧಿಸುವೆನೆಂದೆನುತ ನಿರಹಂಕಾನನುಗೆಯ್ದ ॥೧೫॥

ಸತಿಸಹಿತ ಸಂಕಲ್ಪಸಾಧನ ।
ಗತಿಯ ಮೇಳಾಪದಲಿ ನೆರೆ ನಿ ।
ಶ್ಚಿತವ ಮಾಡಿ ಮನಸ್ಸನೇಕೋಭಾವನಿಷ್ಠೆಯಲಿ ॥
ಪ್ರತಿಯಿಡುವ ಪಂಚೇಂದ್ರಿಯಂಗಳ ।
ನತಿಗಳೆವ ನಂದನನ ಬಯಕೆಯ ।
ಮತಿಗಳಲಿ ಸುಜ್ಞಾನಿ ನಿರಹಂಕಾರರೊಪ್ಪಿದರು ॥೧೬॥

ಸಂತೆಯೊಳಗುಂಟೇ ಸಮಾಧಿಯ ।
ಸಂತತಾನಂದದ ಸುಖೋದಯ ।
ವೆಂತು ದೊರಕುವುದೆನುತ ಮಂದಿಯ ಕಳವಳವ ತೊಲಗಿ ॥
ಸಂತತಿಯ ಸಂಕಲ್ಪದಿಂದೇ ।
ಕಾಂತವಾಸವ ಹೊಕ್ಕು ಮಿಗೆ ವಿ ।
ಶ್ರಾಂತಿಯಲಿ ಸುಜ್ಞಾನಿ ನಿರಹಂಕಾರರೊಪ್ಪಿದರು ॥೧೭॥

ಅನುಗೊಳಿಸಲಳವಟ್ಟ ಪದ್ಮಾ ।
ಸನದ ಹಸ್ತನ್ಯಸ್ತಲಿಂಗದ ।
ನೆನಹು ನೆರೆ ಕರಿಗಟ್ಟಿದಂಗದ ನಟ್ಟ ದೃಷ್ಟಿಗಳ ॥
ಮನದ ಮೇಳಗಳೊಳಗೆ ಸಿಕ್ಕದ ।
ಘನತರಪ್ರಾಣಾನಿಲನ ಸಾ ।
ಧನಸಮಾಧಿವಿಳಾಸದಲಿ ದಂಪತಿಗಳೊಪ್ಪಿದರು ॥೧೮॥

ಹೂಳಿಹೊಯಿತ್ತನ್ನಪಾನದ ।
ಮೇಲಣಿಚ್ಚೆಯನೇಕ ಪರಿಯಲಿ ।
ಹಾಳುಬಿದ್ದುವು ಜಾಗ್ರಸ್ವಪ್ನಸುಷುಪ್ತಿಗಳ ಬಲುಹು ॥
ಕೋಳುಹೋಯಿತು ಕರಣಗಳ ಕಾ ।
ಲಾಳು ಬೆಂಬಟ್ಟೆಯ ಸುಷುಮ್ನಾ ।
ನಾಳದಲಿ ದಂಪತಿಗಳನುಭವವಿರೆ ಸಮಾಧಿಯಲಿ ॥೧೯॥

ಆ ಸಮಾಧಿಯ ಭಾವದಲಿ ನವ ।
ಮಾಸ ಪೂರಿತವಾಗಿ ನೆನಹಿನ ।
ನೇಸರಿನ ಬಲು ಬಿಸಿಲು ಬೆಳಗಿದುದಂತರಂಗದಲಿ ॥
ಲೇಸೆನಿಸಿ ಕಾಣಿಸಿದುದೊಯ್ಯನೆ ।
ಭಾಸುರ ಶ್ರೀಮೂರ್ತಿಯೊಂದು ವಿ ।
ಳಾಸ ನಿರಹಂಕಾರ ಸುಜ್ಞಾನಿಗಳ ಮನದೊಳಗೆ ॥೨೦॥

ಕಂಡರೇಕೋಭಾವದಲಿ ನಿಃ ।
ಖಂಡ ಮಹಿಮನನಖಿಳ ಭವಭಯ ।
ಖಂಡನನನಾದ್ಯಂತರಹಿತನನಪ್ರಮೇಯನನು ॥
ಚಂಡಕರ ಕೋಟಿಪ್ರಕಾಶೋ ।
ದ್ದಂಡಮಯನ ಸುಹೃನ್ಮನೋಂಬುಜ ।
ಮಂಡಿತನನಾ ದಂಪತಿಗಳೊಲಿದಂತರಂಗದಲಿ ॥೨೧॥

ಕರಣಗಳು ಕಾಲಿಡಲು ನೇತ್ರದ ।
ಬಿರಿಮುಗುಳು ಬಿಚ್ಚಿದುವು ನಾಡಿಯ ।
ಹೊರಳಿ ಹುರಿಗೊಳಿಸಿದುವು ಚೇಷ್ಟಿಸಿ ಬಾಹಿರಂಗದಲಿ ॥
ಅರಳಿದುದು ಮನದರಿಕೆ ಭೋಂಕನೆ ।
ಹೊರೆಯಲಿಹ ಬಾಲಕನ ಕಂಡರು ।
ಪರಮ ನಿರಹಂಕಾರ ಸುಜ್ಞಾನಿಗಳು ಹರುಷದಲಿ ॥೨೨॥

ಬಿಸಿಲ ಬೇರಿಟ್ಟಿಳೆಗಿಳಿದು ಶೋ ।
ಭಿಸುವ ಸೂರ್ಯನೊ ಹಿಮವನತಿಗಳೆ ।
ದೆಸೆವ ಚಂದ್ರನೊ ನೆಟ್ಟನಾಶ್ರಿತಭಕ್ಷಗುಣವಳಿದು ॥
ಮಿಸುಗುವಗ್ನಿಯೊ ಪೇಳೆನಲು ರಂ ।
ಜಿಸುವ ತೇಜೋಮಯದ ಬಾಲಕ ।
ನೆಸೆದನಾ ಸುಜ್ಞಾನಿ ನಿರಹಂಕಾರರಿದಿರಿನಲಿ ॥೨೩॥

ಹೊಗಳಿ ಹೋರುವ ವೇದಶಾಸ್ತ್ರದ ।
ಬಗೆಗೆ ಬಾರದ ಹರಿವಿರಿಂಚ್ಯಾ ।
ದಿಗಳು ಸಾಧಿಸಿ ಕಾಣಲರಿಯದ ಪರಮಮುನಿನಿಕರ ॥
ಮೊಗಸಿ ಮಾಡುವ ತಪಕೆ ನಿಲುಕದ ।
ಸಗುಣನಿರ್ಗುಣಮೂರ್ತಿಯಲ್ಲಮ ।
ವಿಗಡ ಶಿಶುವನು ಕಂಡರಾ ದಂಪತಿಗಳರ್ತಿಯಲಿ ॥೨೪॥

ಸುರರು ಹೂಮಳೆಗರೆದರಾಗಳು ।
ನೆರೆದು ನುಡಿದವು ದೇವದುಂದುಭಿ ।
ಪರಮಮುನಿಜನದಂತರಂಗದಲಾದುದುತ್ಸಾಹ ॥
ಕೊರಡುಗಳು ಕೊನರಿದುವು ಕರೆಯದ ।
ಬರಡುಗಳು ಹಯನಾದುವೆಮ್ಮಯ ।
ಗುರು ಗುಹೇಶ್ವರನಿಳೆಗೆ ರೂಹಿಸಿ ಮೆರೆದ ಕತದಿಂದೆ ॥೨೫॥

ಭಾಪು ಘನಗುರುಲಿಂಗಮೂರ್ತಿಯೆ ।
ಭಾಪು ಜಂಗಮಲಿಂಗಮೂರ್ತಿಯೆ ।
ಭಾಪು ಶಿವಲಿಂಗಪ್ರಕಾಶವ್ಯೋಮಮೂರುತಿಯೆ ॥
ಭಾಪುರೇ ಎಂದೆನುತಲಾ ಚಿ ।
ದ್ರೂಪ ಶಿಶುವನು ಕಂಡು ಹಿಗ್ಗಿದ ।
ನಾ ಪುರಾತನನೆನಿಪ ನಿರಹಂಕಾರನರ್ತಿಯಲಿ ॥೨೬॥

ಹಾರವಿಸಿ ನಲಿದೆತ್ತೆ ಕಿಂಚಿತು ।
ಭಾರವಿಲ್ಲದೆ ಕೈಗೆ ಸೋಂಕದೆ ।
ಸಾರತೇಜಃಪುಂಜತನುಶಿಶು ತನ್ನ ಕೈಯೊಳಗೆ ॥
ಪೂರವಿಸಿಕೊಂಡಿರಲು ಬಳಿಕಾ ।
ನಾರಿ ವಿಸ್ಮಯವಾಗಿ ನಿರಹಂ ।
ಕಾರನನು ಕೇಳಿದಳಿದೇನೆನುತಾತ್ಮಜನ ಪರಿಯ ॥೨೭॥

ಈತನಾರೆಂಬಡೆ  ಸದಾ ಸಾ ।
ಕ್ಷಾತವವನಿಜಲಾನಲಾನಿಲ ।
ಭೂತತತ್ವವಿದೂರ ಪರಮಾನಂದ ರಸಭರಿತ ॥
ಜಾತನಲ್ಲ ವಿಚಾರಿಸುವಡೆಯ ।
ಜಾತನಲ್ಲೆಂದೆನುತಲುಪಮಾ ।
ತೀತನೀ ಶಿಶುವೆಂದ ನಿರಹಂಕಾರ ನಿಜಸತಿಗೆ ॥೨೮॥

ಬಲ್ಲಡೀ ಶಿಶುವೇತರೊಳಗಿಹ ।
ನಲ್ಲ ಹೊರಗಿಹನಲ್ಲ ಭಾವಿಸ ।
ಲಿಲ್ಲದಿರುತಿಹನಲ್ಲವೆನುತಾ ತಂದೆತಾಯಿಗಳು ॥
ಎಲ್ಲ ಜಾಡ್ಯದ ಜಂಜಡಂಗಳ ।
ನಲ್ಲವೆನಿಸುವ ಬಾಲಕಗೆ ಬಳಿ ।
ಕಲ್ಲಮಪ್ರಭುವೆಂದು ಹೆಸರನು ಕೊಟ್ಟರರ್ತಿಯಲಿ ॥೨೯॥

ಗಳಿಗೆ ಸಂಖ್ಯೆಗೆ ನುಡಿಯ ಕಲಿತನು ।
ಗಳಿಗೆ ಸಂಖ್ಯೆಗೆ ನಡೆಯ ಕಲಿತನು ।
ಗಳಿಗೆ ಸಂಖ್ಯೆಗೆ ಬೆಳೆದನವರ ಮನೋರಥದ ಕೂಡೆ ॥
ಗಳಿಗೆ ಸಂಖ್ಯೆಗೆ ಬಾಲಲೀಲೆಯ ।
ನಳವಡಿಸಿ ಕೊಂಡಾಡುತಿಹ ಮ ।
ಕ್ಕಳಲಿ ಮೆರೆವುತಲಿರ್ದನಲ್ಲಮ ತನ್ನ ಲೀಲೆಯಲಿ ॥೩೦॥

ಚಂಡಭವದಲಿ ಬಗೆದು ಭಾವಿಸಿ ।
ಖಂಡವಿಧಿಯಲಿ ಸುಖವ ಬಯಸುವ ।
ಭಂಡಭವಿ ಭರದಿಂದ ಭೂಮಿ ಸ್ವರ್ಗವನು ತಾಗಿ ॥
ಕಂಡು ಉಂಡೆಡೆಯಾಡುವನು ಮೂ ।
ಚಂಡಿಯೀಪರಿಯೆನುತಲಾ ಹೊಡೆ ।
ಚಂಡನಲ್ಲಮನಾಡುತಿರ್ದನು ಬಾಲಲೀಲೆಯಲಿ ॥೩೧॥

ವಾಯುಸೂತ್ರದಲಿಂದು ರವಿ ಚ ।
ಕ್ರಾಯುಧಂಗಳು ತಿರುಗುತಿರ್ದಡೆ ।
ಬೀಯವಹವವನಿಲಿಸಲರಿಯದ ಭವಿಗಳಾಯುಷ್ಯ ॥
ಈಯವಸ್ಥೆಯಲೆನುತ ಶಿಕ್ಷೋ ।
ಪಾಯದಿಂದಿಕ್ಕಯ್ಯಲಾ ಪ್ರಭು ।
ರಾಯ ಚಕ್ರವ ತಿರುಹುತಿರ್ದನು ಬಾಲಲೀಲೆಯಲಿ ॥೩೨॥

ಆತನೋದದೆ ವೇದಶಾಸ್ತ್ರಸ ।
ಮೇತವಾತನ ನಾಲಗೆಯ ತುದಿ ।
ಗಾತು ಬೆಸನನು ಬೇಡುತಿಹವಾತನ ಪದಾಬ್ಜದಲಿ ॥
ಓತು ಸತ್ಕೃತಿನಿಕರಗಳು ಕ ।
ಯ್ಯಾತು ನೇಮವ ಹಾರುತಿಪ್ಪವು ।
ಭೂತಳದೊಳಲ್ಲಮನ ಬೆಳವಿಗೆ ಬೆಳಸಿತಚ್ಚರಿಯ ॥೩೩॥

ರೂಢಿಗಚ್ಚರಿಯಾದ ಬಾಲ ।
ಕ್ರೀಡೆಗಕ್ಕಜಗೊಡು ಕಂಡವ ।
ರಾಡಿಕೊಳುತಿರೆ ಕಣ್ಣುಗಿಸುರಹುದೆಂದು ಮೋಹದಲಿ ॥
ನೋಡಿ ತೂಪಿರಿದಕ್ಕರಲಿ ಕೊಂ ।
ಡಾಡಿ ಕರ ಸಂತೋಷದಲಿ ಕೈ ।
ಗೂಡಿ ಬಣ್ಣಿಸಿ ಜನನಿಜನಕರು ಕರೆದರಲ್ಲಮನ ॥೩೪॥

ವಿಮಲಮುನಿಗಳ ವರಸಮಾಧಿಗೆ ।
ಸಮಯವಿಲ್ಲದ ದೇವ ಬಾರೈ ।
ದ್ಯುಮಣಿಶಿಖಿಶಶಿಕೋಟಿತೇಜೋಮೂರ್ತಿಮಯ ಬಾರೈ ॥
ಕಮಲಸಂಭವ ವಿಷ್ಣು ಮೊದಲಾ ।
ದಮರರರಿವಿಗೆ ನಿಲುಕದಿಹ ನಿರು ।
ಪಮನೆ ಬಾರೆನುತವರು ಬಣ್ಣಿಸಿ ಕರೆದರಲ್ಲಮನ ॥೩೫॥

ಹರುಷದಿಂದಲಿ ಜನನಿಜನಕರು ।
ಕರೆಯುತಿರಲಾ ಬಾಲಭಾವದ ।
ಪರಿಯನಾಗಳೆ ಬಿಸುಟು ಸಾಕಿನ್ನೆನುತ ನಡೆತಂದು ॥
ವರಗುರು ಶ್ರೀಮೂರ್ತಿಯಾಗಿಯೆ ।
ಪರಮತತ್ವನಿರೂಪಣೆಯ ವಿ ।
ಸ್ತರಿಸಲುದ್ಯೋಗಿಸಿದನಲ್ಲಮ ತನ್ನ ಲೀಲೆಯಲಿ ॥೩೬॥

ಕೇಳಿರೇ ನಿಮ್ಮಯ ಸಮಾಧಿಯ ।
ಕೇಳಿಗೋಸುಗವಾನು ರೂಹಿಸಿ ।
ಬಾಲಭಾವಚ್ಛವಿಯ ತೋರಿದೆನಿನ್ನು ಸಾಕೆನಗೆ ॥
ಲೀಲೆಯಿಂದಲಿಯೆನ್ನ ನಿಜದ ನಿ ।
ರಾಳನಿಶ್ಚಲನಿತ್ಯಸುಖಸ ।
ಮ್ಮೇಳದಲಿ ನಾನಾಡುತಿಹೆನೆನುತಿರ್ದನಲ್ಲಮನು ॥೩೭॥

ಆವ ತೆರದಿಂದಾದಡೆಯು ಮ ।
ತ್ಸೇವೆಗೊಲಿದೀ ಪರಿಯಲಾ ಪರ ।
ದೈವವೇ ಪ್ರತ್ಯಕ್ಷವಾಗಿಯೆ ತೋರಿಯಗಲಿದಡೆ ॥
ನಾವು ನಮ್ಮಯ ಸದುಗತಿಯ ಸಂ ।
ಭಾವಿಸುವೆವೆಂದೆನುತಲಲ್ಲಮ।
ದೇವಗೊಲಿದಾ ಜನನಿಜನಕರು ನುಡಿದರಭಿಮತವ ॥೩೮॥

ಬಗೆಯ ನಿರಹಂಕಾರಸುಜ್ಞಾ ।
ನಿಗಳ ಮೇಳವನೊಲ್ಲದಾ ಪ್ರಭು ।
ವಗಲಿ ತಾನಿರಬಲ್ಲನೇ ಬೇಕಾದಡೀ ಹದನ ॥
ನಿಗಮದಲಿ ಶಾಸ್ತ್ರದಲಿಯನುಭಾ ।
ವಿಗಳ ನುಡಿಯಲಿ ಕೇಳುವುದು ನಾ ।
ನಗಲೆ ನಿಮ್ಮುವನೆಂದನಲ್ಲಮ ಜನನಿ ಜನಕರಿಗೆ ॥೩೯॥

ಬಳಿಕ ತತ್ವವಿವೇಕವೆಲ್ಲವ ।
ನಳವಡಿಸಿ ಕೊಟ್ಟೈಕ್ಯ ಭಾವ ।
ಸ್ಥಳವ ಕಾಣಿಸಿ ದೃಷ್ಟದಲಿ ಪರಿಪೂರ್ಣಮಯರೆನಿಸಿ ॥
ಇಳೆಯೊಳಾ ಸುಜ್ಞಾನಿದೇವಿಗೆ ।
ನಲಿದು ನಿರಹಂಕಾರದೇವಗೆ ।
ತಿಳಿಸಿ ನಿತ್ಯವನಿತ್ತನಲ್ಲಮಲಿಂಗ ಲೀಲೆಯಲಿ ॥೪೦॥

ಪಡೆವಡೀಪರಿ ಬೇಹ ಮಕ್ಕಳ ।
ಪಡೆದು ಪರಿಣಮಿಸುವುದು ತಪದಲಿ।
ನಡೆವುದೀಪರಿ ನಿಜಸಮಾಧಿಯ ನಿಲವ ನಿಲುಕುವುದು ॥
ಹಿಡಿವಡೀಪರಿ ವಾಯುಮನಗಳ ।
ಹಿಡಿದು ಸುಖದಲಿ ಸುಳಿವುದೆನುತಲಿ ।
ಪೊಡವಿ ನಿರಹಂಕಾರ ಸುಜ್ಞಾನಿಗಳ ಪೊಗಳಿದರು ॥೪೧॥

ಅದು ನಿಮಿತ್ತದಲಲ್ಲಮನ ಕರು ।
ಣದಲಿ ಪಡೆವುದು ಸಚ್ಚಿದಾನಂ ।
ದದ ನಿರಾಕುಳ ನಿತ್ಯಪದವನು ಗಿರಿಜೆ ಕೇಳೆಂದು ॥
ಮುದದಲೀಶ್ವರನೊರೆದನಂದಾ ।
ನದನು ಕೇಳಿದು ಬಲ್ಲೆನೆಂದಾ ।
ಹದನ ಮಾಯೆಗೆ ಹೇಳುತಿರ್ದಳು ವಿಮಳೆ ವಿಸ್ತರಿಸಿ ॥೪೨॥

ಎಳ್ಳಿನೊಳಗೆಂತೆಣ್ಣೆಯಿಹಪರಿ ।
ಯಲ್ಲಿ ಕಾಷ್ಟದೊಳನಲನಿಹ ಪರಿ ।
ಯಲ್ಲಿ ಹಾಲೊಳು ಬೆಣ್ಣೆಯೆಂತಿಹುದಂತೆ ಭಾವಿಸಲು ॥
ಬಲ್ಲಡೆಮ್ಮಯ ದೇವನಿರುತಿಹ ।
ನೆಲ್ಲರೆಡೆಗಳಲನುವನರಿದಡೆ ।
ಯಲ್ಲಮಪ್ರಭು ಗುರು ಗುಹೇಶ್ವರಲಿಂಗ ಲೀಲೆಯಲಿ ॥೪೩॥

**ಅಂತು ಗತಿ ೬ಕ್ಕಂ ಪದ ೨೮೭ಕ್ಕಂ ಮಂಗಳಮಹಾಶ್ರೀ ಶ್ರೀ**

## ಗತಿ – ೭
# ಮಾಯಾಕೋಲಾಹಲ

**ವಚನ**

ಕರೆಯದೆ ಬಂದುದ ಹೇಳದೆ ಹೋದುದನಾರು ಬಲ್ಲರು ?
ಅಂದಂದಿಗೆ ಬಂದ ಪ್ರಾಣಿಗಳಾರೂ ಅರಿಯರಲ್ಲ.
ಬಂದ ಬಂದವರೆಲ್ಲ ಮಿಂದುಂಡು ಹೋದರು.
ಗುಹೇಶ್ವರಲ್ಲಯ್ಯನುಣ್ಣದೆ ಹೋದುದನಾರೂ ಅರಿಯರಲ್ಲ ॥೧॥

ಭಾವಗೆಟ್ಟನು ಭವಗೆಟ್ಟನು ಒಡಹುಟ್ಟಿದರೈವರ ಕೈಬಿಟ್ಟನು
ಭಂಡನು ಲಜ್ಜೆ ಭಂಡನು ಕಂಡರೆ ನುಡಿಸದಿರಾ ಮಾಯಾದೇವಿ
ಅರಿವೆಯನುಟ್ಟನು ನೆರೆ ಮರುಳಾದನು,
ಹುಟ್ಟ ಮುರಿದನು ಮಡಕೆಯನೊಡೆದನು
ಆದಿಪುರಾತನು ಅಚಲ ಲಿಂಗೈಕ್ಯನು
ಗುಹೇಶ್ವರಲ್ಲಯ್ಯಂಗೆ ಮೂಗಿಲ್ಲ ಮಗಳೇ ॥೨॥

ಬ್ರಹ್ಮವಿಷ್ಣುಗಳ ಮಾಯೆ ತೊತ್ತಳದುಳಿವಂದು,
ದೇವದಾನವರ ಮಾಯೆ ಆಗಿದಗಿದು ತಿಂಬಂದು,
ರುದ್ರಗಣ ಪ್ರಮಥಗಣರೆಂಬರ ಮಾಯೆ ಮರುಳ್ಮಾಡಿ ಕಾಡುವಂದು,
ನೊಸಲಕಣ್ಣು ಪಂಚಮುಖ ದಶಭುಜದವರಿಗೆ ಮಾಯೆ ಅರ್ಧಾಂಗಿಯಾದಂದು,
ಅಷ್ಟಾಶೀತಿಸಹಸ್ರ ಋಷಿಯರುಗಳ ಮಾಯೆ ತಪೋಮದದಲಿ ಕೆಡಹುವಂದು,
ನಾನು ಮಾಯಾಕೋಳಾಹಳನಾಗಿರ್ದೆ ಕಾಣಾ ಗುಹೇಶ್ವರಾ ॥೩॥

**ಸೂಚನೆ**

ವಿಮಳೆ ವಿಸ್ತರಿಸಿದಡೆ ಕಾರ್ಯ ।
ಕ್ರಮವನಾಲಿಸಿ ಮಾಯೆ ತಾನ ।
ಲ್ಲಮನನರಿದಿಹೆನೆನಲು ಹೋದನು ನಿಜವ ತೋರಿಸದೆ ॥

ಮಾಯೆಯನು ಮನ್ನಿಸದೆ ನೂಕಿ ನಿ ।
ರಾಯಸದಲಾನಂದಮೂರ್ತಿ ।
ಶ್ರೀಯನಾಳುವ ಲಿಂಗಸಂಗಿಗಳೆಲ್ಲ ಕೇಳುವುದು ॥
ಮಾಯೆ ಮೋಹಿಸಿ ಮುಟ್ಟಬಂದ ।
ವಿಡಾಯವನು ಮುರಿದಲ್ಲಮಪ್ರಭು ।
ರಾಯನಾಡುತಲಿರ್ದ ಪರಿಯನು ಲಿಂಗಲೀಲೆಯಲಿ ॥೧॥

ಗಿರಿಜೆಗೀಶ್ವರನೊರೆದಡದನಾ ।
ಧರಿಸಿ ಬಂದಾ ವಿಮಳೆ ನೆರೆ ವಿ ।
ಸ್ತರಿಸಿ ಹೇಳಲು ಕೇಳಿಯಲ್ಲಮನಾದೊಡಿನ್ನೆಮಗೆ ॥
ದೊರಕಿ ನಮ್ಮಿಷ್ಟಾರ್ಥವನು ಸ ।
ತ್ಕರಿಸಿ ಸಲಿಸಲು ಸುಲಭದಲಿ ಗೋ ।
ಚರವೆನಿಸಿ ಕಾಣಿಸುವನೇ ಹೆಳೆಂದಳಾ ಮಾಯೆ ॥೨॥

ಹರನ ಭಕ್ತಿಯ ಮಾಡಿದಡೆ ಗೋ ।
ಚರಿಸಿ ತೋರುವನಲ್ಲಮಪ್ರಭು ।
ಕರುಣದಿಂಧಲಿ ನೀನು ಬಳಿಕಾತನಲಿ ಬಗೆಬಂದ ॥
ವರಮನೋರಥಸಿದ್ಧಿಯನು ಪತಿ ।
ಕರಿಸಿ ಪಡೆವುದು ಕೇಳೆನುತಲಾ ।
ದರಿಸಿ ಮಾಯೆಗೆ ಹೇಳುತಿರ್ದಳು ವಿಮಳೆ ವಿನಯದಲಿ ॥೩॥

ಸುದತಿ ನೀನರುಹಿಸಿದ ಮುನ್ನವೆ ।
ಮುದದಲೀಶ್ವರಭಕ್ತಿಯಿಂದಲಿ ।
ಮಧುಕನಾಥನ ನಿಚ್ಚ ಪೂಜಿಸುವೆನು ವಿಧಾನದಲಿ ॥
ತುದಿಗೆ ನಾನಿನ್ನೇನ ಮಾಡುವೆ ।
ನದರಲಾದೊಡೆ ಕಾಣೆನೇನುವ ।
ನಿದಕೆ ನಾ ಬೇಸತ್ತೆನೌ ಕೇಳೆಂದಳಾ ಮಾಯೆ ॥೪॥

ಶಿವ ಶಿವಾ ನಿಃಪುಣ್ಯವಚನ ।
ಶ್ರವಣ ಸಂಭಾವಿಸಿತೆಯಾದಡೆ ।
ಶಿವನ ಭಕ್ತಿ ನಿರರ್ಥವೆಂದಾ ಮೂಢೆ ತಿಳಿವಂತೆ ॥
ವಿವರಿಸುವೆನಾ ಶಿವಸದಾಚಾ ।
ರವನು ನಾ ಬಲ್ಲನಿತನೆನುತಲಿ ।
ಯುವತಿ ಮಾಯೆಗೆ ಹೇಳಲುದ್ಯೋಗಿಸಿದಳಾ ವಿಮಳೆ ॥೫॥

ಆಗಮಂಗಳನೆಲ್ಲವನು ಚೆ ।
ನ್ನಾಗಿ ಶೋಧಿಸಿ ತಿಳಿದು ಸಲೆ ಶೈ ।
ವಾಗಮವೆ ಮಿಗಿಲೆಂದು ಭಾವಿಸಿ ಭಕ್ತಿರತನಾದ ॥
ಶ್ರೀಗುರುವಿನುಪದೇಶವಿಲ್ಲದೆ ।
ಹೋಗಿ ದೇವಾರ್ಚನೆಯ ಮಾಡಿದ ।
ಡೇಗುವುದು ಬರು ಮಾಟ ನಿಷ್ಫಲವೆಂದಳಾ ವಿಮಳೆ ॥೬॥

ಕೊಬ್ಬಿ ಕೋಮಲವಾದ ನಿಗುರಿದ ।
ನಿಬ್ಬರದ ನಿಡುಗಣ್ಣುಗಳ ಕಾ ।
ಗಬ್ಬನರಿಯದೆ ಕಬ್ಬಿನಿಚ್ಚೆಗೆ ಮೆಲುವ ಮರುಳಂತೆ ॥
ಮಬ್ಬು ದೋರುವ ಮದದ ಡಂಬಿನ ।
ಹಬ್ಬುಗೆಯಲಿಹ ಗುರುನಿರೂಪದ ।
ಲುಬ್ಬಿ ಮಾಡುವ ಮಾಟ ನಿಷ್ಫಲವೆಂದಳಾ ವಿಮಳೆ ॥೭॥

ಕಣ್ಣುಗಾಣದ ಕುರುಡನೊಳ್ಳಿಹ ।
ಕನ್ನಡಿಯ ಹಿಡಿದಂತೆ ಸಲೆ ಸಂ ।
ಪನ್ನ ಸದ್ಗುರುದೀಕ್ಷೆ ಕೈಸಾರಿದೊಡೆ ನೋಡುತಲಿ ॥
ಚೆನ್ನ ಚಿತ್ತದ ಕಣ್ಣ ತೆರೆಯದೆ ।
ಯನ್ಯವಿಧಿಯಲಿ ಭಜಿಸಿ ಭಾವಿಸಿ ।
ಬನ್ನಬಟ್ಟರೆ ತುದಿಗೆ ನಿಷ್ಫಲವೆಂದಳಾ ವಿಮಳೆ ॥೮॥

ಮೂಗರಾದವರೇನ ನೋಡಿದ ।
ಡೇಗುವರು ದಿಟವಾ ಪ್ರಕಾರದ ।
ಲಾಗಮಾಚಾರಿಯನ ಮಂತ್ರಗ್ರಹಣನೆಲಸಿದಡೆ ॥
ಹೋಗಿ ದೇವಾರ್ಚನೆಯ ಮಾಡಿದ ।
ಡಾಗುದೋರಿಸಲರಿಯದಿಚ್ಛಾ ।
ಭೋಗದವರಿಗೆ ತುದಿಗೆ ನಿಷ್ಫಲವೆಂದಳಾ ವಿಮಳೆ ॥೯॥

ತಿಳಿಯೆ ಶೋಧಿಸಿ ಹರಗಿ ಹಸನಾ ।
ದಿಳೆಯೊಳೊಳ್ಳಿಹ ಬೆದೆಯಲೊಯ್ಯನೆ ।
ಹುಳುಕು ಹುರಿಕರಿಯಾದ ಬೀಜವ ಬಿತ್ತುವವರಂತೆ ॥
ಲಲಿತ ದೇವಾರ್ಚನೆಯ ಕಾಲಂ ।
ಗಳಲಿ ಮೀಸಲುಗೆಟ್ಟ ಸಾಧನ ।
ಗಳಲಿ ಪೂಜೆಯ ಮಾಡೆ ನಿಷ್ಫಲವೆಂದಳಾ ವಿಮಳೆ ॥೧೦॥

ಕಿವಿಗೆ ಕಂಪನು ಮೈಗೆ ರೂಪನು ।
ಸವಿಯನಕ್ಷಿಗೆ ನಾಸಿಕಕೆ ಶ ।
ಬ್ದವನು ಸಲಿಸುವ ಮರುಳತನದಲಿ ದೇವತಾಮುಖದ ॥
ವಿವರಗಳನೇನುವನು ತಿಳಿಯದೆ ।
ತವಕ ಮಿಗೆಯನ್ಯೋನ್ಯವಸ್ತು ।
ಪ್ರವರದಲಿ ಪೂಜಿಸಲು ನಿಷ್ಫಲವೆಂದಳಾ ವಿಮಳೆ ॥೧೧॥

ಊನವಿಲ್ಲದೆ ತೀವಿ ಚೆಲುವಿನಿ ।
ತಾನುವಿರುತಿರೆ ಜೀವವೆಂಬ ನಿ ।
ಧಾನವಿಲ್ಲದಡೊಪ್ಪುವುದೆ ಕೇಳಾ ಪ್ರಕಾರದಲಿ ॥
ಏನು ಮಾಡಿದಡೇನು ಮನದವ ।
ಧಾನಭಕ್ತಿಯಲಿರದೆ ವಿಷಯ ।
ಸ್ಥಾನಗಳನಪ್ಪಿದೊಡೆ ನಿಷ್ಫಲವೆಂದಳಾ ವಿಮಳೆ ॥೧೨॥

ತರುಣಿ ನಿನಗುಪದೇಶವಿಲ್ಲವೊ ।
ನಿರುತ ಮಂತ್ರವಿಹೀನವೋ ಮೇಣ್ ।
ಪರಮತಂತ್ರಕ್ರಿಯೆಕಳಾಪಗಳೂನವೋ ಬರಿದೆ ॥
ಹರನ ಭಕ್ತಿ ನಿರರ್ಥವೆಂದು ।
ಚ್ಚರಿಸಲಹುದೇ ಮಾಯೆ ನಿನ್ನಯ ।
ಮರುಳುತನಗಳ ಮರೆದು ಕಳೆ ಸಾಕೆಂದಳಾ ವಿಮಳೆ ॥೧೩॥

ಎನಲದೆಲ್ಲವೆ ಕೇಳಿ ತನ್ನಯ ।
ಮನಕೆ ಸೊಗಸದೆ ಬಳಿಕ ನಾನಿ ।
ನ್ನಿನಿತು ಕುಶಲದ ಗೊಡವೆಗಾರನು ಬಲ್ಲ ಪರಿಯಿಂದೆ ॥
ನೆನೆದು ನನ್ನಿಚ್ಛೆಯಲಿ ದೇವಾ ।
ರ್ಚನಯ ಮಾಡಿದೆನಿನ್ನು ಸಾಕೆಂ ।
ದೆನುತ ಬೇಸರಿಕೆಯಲಿ ನುಡಿದಳು ವಿಮಳೆಗಾ ಮಾಯೆ ॥೧೪॥

ಆದಡಿವಳಂತಸ್ಥವೇ ವಿಧಿ ।
ಯಾದುದೋ ನಾನಿವಳನೇಪರಿ ।
ಬೋಧಿಸುವೆನೋ ಶಿವಶಿವಾ ಎಂದೆನುತ ತನ್ನೊಳಗೆ ॥
ಆದರಿಸುತಿವಳೊಳಗಿದೊಂದು ವಿ ।
ನೋದಗೋಷ್ಠಿಯ ಮಾಡಿ ಮೆಲ್ಲನೆ ।
ಭೇದದಿಂದಲಿ ಕೇಳಿ ನೋಡುವೆನೆಂದಳಾ ವಿಮಳೆ ॥೧೫॥

ವನಿತೆ ನಾನಿನ್ನೊಂದು ಕೇಳುವೆ ।
ನೆನಗೆ ಮುಚ್ಚದೆ ಹೇಳು ಹುಸಿದಡೆ ।
ನಿನಗೆ ಪಾರ್ವತಿಯಾಣೆ ನಿನ್ನಯ ಕೋಮಲಾಂಗದಲಿ ॥
ಮನಸಿಜನ ಕೈಮಸಕ ಮಿಗೆ ವೇ ।
ದನಿಸಿ ನೋಯಿಸುತಿರ್ದುವೆಂದೆಂ ।
ಬನಿತು ಕುರುಹಿರಲೇನು ಕಾರಣವೆಂದಳಾ ವಿಮಳೆ ॥೧೬॥

ಆಣೆಗಂಜುವೆನವ್ವ ಕಾಮನ ।
ಬಾಣದಲಿ ಭಯಬಟ್ಟು ಬಳಿಕಾ ।
ಪ್ರಾಣಪರಿಯಂತರ ದಶಾವಸ್ಥೆಯಲಿ ನೆರೆನೊಂದು ॥
ಮಾಣದುತ್ತ ಮವಾದ್ಯವಿದ್ಯಾ ।
ಜಾಣನಲ್ಲಮನೆಂಬ ಚೆಲುವನ ।
ಕಾಣುತವೆ ಕಂಗೆಟ್ಟು ಕರಗಿದೆನೆಂದಳಾ ಮಾಯೆ ॥೧೭॥

ಅಲ್ಲಮನು ತಾನೆಂಬ ಹೆಸರವ ।
ನಲ್ಲಮಪ್ರಭುವಾಗಲಾಪನು ।
ಭುಲ್ಲವಣೆಯಲಿ ನಿನ್ನ ಜವ್ವನಗೊಬ್ಬಿನಲಿ ಮರೆದು ॥
ಪಲ್ಲವಿಸಿ ನೀ ಕಾಮಿಸಿರ್ದಡೆ ।
ಖಿಲ್ಲತನದಲಿ ವಿಕೃತವೇಷದ ।
ಲಲ್ಲಮನೆ ತಾ ಬಂದನೈಸಲೆ ಎಂದಳಾ ವಿಮಳೆ ॥೧೮॥

ಎಂದಡಾನೇನರಿಯೆನಕಟಾ ।
ಮಂದಮತಿಯೇ ಅಲ್ಲಮಪ್ರಭು ।
ವೆಂದೆನಿಸಿಕೊಂಬವನು ತಾ ಪ್ರತ್ಯಕ್ಷಪರಬೊಮ್ಮ ॥
ಎಂದು ಹೇಳುವರೆಲ್ಲರಿವನೇ ।
ಸಂದ ಮದ್ದಳೆಯಲ್ಲಮನು ಬಿಡು ।
ಹೊಂದದೌ ನೀ ಹೇಳುವುದು ಹುಸಿಯೆಂದಳಾ ಮಾಯೆ ॥೧೯॥

ಅಕಟ ಮರುಳೇ ಅಲ್ಲಮಪ್ರಭು ।
ಸಕಲರಿಗೆ 'ಸಾಕಾರವಾಗಿಹ ।
ಸುಕರನಿರ್ಮಳಮತಿಗೆ ನಿರ್ಗುಣರೂಪನಾಗಿಹನು ॥
ಪ್ರಕಟಿಸುವ ನೀನಿನ್ನು ವಿಷಯದ ।
ವಿಕಳತನವನು ಬಿಟ್ಟು ಸಲೆ ಸಾ ।
ತ್ವಿಕದ ಬುದ್ಧಿಯಲೀಕ್ಷಿಸೆಂದಳು ಮಾಯೆಗಾ ವಿಮಳೆ ॥೨೦॥

ಆದಡದನಾನರಿಯೆನೌ ಬೇ ।
ಕಾದೊಡಾ ಮದ್ದಳಿಗನನು ದಿಟ ।
ಭೇದಿಸಲು ನೀ ಬಲ್ಲೆಯಾದಡೆ ತೋರಿಸುವೆನವನ ॥
ವಾದವೇತಕೆ ನಿನ್ನ ಮನಸಿಗೆ ।
ವೇದಿಸುವ ದಿಟವಲ್ಲಮನೆಯವ ।
ನಾದನಾದಡೆ ಬಳಿಕ ನೋಡುವೆನೆಂದಳಾ ಮಾಯೆ ॥೨೧॥

ಎನುತ ವಿಮಳೆಯ ಕೂಡಿಕೊಳುತಾ ।
ವನಿತೆ ನಿತ್ಯಸ್ಥಿತಿಯ ದೇವಾ ।
ರ್ಚನೆಗೆ ದೇವಾಲಯಕೆ ಹೋದಳು ಸಕಲ ವಿಭವದಲಿ ॥
ಮನವೊಲಿದು ಮಧುಕೇಶ್ವರನ ವಂ ।
ದನೆಯನೆಲ್ಲವ ಮಾಡಿ ಮಾಯಾಂ ।
ಗನೆ ವಿರಾಜಿಸಿ ಬಂದು ನಿಂದಳು ನೃತ್ಯರಂಗದಲಿ ॥೨೨॥

ಹೂಡಿ ಹಣ್ಣಿದ ಜಗದ ಜಂತ್ರವ ।
ನಾಡಿಸುವ ಮಾಯಾಂಗನೆಯ ತಾ ।
ನಾಡಿಸುವೆನೆಂಬುದನು ಪ್ರತ್ಯಕ್ಷದಲಿ ತೋರ್ಪಂತೆ ॥
ಆಡಿಸುವ ಮದ್ದಳೆಯ ಜೋಕೆಯ ।
ಜೋಡಿಸುವನಲ್ಲಮನು ಪಾತ್ರವ ।
ನಾಡುವವಳಾ ಮಾಯೆ ಲೋಕವ ಮರುಳು ಮಾಡುತಲಿ ॥೨೩॥

ನೋಟವತ್ತಲು ಮನದ ಬೆಸುಗೆಯ ।
ಬೇಟವಿತ್ತಲು ಕಾಯಕರಣಗ ।
ಳಾಟವತ್ತಲುವಂತರಂಗದ ಬಯಕೆಗಳ ಬಗೆಯ ॥
ಕೂಟವಿತ್ತಲು ಕವಲುಗೊಂಡುದು ।
ನಾಟಿ ಲಿಂಗದೊಳಲ್ಲಮನೊಳದು ।
ನೋಟಕರಿಗರಿದಾಯ್ತು ಭಾವಿಸೆ ಬೆಡಗು ಮಾಯೆಯಲಿ ॥೨೪॥

ಲಲಿತ ನಿರ್ಮಲ ಚಂದ್ರಕಾಂತದ ।
ಶಿಲೆಯ ಹತ್ತಿರೆ ಲತೆಯ ದಾವಾ ।
ನಳನು ಕೊಳಲಾ ಜ್ವಾಲೆಯಾ ಶಿಲೆಯೊಳಗೆ ತೋರ್ಪಂತೆ ॥
ತಿಳಿಯಲರಿಯದ ಜನಕೆ ಮಾಯೆಯ ।
ತಳಿತ ಕಾಮಜ್ವಾಲೆಯಲ್ಲಮ ।
ನೊಳಗೆ ಪ್ರತಿಬಿಂಬಿಸಿದುದಾತನೆ ಕಾಮಿಯೆಂಬಂತೆ ॥೨೫॥

ಶೂಲಿಯೊಳು ತಾ ಹೂಣಿಸಿದ ಹೀ ।
ಹಾಳಿಯನು ಮರೆಗೊಳಿಸಿ ಕಾಮನ ।
ದಾಳಿಯಲಿ ತಾ ಸಿಕ್ಕಿದುದ ನೆರೆ ನೆನೆವ ವೇದೆಯಲಿ ॥
ತಾಳಮೇಳದ ಗತಿಯ ಗಮಕದ ।
ಕೀಲಣೆಯ ಕಾಲಾಸ ವಿಘಟಿಸಿ ।
ಚಾಳಿಯಲಿ ತಬ್ಬಿಬ್ಬುವೋಗುತಲಿರ್ದಳಾ ಮಾಯೆ ॥೨೬॥

ಈತನೇ ದಿಟದಲ್ಲಮನೊ ಮೇ ।
ಣೀತ ಮದ್ದಳೆಯಲ್ಲಮನೊ ನಾ ।
ನೀ ತರುಣಿಗೀತನನು ತೋರಿಸಿ ತಿಳಿಯಬೇಕೆನುತ ॥
ಪ್ರೀತಿಯಿಂದಲಿ ತನ್ನ ಮನದೊಂ ।
ದಾತುರತೆಯನು ಸೈರಿಸುತ ಬಳಿ ।
ಕೋತು ಮಿಗೆ ತನ್ನೊಳಗೆ ತಾನಿಂತೆಂದಾಳಾ ಮಾಯೆ ॥೨೭॥

ಸಂದಣಿಸುತಿಟ್ಟಣಿಸಿ ನೆರೆದಿಹ ।
ಮಂದಿಯಲಿ ನಾನಿವನನನುಚಿತ ।
ದಿಂದಲಿವಳಿಗೆ ನುಡಿದು ತೋರುವುದೆಗ್ಗತನವೆನುತ ॥
ಅಂದು ವಿಮಳೆಗೆ ಜಾತಿಜಾಣಿಕೆ ।
ಯಿಂದಲಭಿನವ ಪಾಡು ನೋಟಗ ।
ಳಿಂದ ಬಳಿಕಲ್ಲಮನ ತೋರಿಸುತಿರ್ದಳಾ ಮಾಯೆ ॥೨೮॥

ಆಕೆ ಕಡೆಗಣ್ಣಿನಲಿ ತೋರಿದ ।
ಡೀಕೆ ನಡುಗಣ್ಣಿನಲಿ ನೋಡುತ ।
ಲಾ ಕಳಾವಿದನಾಗಿ ಕಾಣಿಸುವಾತನಿಂಗಿತವ ॥
ಲೋಕದೊಳಗಿಂತಪ್ಪ ಮಾನವ ।
ರಾಕೃತಿಯ ನಾ ಕಾಣೆನೆನುತಾ ।
ಳೋಕಿಸಿದಳನಿಮಿಷತೆಯಿಂದಾ ವಿಮಳೆಯಲ್ಲಮನ ॥೨೯॥

ಊಹಿಸುವಡಾ ದೇವ ಮಾನವ ।
ಚೋಹವನು ತೊಟ್ಟಿರ್ದನೋ ಮೇಣ್ ।
ಮೋಹದಿಂದಾನೀಕ್ಷಿಸಲು ದಿಟವೆನ್ನ ಕಣ್ಣಿಂಗೆ ।
ರೂಹಿನಂದದೊಳಿರ್ದನೋ ಸಂ ।
ದೇಹವಾಗಿದೆ ತಿಳಿವಡೀತನ ।
ಗಾಹು ನನಗರಿದಾದುದೆಂದರು ವಿಮಳೆ ಮನದೊಳಗೆ ॥೩೦॥

ದಿಟಕೆ ಭಾವಿಸಲಾರ ಭಾವನೆ ।
ಘಟಿಸಿದಂತಿರೆ ತನ್ನ ರೂಪನು ।
ನಟಿಸಿ ತೋರುವನಾದ ಕಾರಣ ವಿಮಳೆಯರಿವಿಂಗೆ ॥
ಅಟಮಟದಲಹುಲ್ಲವೆಂಬೀ ।
ನಟನೆಯನೆ ನೆಲೆಗೊಳಿಸುತಿರ್ದನು ।
ಪಟುತರಸ್ವಾತಂತ್ರ್ಯಮಹಿಮೆಯ ಮೂರ್ತಿಯಲ್ಲಮನು ॥೩೧॥

ತುಡುಕಿ ವಂದಿಸಿನೋಡಲಳುಪಿನ ।
ತೊಡಕ ತೊಲಗಿಸಿ ಬಳಿಕಲೀತನ ।
ಬೆಡಗು ಬಿನ್ನಾಣವನು ಕಾಣಲಿಬಹುದು ನಾವೆನುತ ॥
ನುಡಿದು ತೋರದೆ ಕಣ್ಣ ಕಾಂತಿಯ ।
ಕಡೆಗಳಲಿ ಕಾಣಿಸುತಲಿರ್ದಳು ।
ಮಡದಿ ಮಾಯೆಗೆಯಲ್ಲಮನ ವರಮೂರ್ತಿಯನು ವಿಮಳೆ ॥೩೨॥

ಕಂಗಳಲಿ ಮಾತುಗಳು ತಿಳಿವಡೆ ।
ಕಂಗಳಲಿ ಮಾಟಗಳು ಬಗೆವಡೆ ।
ಕಂಗಳಲಿ ಸಮ್ಮೋಹಗಳು ಕಂಗಳಲಿ ನೇಹಗಳು ॥
ಕಂಗಳಲಿ ಸರ್ವಪ್ರಪಂಚುಗ ।
ಳಂಗನೆಯರಿಗೆ ಸಹಜವೆಂದೆನೆ ।
ಕಂಗಳಿಂದಾ ವಿಮಳೆ ಸೂಚಿಸಲರಿದಳಾ ಮಾಯೆ ॥೩೩॥

ಬಳಿಕಲೊಯ್ಯನೆ ಬರಿಯ ಬೇಟದ ।
ಬಳಕೆ ಬಳಲಿತು ತನ್ನ ಪೈಜೆಯ ।
ನೆಳಲು ನೆಲಸಿತು ಹೇವ ಹೆಚ್ಚಿತು ಕಾಂಕ್ಷೆ ಕವಲಾಯ್ತು ॥
ತಿಳಿವು ತಿರುಗಿತು ಲಾಸ್ಯಲೀಲೆಯ ।
ಚಳತೆ ಚಂಡಿಸಿ ಹಿಂಗಿ ಹೋಯಿತು ।
ಹೊಳೆದುದಲ್ಲಮನಳಬಳವನರಿವಾಸೆ ಮಾಯೆಯಲಿ ॥೩೪॥

ಮುರಿದುದಾ ಮನವದರ ಸಂಗಡ ।
ಮುರಿದುದಾ ನಸುನೋಟವಾಗಳೆ ।
ಮುರಿದುದಾ ಮುಖ ಮುತ್ತಿನೋಲೆಯ ಬೆಳಗ ಪಸರಿಸುತ ॥
ತಿರುಗಿ ತೀವಿತು ಲಾಸ್ಯ ಮಧುಕೇ ।
ಶ್ವರನ ಸಮ್ಮುಖದಿಂದಲೊಯ್ಯನೆ ।
ಸರಿಸಗೊಂಡಿತು ಮತ್ತೆ ಮಾಯೆಯ ಮಾಟವಲ್ಲಮನ ॥೩೫॥

ನೋಟವೆಸೆದುದು ಮುನ್ನ ಮುಟ್ಟಿದ ।
ಬೇಟವಲ್ಲದೆ ಬೇರೆ ಬುದ್ಧಿಯ ।
ಕೂಟದಿಂದ ಲತಾಂಗ ಲಂಬಿಸಿತಾನತಸ್ಥಿತಿಯ ॥
ನಾಟಿ ನಲಿದುದು ಚಿತ್ತವೀ ನಟ ।
ನಾಟಕನ ಸಿಕ್ಕಿಸುವ ಬಗೆಯಲಿ ।
ಮಾಟ ಮಕರಿಸಿ ಕಾಣಲಾದುದು ಮತ್ತೆ ಮಾಯೆಯಲಿ ॥೩೬॥

ಈಕೆಯಂಗವನರಿದು ನಾವಿ ।
ನ್ನೇಕೆ ಸದಮಲ ಸುಸ್ವರೂಪವ ।
ಕಾಕರಿಗೆ ಕಾಣಿಸುವುದನುಚಿತವೆನುತ ತನ್ನೊಳಗೆ ॥
ಸಾಕೆನುತ ನಟ್ಟುವಿಗತನವನು ।
ನೂಕುತಲಿ ಮದ್ದಳೆಯ ತಾನೊಡೆ ।
ಹಾಕಿ ನಗುತಲಿ ಹೋದನಲ್ಲಮನಖಿಳ ಜಗವರಿಯೆ ॥೩೭॥

ಹೊಸತಿದೇನಿದ್ದಿದ್ದು ಸುಮ್ಮನೆ ।
ಗಸಣೆಯಿಲ್ಲದಿದೇಕೆಯಲ್ಲಮ ।
ಬಿಸುಟು ಹೋದನು ಮದ್ದಳೆಯನೆಂದೆನುತಲಲ್ಲಿರ್ದ ॥
ಶಶಿಮುಖಿಯರಾ ಮೇಳದವರಾ ।
ಮುಸುರಿ ನೋಡುವ ನೋಟಕರು ಕಾ ।
ಣಿಸದ ಕಾರ್ಯಕೆ ಬೆರಗುಗೊಂಡರು ಕೂಡೆ ತಮತಮಗೆ ॥೩೮॥

ಆಯಿತೇ ಕಡೆಯಕಟ ಹೂಣಿಕೆ ।
ಹೋಯಿತೇ ಹುಸಿಯಾಗಿ ಕಾಮನ ।
ಬಾಯ ಬಾರಿಗೆ ಬಿದ್ದೆನೇ ನಗುವವರಿಗೆಡೆಯಾಗಿ ॥
ಹಾಯೆನುತ ಹಮ್ಮೈಸಿ ಹಲುಬುತ ।
ಬಾಯ ಬಿಡುತಲಿ ಮರುಗುತಿರ್ದಳು ।
ಮಾಯೆ ಮಾಣದೆಯಲ್ಲಮಪ್ರಭುರಾಯನಗಲಿದರೆ ॥೩೯॥

ಬಾಲೆ ಹಂಬಲಿಸಿದೊಡೆ ಫಲವೇ ।
ನೇಳು ತಡೆದಿರದಲ್ಲಮನನೀ ।
ರೇಳು ಲೋಕದಲರಸಿ ನೋಡುವೆವೆನುತಲಾ ವಿಮಳೆ ॥
ಹೇಳಿದೊಡೆಯಹುದೆನುತ ಚಿತ್ತವ ।
ತಾಳಿ ತರಹರಗೊಂಡು ಬಳಿಕಲಿ ।
ಕಾಲುನಡೆಯಲಿ ಮಾಯೆ ನಡೆದಳು ಕೆಳದಿಯರು ಸಹಿತ ॥೪೦॥

ನೆರೆದು ನೆರೆಬೆರಗಾಗಿ ನೋಡಿರೆ ।
ಧರಣಿಪತಿಯ ಕುಮಾರಿ ಕಾಮಾ ।
ತುರದಲಲ್ಲಮನೆಂಬ ಮದ್ದಳಿಗಂಗೆ ಮನಸೋತು ॥
ಮರುಳುಗೊಂಡಕಟವನ ಬೆನ್ನಲಿ ।
ಹರಿದು ಹೋಗುತಲಿಹಳೆಯೆನುತಲಿ ।
ಪುರದೊಳಗೆ ನೋಟಕರು ಸಂದಣಿಸಿದರು ಬೀದಿಯಲಿ ॥೪೧॥

ಹೋಗುತಿರ್ದಳು ಹೊಲಬ ಕೇಳುತ ।
ಬೇಗ ಬೇಗದಲಲ್ಲಮನನಾ ।
ವಾಗ ಕಾಬೆವೊ ಎಂಬ ಮನದಾತುರದ ತವಕದಲಿ ॥
ಆಗಲಡವಿಯ ಬಿದ್ದು ನೆರೆ ಭೂ ।
ಭಾಗದಲಿ ವನಚರಿಯರೆಂಬವೊ ।
ಲಾಗಿ ಮಾಯಾದೇವಿ ವಿಮಳೆ ಸಮಸ್ತ ಸಖಿನಿವಹ ॥೪೨॥

ಕಲ್ಲು ಕೊರಡುಗಳುರಿವ ಹುಡಿ ಜಡಿ ।
ಮುಳ್ಳುಗಿಡು ಮಡು ತೆವರು ಮೆಳೆಗಳು ।
ಹಳ್ಳ ಹಾವಸಿ ಹಾವು ಹುಲಿ ಕಾಡಾನೆ ಕೋಣಗಳು ॥
ಕೊಳ್ಳ ಕುತ್ತುರು ಹೆಮ್ಮರಂಗಳು ।
ಪಲ್ಲವಿಸಿ ಜೀರೆಂಬ ಕಾನನ ।
ದಲ್ಲಿಯರಸುತ ಬರುತಲಿರ್ದಳು ಮಾಯೆಯಲ್ಲಮನ ॥೪೩॥

ಬಿಸಿಲು ಸುಂಟುರುಗಾಳಿ ದೆಸೆಗಳ ।
ಮುಸುಗುತಿಹ ಕೆಂದೂಳಿ ಕಾಳ್ಗಿ ।
ಚ್ಚೆಸೆವ ನಟ್ಟಡವಿಯಲಿ ನಡೆದೈತರುತ ಕಾಲೊಡೆದು ॥
ಬಸವಳಿದು ಬೀಳುತ್ತಲೇಳುತ ।
ಹಸಿವು ತೃಷೆ ಬಳಲಿಕೆಗಳಲಿ ಧೂ ।
ಪಿಸುತ ಬಂದಳು ಮಾಯೆ ತಾನಲ್ಲ ಮನನರಸುತಲಿ ॥೪೪॥

ಸೂಡುತಲಿ ಬಿಡು ಜಡೆಗಳನು ಕೈ ।
ಗೂಡುತಲಿ ಕಡವಸ ವಿಭೂತಿಯ ।
ಗೂಡ ಸಂವರಿಸುತ್ತ ಲಾಕುಳ ಯೋಗವಟ್ಟಿಗೆಯ ॥
ಜೋಡಿಸುತ ಜಪತಪಸಮಾಧಿಯ ।
ಮಾಡುವವರಾ ಮಾಯೆ ಬರಲೆ ।
ದ್ದೋಡಿದರು ಹುಲಿಗಂಡ ಹುಲ್ಲೆಗಳಂತೆ ದೆಸೆದೆಸೆಗೆ ॥೪೫॥

ಕರುಣಿಗಳ ಬಲ್ಲಹನು ಬೋಳೆಯ ।
ರರಸ ಭಜಕರ ಬಂಧುವೆನಿಸುವ ।
ಪರಮಪಾವನನಲ್ಲಮಪ್ರಭು ತಾನೆ ತನ್ನೊಳಗೆ ॥
ವರ ತಪೋಧನರಂಜಿಕೆಯನಾ ।
ತರುಣಿಯರ ಬಳಲಿಕೆಯ ನಾನೇ ।
ಪರಿಹರಿಸಬೇಕೆನುತಲಾಕ್ಷಣ ಸುಳುಹುದೋರಿದನು ॥೪೬॥

ನಿಲಿಸಿ ಭಯ ಬೇಡೆಂದು ತಾಪಸ ।
ಕುಲಕೆಯಭಯವ ಕೊಟ್ಟು ಕರುಣದ ।
ಬಳಕೆಯಲಿ ತಾನವರಿಗೊಬ್ಬ ತಪಸ್ವಿಯಂದದಲಿ ॥
ನಲಿದು ಹರಿತಹ ಮಾಯೆಯನು ಮೂ ।
ದಲಿಸಿ ಮುರಿದೋಡಿಸುವೆನೆನುತಲಿ ।
ಸುಳುಹುದೋರಿದನಾಕೆಗಲ್ಲಮ ಮುನ್ನಿನಂದದಲಿ ॥೪೭॥

ತೃಷೆಗಳರತುವು ಕಾಣುತಲಿ ಕಡು ।
ಪಸುಗಳಡಗಿದವಡವಿಯಲಿ ಕಂ ।
ಪಿಸುತ ಮುಗ್ಗುತ ಕೆಡೆವುತಲಿ ಮಿಗೆ ಬಂದ ಬಳಲಿಕೆಯು ॥
ಮಸಕಮಾದುದು ವಿಶ್ರಮಿಸಿದರು ।
ಶಶಿಮುಖಿಯರೆಯ್ತಂದು ಕಾಣುತ ।
ಮುಸುರಿ ಮುತ್ತಿದರಲ್ಲಮನ ಶ್ರೀಪಾದಪಂಕಜವ ॥೪೮॥

ಲೇಸು ಮಾಡಿದೆಯಯ್ಯ ಮಾಯೆಯ ।
ನೀಸುದಿನ ಮನವೊಲಿಸಿ ಕಡೆಯಲಿ ।
ಘಾಸಿ ಮಾಡುವುದುಚಿತವೇ ನಿನಗೆನುತ ಕೆಳದಿಯರು ॥
ಆ ಸದಾನಂದೈಕಮೂರ್ತಿ ವಿ ।
ಲಾಸಿಯಲ್ಲಮಲಿಂಗನಿದಿರಿಲಿ ।
ಸೂಸಿದರು ತಮ್ಮೊಡತಿಯಾಸರು ಬೇಸರೆಲ್ಲವನು ॥೪೯॥

ಆರು ಮೊದಲಲಿ ಬಯಸ ಹೇಳಿದ ।
ರಾರು ಕಾಣುತ ಕರೆಸ ಹೇಳಿದ ।
ರಾರು ತನ್ನನು ಬಳಿಕುದಾಸಿನ ಮಾಡಹೇಳಿದರು ॥
ನಾರಿಯರಿಗಿದು ಸಹಜ ಸಂಚಲ ।
ಕಾರಣಿಕತನ ತನ್ನ ತಾನೇ ।
ದೂರಿಸಿದೊಡಾನೇನ ಮಾಡುವೆನೆಂದನಲ್ಲಮನು ॥೫೦॥

ಹೇಳಬಾರದು ನೀನು ಮಾಡಿದ ।
ಬೇಳುವೆಯ ಬೇಗೆಯನು ಲೋಗರ ।
ನಾಳವಾಡಿಯೆ ನುಡಿದೆಯಲ್ಲದೆ ನೀನು ಕುಹಕದಲಿ ॥
ಕೀಳಿಲಲಿ ಬಾಯ್ವಿಟ್ಟು ಮಾಯೆಯ ।
ವೇಳೆಯನು ಕಾಯ್ದಿರ್ದು ಕಡೆಯಲಿ ।
ಕೀಳುಮಾಡಿಯೆ ನುಡಿದೆಯೆಂದರು ಸತಿಯರಲ್ಲಮನ ॥೫೧॥

ತಾನೆ ಕಂಗೆಟ್ಟಿರಲು ಕರುಣಿಸಿ ।
ನಾನು ಸುಳಿದರೆ ನನ್ನನಾರೆಂ ।
ದೇನುವನು ಭಾವಿಸದೆ ಬೆಬ್ಬನೆ ಬೆರೆತಹಂಕರಿಸಿ ॥
ತಾನೆ ತನ್ನ ವಿಕಾರದಿಂದಿರ ।
ಲೇನು ಮಾಡುವೆ ಬಳಿಕ ಸಾಕೆಂ ।
ದಾನು ಬಂದೆನು ಬಿಟ್ಟು ತಪ್ಪೇನೆಂದಲ್ಲಮನು ॥೫೨॥

ಎಂದ ಮಾತನು ಕೇಳಿ ಕಡುಖಿತಿ ।
ಯಿಂದಲಹುದ್ಯೆ ಧೂರ್ತ ನೀ ಗತಿ ।
ಯೆಂದು ನಂಬಿದೊಡೊಳ್ಳಿತಾಯಿತು ಬಳಿಕ ಮತ್ತೇನು ॥
ಸಂದ ಸಟೆ ಕುತ್ಸಿಕ ಕುಮಂತ್ರದ ।
ಬಂದಿಕಾರನು ಚಾಟು ಚಪಳಿಗ ।
ನೆಂದು ನಾ ಮುಂದರಿಯೆನೆಂದಳು ಮಾಯೆಯಲ್ಲಮನ ॥೫೩॥

ಕುಟಿಲ ಕುತ್ಸಿಕ ಧೂರ್ತ ದುರ್ಜನ ।
ವಟಮಟಿಗತನ ಕಪಟ ಕಳವಳ ।
ಸಟೆ ವಿಕಾರಗಳಲ್ಲಮನವೋ ತಿಳಿಯೆ ಮಾಯೆಯವೋ ॥
ದಿಟಕೆ ಬಲ್ಲ ವಿರಿಂಚಿ ಹರಿ ಸುರ ।
ಕಟಕ ವರಮುನಿ ಸಿದ್ಧ ಸಾಧಕ ।
ಪಟುಗಳೆಲ್ಲರ ಕೇಳಿ ನೋಡೆನುತಿರ್ದನಲ್ಲಮನು ॥೫೪॥

ಒಳ್ಳಿಯವರೈ ನೀನು ತೋರಿದ ।
ರೆಲ್ಲರೆನ್ನಾಧೀನ ಪಕ್ಷದ ।
ಬಲ್ಲಿದರು ಕೇಳವರುಗಳ ಬಲ್ಲವಿಕೆಗಳ ಕೇಡ ॥
ಎಲ್ಲವನು ಹೇಳುವೆನು ನಿನ್ನಯ ।
ಸೊಲ್ಲ ಸೋಲಿಸಿ ಸಿಕ್ಕಿಸುವೆನೆನು ।
ತಲ್ಲಿ ಮಾಯೆ ನಿಜ ಪ್ರತಾಪವನಾಡತೊಡಗಿದಳು ॥೫೫॥

ಹರಿಯಯೆದೆಯ ಮೆಟ್ಟಿದೆನು ಶಂ ।
ಕರನ ಅರ್ಧಾಂಗದೊಳು ನೆಟ್ಟನೆ ।
ಹರಿಸುಟಿಗೆಯಾಡಿದೆನು ಬ್ರಹ್ಮನ ಬಾಯ ಮುದ್ರಿಸಿದೆ ॥
ಸುರನರೋರಗರೆಂಬ ಮರೆವೆಯ ।
ಮರುಳ ತಂಡವನೆನ್ನ ತೊತ್ತಿರ ।
ಶರಣುಹೊಗಿಸಿದೆನೇನ ಕೇಳುವೆಯೆಂದಳಾ ಮಾಯೆ ॥೫೬॥

ಜಿನುಗು ಮತಿಗಳ ಸಿದ್ದಸಾಧಕ ।
ಮುನಿಗಳೆಂಬವದಿರುಗಳನು ನಾ ।
ಮುನಿದು ಕಚ್ಚುಟ ಕಂತೆ ಬತ್ತಲೆ ಬೋಳು ಜೆಡೆ ಲೋಚು ॥
ಅನಶನವ್ರತ ನಾರು ಬೇರೆಂ ।
ಬನಿತರಲಿ ದಂಡಿಸುವೆನಾ ಕಾ ।
ನನದ ಮರುಳರನೇನ ಕೇಳುವೆಯೆಂದಳಾ ಮಾಯೆ ॥೫೭॥

ಆದಿಯಂತವನರಿಯದೆಲ್ಲರ ।
ವೇದಿಸಿದೆನೆಂದಕಟ ಗರ್ವಿಸಿ ।
ಹೋದೆ ನಿನ್ನ ನಿಜಸ್ವಭಾವದ ಮತ್ತತನದಿಂದೆ ॥
ಆದಡವರಂತಿರಲಿ ಮಿಕ್ಕಿನ ।
ವೇದ ಶಾಸ್ತ್ರ ಪುರಾಣವಾಗಮ ।
ವಾದಿಯಾದವರಿಂದೆ ಕೇಳೆನುತಿರ್ದನಲ್ಲಮನು ॥೫೮॥

ಬಿಟ್ಟು ಕಳೆ ಬರುಮಾತ ಶಬ್ದಗ ।
ಳೊಟ್ಟಿಲೆಂಬುವು ನನ್ನ ಪಾದದ ।
ಘಟ್ಟಣೆಯ ಧ್ವನಿಯವರಲಾನಿನ್ನೇನ ಕೇಳುವೆನು ॥
ಮುಟ್ಟಿ ತಿಳಿವೊಡೆ ಕೇಳು ನಿನ್ನಯ ।
ಕಟ್ಟಳೆಯತನವೈಸೆ ಎನುತಾ ।
ದಿಟ್ಟ ಮಾಯಾದೇವಿ ನುಡಿದಳು ಮತ್ತೆಯಲ್ಲಮನ ॥೫೯॥

ಎಲ್ಲರನು ನೀ ಜರಿದು ಝಾಡಿಸಿ ।
ಹೊಳ್ಳುಗಳೆದಡೆ ನಿನ್ನಲೆನ್ನಲಿ ।
ಹೊಲ್ಲವೊಳ್ಳಿತನರಿವ ಮಾತಂತಿರಲಿ ಕೇಳೊಂದ ॥
ಬಲ್ಲೆಯಾದೊಡೆ ನೀನು ನಿನ್ನಯ ।
ಖಿಲ್ಲತನವನು ಬಿಟ್ಟು ನಿರ್ಮಳ ।
ದಲ್ಲಿ ಮಾತಾಡೆಂದು ನುಡಿದನು ಮಾಯೆಗಲ್ಲಮನು ॥೬೦॥

ಹರಿಹರಬ್ರಹ್ಮಾದಿಗಳನೆ ।
ಲ್ಲರನು ನಿನ್ನಾಧೀನವೃತ್ತಿಯ ।
ಲಿರಿಸಿ ಮಿಗೆ ರೋಡಾಡಿ ಕಾಡುವೆನೆಂದು ನೀ ನುಡಿದೆ ॥
ಮರುಳೆ ನಿನ್ನನದಾರು ನಾನಾ ।
ಪರಿಯಲಾಡಿಸುವವರು ನೀನಿದ ।
ಪರಿಕಿಸದೆ ಗರ್ವದಲಿ ನುಡಿವರೆ ಮಾಯೆ ಕೇಳೆಂದ ॥೬೧॥

ಆರನಾರಾಡಿಸುವರೆಂಬುದ ।
ನಾರು ಬಲ್ಲರು ಸಾಕು ಬರಿಯ ವಿ ।
ಚಾರವಂತಿರಲಿನ್ನದೇಪರಿಮಾತನಾಡಿದರೆ ॥
ಸಾರಲರಿವವೆ ನಮಗೆ ನಮ್ಮ ಮ ।
ನೋರಥಂಗಳು ನಿನ್ನ ಧೂರ್ತ ವಿ ।
ಕಾರವೆಲ್ಲವ ಬಿಟ್ಟು ಕೃಪೆಮಾಡೆಂದಳಾ ಮಾಯೆ ॥೬೨॥

ಮಾಡಿದನಿತರ ಕರ್ಮಫಲ ಕೈ ।
ಗೂಡಿತುಳ್ಳುದು ನಿನಗದೇನನು ।
ಬೇಡುತಿಹೆ ಬೇಸರದೆ ಬರಿದೆಗೆ ಬಂದು ಬೆಂಬಿಡದೆ ॥
ಕಾಡಿಬೇಡಿನ್ನೇಳು ಸಖಿಯರ ।
ಕೂಡಿಕೊಳುತಲಿ ಮರಳಿ ನಿನ್ನಯ ।
ಬೀಡ ಸಾರುವದೊಳ್ಳಿತೆಂದನು ಮಾಯೆಗಲ್ಲಮನು ॥೬೩॥

ಭಾಷೆ ಸಲ್ಲದೆ ಹೋಯಿತೆನ್ನಯ ।
ವಾಸಿ ವರ್ಧಿಸಿ ಹೊತ್ತುತಿದೆ ಕೈ ।
ಲಾಸದವರಿದ ಕೇಳಿ ನಗುವಂತಾಯಿತೇ ಎನಗೆ ॥
ಈಸು ಧಾವತಿಯಿಂದೆ ನಾ ಕಡು ।
ಘಾಸಿಯದೆನು ಬೆಂದ ಹುಣ್ಣನು ।
ಕೀಸುವರೆ ಕಂಬಿಯಲಿ ಕೇಳಕಟೆಂದಳಾ ಮಾಯೆ ॥೬೪॥

ಮಿಕ್ಕು ಮಿಗೆ ಸಾಸುವೆಯ ರಾಶಿಯ ।
ನೊಕ್ಕಿದೆತ್ತಿಗೆ ಮೇದು ಮೆಲುಕಿರಿ ।
ವಕ್ಕುರುಂಟೇ ಮರುಳೆ ನೀನಾ ವಿಧಿಯ ಪರಿಗಳಲಿ ॥
ಹೊಕ್ಕು ಹೋರಟೆಗೊಂಡು ಕಾಮದ ।
ಲುಕ್ಕಿ ಬಳಿಕಿನ್ನೆನ್ನ ಕೃಪೆಯನು ।
ಲೆಕ್ಕಿಸಲು ಕೈಸಾರಬಲ್ಲುದೆ ಮಾಯೆ ಕೇಳೆಂದ ॥೬೫॥

ಆವ ಪರಿಯಿಂದಾದಡೇನೈ ।
ದೇವಪೂಜೆಯ ಮಾಡಿದಡೆ ಸಂ ।
ಭಾವಿಸಲು ಬೇಡವೆ ಮದೀಯ ಮನೋರಥಾದಿಗಳು ॥
ಭಾವಿಸಲು ಬರುತಿದೆ ನಿರರ್ಥಕೆ ।
ಧಾವತಿಯೆ ಕಡೆತನಕ ದಿಟಕೆಯ ।
ದಾವ ಕೊರತೆಯ ನಾನು ಮಾಡಿದೆನೆಂದಳಾ ಮಾಯೆ ॥೬೬॥

ತರಳೆ ತನ್ನಯ ಹೊನ್ನು ಸಲ್ಲದೆ ।
ತಿರುಗಿ ಬಂದೊಡಯಕ್ಕಸಾಲೆಯ ।
ದುರುಳತನದಲಿ ಬಯ್ಯಬಹುದೇ ನೀನು ಮತಿಗೆಟ್ಟು ॥
ಹರನನರ್ಚಿಸುವಂಗಭೇದಾಂ ।
ತರವನರಿಯದೆ ಸಟೆಯ ಭಕ್ತಿಯ ।
ಭರದಲೇತಕೆ ಫಲವ ಬಯಸುವೆ ಮಾಯೆ ಕೇಳೆಂದ ॥೬೭॥

ನಾನು ನಿನ್ನಲಿ ಸುಖವ ಸುರಿದು ಸು ।
ಮಾನದಲಿ ನಿನ್ನಿಂದ ಶಿವತ ।
ತ್ವಾನುಭಾವದ ನಿಜವನರಿದೆನ್ನಯ ಪ್ರತಿಜ್ಞೆಯನು ॥
ಊನವಿಲ್ಲದೆ ಸಲಿಸಿ ಶಿವನಾ ।
ಸ್ಥಾನದಲಿ ನಾ ಮೆರೆವೆನೆಂಬಭಿ ।
ಮಾನದಲಿ ನಂಬಿರ್ದೆನೆಂದಳು ಮಾಯೆಯಲ್ಲಮನ ॥೬೮॥

ಹಡೆವ ಸೂಳೆಗೆ ಸೊಗಸು ಹುಟ್ಟದೆ ।
ಗುಡಿಲ ಸುಡುವಂದದಲಿ ನಿಜ ಜಂ ।
ಜಡದಲಿಮ್ಮನವಾಗಿ ಭಕ್ತಿಯ ಮಾಡಿ ಸಂಫಲವ ॥
ಪಡೆಯಲಿಲ್ಲದೆ ಬಂದು ನೀ ಬರು ।
ನುಡಿಗಳಿಂದಲಿ ನಮ್ಮ ಮೆಲ್ಲನೆ ।
ತೊಡಕಿಕೊಂಡಡೆ ಸಿಕ್ಕನಲ್ಲಮ ಮಾಯೆ ಕೇಳೆಂದ ॥೬೯॥

ನಮ್ಮನೊಲ್ಲದುದಲ್ಲದೀ ಪರಿ ।
ಯೆಮ್ಮನೆಲ್ಲರ ಮುಂದೆ ಭಂಗಿಸಿ ।
ಹೆಮ್ಮೆಗೆಡಿಸುವ ಪರಿಯ ನೋಡಾ ಎನುತ ಮನ ಮರುಗಿ ॥
ಇಮ್ಮೆ ಬೆಂದವಳಿದ್ದಲಂತಿರೆ ।
ಹಮ್ಮವಿಸಿಯೊರಗುತಲಿ ವಿಮಳೆಯ ।
ನೆಮ್ಮಿದಳು ನಿಲಲಾರದಾಳಾಪಿಸುತಲಾ ಮಾಯೆ ॥೭೦॥

ಬೆರಗುಹೊಡೆದಿರೆ ನೆಯ್ದಿಲೆಗೆ ನೇ ।
ಸರನ ನೆಮ್ಮುಗೆಯಾದ ತೆರನಲಿ ।
ಮುರಿವಡೆದ ಮಾಯಾಂಗನೆಯ ಮುಖಭಂಗವನೆ ಕಂಡು ॥
ಮರುಗುತಿರ್ದರು ಕೂಡೆ ಕೆಳದಿಯ ।
ರುರುಬಿ ಸುಮ್ಮನೆ ಮಾರು ಮಾತಿಗೆ ।
ಹರಿವನೆಣಿಸುತ ವಿಮಳೆ ಬಳಿಕಿಂತೆಂದಳಲ್ಲಮನ ॥೭೧॥

ಶರಣಜನರಕ್ಷಾಮಣಿಯೆ ಕಿಂ ।
ಕರಚಕೋರಸುಧಾಕರನೆ ಭಾ ।
ಸುರದಯಾಂಭೋನಿಧಿಯೆ ನೀನೀ ಸ್ತ್ರೀಯ ತನುಮನವ ॥
ಒರೆದು ನೋಡಿದಡಲ್ಲಿ ಭಾವಿಸೆ ।
ಹುರುಳು ಬಳಿಕೇನುಂಟು ನಿನ್ನಯ ।
ಕರುಣವಾಕೆಯ ಹರಣವೆಂದಳು ವಿಮಳೆ ವಿನಯದಲಿ ॥೭೨॥

ಬಾಲೆ ನೀರಿಗೆ ಹೆಪ್ಪನೆರೆದರೆ ।
ಹಾಲಿನಂತಿರೆ ಹೆತ್ತು ಭುಂಜಿಸಿ ।
ಬಾಳಿದವರಾರುಂಟು ಭಾವಿಸಲಾ ಪ್ರಕಾರದಲಿ ॥
ಕಾಳು ಮತಿಗಳಿಗೆನಿತು ಬುದ್ಧಿಯ ।
ಹೇಳಿದರೆ ಫಲವೇನು ಸಾಕೀ ।
ಖೂಳೆಗಾನಿನ್ನೇನ ಮಾಡುವೆ ವಿಮಳೆ ಕೇಳೆಂದ ॥೭೩॥

ಕೀಳುಗಬ್ಬುನವೆಣ್ಣ ಕೋಪಿಸಿ ।
ಕಾಲಲೊದೆದಡೆ ಮೇಣು ಕರುಣಿಸಿ ।
ತೋಳಲಪ್ಪಿದಡೇನು ಪರುಷದ ಗಂಡನದರಂತೆ ॥
ಬಾಲೆಗೆಂತಾದಡೆಯು ನಿನ್ನ ಸ ।
ಮೇಳ ಘಟಿಸಿದ ಬಳಿಕ ಮಾಯೆಯ ।
ಪಾಲಿಸಲು ಬೇಕೆನುತ ನುಡಿದಳು ವಿಮಳೆಯಲ್ಲಮಗೆ ॥೭೪॥

ವನಿತೆ ನಿನ್ನಯ ಮಾತಹುದು ಕ ।
ಬ್ಬುನವದಾದಡೆ ಪರುಷ ಮುಟ್ಟಲು ।
ಕನಕವಹುದಲ್ಲದೆ ವೃಥಾ ಹಳೆಹಂಚು ಹೊನ್ನಹುದೆ ॥
ಮನಸು ಸಂಚಲವಾದ ಮಾಯಾಂ ।
ಗನೆಯದೇನನು ಮುಟ್ಟಿ ಮಾಡಿದ ।
ಡಿನಿತು ಸಂಫಲವಾಗಲರಿಯದು ವಿಮಳೆ ಕೇಳಂದ ॥೭೫॥

ದೇವ ತಪ್ಪಿದಡೇನು ನೀನು ಕೃ ।
ಪಾವಲೋಕನದಲಿ ನಿರೀಕ್ಷಿಸಿ ।
ದೇವಿಯರ ಹೂಣಿಕೆಯ ಸಲಿಸಿದರೇನು ಕುಂದಹುದೆ ॥
ದೇವತನಕೂಣೆಯವೆ ಬರಿದೆ ವೃ ।
ಥಾ ವಿಳಾಸದ ಮಾತ ಬೀರದೆ ।
ಕಾವುದೈ ಕರುಣದಲಿ ಮಾಯೆಯನೆಂದಳಾ ವಿಮಳೆ ॥೭೬॥

ಒಂದು ಬೀಜವ ಬಿತ್ತಿ ಮೇಣ್ಮ ।
ತ್ತೊಂದು ಫಲವನು ಬಯಸಿ ಬಾತೊಡೆ ।
ಬಂದುದುಂಟೇ ತನಗೆ ದಿಟವೀ ಮಾಯೆ ಮರುಳಾಗಿ ॥
ಮುಂದುಗಾಣದೆ ಮದದ ತಾಮಸ ।
ದಿಂದೆ ಸಂಚಲಭಕ್ತಿಭರದಲಿ ।
ಬಂದುದುಂಟೇ ಸಂಫಲಂಗಳು ವಿಮಳೆ ಕೇಳೆಂದ ॥೭೭॥

ಆದಡೆಲೆ ಘನಮಹಿಮೆ ನಿನ್ನಯ ।
ಪಾದಗಳನೆಂತಾದಡೆಯು ಸಂ ।
ಪಾದಿಸಿದ ಬಳಿಕಿನ್ನು ನಿನ್ನಯ ಕರುಣವಿದ್ದಂತೆ ॥
ಕಾದು ರಕ್ಷಿಸು ಮನಸು ಬಂದೋ ।
ಪಾದಿಯಲಿಯೆಂದೆನುತ ಮಧುರಾ ।
ಮೋದ ವಚನವ ಸುರಿವುತಿರ್ದಳು ವಿಮಳೆಯಲ್ಲಮಗೆ ॥೭೮॥

ವಿಮಳೆ ವಿಮಳೆಯೆನಿಪ್ಪ ಹೆಸರನು ।
ಕಮಳಸಂಭವ ನಿನಗೆ ಸಲಿಸಿದ ।
ನಮಳಮತಿಯವನಹುದು ಚಾಗುರೆ ಎನುತ ಪರಿಣಮಿಸಿ ॥
ಕ್ರಮದಲಿನ್ನಾದಡೆಯು ಮಿಗೆ ವಿ ।
ಶ್ರಮಿಸಬೇಕೆಂದೆನುತ ಬಳಿಕ ।
ಲ್ಲಮನು ಮಿಗೆ ವಿನಯದಲಿ ಮಾಯಾದೇವಿಗಿಂತೆಂದ ॥೭೯॥

ಕಾಮವೆತ್ತಲು ಪರಮತತ್ವದ ।
ಸೀಮೆಯೆತ್ತಲು ತಿಮಿರವೆತ್ತಲು ।
ತಾಮರಸಸಖನೆತ್ತಲರಿಸಿನವೆತ್ತ ಬಿಸಿಲೆತ್ತ ।
ಭ್ರಾಮಕದ ನುಡಿ ಸಾಕು ನೀನೆ ।
ತ್ತಾಮಹಾಘನವೆತ್ತ ಮರುಳೇ ।
ಕ್ಷೇಮದಲಿ ನೀ ಬಂದ ಬಟ್ಟೆಯಲಬಲೆ ಹೋಗೆಂದ ॥೮೦॥

ಕನಸು ಮನಸಿನೊಳಾಗಳೆನ್ನಯ ।
ತನುವಿನಲಿ ನೀ ಸುಳಿದು ಮಚ್ಚಿಸಿ ।
ಯಿನಿತು ಧಾವತಿಗೊಳಿಸಿ ನಿಷ್ಕರುಣದಲಿ ನೀನೆನ್ನ ॥
ಕನಲಿ ನುಡಿದೊಡೆ ನಾನು ಬಿಡುವೆನೆ ।
ತನಗೆ ತತ್ತಡೆ ಭಾವಿಸಲು ಸಾ ।
ವನಿತು ಬಂದಡೆ ಬರಲಿ ಬಿಡೆ ನಾನೆಂದಳಾ ಮಾಯೆ ॥೮೧॥

ಕನಸಿನಲಿ ಚೀಳೂರಿದಡೆ ವೇ ।
ದನಿಸಿತೆಂದಿರದದ್ದು ನರಳುವ ।
ಮನುಜರುಂಟೇ ಮರುಳೆ ನಿನ್ನ ಮನೋವಿಕಾರಗಳು ॥
ನಿನಗೆ ತೋರಿದಡೆಮ್ಮೊಳೇತಕೆ ।
ಮನಕತವ ನೀ ಮಾಡುತಿಹೆ ನಾ ।
ವಿನಿತು ಗಸಣೆಯ ಗೊಡವೆಗಾರೆವು ಮಾಯೆ ಕೇಳೆಂದ ॥೮೨॥

ವಾಸಿ ಹುಟ್ಟಿದ ಬಳಿಕ ನಾನಿ ।
ನ್ನೇಸುದಿನವಿದ್ದಾದಡೆನ್ನಯ ।
ಭಾಷೆಯನು ನಾನುತ್ತರಿಸಬೇಕಲ್ಲದುಳಿದಂತೆ ॥
ಆಸೆಯಿಲ್ಲದೆ ತಿರುಗಿದಡೆ ಹೆಂ ।
ಗೂಸುತನಕದು ಹಾನಿಯಾ ಕೈ ।
ಲಾಸಕಾನೆಂತೆಯ್ದುವೆನು ಕೇಳೆಂದಳಾ ಮಾಯೆ ॥೮೩॥

ಕಡಲನೀರುಗಳೆಲ್ಲವಮೃತದ ।
ಮಡುಗಳಾದಡೆಯಹವು ಸುರಗಿರಿ ।
ಕುಡಿವಿಡಿದು ಹಬ್ಬಿದಡೆ ಹಬ್ಬುವುದವನಿಮಂಡಲದ ॥
ಗಿಡುಗಳೆಲ್ಲವು ಕಲ್ಪತರುವಾ ।
ದಡೆಯಹವುಯೆತ್ತಾನುಕಾಲಕೆ ।
ಮಡದಿ ಮಾಯೆಗೆ ಪರಮ ತತ್ವಜ್ಞಾನಿವಿಲ್ಲೆಂದ ॥೮೪॥

ನುಡಿದು ನುಣ್ಣನೆ ನೀನು ಮೆಲ್ಲನೆ ।
ಸಡಿಲಿ ಹೋದರೆ ನಾನು ನಿನ್ನನು ।
ಬಿಡುವೆನೇ ಕೇಳೆನ್ನ ಪೈಜೆಯ ಸಲಿಸದನ್ನಬರ ॥
ಒಡಲು ನಿನಗಿಲ್ಲೆಂಬ ಬಿಂಕದ ।
ಬೆಡಗು ಬೇಡಿನ್ನೇನ ಮಾಡಿಯು ।
ತುಡುಕಿದಲ್ಲದ ಮಾಣೆನೆಂದಂಗೈಸಿದಳು ಮಾಯೆ ॥೮೫॥

ಬಯಲ ಬಂಧಿಸಲೆಂದು ಕೃತನಿ ।
ಶ್ಚಯವ ಮಾಡಲು ಸಿಕ್ಕಬಲ್ಲುದೆ ।
ನಿಯತವೆನ್ನನು ಹಿಡಿದುಕೊಂಬಡೆ ನೋಡು ನೀನೆನುತ ॥
ಪ್ರಿಯದಲಾಗಳೆ ತನ್ನ ನಿಜ ನಿ ।
ರ್ಣಯವ ನಿರ್ಮಿಸಿ ನಿಮಿಷದಲಿ ನಿ ।
ರ್ವಯಲಜಾಲವ ಬೀಸಿ ಹೋದನು ಮಾಯೆಗಲ್ಲಮನು ॥೮೬॥

ಜಾರಿದನು ಬಳಿಕಾತನೀಕೆಗೆ ।
ಹೇರಿದುದು ಕಡುದುಗುಡ ಸಖಿಯರು ।
ನೀರೆಯನು ಸಂತೈಸಿದರು ನಾನಾ ಪ್ರಕಾರದಲಿ ॥
ಗಾರುದೂರಿನ ಮಾಯೆಗೀಯೆಗೆ ।
ತೋರಿಸುವನೇ ತನ್ನ ನಿಜವನು ।
ಮೀರಿ ಮೀಸಲನಲ್ಲಮಪ್ರಭು ಗುರುಗುಹೇಶ್ವರನು ॥೮೭॥

**ಅಂತು ಗತಿ ೭ಕ್ಕಂ ಪದನು ೩೭೪ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೮
# ಧರೆಗಿಳಿದರಾ ಬಸವಾದಿ ಪ್ರಮಥರು

**ವಚನ**

ಪ್ರಥಮಕಾಲದಲ್ಲಿ ದೇವಗಣ ಮಹಾಗಣ ಸುರಗಣ
ಕಿನ್ನರಗಣ ಸಹಿತ ಸನ್ನಿಹಿತನು ನಮ್ಮ ಬಸವಣ್ಣನು
ಗಣಪ್ರಸಾದಿಯಾಗಿ ಮರ್ತ್ಯಲೋಕಕ್ಕೆ ಮಹವ ತಂದು
ಶಿವಗಣವ ಮಾಡಿದಾತನು ನಮ್ಮ ಬಸವಣ್ಣನು
ಸ್ವರೂಪಸಾರಾಯವನು ಪದಾರ್ಥವೆಂದಾತನು ನಮ್ಮ ಬಸವಣ್ಣನು
ಕಲಿದೇವರದೇವಾ ನಿಮ್ಮ ಶರಣ ಬಸವಣ್ಣನಿಂದಾನು ಬದುಕಿದೆನು ॥೧॥

ಮಾರಾರಿಯ ಬೆಸನದಿಂದ
ಧಾರುಣಿಗೆ ಬಸವನವತರಿಸಿ
ಸಾರಾಯ ಸದ್ಭಕ್ತಿಯನು ತೋರಿದನು ಶಿವಶರಣರಿಗೆಲ್ಲ
ಭಕ್ತಿಯ ಪಥವ ಮುಕ್ತಿಯ ಭೇದವ
ಸತ್ಯಶರಣರಿಗೆ ಉಪದೇಶವ ಮಾಡಿ ನಿತ್ಯಲಿಂಗಾರ್ಚನೆಯೊಳಗೆನ್ನನಿರಿಸಿ
ರಕ್ಷಿಸಿದಾತ ಚೆನ್ನಬಸವಣ್ಣ ಕಾಣಾ ಕಲಿದೇವರದೇವಾ ॥೨॥

**ಸೂಚನೆ**

ಗಿರಿಸುತೆಯ ಸಾತ್ವಿಕದ ಕಳೆಯನು ।
ವರ ವೃಷೇಂದ್ರ ಪ್ರಥಮಗಣವನು ।
ಧರೆಗೆ ಕಳುಹಿದನೀಶನೊಲಿದಲ್ಲಮನನರಿಯಲಿಕೆ ॥

ಲಿಂಗಭಕ್ತರು ತಿಳಿವುದೀ ಪ್ರಭು ।
ಲಿಂಗಲೀಲೆಯೊಳಿನ್ನು ಮಾಯೆಯ ।
ಭಂಗಿಸಿದ ನಿರ್ಲೇಪನಿಧಿಯಲ್ಲಮನ ಕೃಪೆಯಿಂದೆ ॥
ಹಿಂಗದವನೀತಳದ ಸಕಲ ಜ ।
ನಂಗಳನು ಪಾವನವ ಮಾಡಲ ।
ನಂಗರಿಪು ನಿಜಗಣವ ಕಳುಹಿದ ಕಥನಕಾರಣವ ॥೧॥

ಮಂದಮತಿಯಲಿ ನಿಜವ ಸಾಧಿಸ ।
ಲೆಂದು ಕಳವಳಗೊಂಡು ಹೂಣಿಸಿ ।
ಬಂದಡಲ್ಲಮಲಿಂಗ ಸಿಕ್ಕದೆ ಹೋದ ಭೇದದಲಿ ॥
ಮುಂದುಗಾಣದೆ ಮೂರ್ಛೆವೋಗುತ ।
ವೃಂದಮಧ್ಯದೊಳಾ ವಿಳಾಸಿನಿ ।
ವೃಂದಸಹಿತ ಮಹಾ ಪ್ರಲಾಪಿಸುತಿರ್ದಳಾ ಮಾಯೆ ॥೨॥

ಮಗಳು ಮದ್ದಳೆಯವನ ಬೆನ್ನಲಿ ।
ಜಗುಳಿಹೋದುದ ಕೇಳಿ ಹರಿತಂ ।
ದಗಣಿತವ್ಯಾಮೋಹದಲಿ ಮಾಯಾಂಗನೆಯ ಕಂಡು ॥
ನಗೆಗೆಡೆಯ ಮಾಡಿದೆಯೆಲಾ ದೇ ।
ಸಿಗನ ಸಂಗವ ಮಾಡಿ ಕೆಡಿಸಿದೆ ।
ಮಗಳೆ ಎನುತಲಿ ಮರುಗಿದನು ಮಮಕಾರ ಭೂಪಾಲ ॥೩॥

ಬೇಡಬೇಡೆಂದಾದಿಕಾಲದೊ ।
ಳಾಡಿ ತೋರೆನೆ ಮಗಳೆ ತುದಿಯಲಿ ।
ಕೇಡು ಬಹುದಿದರೆಂದಲೆಂದಾನೇಸನೊದರಿದಡೆ ॥
ಕೇಡುಗೊಳಿಸಿದೆ ಕಡೆಯಲಡವಿಯ ।
ಕೂಡಿದೌ ನೀನೆನುತ ಖತಿಯಲಿ ।
ಮೂಡಿ ಮುಳುಗುತ ಮಿಡುಕುತಿರ್ದಳು ಮೋಹಿನೀದೇವಿ ॥೪॥

ಉಮೆಯ ನೇಮವ ಕೊಂಡು ತಾನ ।
ಲ್ಲಮನ ಸಾಧಿಸಲೆಂದು ಬಂದಳು ।
ನಿಮಗೆ ಹೇಳುವೆ ನಾನು ಚಿಂತಿಸಲಿಲ್ಲ ನೀವಿದಕೆ ॥
ದ್ಯುಮಣಿಯಲ್ಲಮ ಸಿಕ್ಕದಾದನು ।
ತಮದ ಮಾಯೆಗೆಯದರ ಚಿಂತಾ ।
ಭ್ರಮೆಯಲಡವಿಗೆ ಬಂದಳೆಂದಳು ವಿಮಳೆಯರಸಂಗೆ ॥೫॥

ಹುಸಿಯನಾಡಳು ವಿಮಲೆ ನಾನಾ ।
ಶಶಿಧರಗೆ ಪೈಜೆಯನು ಮಿಗೆ ಪಸ ।
ರಿಸಿದೆ ಕೈಲಾಸದಲಿ ಬಂದೆನು ತನ್ನಿಮಿತ್ತದಲಿ ॥
ಅಸಮನಲ್ಲಮ ಸಿಕ್ಕದೀಪರಿ ।
ನುಸುಳಿ ಹೋದನು ನೀವು ನಮ್ಮಯ ।
ದೆಸೆಗೆ ಚಿಂತಿಸಬೇಡೆನುತಲಿಂತೆಂದಳಾ ಮಾಯೆ ॥೬॥

ಕಾರಣವ ಕೈಕೊಂಡು ನಿಮ್ಮ ಕು ।
ಮಾರಿಯಾದೆನು ಬಂದು ನಮ್ಮಯ ।
ಕಾರಿಯವು ಕೈಗೂಡದಾಯಿತ್ತೆನುತ ಪೆತ್ತರಿಗೆ ॥
ಹಾರಬೇಡಿನ್ನೆಮ್ಮನೆನುತಲಿ ।
ಭೋರನೆದ್ದಾ ಮಾಯೆ ವಿಮಳಾ ।
ನಾರಿ ಸಹಿತವೆ ಹೋಗುತಿರ್ದಳು ರಜತಪರ್ವತಕೆ ॥೭॥

ಆಳಲಿದರು ಮಗಳಗಲಿದರೆ ಮಿಗೆ ।
ಬಳಲಿದರು ಭಾರಂಕದಲಿ ಕಡು ।
ಕಳಲಿದರು ಕಂದಿದರು ಕಳವಳಿಸಿದರು ಮೋಹದಲಿ ॥
ತೊಳಲಿದರು ಕಾನನದೊಳಗೆ ಹಂ ।
ಬಲಿಸಿದರು ಹಮ್ಮೈಸಿದರು ಕೋ ।
ಮಳೆಯ ಕಾಣದೆ ಮೋಹಿನಿಯು ಮಮಕಾರ ಭೂಮಿಪನು ॥೮॥

ಕೇಳಿ ಬಂದನು ಬಳಿಕ ಭೂಮೀ ।
ಪಾಲಕನ ಗುರು ತಾನೆ ಮತ್ತಾ ।
ವೇಳೆಯಲಹಂಕಾರನಾ ಮರುಕವನು ಮಾಣಿಸುತೆ ॥
ಹೇಳೆನೇ ನಾನಂದು ಕಾರಣ ।
ಬಾಲಿಕೆಯ ಪರಿಗಳನು ಕಾಣುತ ।
ಕಾಲದಲಿ ನಿಮಗರಿಯಬಾರದೆ ಭೂಪ ಕೇಳೆಂದ ॥೯॥

ಏನು ಕಾರಣ ಬಂದಳೊ ಬಳಿ ।
ಕೇನು ಕಾರಣ ಹೋದಳೋ ನಾ ।
ವೇನ ಬಲ್ಲೆವು ಬರಿದೆ ಚಿಂತಿಸಬೇಡ ಸಾಕೇಳು ॥
ನೀನು ನಿಜಪುರಕೆನುತಲೊಡಗೊಂ ।
ಡಾ ನರೇಂದ್ರನ ಸತಿಸಹಿತ ದು ।
ಮ್ಮಾನವನು ಪರಿಹರಿಸಿ ತಂದನು ಬಳಿಕಹಂಕಾರ ॥೧೦॥

ಜನಪ ಕೇಳ್ಳೈ ತಥ್ಯವನು ಮೋ ।
ಹಿನಿಗೆ ಮಮಕಾರಗೆಯಹಂಕಾ ।
ರನ ಮಹಾ ಕೃಪೆಯುಳ್ಳಡಂತಾ ಮಾಯೆ ತಾನೆನಿಪ ॥
ತನುಜೆಯರು ಹುಟ್ಟುವುದಪೂರ್ವವೆ ।
ಎನುತಲಾಪ್ತರು ಮಂತ್ರಿಗಳು ತ ।
ಜ್ಞನಪತಿಯ ಸಂತೈಸಿ ಸುಖದಿಂದಿರ್ದರವನಿಯಲಿ ॥೧೧॥

ವಿಮಳೆಸಹಿತವೆ ಹೋಗಿ ತನಗ ।
ಲ್ಲಮನು ಸಿಕ್ಕದೆ ಹೋದ ಕಾರ್ಯ ।
ಕ್ರಮವನಾಗಳೆ ಮಾಯೆ ಹೇಳಿದಳತ್ತ ವಿಸ್ತರಿಸಿ ॥
ಉಮೆಯದೆಲ್ಲವ ಕೇಳಿ ಚಿಂತಾ ।
ಭ್ರಮೆಯಲಿರುತಿರಲರಿದು ಬಂದಾ ।
ರಮಣಿಯನು ಸಂತೈಸಿ ನುಡಿದನು ನಗುತ ಶಶಿಮೌಳಿ ॥೧೨॥

ಸಿಡಿಲುವಕ್ಕಿಯ ಪಕ್ಕವನು ಕಿ ।
ತ್ತಡಬಳದ ಬಾಣಸವ ಮಾಡುವ ।
ಕಡುಗಲಿಗಳಾರುಂಟು ಕಾಳೋರಗನ ನಿದ್ರೆಯನು ॥
ಕೆಡಿಸಿ ಬದುಕುವ ಕೀಲಣದ ಗಾ ।
ರುಡಿಗರಾರುಂಟೆನ್ನ ತತ್ವದ ।
ತೊಡಕು ದುರ್ಘಟ ಚಿಂತೆಯೇತಕೆ ಗಿರಿಜೆ ಕೇಳೆಂದ ॥೧೩॥

ಅಲ್ಲಮನ ಮುಖದಿಂದಲೀಕೆಯ ।
ನಲ್ಲವೆನಿಸಿದೆ ನೀನೆ ಬಳಿಕೇ ।
ನಲ್ಲದೆನ್ನ ಸಮಾನ ಮಾಯೆಯ ಜರಿದು ಜಾಡಿಸುವ ॥
ಬಲ್ಲಿದರದಾರುಂಟು ನಮ್ಮಯ ।
ಸೊಲ್ಲಿಗಾಯಿತು ಸೋಲವೆನುತಾ ।
ವಲ್ಲಭಗೆ ದುರ್ಲಭಗೆ ಸುಲಭಗೆ ನುಡಿದಳಾ ಗಿರಿಜೆ ॥೧೪॥

ನೀನೆ ನಿನ್ನಯ ಗರ್ವತನದ ।
ಜ್ಞಾನದಲಿ ಮಾಯೆಯನು ಕಳುಹಿದ ।
ಡಾ ನಿರೂಪಮ ಸಚ್ಚಿದಾನಂದೈಕರಸಮಯನು ॥
ತಾನು ಸಿಕ್ಕುವನೇ ವೃಥಾ ದು ।
ಮ್ಮಾನವೇಕೆಂದೆನುತಲೀಶ್ವರ ।
ಮಾನಿನಿಯ ಮೂದಲಿಸಿ ನುಡಿದನು ನಗುತ ವಿನಯದಲಿ ॥೧೫॥

ಎಲೆ ಸದಾಶಿವ ನಿನ್ನೊಳಾದಡೆ ।
ಚಲಕೆ ನಾನಂಜುವೆನು ನಿನ್ನಯ ।
ಬಲುಹಿಗಾನಿದಿರಲ್ಲ ನಿನ್ನಯ ಕರುಣವಿದ್ದಂತೆ ॥
ಸಲಹಿ ನಿನ್ನ ನಿಜಸ್ವರೂಪದ ।
ನಿಲವನರುಹಿಸಿಯೆನ್ನ ಸಲುಗೆಯ ।
ಸಲಿಸಬೇಕೆಂದಗಜೆ ನುಡಿದಳು ಮತ್ತೆ ಪಶುಪತಿಗೆ ॥೧೬॥

ಆ ನುಡಿಯ ಕೇಳುತ್ತ ಕರುಣಾಂ ।
ಭೋನಿಧಾನನು ಮೆಚ್ಚಿಯಾದಡೆ ।
ನೀನು ಮುನ್ನಲಿ ನಿನ್ನ ತಾಮಸಗುಣದ ಮಾಯೆಯನು ॥
ಏನು ಕಾರಣ ಕಳುಹಿ ಭಾಷೆಗೆ ।
ಹೀನವನು ನೀ ಹಡೆದೆ ನಾವಿದ ।
ಕೇನ ಮಾಡಲಿಬೇಕು ಬೆಸನನು ಗಿರಿಜೆ ಹೇಳೆಂದ ॥೧೭॥

ಮೂಗು ಹೋಗಿಹ ಮುಸುಡಿನವಗಿದಿ ।
ರಾಗಿ ಕನ್ನಡಿದೋರಿ ಲಜ್ಜೆಯ ।
ಬೇಗೆಯಲಿ ಬೇಯಿಸುವನಂತಿರೆ ಮೂದಲಿಸಲೇಕೆ ॥
ತಾಗಿ ತಲೆಯೊಡೆದವರು ಭಾವಿಸೆ ।
ಬಾಗದಿಹರೇನಂತುಕಾರಣ ।
ಹೋಗಲಿನ್ನಾ ಮಾತೆನುತಲಿಂತೆಂದಳಾ ಗಿರಿಜೆ ॥೧೮॥

ಆವ ಪರಿಯಿಂದರಿವೆನಾದಡೆ ।
ದೇವ ನಿನ್ನ ನಿಜಸ್ವರೂಪದ ।
ಭಾವವನು ಪ್ರಜ್ವಲಿಸಿ ತಿಳಿವಂತೆನಗೆ ಕೃಪೆಮಾಡಿ ॥
ಕಾವುದೆನೆ ಪಾರ್ವತಿಗೆ ದೇವರ ।
ದೇವನೀಕೆಯನಿನ್ನು ಕರುಣಿಸಿ ।
ಪಾವನವ ಮಾಡುವೆನು ನಾನೆನುತಭವನಿಂತೆಂದ ॥೧೯॥

ನಿನ್ನ ನಿರ್ಮಳ ಸಾತ್ವಿಕದ ಸಂ ।
ಪನ್ನ ಕಳೆಯನು ಕಳುಹಿ ಧರೆಯೊಳು ।
ಚೆನ್ನೆಯಾಗಿರೆ ಜನಿಸಿ ನೆರೆ ನಿಷ್ಕಾಮಭಕ್ತಿಯಲಿ ॥
ಮುನ್ನಲಿರುತಿರಲಲ್ಲಮಪ್ರಭು ।
ತನ್ನ ತಾನೇ ನಿಜವ ತೋರುವ ।
ನಿನ್ನು ಸಂಶಯವಿಲ್ಲ ದಿಟವಿದು ಗಿರಿಜೆ ಕೇಳೆಂದ ॥೨೦॥

ಎನೆ ಹಸಾದವ ಹಾಯ್ಕಿ ಬದುಕಿದೆ ।
ನೆನುತ ಬಂಜೆಗೆ ಬೇಹ ಬಯಕೆಯ ।
ತನುಜನಾದಂತಾಕೆಯಾ ನುಡಿಗೇಳಿ ಪರಿಣಮಿಸಿ ॥
ಮನದೊಳುತ್ಸಾಹಿಸುವ ತನ್ನಯ ।
ವಿನುತ ಸತ್ವಗುಣಸ್ವರೂಪವ ।
ನನುವಿನಲಿ ಸಂಜನಿಸ ಕಳುಹಿದಳುಮೆ ಧರಾತಳಕೆ ॥೨೧॥

ಬಳಿಕ ಸಂತೋಷದಲಿ ತನ್ನಯ ।
ಸಲುಗೆ ಬಿನ್ನಹವೆಂಬ ಬೀಜದ ।
ಬೆಳೆಗೆ ಹದವಳೆ ಹಣ್ಣಿ ಪಸರಿಸಿತೆನುತೆ ಹರುಷದಲಿ ॥
ನಲಿದು ನಗುತಲಿ ಪರಮಪಾವನ ।
ಸುಲಭ ಕರುಣಾಕಾರ ಶಿವ ನಿ ।
ನ್ನೊಲವಿನಿಂದಾನಿನ್ನು ಬದುಕಿದೆನೆಂದಳಾ ಗಿರಿಜೆ ॥೨೨॥

ಆ ನುಡಿಯ ಮಾರ್ಕೊಂಡು ಶಿವ ಶಿವ ।
ದೇನನಾಡಿದೆ ತಾಯೆ ನೀವೆಂ ।
ದೂ ನಿಧಾನಿಸಲಚಲ ಸುಖಿಗಳು ಶಿವನ ಕರುಣದಲಿ ॥
ಹಾನಿಯಾವುದು ಮುನ್ನಲೀಗಲಿ ।
ದೇನು ಬಂದುದು ತಾವು ಹೂಳ್ದ ನಿ ।
ಧಾನ ತಮಗಹುದೇನು ವಿಸ್ಮಯವೆಂದ ವೃಷಭೇಂದ್ರ ॥೨೩॥

ಇಲ್ಲದುದು ಬಹುದಿಲ್ಲ ದಿಟ ಮು ।
ನ್ನಳ್ಳದೇ ಬಹುದಂತು ಮುಂದಣಿ ।
ಗುಳ್ಳ ಸಿದ್ದಿಗೆಯವರ ವಾಸನೆ ನೀಡಿ ನಿಲುಕುವುದು ॥
ಬಲ್ಲೆ ನೀನದ ನಿನ್ನ ಭಾವನೆ ।
ಯೊಳ್ಳಿತೈ ಎಂದೆನುತ ಗೌರೀ ।
ವಲ್ಲಭನು ವರವೃಷಭರಾಜನ ಹೊಗಳುತಿಂತೆಂದ ॥೨೪॥

ಹೂಳಿದರ್ಥವನರಸಿ ಹಡೆವನ ।
ಕಾಲು ಕೊಂಡುಯ್ವಂತೆ ನಿನ್ನಯ ।
ನಾಲಗೆಯೆ ತಾ ನುಡಿವುತಿದೆ ಶುಭಸೂಚನಾರ್ಥವನು ॥
ಹೇಳಲೇನಿನ್ನಲ್ಲಮನ ಸ ।
ಮ್ಮೇಳದಲಿ ಸುಖಿಯಾಗು ಹೋಗಿ ।
ನ್ನೇಳೆನುತಲಾ ವೃಷಭರಾಜಂಗಭವನಿಂತೆಂದ ॥೨೫॥

ನೀನು ಧರೆಯಲಿ ಮೆರೆಯದಿರ್ದಡೆ ।
ತಾನು ಸಿಕ್ಕುವನಲ್ಲವಲ್ಲಮ ।
ನೀನು ಭಕ್ತಿಯ ಮಾಡಿ ಕಾಣಿಸೆ ನಿನ್ನ ಕತದಿಂದೆ ॥
ಸ್ವಾನುಭಾವ ಸುಖಸ್ವರೂಪನಿ ।
ಧಾನವನು ಸಾಧಿಸಲಿ ಸರ್ವರು ।
ಮಾನನಿಧಿ ಕೇಳೆನುತ ಬೆಸಸಿದನೀಶ ವೃಷಭಂಗೆ ॥೨೬॥

ಈತನೇ ಬಳಿಕಿನ್ನು ದಿಟವಾ ।
ಭೂತಳದೊಳಲ್ಲಮನನರಿವ ಮ ।
ಹಾತಿಶಯವಹ ಭಕ್ತಿಯನು ನೆರೆ ಮಾಡಿ ಮೆರೆವವನು ॥
ಏತಕೀ ಭ್ರಮೆಯೆನುತ ಮದಮತಿ ।
ಗೋತು ವೃಷಭನನಣಕವಾಡುತ ।
ಮಾತನಾಡಿದರಲ್ಲಿ ಕೆಲಬರು ಶಿವನ ಸಭೆಯೊಳಗೆ ॥೨೭॥

ದೂಷಕರ ನುಡಿಗೇಳಿ ಮನದಲಿ ।
ರೋಷವನು ತಾಳಿದನೆ ಮದದಲಿ ।
ವಾಸಿಯನು ಮಾಡಿದನೆ ಮಾರುತ್ತರವನುಸುರಿದನೆ ॥
ಈಸು ಶಮೆ ದಮೆ ಸಮತೆಯುಳ್ಳ ಸ ।
ದಾ ಶುಚಿಗಳಾರೆನುತ ವೃಷಭನ ।
ನಾ ಸದಾಶಿವ ಪೊಗಳುತಿರ್ದನು ಪಂಚವದನದಲಿ ॥೨೮॥

ಮರುಳರಿವದಿರು ವೃಷಭರಾಜನ ।
ಪರಿಯನರಿಯದೆ ನುಡಿದರಾದಡೆ ।
ಧರೆಯೊಳುದಯಿಸಿ ನೋಡಲಾತನ ಭಕ್ತಿಯುನ್ನತಿಯ ॥
ಹಿರಿದು ತಮ್ಮಯ ಮನದ ಮದಮ ।
ತ್ಸರವನೀಗಲಿಯೆನುತಲಾ ಶಂ ।
ಕರನು ಬಳಿಕವರುಗಳನಟ್ಟಿದನಂದಿಳಾತಳಕೆ ॥೨೯॥

ಮೆರೆದು ಭೂಮೀತಳದೊಳುದಯಿಸಿ ।
ನೆರೆ ವಿಚಾರಿಸಿ ನಿಮ್ಮ ನಿಮ್ಮಯ ।
ಕೊರತೆಗಳನಲ್ಲಲ್ಲಿ ಸಾಧಿಸಿ ಮನಸು ದಣಿವಂತೆ ॥
ನೆರತೆಯೆನಿಸಿರ್ದಚಲ ಪದವಿಯ ।
ನರಿವುದೆನುತಲಿ ಕಳುಹಿದನು ಜಗ ।
ದೆರೆಯ ಪಶುಪತಿ ವೃಷಭ ಮೊದಲಾಗಿರ್ದ ಶಿವಗಣ ॥೩೦॥

ಬೀಳುಕೊಂಡುದು ಪ್ರಮಥಗಣದೊಳ ।
ಗೇಳುನೂರೆಪ್ಪತ್ತು ಗಣವದು ।
ಮೇಳವಾಯಿತು ರುದ್ರಕನ್ನೆಯರಲ್ಲಿ ಕೆಲಕೆಲರು ॥
ಹೇಳಲೇನಾ ಚಂದ್ರಧರನ ಕೃ ।
ಪಾಳುತನವನು ಶಿವಗಣದ ಸುಖ ।
ದೇಳಿಗೆಯನವರವರ ಹರುಷದ ಮನದ ಹರವರಿಯ ॥೩೧॥

ಹರಿ ವಿರಿಂಚಿ ಸುರೇಂದ್ರ ಸುರಮುನಿ ।
ವರರು ಹರುಷಿತರಾಗಿ ದೇವಾ ।
ಪರಮ ಪಾವನವಾಯ್ತು ಧಾರುಣಿ ಹಲವು ಮಾತೇನು ॥
ನಿರುಪಮದ ಗುರುಲಿಂಗಜಂಗಮ ।
ದಿರವನರಿವೊಡೆ ಸಾಧ್ಯವಿನ್ನಾ ।
ವರ ವೃಷೇಂದ್ರನ ಕತದಲೆಂದುದು ಕೂಡೆ ತಮತಮಗೆ ॥೩೨॥

ಅಲ್ಲಮಪ್ರಭು ಪಾದಪಂಕಜ ।
ದಲ್ಲಿ ಮಧುಕರನಾಗಿ ಮಂಡಿಸಿ ।
ಯೊಳ್ಳಿತೆನಿಪ ಶಿವಾನುಭಾವಮೃತದ ಬಂಡುಂಡು ॥
ಬಲ್ಲಿತಹ ಬಗೆಯೆಂಬ ಹಸಿವಿನ ।
ಹೊಲ್ಲವೆಯ ನೆರೆ ನೀಗಬೇಕೆಂ ।
ದೆಲ್ಲ ಬಂದರು ಬಳಿಕ ವೃಷಭ ಪ್ರಮಥಗಣವಿಳೆಗೆ ॥೩೩॥

**ಅಂತು ಗತಿ ೮ಕ್ಕಂ ಪದನು ೪೦೭ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೯
# ಶಿವಭಕ್ತರಿದ್ದರು ಕೂಡೆ ಧಾತ್ರಿಯಲಿ

**ವಚನ**

ಪ್ರಾಣಲಿಂಗದ ಪೂರ್ವಾಶ್ರಯವ ಕಳೆಯಲೆಂದು
ಲಿಂಗಪ್ರಾಣಿಯಾದ
ಲಾಂಛನದ ಪೂರ್ವಾಶ್ರಯವ ಕಳೆಯಲೆಂದು
ಜಂಗಮಪ್ರಾಣಿಯಾದ
ಪ್ರಸಾದದ ಪೂರ್ವಾಶ್ರಯವ ಕಳೆಯಲೆಂದು
ಮಹಾಪ್ರಸಾದಿಯಾದ
ಈ ತ್ರಿವಿಧದ ಪೂರ್ವಾಶ್ರಯವ ಕಳೆಯಲೆಂದು
ಬಸವಣ್ಣ ಮರ್ತ್ಯಕ್ಕೆ ಬಂದನು ಕಾಣಾ ಗುಹೇಶ್ವರಾ ॥೧॥

**ಸೂಚನೆ**

ವಸುಧೆಯೊಳು ಮಹದೇವಿಯಕ್ಕನು ।
ಬಸವರಾಜನು ಪ್ರಮಥಗಣವಾ ।
ವಿಷಮವಾದಿಗಳೆಲ್ಲರುದಯಿಸಿ ಬೆಳೆದರೊಲವಿನಲಿ ॥

ಪ್ರೇಮದಿಂದಲಿ ಕೇಳುವುದು ನಿ ।
ಸ್ಸೀಮರೆನಿಸುವ ವೀರಶೈವ ।
ಸ್ತೋಮವೆಲ್ಲವು ಮಿಗೆ ಪುರಾತನರಾವಪರಿಯಿಂದೆ ॥
ಭೂಮಿಯಲಿ ಸಂಜನಿಸಿ ಬೆಳೆದ ಮ ।
ಹಾ ಮನೋಹರ ಚಾರುಚರಿತೋ ।
ದ್ದಾಮತೆಯ ಸಂಗತಿಯನೀ ಪ್ರಭುಲಿಂಗಲೀಲೆಯಲಿ ॥೧॥

ಇಳೆಯೊಳುಡುತಡಿಯೆಂಬ ಪಟ್ಟಣ ।
ದೊಳಗೆ ವೀರಶಿವಾಗಮಿಕ ನಿ ।
ರ್ಮಳನ ವಲ್ಲಭೆಯೆನಿಪ ಸುಮತಿಯ ಗರ್ಭಶುಕ್ತಿಯಲಿ ॥
ಚೆಲುವೆಯಾದ ಕುಮಾರಿಯೆಂಬ ।
ಗ್ಗಳದ ಮುತ್ತುದಯಿಸಿತು ಧರಣೀ ।
ತಳದೊಳಗೆ ಪಾರ್ವತಿಯ ಸಾತ್ವಿಕ ಕಳೆಯೆ ರೂಪಾಗಿ ॥೨॥

ಹೆಟ್ಟುಗೆಗೆ ಶಿವಯೋಗರಾಜ್ಯದ ।
ಪಟ್ಟಗಟ್ಟುವರಂತೆ ನೊಸಲಿನೊ ।
ಳಿಟ್ಟರಮಲ ವಿಭೂತಿಯನು ಭವಭಯದ ಸೋಂಕುಗಳು ॥
ಮುಟ್ಟದಂತಿರೆ ರಕ್ಷೆಯೆಂದೆನೆ ।
ಕಟ್ಟಿದರು ಕಂಠದಲಿ ಲಿಂಗವ ।
ನೊಟ್ಟಜೆಯಲಾ ಸುಮತಿ ನಿರ್ಮಳರಾ ಕುಮಾರಿತಿಗೆ ॥೩॥

ಪರಮನಿಕ್ಕೆಯ ಮುಟ್ಟಿ ತೋರುವ ।
ಪರಿಯಲಾತ್ಮಜೆಯುತ್ತಮಾಂಗದೊ ।
ಳಿರಿಸಿ ಹಸ್ತವನಲ್ಲಿ ಬೆರಸುವುದೆನುತ ಕಿವಿಯೊಳಗೆ ॥
ನೆರಹುವಂತಿರೆ ಶೈವಪಂಚಾ ।
ಕ್ಷರಿಯನುಪದೇಶಿಸಿ ವಿನೂತನ ।
ಹರುಷದಲಿ ಹರಸಿದನು ನಿರ್ಮಳ ಮತ್ತೆ ನಿಜಸುತೆಯ ॥೪॥

ತೀವಿ ತನುವಿನಲತಿ ಮಹತ್ತರ ।
ದೇವತಾಕಳೆಯಿರಲು ಮಿಗೆ ಮಹ ।
ದೇವಿಯೆಂಬೀ ಹೆಸರನಿಟ್ಟರು ನಿಜ ಕುಮಾರಿತಿಗೆ ॥
ಭಾವೆ ಬೆಳೆವುತಲಿರಲು ನಿರ್ಮಳ ।
ದೇವ ಸುಮತಿಯರೀಪ್ಸಿತಾರ್ಥವ ।
ನೀವುತಿಹ ನಡೆ ನುಡಿಯಲೊಪ್ಪುವ ಕಲ್ಪಲತೆಯಂತೆ ॥೫॥

ಈಕೆ ಭಕ್ತಿಯ ಬಳ್ಳಿಯಂತೆಯ ।
ನೇಕ ಪರಿಯಲಿ ಬೆಳೆವುತಿರ್ದಳು ।
ಲೋಕದೊಳು ತಾನಲ್ಲದಿಲದಲ್ಲೆನಲತುಳ ಮಹಿಮೆಯಲಿ ॥
ಆಕೆಯಂತಿರಲಿತ್ತಲೊಲಿದು ಪಿ ।
ನಾಕಿ ಕಳುಹಿದ ಮಹಿಮರೆಲ್ಲರು ।
ಬೇಕು ಬೇಕೆಂಬೆಡೆಗಳಲಿ ಸಂಜನಿಸ ತೊಡಗಿದರು ॥೬॥

ಶುದ್ಧ ಭಕ್ತಿಯ ಭರದ ಮೊರಡಿಯ ।
ಮುದ್ದಯನ ಸತಿಯುದರನಿಧಿಯಲಿ ।
ಸಿದ್ಧರಾಮಶಶಾಂಕನೆಂಬ ಮಹಾ ಮನೋಹರನು ॥
ಉದ್ಧರಿಸ ಹುಟ್ಟಿದನು ಯೋಗ ಸ ।
ಮೃದ್ಧ ಸೊನ್ನಲಪುರದೊಳೊಪ್ಪಿರು ।
ತಿರ್ದನಾತನನೇಕ ವಿಭವದಲಖಿಳ ಜಗವರಿಯೆ ॥೭॥

ಗೋಚರಿಸದನುಪಮದ ಭಕ್ತಿಯ ।
ನಾಚರಿಸಬೇಕೆಂದು ಮಡಿವಳ ।
ಮಾಚಿದೇವನು ಹುಟ್ಟಿದನು ಶಿವಭಕ್ತರುದರದಲಿ ॥
ಈ ಚತುರ್ದಶ ಭುವನದೊಳು ಸಚ ।
ರಾಚರವ ಪಾವನವ ಮಾಡುವ ।
ಸೂಚನೆಯ ಶಿವಲಿಂಗಭಕ್ತಿಯ ಮಾಡುತಿರುತಿರ್ದ ॥೮॥

ಒಳ್ಳಿತಾಗಿ ಯಥಾಕ್ರಮಕ್ರಮ ।
ದಲ್ಲಿ ಪ್ರಮಥರು ರುದ್ರಕನ್ನೆಯ ।
ರೆಲ್ಲರುದ್ಭವಿಸಿದರು ಶುದ್ಧಶಿವೈಕ್ಯರುದರದಲಿ ॥
ಮೆಲ್ಲಮೆಲ್ಲನೆ ಬೆಳೆದು ತಮತಮ ।
ಗುಳ್ಳ ಕಾಯಕವಿಡಿದು ಭೂತಳ ।
ದಲ್ಲಿ ಮೆರೆವುತ್ತಿರ್ದರೀಶ್ವರಭಾವಭಕ್ತಿಯಲಿ ॥೯॥

ದಾನ ಧರ್ಮ ಪರೋಪಕಾರ ವಿ ।
ಧಾನ ಗುರು ಶಿವಭಕ್ತಿಯುಕ್ತಿಯ ।
ನೂನ ರೀತಿಯಲಿಂಗಳೇಶ್ವರ ಬಾಗವಾಡಿಯಲಿ ॥
ಮಾನನಿಧಿಗಳು ಸುಕೃತಿಗಳು ಮಹಿ ।
ಮಾನತೆಯಲಿರುತಿಪ್ಪರದನಾ ।
ನೇನ ಹೇಳುವೆ ಮಾದರಸ ಮಾದಾಂಬಿಕೆಯರಿರವ ॥೧೦॥

ಆಕೆ ತಾನು ಪತಿವ್ರತಾ ಶೀ ।
ಲೈಕೆ ಮಾದರಸಾಂಕನಾದಡೆ ।
ಏಕಪತ್ನೀವ್ರತಗುಣಾನ್ವಿತನವರ ಜಠರದಲಿ ॥
ಲೋಕದೊಳು ಗುರುಶಿಷ್ಯಸಂಗನಿ ।
ರಾಕುಳಕೆ ಸುಜ್ಞಾನವುದಯಿಸು ।
ವಾಕೃತಿಯ ಸುಕುಮಾರ ಸಂಜನಿಸಿದನು ಜಗವರಿಯೆ ॥೧೧॥

ಆಳನು ಮಿಡುಕನು ಮಿನುಗಿಸನು ಕಂ ।
ಗಳನಿದೇನೆಂದವರು ಕಂಡು ।
ಮ್ಮಳಿಸಿ ಪಿತರುಗಳರಿವು ಮರಹಿನಲಿರಲು ಶಿವನೊಲಿದು ॥
ತೊಳಗಿ ಬೆಳಗುತ ಬಂದು ಮಿಗೆ ಮನೆ ।
ಯೊಳಗೆ ಕುಳ್ಳಿತು ಶಿಶುವ ನಿಜಕರ ।
ತಳದೊಳೆತ್ತಿದನೊಲವಿನಿಂದಲಿ ಭಕ್ತವತ್ಸಲನು ॥೧೨॥

ಪರಮ ನೀನಹೆಯೆಂದು ನೊಸಲಲಿ ॥
ಬರೆವನಂತಿರಲಿಟ್ಟು ಭೂತಿಯ ।
ನಿರುತ ನಿನ್ನುವನಗಲಿ ನಾನಿರೆನೆಂದು ಕುರುಹಾಗಿ ॥
ನೆರಹುವಂತಿರೆ ದಿವ್ಯಲಿಂಗವ ।
ಕೊರಳಿನಲಿಯವಧರಿಸಿ ಕರುಣಾ ।
ಕರ ಸದಾಶಿವನಾ ಮಹಾತ್ಮಗೆ ತಾನೆ ಗುರುವಾದ ॥೧೩॥

ನಂಬುಗೆಯ ಕೊಡುವಂತೆ ಹಸ್ತವ ।
ನಿಂಬಿನಲಿ ಮಸ್ತಕದೊಳಿರಿಸುತ ।
ಲುಂಬ ತಾಣವಿದೆಂದು ಕಿವಿಯಲಿ ಮುಚ್ಚಿ ಪೇಳ್ವಂತೆ ॥
ಶಂಭು ಪಂಚಾಕ್ಷರಿಯ ನೇಮಿಸಿ ।
ತುಂಬಿ ತನುವಿಗೆ ಬಸವ ನೀನೆಂ ।
ದೆಂಬ ನಾಮವನಿಟ್ಟು ಹೋದನು ದೇವ ನಿಮಿಷದಲಿ ॥೧೪॥

ಮಗನು ನಿಶ್ಚೈತನ್ಯದಿಂದಿರೆ ।
ಬೆಗಡುಗೊಂಡಳವಳಿದು ಮರವೆಯ ।
ತಗಹು ತೆಗೆದೆಚ್ಚರಿಕೆ ತೋರಿತು ಜನನಿಜನಕರಿಗೆ ॥
ಬಗೆವಡಿದು ಕನಸಲ್ಲ ಕರ ಸೋ ।
ಜಿಗವಲಾ ಪ್ರತ್ಯಕ್ಷವೆನುತವ ।
ರುಗಳು ಲಿಂಗ ವಿಭೂತಿಸಹಿತಿಹ ಸುತನ ನೋಡಿದರು ॥೧೫॥

ನೋಡಿಯುಪದೇಶವನು ಶಂಭುವೆ ।
ಮಾಡಿ ಹೆಸರನು ಬಸವನೆಂದೇ ।
ಕೂಡಿ ಕೊಟ್ಟನಲಾ ಶಿವಾ ನಮ್ಮಯ ಸಭಾಗ್ಯತೆಗೆ ॥
ನೋಡಲೆಣೆಯಾರುಂಟೆನುತ ಕೈ ।
ಗೂಡಿ ಪುತ್ರೋತ್ಸಾಹ ಧರ್ಮವ ।
ಮಾಡಿ ಮಾದರಸಾಂಕ ಮೈವೆಚ್ಚಿದನು ಹರುಷದಲಿ ॥೧೬॥

ಆದುವಾತಗೆ ನಾಮಕರಣಗ ।
ಳಾದಿಯಾದ ಸಮಸ್ತ ವಿಭವ ವಿ ।
ನೋದವಾತಗೆ ಮರೆದ ಮಾತನು ನೆನಸಿಕೊಟ್ಟಂತೆ ॥
ವೇದ ಶಾಸ್ತ್ರ ಪುರಾಣವಾಗಮ ।
ವಾದಿಯಾಗಿಹ ಕರ್ಮ ಕಳೆಗಳು ।
ವೇದಿಸಿದವೊಮ್ಮಿಂಗೆ ಕೇಳಲು ಬಸವರಾಜಂಗೆ ॥೧೭॥

ಉಪನಯನ ಲಕ್ಷ್ಯವನು ಮುಂದಾ ।
ವಿಪುಲಮತಿಗಲ್ಲಮನು ತೋರಿಸು ।
ವುಪಮೆಯನು ಸೂಚಿಸುವ ಪರಿಯಲಿ ಬಸವರಾಜಂಗೆ ॥
ಉಪನಯನವಾಯಿತ್ತು ವಿಭವದೆ ।
ತ್ರಿಪುರವೈರಿಯ ಭಕ್ತಿಭಾವದ ।
ಲಪರಿಮಿತ ಮಹಿಮೆಯನು ತೋರಿದನಾ ಮಹಾತ್ಮಕನು ॥೧೮॥

ಇತ್ತಲಿವರಿರುತರ್ದರಾಗಳೆ ।
ಯತ್ತ ಪರವಾದಿಗಳು ಜನಿಯಿಸಿ ।
ಮತ್ತೆಯವರೊಳಗೊಬ್ಬನತಿಬಳ ವೀರಬಿಜ್ಜಳನು ॥
ಉತ್ತಮದ ಕಲ್ಯಾಣದಲಿ ನೃಪ ।
ವೃತ್ತಿಯಿಂದಿರುತಿರ್ದನೇಕ ।
ಚ್ಛತ್ರದಲಿ ಭೂಮಿಯನು ಪಾಲಿಸುತಿರ್ದನೊಲವಿನಲಿ ॥೧೯॥

ಜನಪನಿರುತಿರಲತ್ತಲಿತ್ತಲು ।
ಜನನಿ ಜನಕರ ಬೀಳುಕೊಂಡನು ।
ವಿನಯದಲಿ ತಮ್ಮಕ್ಕ ನಾಗಾಯಿಗಳ ಸಹವಾಗಿ ॥
ಅನುಕರಿಸಿ ನಡೆತಂದು ತನ್ನಯ ।
ಮನವೊಲಿದು ಬಸವಣ್ಣ ಹೊಕ್ಕನು ।
ಜನಪ ಬಿಜ್ಜಳನಾಳುತಿಹ ಕಲ್ಯಾಣಪುರವರವ ॥೨೦॥

ಆ ನರೇಂದ್ರನ ಕಂಡು ಬಳಿಕಾ ।
ಸ್ಥಾನಮಧ್ಯದೊಳೊಂದು ದಿವಸವ ।
ನೂನಕಾರಣ ಲಿಖಿತ ಬಿದ್ದಿರಲದನು ತಿಳಿದೋದಿ ॥
ಆ ನರೇಂದ್ರಂಗಪರಿಮಿತದಲಿ ನಿ ।
ಧಾನವನು ತಾ ತೆಗೆಸಿ ತೋರಿದ ।
ನೇನನೆಂಬೆನು ಬಸವರಾಜನ ಘನ ಮಹೋನ್ನತಿಯ ॥೨೧॥

ಭೂತಳಾಧೀಶ್ವರನ ಮನದೊಳ ।
ಗೀತ ಕಾರಣಪುರುಷನಹ ಸಂ ।
ಕೇತ ಮಿನುಕಲು ಕೊಟ್ಟನಂದು ಮಹಾಪ್ರಧಾನಿಕೆಯ ॥
ಪ್ರೀತಿಯಿಂದೆ ವಿವಾಹವನು ವಿ ।
ಖ್ಯಾತಿ ಮಿಗೆ ವಿಭವದಲಿ ಮಾಡಿದ ।
ನೋತು ಬಿಜ್ಜಳರಾಯನೆಮ್ಮಯ ಬಸವರಾಜಂಗೆ ॥೨೨॥

ಮಿಕ್ಕು ಭಕ್ತಿಯಲೊಂದು ದಿವಸದ ।
ಲಕ್ಕನಾಗಾಯಿಗಳು ಬಸವನ ।
ಒಕ್ಕುಮಿಕ್ಕ ಮಹಾಪ್ರಸಾದವನುಣಲು ಕ್ಷಣದೊಳಗೆ ॥
ತಕ್ಕ ಶಿವತತ್ವಸ್ವರೂಪವೆ ।
ಸಿಕ್ಕಿ ಬೆಳೆದುದಯಿಸಲು ಕಾಣುತ ।
ಲಕ್ಕನಾ ಬಸವೇಶ್ವರನ ಹೆಸರಿಟ್ಟಳಾ ಶಿಶುಗೆ ॥೨೩॥

ಧಾರುಣೀವಳಯದಲಿ ಕೀರ್ತಿಯು ।
ದಾರದಿಂದಿರುತಿರ್ದನುಮೆಯ ಕು ।
ಮಾರ ಷಣ್ಮುಖನಂತೆ ಸಕಳಕಳಾವಿಶಾರದನು ॥
ವೀರಶೈವಾಗಮದ ವಿವಿಧವಿ ।
ಚಾರಪರ ಗುರುಲಿಂಗಜಂಗಮ ।
ಸಾರ ಪರಮಾರಾಧ್ಯರೆಮ್ಮಯ ಚೆನ್ನಬಸವಣ್ಣ ॥೨೪॥

ಪರಮ ಪೂರ್ವಾಚಾರ್ಯ ಬಸವೇ ।
ಶ್ವರನಿಗೊಬ್ಬ ಕುಮಾರನಾದನು ।
ಧರಣಿಯೊಳಗಪ್ರತಿಮ ಗುಣಗಣನಿಲಯನಾತಂಗೆ ॥
ವರದ ಕೂಡಲಸಂಗಮೇಶನ ।
ನಿರುತ ನಾಮವನಿಟ್ಟು ಸುಖದಿಂ ।
ದಿರುತಲಿರ್ದನು ಬಸವದಂಡಾಧೀಶನೊಲವಿನಲಿ ॥೨೫॥

ಆದಿಯಲಿ ಕೈಲಾಸದೊಳು ಸಂ ।
ವಾದವನು ಮಾಡಿದವರೆಲ್ಲರ ।
ಮೂದಲಿಸಿ ಸತ್ತವರನೆತ್ತಿಯನೇಕ ಮಹಿಮೆಯನು ॥
ಮೇದಿನಿಗೆ ತಾ ಮೆರೆದ ನೆರೆ ಪರ ।
ವಾದಿಗಳು ತಲೆದೂಗೆ ತನ್ನ ವಿ ।
ನೋದದಿಂದಿರುತಿರ್ದನೆಮ್ಮಯ ಬಸವದಂಡೇಶ ॥೨೬॥

ರೂಢಿ ಮೆಚ್ಚಲು ಹಲವು ಪರಿಯ ಪ ।
ವಾಡಗಳ ಮೆರೆವುತ ನಿರಂತರ ।
ನೀಡುತಿರ್ದನು ನಿಷ್ಠೆಯಿಂದಲಿ ಲಿಂಗಜಂಗಮಕೆ ॥
ಬೇಡಿದವರಿಗೆ ಬೇಡಿತನು ಕೈ ।
ಗೂಡಿಸುತ ದಾಸೋಹತನದಲಿ ।
ಮಾಡುತಿರ್ದನು ಬಸವದಂಡಾಧೀಶ ಭಕ್ತಿಯಲಿ ॥೨೭॥

ಮರ ಶಿಲಾ ಪಶು ದೇಹ ಗೇಹದೊ ।
ಳಿರಲು ನಾವಿನ್ನಾರೆವೆನುತಲಿ ।
ಸುರತರುವೆ ಕಯ್ಯಾಗಿ ಚಿಂತಾಣಿಯೆ ಮನವಾಗಿ ॥
ಸುರರ ಧೇನುವೆ ಶಬುದವಾಗಿಯೆ ।
ನೆರೆದು ನೆಲಸಿದುವೆನಲು ಬಸವನ ।
ಕರ ಮನೋವಚನಂಗಳಿತ್ತವು ಸುಖವನಖಿಳರಿಗೆ ॥೨೮॥

ಸೋಕು ಸುಯಿ ನುಡಿ ನೋಟ ಮನಮೇ ।
ಕೈಕ ಪರುಷಗಳಾಗಿ ವೇದಿಸಿ ।
ಬೇಕು ಬೇಕೆಂಬುದ ನಿರಂತರ ಲಿಂಗಜಂಗಮಕೆ ॥
ಸಾಕು ಸಾಕೆನೆ ದಣಿಯೆ ನೀಡುತ ।
ನೇಕ ವಸ್ತುವ ನಿಚ್ಚ ನಿಚ್ಚಲಿ ।
ಲೋಕವನು ಪಾವನವ ಮಾಡಿದ ಬಸವ ಭಕ್ತಿಯಲಿ ॥೨೯॥

ಬಗೆವಡೀಪರಿ ಭಕ್ತಿಯಾ ಕೃತ ।
ಯುಗದಲಿಲ್ಲೆನೆ ಮಿಕ್ಕ ಠಕ್ಕಿನ ।
ಯುಗದಲೆಂದೂ ಇಲ್ಲವಿದು ಪೊಸತೆನುತೆ ಜಗ ಹೊಗಳೆ ॥
ನೆಗಳಿ ನಿರ್ವಂಚನೆಯ ಭಕ್ತಿಯ
ಮೊಗೆದು ಗಣತಿಂತಿಣಿಗಳಿರ್ದರು ।
ಜಗದೊಳಚ್ಚರಿಯಾಗಿ ನಿರ್ಮಳ ಭಾವಶುದ್ಧಿಯಲಿ ॥೩೦॥

ಮಲಯಜದ ತರುಗಾಳಿಸೋಂಕಿನ ।
ಲುಳಿದ ಮರ ಪರಿಮಳಿಸುವಂತಿರೆ ।
ತಿಳಿಯಲೆಂದಲ್ಲಮನ ಕಾರಣ ಬಸವನುದಯಿಸಲು ॥
ಇಳೆಯೊಳಾ ಮಹಿಮನ ಪದಾಂಬುಜ ।
ಗಳ ರಜಸ್ಸಿನ ರೇಣುಸಂಗದ ।
ಬಲುಹಿನಲಿ ಶಿವಭಕ್ತರಾದರು ನರರು ತಮತಮಗೆ ॥೩೧॥

ಭಕ್ತರಿಲ್ಲದ ರಾಜ್ಯವಿಲ್ಲೆನೆ ।
ಭಕ್ತರಿಲ್ಲದ ದೇಶವಿಲ್ಲೆನೆ ।
ಭಕ್ತರಿಲ್ಲದ ಗ್ರಾಮ ಗೃಹವೊಂದಿಲ್ಲವೆಂದೆನಲು ॥
ಭಕ್ತಿ ಮಿಗೆ ಪ್ರಜ್ವಲಿಸಿ ಭಾವಿಸೆ ।
ಭಕ್ತಿಮಯವಾಗಿರ್ದುದಿಳೆ ಶಿವ ।
ಭಕ್ತಿ ಸೃಷ್ಟಿಯಿದೆನಲು ಬಸವನ ಘನದ ಮಹಿಮೆಯಲಿ ॥೩೨॥

ಅಂದು ಕಲ್ಯಾಣದ ಶಿವೈಕ್ಯರ ।
ನಿಂದ ನಿಲವಿನ ಮಹಿಮೆಯಂತಿಂ ।
ತೆಂದು ಹೇಳಲಿಕರಿಯೆನರಿದುದನೊಂದ ಹೇಳುವೆನು ॥
ಇಂದು ಮೌಳಿಯ ಸಗುಣಮೂರ್ತಿಯ ।
ತಂದುವೂಡುವರುಡಿಸುವರು ಮಿಗೆ ।
ಬಂಧುತನ ಮೊದಲಾದ ನಾನಾಪರಿಯಲೊಲಿಸುವರು ॥೩೩॥

ಮಿಕ್ಕ ಠಾವಿನ ಶಿವನ ಭಕ್ತರ ।
ಲೆಕ್ಕವನು ಹೇಳುವರೆಯಗಣಿತ ।
ವುಕ್ಕುತಿರ್ದುದು ಧರಣಿ ಭಕ್ತಿರಸಾಬ್ಧಿಯೆಂಬಂತೆ ॥
ಹೊಕ್ಕು ನೋಡಿದಡಾವ ಕಡೆಯಲಿ ।
ತಕ್ಕ ತಕ್ಕಂದದಲಿ ಶಿವನನು ।
ಸಿಕ್ಕಿಸುವ ಶಿವಭಕ್ತರಿರ್ದರು ಕೂಡೆ ಧಾತ್ರಿಯಲಿ ॥೩೪॥

ಸ್ವಾತಿ ನಕ್ಷತ್ರದ ಸುವೃಷ್ಟಿಗೆ ।
ಓತು ಬಾಯ್ಗಳ ಬಿಟ್ಟು ಚಿಪ್ಪುಗ ।
ಳಾತುಕೊಂಡಿಪ್ಪಂತೆ ನಮ್ಮಯ ಗುರು ಗುಹೇಶ್ವರನ ॥
ಖ್ಯಾತ ಕರುಣಾಮೃತವನಮಲ ।
ಪ್ರೀತಿಯಿಂದಲಿ ಹಾರುತಿದ್ದರು ।
ಭೂತಳದ ಶಿವಲಿಂಗಭಕ್ತರು ಕೂಡೆ ತಮತಮಗೆ ॥೩೫॥

**ಅಂತು ಗತಿ ೯ಕ್ಕಂ ಪದನು ೪೪೨ ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೧೦
# ಮಹಾದೇವಿ ನಡೆದಳು ಭಕ್ತಿಭಾವದಲಿ

**ವಚನ**

ಮುಡಿ ಬಿಟ್ಟು ಮೊಗ ಬಾಡಿ ತನು ಕರಗಿದವಳ
ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ ?
ಎನ್ನನೇಕೆ ಕಾಡುವಿರಿ ಎಲೆ ತಂದೆಗಳಿರಾ ?
ಬಲುಹಳಿದು ಭವಗೆಟ್ಟು ಛಲವಳಿದು ಭಕ್ತೆಯಾಗಿ
ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ ॥೧॥

ಎರದ ಮುಳ್ಳನಂತೆ ಪರ ಗಂಡರೆನಗವ್ವಾ
ಸೋಂಕಲಮ್ಮೆ ಸುಳಿಯಲಮ್ಮೆ
ನಂಬಿ ನಚ್ಚಿ ಮಾತಾಡಲಮ್ಮೆನವ್ವಾ
ಚೆನ್ನಮಲ್ಲಿಕಾರ್ಜುನನಲ್ಲದುಳಿದ ಗಂಡರ ಉರದಲ್ಲಿ
ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ ॥೨॥

ಕಾಯ ಕರ್ರನೆ ಕಂದಿದರೇನಯ್ಯಾ ?
ಕಾಯ ಮಿರ್ರನೆ ಮಿಂಚಿದರೇನಯ್ಯಾ ?
ಅಂತರಂಗ ಶುದ್ಧವಾದ ಬಳಿಕ
ಕಾಯವೇನಾದರೇನಯ್ಯಾ ?
ಚೆನ್ನಮಲ್ಲಿಕಾರ್ಜುನನೊಲಿದ ಕಾಯವೇನಾದರೆ ನಿಮಗೇನಯ್ಯಾ ? ॥೩॥

ಎರೆಯಂತೆ ಕರಕರಗಿ ಮಳಲಂತೆ ಜರೆಜರೆದು
ಕನಸಿನಲಿ ಕಳವಳಿಸಿ ಆನು ಬೆರಗಾದೆ
ಆವುಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ
ಆಪತ್ತಿನ ಸಖಿಯರನಾನಾರುವನು ಕಾಣೆ
ಅರಸಿ ಕಾಣದ ತನುವ ಬೆರಸಿ ಕೂಡದ ಸುಖವ
ನೀನೆನಗೆ ಕರುಣಿಸು ಚೆನ್ನಮಲ್ಲಿಕಾರ್ಜುನಾ ॥೪॥

**ಸೂಚನೆ**

ತನಗೆ ಮನಸೋತಿರ್ದ ಕೌಶಿಕ ।
ಜನಪತಿಯನೊಲ್ಲದೆ ವಿರಕ್ತಿಯ ।
ನನುವಿಡಿದು ಮಹದೇವಿ ನಡೆದಳು ಭಕ್ತಿ ವೇಧೆಯಲಿ ॥

ಭಂಗವೇ ಬಸುರಾದ ವಿಷಯಸು ।
ಖಿಂಗಳಿಗೆ ಮಿಗೆ ಹೇಸಿ ನಿರ್ವಿಷ ।
ಯಾಂಗದಿಂದಲಿ ಗುರು ಗುಹೇಶ್ವರ ಪಾದಪಂಕಜದ ॥
ಸಂಗವನು ಮಾಡುವರೆ ಕೇಳುವು ।
ದಂಗವಿಸಿ ಮಹಾದೇವಿಯಕ್ಕನ ।
ಸಂಗತಿಯ ಸಂಭ್ರಮದ ಸಂಧಿಯ ಪದದ ಪದ್ಧತಿಯ. ॥೧॥

ಇತ್ತಲೀ ಮಹಾದೇವಿ ಮಿಗೆ ಬೆಳೆ ।
ವುತ್ತಲಿದ್ದಳು ಜವ್ವನದ ಕಳೆ ।
ಯೊತ್ತಿ ಭರದಲಿ ಪುಟವನಿಕ್ಕಿದ ಮಿಸುನಿಯಂದದಲಿ ॥
ಉತ್ತಮದ ಮೈಲುಳಿಯ ಕಾಂತಿಯ ।
ಮತ್ತ ಗಜಮನದ ವಿಳಾಸದ ।
ತತ್ತವಣೆಯ ನವೀನರೀತಿಯ ಜಾತಿಭಾವದಲಿ ॥೨॥

ತುಂಬಿ ಲಿಂಗದ ನಿಷ್ಠೆಯೊಡನೆ ನಿ ।
ತಂಬ ಮೊಲೆ ಮುಡಿ ಹೆಚ್ಚಿ ಬೆಳೆದುವು ।
ಶಂಭುವಿನ ಸತ್ಕರ್ಮ ಭಕ್ತಿ ಜ್ಞಾನವೆಂಬಂತೆ ॥
ಶಂಬರಾರಿಯ ಶಸ್ತ್ರಹತಿಯ ವಿ ।
ಡಂಬನೆಯ ಧಿಕ್ಕರಿಸಿ ತೋರುವೆ ।
ನೆಂಬ ಭರದಲಿ ಜವ್ವನವ ಹೇರಿದಳು ಮಹದೇವಿ ॥೩॥

ಇರುತಲೊಂದಾನೊಂದು ದಿನವಾ ।
ಪುರದರಸ ವೈಹಾಳಿಯಿಂದೆ ।
ಯ್ತರುತಿರಲು ಸಂಭ್ರಮವ ಕೇಳುತ ಬಂದು ಬಾಗಿಲಲಿ ॥
ತರುಣಿ ನಿಂದು ನಿರೀಕ್ಷಿಸುತ್ತಿರೆ ।
ಧರಣಿಪತಿ ಕಾಣುತ್ತ ಕಾಮಾ ।
ತುರತೆ ಮಿಗೆ ಕಂಗೆಟ್ಟು ಕಳವಳಿಸಿದನು ನಿಮಿಷದಲಿ ॥೪॥

ಕನ್ನೆಯಿವಳಾರವಳು ಕೇಳಿದು ।
ಬನ್ನಿರೋ ಎನೆ ಹರಿದು ತಿಳಿದಾ ।
ಕನ್ನೆಯಿಂತಪ್ಪವರ ಮಗಳೆಂದರುಹಿದರು ಚರರು ॥
ತನ್ನ ಮನದೊಳಗೆಣಿಸುತೀಕೆಯ ।
ನಿನ್ನು ವರಿಸುವೆನೆಂಬ ಭರವಾ ।
ಸನ್ನಿಸಲು ಕೌಶಿಕ ಮಹೀಪತಿ ಹೊಕ್ಕನರಮನೆಯ ॥೫॥

ಎಳೆದು ತರಿಸಿದೊಡವಳ ಮನಸಿಗೆ ।
ಮುಳಿಸು ಮೇಲಪಕೀರ್ತಿ ಕೆಲಬರ ।
ಕಳುಹಿ ತಿಳಿವೆನೆನುತ್ತ ಹೆಗ್ಗಡಿತಿಯರನಟ್ಟಿದರೆ ॥
ಬಳಿಕಲವರೆಯ್ತಂದು ಮಿಗೆ ನಿ ॥
ರ್ಮಳನ ಸುಮತಿಯ ಕೇಳಿದರೆ ನೃಪ ।
ಕುಲದವಗೆ ಕೊಡೆವೆಂದರವರಾ ನಿಜಕುಮಾರಿತಿಯ ॥೬॥

ಅರಸಗಿದಿರೇ ನೀವು ಸುಮ್ಮನೆ ।
ಸರಸದಿಂದಲಿ ಕೊಡುವುದೊಳ್ಳಿತು ।
ವಿರಸವಾದೊಡೆ ನೀವು ಮಾಡುವುದೇನು ಭೂಪತಿಯ ॥
ಮರುಳುತನಗಳು ಬೇಡ ನಿಮ್ಮಯ ।
ತರುಣಿಯುಂಡುಟ್ಟಿಹಳು ನಾನಾ ।
ಪರಿಯಲೊಳ್ಳಿಹ ದಾಯವೆಂದರುಹಿದರು ನಿರ್ಮಳಗೆ ॥೭॥

ತಾಯ ಮಾರಿಯೆ ತೊತ್ತ ಕೋಂಬೀ ।
ದಾಯವನು ಸುಡು ವಿಷಯ ಕುಲದಲಿ ।
ಕಾಯದಾಸೆಗೆ ಕೊಳುಕೊಡೆಯ ಕಳವಳಿಸಿ ಮಾಡಿದಡೆ ।
ನಾಯಕದ ನರಕಗಳು ತಪ್ಪವು ।
ರಾಯ ಮಾಡುವುದೇನು ಬಳಿಕಿ ।
ನ್ನಾಯತವು ಸಾಕೆನುತ ನಿರ್ಮಳನವರಿಗಿಂತೆಂದ ॥೮॥

ಆಕೆಯನು ಕೇಳುವುದು ದಿಟ ಬಳಿ ।
ಕಾಕೆ ಸಣ್ಣಹ ಮಗಳೆಯದರಿಂ ।
ದಾಕೆಯನೆ ನೆರೆ ತಿಳಿದೊಡಂಬಡಿಸುವುದು ಬುದ್ಧಿಯಲಿ ॥
ಆಕೆ ತಾನಹುದೆಂದಳಾದರೆ ।
ಯಾಕೆಯನು ನಾವಾಗಳಿತ್ತವ ।
ರೇಕೆ ಬಹು ಮಾತೆನುತ ನಿರ್ಮಳ ನುಡಿದನಬಲೆಯರ ॥೯॥

ಅನುಮತಿಸಿ ನಾರಿಯರು ಬಳಿಕಾ ।
ವನಿತೆಯನು ಕೇಳಿದರೆ ತನ್ನೊಳು ।
ನೆನೆದಳೊಂದನುಮಾನವನು ತಾನೇ ವಿವೇಕದಲಿ ॥
ಜನಪನಳುಪಿಗೆ ಹರುವ ಮಾಡುವೆ ।
ನೆನುತಲಾ ಮಹದೇವಿ ಜಾಣಿನ ।
ವಿನಯದಲಿ ನಸುನಗುತಲಾಳಾಪಿಸಿದಳೊಳಗೊಳಗೆ ॥೧೦॥

ಪರಿಮಳವನಾರಿಕ್ಕಿದರು ಕ ।
ರ್ಪುರಕೆ ಕೋಗಿಲೆಗಾರು ಸೊಗಸಿನ ।
ಸ್ವರವ ಕಲಿಸಿದರಂಚೆಗಾರಡಿಯಿಡಲು ಕಲಿಸಿದರು ॥
ಪರಿಕಿಸುವಡವಕಾ ಗುಣಂಗಳ ।
ನೆರವು ತಂದರೆ ಮನದಲಂತಾ ।
ಪರಿಯಲಾ ಮಹದೇವಿ ತಾನೇ ನೆನೆದಳೊಂದನುವ ॥೧೧॥

ನಾನೆ ಬೇಕಾಗಿರ್ದಡವನಾ ।
ನೇನ ಹೇಳಿದ ಮಾಡಲೆನುತಾ ।
ಮಾನಿನಿಯರೊಳು ನುಡಿದು ಮಧುರಾಳಾಪ ವಚನದಲಿ ॥
ಆ ನರೇಂದ್ರನೆ ಬಂದು ನನ್ನ ಮ ।
ನೋನುರಾಗವ ಸಲಿಸುವಂತಿರೆ ।
ತಾನು ಶಪಥವ ಮಾಡಬೇಕೆಂದಳು ಮಹಾದೇವಿ ॥೧೨॥

ಐಸಲೇ ಎನುತದನು ಹೋಗಿ ವಿ ।
ಳಾಸಿನಿಯರರುಹಿದೊಡೆ ಕೇಳಿ ಮ ।
ಹಾ ಸುಮಾನದಲರಸು ಬಂದನು ನಿರ್ಮಳನ ಮನೆಗೆ ॥
ಕಾಸೆ ಕರಗಿದ ಲೋಹದಂತಿರೆ ।
ಘಾಸಿಯಾಗುತ ಮತ್ತೆ ಮನದಭಿ ।
ಲಾಷೆ ಹೆಚ್ಚಿತು ಮಾನಿನಿಯ ಕಾಣುತ ಮಹೀಪತಿಗೆ ॥೧೩॥

ಲಲನೆ ಕೇಳೌ ನಿನ್ನ ಬಯಕೆಯ ।
ಸಲಿಸುವೆನು ಮೊದಲಲ್ಲಿ ಬಳಿಕಾ ।
ನೊಲಿಸಿಕೊಂಬೆನು ನಿನ್ನನಂತಲ್ಲದೆ ದುರುಕ್ತಿಯಲಿ ॥
ನೆಲನೊಡೆಯ ನಾನೆಂಬ ಗರ್ವದ ।
ಬಲುಹುಗಿಲುಹನು ಮಾಡಿದೊಡೆ ಕೇ ।
ಳೆಲಗೆ ತನ್ನಯ ಸತ್ಯಭಾಷೆಯನೆಂದನವನೀಶ ॥೧೪॥

ಹುಸಿಯ ನುಡಿವನ ಜೀವಹಿಂಸೆಯ ।
ದೆಸೆಗೆ ನಲಿವನ ತಾಯಿಮಕ್ಕಳ ।
ಬೆಸುಗೆಯನು ಬಿಚ್ಚಿದನ ಮಿತ್ರಂಗೆರಡು ಬಗೆದವನ ॥
ಹಿಸುಗಣಿನ ಕೃಪಣನ ವೃಥಾ ಕೋ ।
ಪಿಸುವವನ ದುರ್ಗತಿಗಳಾಗಲಿ ।
ಶಶಿಮುಖಿಯೆ ನಾ ಮರಳಿ ನಿನಗಳುಪಿದರೆ ಕೇಳೆಂದ ॥೧೫॥

ತನ್ನ ಕಾರಿಯವಾಗಬೇಕೆಂ ।
ದನ್ನಿಗರ ಕೆಡಿಸುವ ನಿರಂತರ ।
ತನ್ನ ಸತಿಯನು ಬಾಧಿಸುವ ಪರಸತಿಗೆ ವೇದಿಸುವ ॥
ಕುನ್ನಿಗಳ ಗತಿಯಹುದು ತನಗೀ ।
ನನ್ನಿಯನು ತಪ್ಪಿದಡೆ ಸಾಕೆಲೆ ।
ಕನ್ನೆ ಸಂಶಯ ಬೇಡವಿನ್ನೇಳೆಂದನವನೀಶ ॥೧೬॥

ನಿಂದಕನ ನಿಷ್ಠುರನ ದಳದುಳ ।
ಬಂದಿಕಾರನ ಬಾಹಿರನ ರಣ ।
ಹಂದೆಗನ ಪತಿವಂಚಕನ ವಿಶ್ವಾಸಘಾತಕನ ।
ಬಂಧುಭೇದನ ಭಜಕಭಕ್ಷನ ।
ನಿಂದಿತಾಹಾರಿಗನ ನರಕದೊ ।
ಳೊಂದುವೆನು ನಾ ಮರಳಿ ನಿನಗಳುಪಿದರೆ ಕೇಳೆಂದ ॥೧೭॥

ತನಗಿದೊಳ್ಳಿಹ ರೀತಿ ಸಮನಿಸಿ ।
ತೆನುತ ನಿಶ್ಚಯಿಸುತಲಿ ನುಡಿದಳು ।
ವನಿತೆಯಾದಡೆಯೇನ ಹೇಳಿದ ಕೇಳದಾಕ್ಷಣವೆ ॥
ಜನಪ ನಿನ್ನನು ಬಿಟ್ಟು ನಾ ಹೋ ।
ಹೆನು ಯಥಾರ್ಥವಿದೆಂದು ದಿಟವನು ।
ವನಿತೆ ನುಡಿಯಲು ಭೂಪನಾ ಮಹದೇವಿಗಿಂತೆಂದ ॥೧೮॥

ನೋಡುವಡೆ ನಾ ನೀನು ಹೇಳಿದ ।
ಮಾಡದಾಕ್ಷಣ ನೀನು ಸುಖದಿಂ ।
ದಾಡುತಿಪ್ಪುದು ನಿನ್ನ ಬುದ್ಧಿಗೆ ಬಂದ ಪರಿಯಿಂದೆ ॥
ನಾಡ ಮಾತಿನ್ನೇಕೆ ಕರುಣವ ।
ಮಾಡಿ ನಿನ್ನ ಕೃಪಾನಿರೀಕ್ಷೆಯ ।
ಜೋಡ ತೊಡಿಸೆನಗೆಂದನಾ ಮಾನಿನಿಗೆ ಮಹಿಪಾಲ ॥೧೯॥

ಆದಡಾಗಲಿಯರಸ ನಡೆಯೆನೆ ।
ಮೇದಿನೀಪತಿ ಹರುಷದಿಂದಲಿ ।
ಹೋದನಾಗಳೆ ಹೊಕ್ಕನರಮನೆಯನು ಸುಮಾನದಲಿ ॥
ಆದರಿಸಿ ಶೃಂಗಾರ ಮಾಡಿ ವಿ ।
ನೋದದಲಿ ದಂಡಿಗೆಯನೇರಿಸು ।
ತೈದಿದರು ಹೆಗ್ಗಡಿತಿಯರು ಮಹದೇವಿ ಸಹವಾಗಿ ॥೨೦॥

ಅರಮನೆಯ ಹೊಕ್ಕಳು ವಿಳಾಸದ ।
ಲಿರುತಿರಲು ಮಹದೇವಿಯನು ಕಂ ।
ಡರಸನೇಕಾಂತದಲಿ ತುಡುಕಿದೊಡಾಕೆ ವಿನಯದಲಿ ॥
ಅರಸ ಸೈರಿಸು ಮತ್ತಿಯವನು ।
ತ್ತರಿಸು ಬಳಿಕಂಗೈಸು ಎನಲಾ ।
ತರುಣಿಗವನೀಪಾಲ ನುಡಿದನು ವಿನಯಪರನಾಗಿ ॥೨೧॥

ಏನ ಮಾಡಲಿಬೇಕು ಹೇಳಲೆ ।
ಮಾನಿನಿಯೆ ಎನಲಾಕೆ ನುಡಿದಳು ।
ನೀನು ಸಲೆ ಶಿವಭಕ್ತನಾದಡೆ ಕೂಡುವೆನು ನಿನ್ನ ॥
ನೀನು ಭವಿಯಾಗಿರ್ದಡೊಲ್ಲೆನು ।
ನಾನು ಹೇಳುವುದಿನಿತೆಯೆನಲು ಸು ।
ಮಾನ ಹೋಗಿ ದುಮಾನವಾಯಿತು ಮತ್ತೆ ಜನಪತಿಗೆ ॥೨೨॥

ಗೂಗೆಗಾದಿತ್ಯನ ಕರಂಗಳು ।
ಮೂಗರಿಗೆ ಮಾತುಗಳು ಡಂಬಕ ।
ಯೋಗಿಗನುಭವ ಕೋಪಿಗುಪಶಮೆ ನಾಯ್ಗೆ ನಾರಂಗ ॥
ಮೂಗುಹೀನಗೆ ಮುಕುರವುರಿಸಿಕೆ ।
ಯಾಗಬಲ್ಲವೆ ಭಕ್ತಿಗೆಳಸದೆ ।
ರೋಗಿಗೌಷಧಿಯರುಚಿಯಾದಂತಾಯಿತವನಿಪಗೆ ॥೨೩॥

ನಮಗೆ ಶಿವಭಕ್ತಿಯನು ಮಾಡುವ ।
ಸಮಯವಳವಡದೆನಲು ನೃಪತಿಗೆ ।
ರಮಣಿ ನುಡಿದಳು ನಮಗೆ ನಿಮ್ಮಯ ಸಂಗವಳವಡದು ॥
ನಿಮಗೆ ನಾವಿನ್ನುತ್ತರಾಯಿಗ ।
ಳೆಮಗೆ ಬಂಧನ ಬಿಟ್ಟುದೆನುತಾ ।
ಕ್ರಮದಲುಟ್ಟುಡಿಗೆಯನು ತೊಡಿಗೆಯನಿತ್ತಳರಸಂಗೆ ॥೨೪॥

ಆತನಿದ ನೆರೆ ನೋಡುತಿವಳಿಗೆ ।
ಭೂತ ಹೊಡೆಯಿತೊ ಮೇಣು ಪಿತ್ತದ ।
ಧಾತು ಹೆಚ್ಚಿತೊ ಸುಖದಲುಂಡುಟ್ಟಿರಲು ಹೇಳಿದಡೆ ॥
ಏತಕಿವಳು ವಿರಕ್ತೆಯೆನೆ ವಿಪ ।
ರೀತದಲಿ ತಲೆಗೆದರಿ ಬತ್ತಲೆ ।
ಕೌತುಕವ ಮಾಡಿದಳು ಶಿವ ಎನುತರಸ ಬೆರಗಾದ ॥೨೫॥

ಮೀಸಲಳಿಯಿತು ಬಯಕೆ ಮನದಭಿ ।
ಲಾಷೆ ಜಾರಿತು ಕಾಮದಾತುರ ।
ವೋಸರಿಸಿತೆಡೆವರಿಯಿತಳುಪು ವಿವೇಕ ವರ್ಧಿಸಿತು ॥
ಭಾಷೆ ಭರವೇರಿತ್ತು ಮತ್ತೆ ಮ ।
ಹೀಶನಾದಡೆ ಹೋಗಲೆನುತ ನಿ ।
ರಾಸೆಯಿಂದಲಿ ಹೋಗಬಿಟ್ಟನು ಬಳಿಕ ಬಾಲಕಿಯ ॥೨೬॥

ಹಿಡಿದ ಲಿಂಗದ ವರವಿಭೂತಿಯ ।
ತೊಡಹದಂಗದ ಮೆಯ್ಗೆ ಮುಸುಕಿದ ।
ಬಿಡುಮುಡಿಯ ಹೊದಕೆಯ ವಿಳಾಸತೆ ರಾಹು ಚಂದ್ರಮನ ॥
ಹಿಡಿದು ನೆಟ್ಟನೆ ನಿಂದು ನಿಗುರುತ ।
ಪೊಡವಿಯಲಿ ಬಂದಿರ್ದುದೋ ಎನೆ ।
ಕಡು ವಿರಕ್ತಿಯ ವೇಷ ಕಾಣಿಸಿತಿಂದುವದನೆಯಲಿ ॥೨೭॥

ತಂದೆ ತಾಯ್ಗಳು ನಂಟರಿಷ್ಟರು ।
ಬಂಧು ಬಳಗಗಳಿತರ ಜನಗಳು ।
ಬಂದು ನಿಂದೆಲೆ ಅಕ್ಕ ನೀನಕಟೇಕೆ ಮರುಳಾದೆ ॥
ಎಂದೆನಲು ಶಿವಗರ್ಪಿಸಿದ ತನು ।
ವಿನ್ನು ಮೊದಲಾಗೆನ್ನ ಹಂಬಲ ।
ನಿಂದು ಕಳೆವುದು ನೀವೆನುತ ಮಹದೇವಿ ಜಾರಿದಳು ॥೨೮॥

ಐಸಲೇ ನಮಗೇನು ತನ್ನಯ ।
ವಾಸಿಯಿಂದ ವಿರಕ್ತಿ ಬಂದುದು ।
ಮೀಸಲಳಿಯದೆ ಕನ್ನೆತನದಲಿ ಶಿವನನಪ್ಪುವೊಡೆ ॥
ಲೇಸು ನಿಜ ಕುಲಕೋಟಿಗೆನುತವ ।
ರೋಸರಿಸಿದರು ಬಳಿಕಲತಿ ಸುಖ ।
ವಾಸದಲಿ ಮಹದೇವಿ ನಡೆದಳು ಭಕ್ತಿಭಾವದಲಿ ॥೨೯॥

ಕಾಯವಳಿಯದೆ ಶಿವನ ಕೂಡುವ ।
ದಾಯದನುಭವವಾವ ಘನಗುರು ।
ರಾಯನಿಂದೆನಗಹುದೊ ಶಿವ ಶಿವ ಎನುತ ನೆನೆವುತಲಿ ॥
ಆಯತಿಕೆಯಲಿ ನಗರವಿಪಿನನಿ ।
ಕಾಯದಲಿ ನೆರೆ ತೊಳಲಿ ಭಕ್ತ್ಯೋ ।
ಪಾಯದಲಿ ಸುಳಿದಾಡುತಿರ್ದಳು ಮತ್ತೆ ಮಹದೇವಿ ॥೩೦॥

ಎಲ್ಲಿ ಸಜ್ಜನವೆಲ್ಲಿ ನಿರ್ಜನ ।
ವೆಲ್ಲಿ ಗಿಡು ಮಡುವೆಲ್ಲಿ ತರು ಗಿರಿ ।
ಯೆಲ್ಲಿ ಗಂಹರವೆಲ್ಲಿ ಪೂಗೊಳವೆಲ್ಲಿ ಲತೆ ಪುಳಿನ ॥
ಎಲ್ಲ ಎಡೆಯಲಿ ಹಾಡುತಾಡುತ ।
ಮೆಲ್ಲ ಮೆಲ್ಲನೆಯರಸುತಿರ್ದಳು ।
ಅಲ್ಲಮಪ್ರಭು ಗುರು ಗುಹೇಶ್ವರನನು ಮಹಾದೇವಿ ॥೩೧॥

**ಅಂತು ಗತಿ ೧೦ಕ್ಕಂ ಪದನು ೪೭೩ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೧೧
# ಅಲ್ಲಮನ ಹೊಗಳಿದನು ಗೊಗ್ಗಯ್ಯ

**ವಚನ**

ಕಾಣದುದನರಸುವರಲ್ಲದೆ ಕಂಡುದುದನರಸುವರೆ
ಘನಕ್ಕೆ ಘನವಾದ ವಸ್ತು ತಾನೆ ಗುರುವಾದ, ತಾನೆ ಲಿಂಗವಾದ
ತಾನೆ ಜಂಗಮವಾದ, ತಾನೆ ಪ್ರಸಾದವಾದ, ತಾನೆ ಮಂತ್ರವಾದ
ತಾನೆ ತಂತ್ರವಾದ, ತಾನೆ ಯಂತ್ರವಾದ, ತಾನೆ ಸಕಲ ವಿದ್ಯಾಸ್ವರೂಪವಾದ
ಇಂತಿವೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದು ನಿಂದ ಬಳಿಕ
ಇನ್ನು ನಿರ್ವಿಕಾರ ಕಾಣಾ ಗುಹೇಶ್ವರಾ ॥೧॥

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ
ಮಲತ್ರಯಂಗಳ ಕಳೆದುಳಿದು ನಿರ್ಮಲವಾದ ಶಿಷ್ಯನು
ಕಾಯಜೀವದ ಭ್ರಾಂತಿಸೂತಕದ ವಿವರಿಸಿ ಕಳೆದು ನಿಶ್ಶಂಕನಾದ ಗುರುವು
ಉಭಯ ಭಾವದೊಳಗೆ ಆವುದು ಮುಂದು ಆವುದು ಹಿಂದೆಂದರಿಯಲಹುದೆ?
ಕರಸ್ಥಲಕ್ಕೆ ಕಾರುಣ್ಯವ ಮಾಡಿದಡೆ ಮನಸ್ಥಲಕ್ಕೆ ಹಂಗಿಲ್ಲ
ಮನಸ್ಥಲದಲ್ಲಿ ಸೆರಗೊಡ್ಡಿ ಬೇಡಿದರೆ ಕರಸ್ಥಲದ ಲಿಂಗ ಕೈಸಾರಿತ್ತು
ಗುರುಸ್ಥಲದ ನಿಲವು ಪರಸ್ಥಲದಲಡಗಿದರೆ ಭಾವ ಬೆರಗಾಯಿತ್ತು ಗುಹೇಶ್ವರಾ ॥೨॥

**ಸೂಚನೆ**

ಬೆರಸಿ ತನ್ನೊಳಗನಿಮಿಷನನಾ ।
ಪರಿಯಲಲ್ಲಮನೊಂದು ವೇಷವ ।
ಧರಿಸಿ ಸುಳಿದನು ಲೀಲೆಯಿಂದಲಿ ಜಗಹಿತಾರ್ಥದಲಿ ॥

ಕಾಳು ವಿಷಯದ ವಿಧಿಯ ದಾಳಾ ।
ದೂಳಿಯಲಿ ಹತವಾಗಿ ಕಾಲನ ।
ಕಾಲ ಬಾಯಲಿ ಬೀಳಲೊಲ್ಲೆವೆನಿಪ್ಪ ಸುಕೃತಿಗಳು ॥
ಕೇಳುವುದು ಕಿವಿಗೊಟ್ಟು ಭಕ್ತಿಯ ।
ಕಾಲು ಕೀಲನು ನುಡಿದು ತೋರಿಸಿ ।
ಪಾಲಿಸುವ ಪರಬೊಮ್ಮನಲ್ಲಮ ಸುಳಿದ ಸುಲಭತೆಯ ॥೧॥

ಲಿಂಜನಿಜವನು ಬಯಸಿ ಭಕ್ತಜ ।
ನಂಗಳಿರುತಿರಲಲ್ಲಮಪ್ರಭು ।
ಲಿಂಗನಂತಿದನರಿದು ತನ್ನ ಕಟಾಕ್ಷಕಾಂತಿಯಲಿ ॥
ಹಿಂಗಿಸುವೆನೆಲ್ಲರ ಮನೋಮಯ ।
ದಂಗದೊಳಹೊರಗಿಡಿದ ತಮದ ತ ।
ರಂಗಗಳನೆಂದೆನುತ ಕಾರಣ ಕಾಯದಲಿ ಸುಳಿದ ॥೨॥

ಸುಳಿದು ಸುಖದಲಿ ತನ್ನ ಲೀಲೆಯ ।
ಬೆಳೆಸಬೇಕೆಂದೊಂದು ವೇಷದ ।
ಹೊಳಹಿನಲಿ ಬರುತಿರಲು ಕಟ್ಟಿದಿರಿನಲಿ ಚೆಲುವಾಗಿ ॥
ತಳಿತ ಕೆಂದಾವರೆಯ ನೈದಿಲು ।
ಗೊಳನ ನಾನಾಪರಿಯ ಪೂಗಿಡು ।
ಗಳ ಲತಾಮಂಟಪದ ತೋಟವ ಕಂಡನಲ್ಲಮನು ॥೩॥

ಆ ವನವ ಪಾಲಿಸುವನೊಬ್ಬನು ।
ಪಾವನೀಕೃತಚಿತ್ತನೀಶ್ವರ ।
ಭಾವಭಕ್ತನು ಗೊಗ್ಗಿದೇವನು ಕೃಷಿನಿಮಿತ್ತಿಳೆಯ ॥
ತೀವಿಯಗಳುತ್ತಿರ್ದನಾ ಪ್ರ ।
ಸ್ತಾವದಲಿ ಕಂಡಲ್ಲಮಪ್ರಭು ।
ದೇವ ತಾನಾತನ ಸಮೀಪಕೆ ಹೋಗಿ ನಿಂದಿರ್ದ ॥೪॥

ಮಿಕ್ಕು ಬೆವಸಾಯವನು ಮಾಡುವ ।
ಹೆಕ್ಕಳದ ಹೋರಟೆಯ ಕಾಣುತ ।
ಲಕ್ಕರಿಂದಲಿ ನೋಡಿ ಕರುಣರಸಾರ್ದ್ರಚಿತ್ತದಲಿ ॥
ಸಿಕ್ಕಿತಲ್ಲಾ ಲೋಕವೀಪರಿ ।
ಕಕ್ಕುಲಿಸಿಯೊಡಲಾಸೆಗರಿವನು ।
ಲೆಕ್ಕಿಸದೆ ಅಕಟೆನುತಲಲ್ಲಮ ತನ್ನೊಳಿಂತೆಂದ ॥೫॥

ಅದಡಿನ್ನೀತನನುಪಾಯದ ।
ಭೇದದಿಂದೊಡಬಡಿಸಿ ಭಕ್ತಿಯ ।
ಹಾದಿಯನು ಹತ್ತಿಸುವೆ ನಾನೇ ಲಿಂಗಮಾರ್ಗದಲಿ ॥
ಸಾಧಿಸುವ ಸಾಧಕನವೊಲು ಸಂ ।
ವಾದಿಸುವೆನೀತನಲಿಯೊಂದು ವಿ ।
ನೋದವನು ಮಾಡುವೆನೆನುತ್ತಲ್ಲಮನು ಬಗೆಗೊಂಡು ॥೬॥

ಬಳಿಕಲಾ ತೋಟಿಗನ ಬುದ್ಧಿಗೆ ।
ತಿಳಿವ ತೀಡುವೆನೆನುತ ಮಿಗೆ ಕಂ ।
ಗಳಿಗೆ ಕಟ್ಟಿದಿರಾಗುತಲಿ ಶರಣಾರ್ಥಿಯೆಂದೆನಲು ॥
ನಲಿದು ಕೇಳುತ ಕೂಡೆ ಶರಣೆಂ ।
ದೊಲಿದು ನೀನಾರೆನುತ ವಿನಯಂ ।
ಗಳಲಿ ತದ್ವನಪಾಲ ಕೇಳಿದನಲ್ಲಮಪ್ರಭುವ ॥೭॥

ಭಾವಿಸಲು ಶಿವಭಕ್ತರೆಂಬುವ ।
ರಾವ ಠಾವಿನಲಿಪ್ಪರವರ ಕೃ ।
ಪಾವಲೋಕನಭಕ್ತಿಭಿಕ್ಷಾಂದೇಹಿಗಳು ನಾವು ॥
ಆವುದರೊಳಹುದಲ್ಲದಲ್ಲಮ ।
ದೇವನೆಂಬುದು ನಮಗೆ ಸಲೆ ಸಂ ।
ಭಾವಿಸಿದ ಹೆಸರಾಗಿಹುದು ಭಕ್ತಯ್ಯ ಕೇಳೆಂದ ॥೮॥

ತಿಳಿದು ನಾನಾ ಪರಿಗಳಿಂದಲಿ ।
ಗಳಿಸಿದರ್ಥವ ಲಿಂಗಜಂಗಮ ।
ಗಳಿಗೆ ನೀಡುತಲೊಕ್ಕುಮಿಕ್ಕುದನುಂಡು ಸುಖಿಯಹುದು ॥
ಇಳೆಯೊಳಿದು ಶಿವಭಕ್ತಿ ಬರಿದೆಗೆ ।
ತೊಳಲಿಯರಸಲದೇನು ಕಾರಣ ।
ವೆಲೆ ಮರುಳೆ ಕೇಳೆಂದಾ ಗೊಗ್ಗಯ್ಯನಲ್ಲಮನ ॥೯॥

ನಿಮ್ಮ ಹೆಸರೇನಯ್ಯ ಎಂದರೆ ।
ನಮ್ಮ ಹೆಸರೇ ಗೊಗ್ಗಯ್ಯನು ಕೇ ।
ಳೆಮ್ಮ ಮತವಿದು ಲೌಕಿಕರು ನಾವರಿಯೆವೇನುವನು ॥
ಸುಮ್ಮನಿರಬೇಡೆಮಗೆ ವಿವರಿಸಿ ।
ನಿಮ್ಮ ಮನಸಿನ ಬುದ್ಧಿಯಾವುದ ।
ನೆಮ್ಮಿಹುದು ಹೇಳೆಂದನಾ ಗೊಗ್ಗಯ್ಯನಲ್ಲಮಗೆ ॥೧೦॥

ಆವ ಬೆವಸಾಯವನು ಮಾಡಲು ।
ಜೀವವಧೆಗಳು ತಪ್ಪವದರಲಿ ।
ದೇವನೊಲಿವನೆ ನೋವು ನಿಲುವುದೆ ಸಾವು ಹಿಂಗುವುದೆ ॥
ಧಾವತಿಯೆ ಕಡೆತನಕ ತಪ್ಪದು ।
ಭಾವಿಸುವೊಡದು ಭವಿಗಳಂಗವಿ ।
ದಾವುದಲ್ಲದ ಮತವನೆಲೆ ಗೊಗ್ಗಯ್ಯ ಕೇಳೆಂದ ॥೧೧॥

ಇಲ್ಲಿ ಭಕ್ತಿಯ ಮಾಡುತಲಿ ಕಡೆ ।
ಯಲ್ಲಿ ಕೈಲಾಸವನು ಹೊಕ್ಕಡೆ ।
ಯೆಲ್ಲಿಹವು ಬಿಡು ನೋವು ಸಾವುಗಳೆಂಬ ಸಂಕಟವು ॥
ಬಲ್ಲವರ ಕೇಳೆಮ್ಮ ನಂಬುಗೆ ।
ಯಿಲ್ಲದಿರ್ದಡೆ ಮರುಳೆ ನೀನೆನು ।
ತಲ್ಲಮನ ಗೊಗ್ಗಯ್ಯ ಬೋಧಿಸುತಿರ್ದನೀ ಮತವ ॥೧೨॥

ಅವಧರಿಸಿ ಕೇಳೆನ್ನ ಬುದ್ಧಿಯ ।
ಹವಣನಾದರೆ ಜೀವವಣುಮಾ ।
ತ್ರವನು ನೋಯಿಸಿ ಭಕ್ತಿಯಲಿ ಕೈಲಾಸಪುರದೊಳಗೆ ॥
ಭವನ ಬಸುರೊಳಗಿರ್ದಡೆಯು ಸಂ ।
ಭವಿಸುವುವು ಕಡು ನೋವು ಸಾವುಗ ।
ಳಿವನು ಕಳೆವರ ಕಾಣೆನೈ ಗೊಗ್ಗಯ್ಯ ಕೇಳೆಂದ ॥೧೩॥

ಕೊಂದವಗೆ ಕೊಲೆ ತಪ್ಪದಾರೇ ।
ನೆಂದಡೆಯು ಹರಿ ಹರ ವಿರಿಂಚಿಗ ।
ಳಿಂದ ಬಲ್ಲಿದರಾರು ದಿಟವವರಾದಡೆಯು ತುದಿಗೆ ॥
ಬಂಧನಪ್ರದಬಾಹ್ಯಕರ್ಮವ ।
ನೊಂದುಗೂಡಿದರಾದಡವರಿಗೆ ।
ಸಂದ ನಿಜಸುಖವಿಲ್ಲವೈ ಗೊಗ್ಗಯ್ಯ ಕೇಳೆಂದ ॥೧೪॥

ಸಾವಡೀ ಗುರುಲಿಂಗಜಂಗಮ ।
ಸೇವೆ ತಾ ಮುನ್ನೇಕೆ ಹಸಿವಿನ ।
ಬೇವಸದಲಡಿಗಡಿಗೆ ಬೇವಡೆಯೊಕ್ಕುದುಣಲೇಕೆ ॥
ಈ ವಿಧಿಯಲೇನುಂಟು ನೆರೆ ನಿ ।
ರ್ಭಾವದಂಗವನರಿಯದನ್ನಕ ।
ಸಾವುದಾದಡೆ ಮಾಣದೈ ಗೊಗ್ಗಯ್ಯ ಕೇಳೆಂದ ॥೧೫॥

ಪರಿಕಿಸಲು ಗುರುಲಿಂಗಜಂಗಮ ।
ದಿರವದಾವೆಡೆಯೆಂಬುದೀಯುಪ ।
ಚರಣೆಗರುಹಿಸಲದರ ಪರಿಯೆಂತೋ ಮಹಾದೇವ ॥
ಅರಿದಲಾ ಎಂದೆನುತ ನೆವದಿಂ ।
ದೊರೆದನಾ ಗೊಗ್ಗಯ್ಯಗಿಂತೀ ।
ಪರಿಯನಲ್ಲಮಲಿಂಗನೊಲಿದನ್ಯೋಪದೇಶದಲಿ ॥೧೬॥

ಎಲ್ಲವನು ಕೇಳುತ್ತಲಾತನು ।
ಹೊಲ್ಲವಾಯಿತು ಭಕ್ತಿಯೆಂಬುದು ।
ಕಲ್ಲುಕಡಲೆಯ ಮೆಲುವ ಪರಿಯಲ್ಲಾ ಮಹಾದೇವ ॥
ಅಲ್ಲಮಾ ನಾವರಿಯೆವೈ ನೀ ।
ಬಲ್ಲೆ ನಿನ್ನಯ ಮನದ ಹರಿವದು ।
ಸಲ್ಲದುಳಿದರಿಗೆಂದನಾ ಗೊಗ್ಗಯ್ಯನೊಲವಿನಲಿ ॥೧೭॥

ಮತ್ತೆಯಲ್ಲಮನಾದಡೊಂದು ನಿ ।
ಮಿತ್ತ ದೃಷ್ಟಾಂತವನು ತೋರಿಸಿ ।
ಹತ್ತಿಸುವೆನೀತಂಗೆ ಹಾದಿಯನೆನುತಲತಿ ಕೃಪೆಯ ॥
ಚಿತ್ತದಲಿ ಗೊಗ್ಗಯ್ಯನಗುಳುತ ।
ಕಿತ್ತ ಹೆಂಟೆಯ ಕೆಳಗೆ ತೋರಿದ ।
ನುತ್ತಮದ ಹೊಂಗಳಸವೊಂದನು ನಿಮಿಷಮಾತ್ರದಲಿ ॥೧೮॥

ಏನಿದೇನೆಂದಿಬ್ಬರೊಲಿದನು ।
ಮಾನದಿಂದಗುಳಲು ಸಮಾಧಿ ।
ಸ್ಥಾನದಾ ದೇಗುಲವ ಕಂಡೊಳಪೊಕ್ಕು ಹರುಷದಲಿ ॥
ಮೌನದಿಂ ನಿಬ್ಬೆರಗು ಹೊಡೆದವ ।
ಧಾನದನಿಮಿಷದಿಷ್ಟಲಿಂಗ ।
ಧ್ಯಾನದಂಗವ  ಕಂಡರಾ ಗೊಗ್ಗಯ್ಯನಲ್ಲಮರು ॥೧೯॥

ಅಂತರಂಗವ ಹೊಕ್ಕು ನೆರೆ ನಿ ।
ಶ್ಚಿಂತ ನಿಲವನು ನೋಡುವನುಭವಿ ।
ಯಂತೆ ಗುಹೆಯೊಳಗೊಂದು ಲಿಂಗಪ್ರಾಣತನುಮಯದ ॥
ಜಂತ್ರಗಿಟಿಗಿಟಿಯಾದ ಲಿಂಗದ ।
ಚಿಂತೆಯಲಿ ಮರವಟ್ಟ ಮೆಯ್ಯ ಮ ।
ಹಂತನನು ಗೊಗ್ಗಯ್ಯನಲ್ಲಮ ಸಹಿತ ನೆರೆ ಕಂಡ ॥೨೦॥

ಮಾಡಬಲ್ಲಡೆ ಭಕ್ತಿಯಂಗವ ।
ನೋಡಿದ್ಯೆ ನಮ್ಮಯ್ಯನಿರವಿನ ।
ಗಾಡಿಯನು ಗಂಭೀರಭಕ್ತಿಯ ಗರುವ ಮೋಡಿಯನು ॥
ರೂಢಿಗೇಕೋಭಾವನಿಷ್ಠೆಯ ।
ಗೂಡನೆನುತನಿಮಿಷನ ಮಿಗೆ ಕೊಂ ।
ಡಾಡಿ ಗೊಗ್ಗಯ್ಯಂಗೆಯಲ್ಲಮಲಿಂಗ ತೋರಿದನು ॥೨೧॥

ಭಂಗಪದವಿಯನೊಲ್ಲೆನಿನ್ನೀ ।
ಲಿಂಗದಲಿ ಸುಖಿಯಪ್ಪೆನೆಂದಾ ।
ಭೃಂಗಿನಾಥನೆ ಶಿವಸಮಾಧಿಯಲಿದ್ದನೆಂಬಂತೆ ॥
ಲಿಂಗದಲಿ ನೆರೆ ನಟ್ಟ ನೋಟದ ।
ಕಂಗಳೇ ಕರುಳಾಗಿಯೆಲುವೆ ಸ ।
ದಂಗದನಿಮಿಷನಿರವನಾ ಗೊಗ್ಗಯ್ಯನೀಕ್ಷಿಸಿದ ॥೨೨॥

ಇದೆ ಕಣಾ ಶಿವಲಿಂಗಭಕ್ತಿಯ ।
ಹೃದಯವನು ಸಾಧಿಸುವ ಪರಿ ಭಾ ।
ವದಲಿ ನೆರೆ ನಟ್ಟಾಲಿಯಲಿ ನಿಬ್ಬೆರಗಿನಂದದಲಿ ॥
ಇದನು ಸಾಧಿಸದನ್ಯವ್ಯವಸಾ ।
ಯದಲಿ ಸಾವೊಡೆ ಕಬ್ಬಿನಿಚ್ಚೆಗೆ ।
ಬಿದಿರ ಮೆಲುವಂತಪ್ಪುದ್ಯೆ ಗೊಗ್ಗಯ್ಯ ಕೇಳೆಂದ ॥೨೩॥

ಬಡವನಕ್ಷಯನಿಧಿನಿಧಾನವ ।
ನೆಡಹುತಲಿ ಕಂಡಂತೆ ಕೈಕಾಲ್ ।
ಮುಡುಬಗಳವಟ್ಟಂತೆ ಕುರುಡಗೆ ಕಣ್ಣು ಬಂದಂತೆ ॥
ಬಿಡದೆಯರಸುವ ಬಳ್ಳಿ ಕಾಲನು ।
ತೊಡರಿತೆಂಬಂತೆನ್ನ ಬಯಕೆಯ ।
ಕಡೆಯ ಕಂಡೆನೆನುತ್ತಲಲ್ಲಮ ನುಡಿದನುಚಿತದಲಿ ॥೨೪॥

ಗುರುವೆ ಕರುಣಿಸು ಭಕ್ತಿಭಾವದ ।
ಕರುವೆ ಕರುಣಿಸು ಲಿಂಗನಿಷ್ಠೆಯ ।
ಗರುವೆ ಕರುಣಿಸು ಕರುಣಿಸೆನುತನಿಮಿಷನ ಕೊಂಡಾಡಿ ॥
ನರನು ತಾ ದಿಟವೆಂಬ ಬಳಕೆಯ ।
ಪರಿಯನಂಗೀಕರಿಸಿ ಪರರಿಗೆ ।
ಪರಮನಲ್ಲಮ ನಟಿಸುತಿರ್ದನು ತನ್ನ ಲೀಲೆಯಲಿ ॥೨೫॥

ಅರಿಯದವರಾಳೋಚನೆಗೆ ತನ ।
ಗುರುವ ಗುರುವನಿಮಿಷನು ತಾನೇ ।
ನೆರೆ ವಿನೂತನ ಶಿಷ್ಯನೆಂಬವೊಲಖಿಳ ಭಕ್ತರಿಗೆ ॥
ಅರಿವಿನಿಂಗಿತವನ್ನು ತನ್ನಯ ।
ಕುರುಹಿನಾಕಾರದಲಿ ಕಲಿಸುವ ।
ತೆರನನಲ್ಲಮ ನಟಿಸುತರ್ದನು ತನ್ನ ಲೀಲೆಯಲಿ ॥೨೬॥

ಹತ್ತೆ ಬಂದಿರೆ ಸೂಜಿಗಲ್ಲನು ।
ಹತ್ತಿ ಮೋಹಿಪ ಸೂಜಿಯಂತಿರೆ ।
ತೆತ್ತಿಸಿದುದಾ ಸಚ್ಚಿದಾನಂದಸ್ವರೂಪೆನಿಪ ॥
ನಿತ್ಯನಲ್ಲಮನಂಶವಾದ ನಿ ।
ಮಿತ್ತವಾಕ್ಷಣ ಕಾಣುತವೆ ಮೈ ।
ಪತ್ತಿತೊಯ್ಯನೆಯನಿಮಿಷಯ್ಯನ ಕೈಯ ಶಿವಲಿಂಗ ॥೨೭॥

ನೋಟವೇ ಪ್ರಾಣಸ್ವರೂಪಿನ ।
ಮಾಟವಾದ ನಿಮಿತ್ತ ಲಿಂಗದ ।
ಕೂಟದೊಡನಾಗನಿಮಿಷಯ್ಯನ ಜೀವಕಳೆ ಬಂದು ॥
ನಾಟಿತೀತನ ದಿವ್ಯದೇಹದ ।
ಕೋಟರದೊಳೇನೆಂಬೆನೈಕ್ಯದ ।
ಮಾಟದಲಿ ಮಮಕರಿಸಿ ಮಕರಿಸಿ ಮೆರೆದನಲ್ಲಮನು ॥೨೮॥

ಲಿಂಗದೊಡನನುಮಿಷದ ನೋಟದ ।
ಕಂಗಳಾತನ ಜೀವಕಳೆ ಹೆರೆ ।
ಹಿಂಗದಲ್ಲಮನಲ್ಲಿ ನೆಲಸಿದೊಡೀತನದ ಕಂಡು ॥
ಅಂಗವಿಸುವಡೆಯೆಮ್ಮ ಬರಿಯರು ।
ವಿಂಗೆ ಭೇದಿಸಬಾರದಿವರನು ।
ಸಂಗದಂಗವನೆನುತಲಾ ಗೊಗ್ಗಯ್ಯ ಬೆರಗಾದ ॥೨೯॥

ಈ ಕೃಪಾಳುವೆ ದೇವನಾಗಲಿ ।
ಬೇಕದಲ್ಲದಡನಿಮಿಷನ ತಾ ।
ಸ್ವೀಕರಿಸುವನೆ ಕೂಡಬಲ್ಲುದೆ ಲಿಂಗವೀತನಲಿ ॥
ಬೇಕೆನುತಲೆನಗೀ ರಹಸ್ಯದ ।
ರೇಖೆಯನು ತೋರಿಸುವನೇ ಭೂ ।
ಲೋಕದೊಳಗಿದು ಪೊಸತೆನುತ ಗೊಗ್ಗಯ್ಯನಿಂತೆಂದ ॥೩೦॥

ಎಲೆ ಮಹಾತ್ಮನೆ ನಿನ್ನ ಸೂತ್ರದ ।
ಹೊಲಬಿದಲ್ಲದೆ ಸುಮ್ಮನೀ ಪರಿ ।
ಸಿಲುಕಬಲ್ಲುದೆ ನಿನ್ನೊಳೀ ಗುರುಲಿಂಗಕಳೆ ಬಂದು ॥
ನೆಲಸಿತದುಕಾರಣದಲಾನದ ।
ತಿಳಿದೆನೀಗಳು ನೀನೆ ನಿರುಪಮ ।
ನಿಳಯನಹೆಯೆನುತಲ್ಲಮನ ಗೊಗ್ಗಯ್ಯನಿಂತೆಂದ ॥೩೧॥

ಸಾರೆಯಲಿ ಶಿವಲಿಂಗಭಕ್ತಿಯ ।
ದಾರಿಯನು ನಾನನಿಮಿಷನ ಸಾ ।
ಕಾರದಲಿ ಕಂಡರಿದೆನೀಗಳು ನಿನ್ನ ಕತದಿಂದೆ ॥
ಸಾರಜಂಗಮಲಿಂಗವೆಂಬಾ ।
ಕಾರದಲಿ ನೀ ಸುಳಿವುತೀಪರಿ ।
ಧಾರುಣಿಯ ಭಕ್ತರನು ಸಲಹೆನುತಿರ್ದನಲ್ಲಮಗೆ ॥೩೨॥

ಎನಲು ಶಿವಭಕ್ತಿಯ ರಹಸ್ಯದ ।
ಘನವು ಗೊಗ್ಗಯ್ಯಂಗೆ ವೇದಿಸಿ ।
ದನುವ ತಾನರಿದಾದಡಿದಕೇನೀತನೆಂದಂತೆ ॥
ಅನುಕರಿಸಿ ಕಾಣಿಸುತ ಜಗತೀ ।
ಜನವ ಸುಖಿಗಳ ಮಾಡುವೆನು ನಾ ।
ನೆನುತಲಿರ್ದನು ಗುರು ಗುಹೇಶ್ವರಲಿಂಗ ಕರುಣದಲಿ ॥೩೩॥

ಜಗದ ಭಕ್ತರದಾವ ಮುಖದಲಿ ।
ಹೊಗುತಲಿರ್ದರು ತಾನು ಬಳಿಕಾ ।
ಬಗೆಯನಂಗೀಕರಿಸಿಕೊಂಡನು ತನ್ನ ಲೀಲೆಯಲಿ ॥
ಬಿಗಿದ ಬೆರಗಿನ ಕೈಯ ಲಿಂಗದ ।
ತೆಗೆದ ಚಿತ್ತದ ನಟ್ಟ ನೋಟದ ।
ಮೊಗದ ಭಾವದ ಭಕ್ತಿಯಂಗವ ತೊಟ್ಟನಲ್ಲಮನು ॥೩೪॥

ಒಡನೆ ಕಾಣುತಲಂತದನು ನೀ ।
ನೊಡೆಯನಾಗಿಹುದೀ ಪರಿಯಲೀ ।
ಪೊಡವಿಯಲಿ ಸದ್ಭಕ್ತರೆಲ್ಲರಿಗರಿವನೀವುತಲಿ ॥
ನುಡಿದು ತೋರಲದೇಕೆ ನೀನೇ ।
ನಡೆದು ತೋರಿಸಿ ಲಿಂಗನಿಷ್ಠೆಯ ।
ಹಿಡಿಹುಗೊಳಿಸುವುದೆಂದನಾ ಗೊಗ್ಗಯ್ಯನಲ್ಲಮಗೆ ॥೩೫॥

ದೀನ ಮನದವನಂತೆ ಕಂಡ ನಿ ।
ಧಾನವನು ತಾನೊಬ್ಬನುಂಬನೆ ।
ದಾನಿ ಲೇಸೈ ನಿನ್ನ ಪರಿ ನೀ ಕಂಡ ಶಿವಪಥವ ॥
ಮಾನವರಿಗರುಹೆಂಬ ಮಹದಭಿ ।
ಮಾನಿ ನೀನೇ ಜಗದ ಗುರುವೆಂ ।
ದಾ ನಿರೂಪಮನಲ್ಲಮನ ಹೊಗಳಿದನು ಗೊಗ್ಗಯ್ಯ ॥೩೬॥

ಬಳಿಕಲಾ ಗೊಗ್ಗಯ್ಯ ನೆರೆ ನಿ ।
ಶ್ಚಲದ ನೋಟದ ಲಿಂಗಭಾವದ ।
ಬಳಕೆಯನೆ ಬಲಿದಿರುತಲಿರ್ದನು ನಿಜನಿವಾಸದಲಿ ॥
ಇಳೆಯ ಭಕ್ತರ ಪಾವನವ ಮಾ ।
ಡಲಿಕೆ ತಾನೇ ಕುರುಹುವಿಡಿದ ।
ಗ್ಗಳೆಯತನದಲಿ ನಡೆದನಲ್ಲಮಲಿಂಗ ಲೀಲೆಯಲಿ ॥೩೭॥

**ಅಂತು ಗತಿ ೧೧ಕ್ಕಂ ಪದನು ೫೧೦ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೧೨
# ಇರ್ದಳು ಸದ್ಯೋನ್ಮುಕ್ತೆ ಮುಕ್ತಾಯಿ

**ವಚನ**

ಮುಕ್ತಿಗೆ ಮುಖವಾಗಿ ಯುಕ್ತಿಗೆ ಹೊರತಾಗಿ
ಅರಿವಿಂಗೆ ಅರಿವಾಗಿಪ್ಪ ಭೇದವು
ಎನಗೆ ಕಾಣಬಂದಿತ್ತು ನೋಡಾ
ನಿನ್ನೊಳಗಾನೊರೆದು ನೋಡಿದಡೆ
ಒರೆಯಿಲ್ಲದ ಚಿನ್ನದ ಪರಿಮಳ ಎನ್ನ ಮನವನಾವರಿಸಿ,
ಪರಮಸುಖದ ಪರಿಣಾಮವನೊಳಕೊಂಡಿತ್ತು ನೋಡಾ
ಈ ಕುರುಹಿನ ಮೊಳೆಯ ಬರಿಯ ಬಯಲಲಿ ನಿಲಿಸಿ ನಿಲವ ನೋಡಿ ಕೂಡಾ
ನಮ್ಮ ಗುಹೇಶ್ವರನ ಶರಣ ಅಜಗಣ್ಣನೊಳಗೆ ನೀನು ನಿರಾಳಸಂಗಿಯಾಗಿ ॥೧॥

ದೇವ ದೇವ ಶರಣಾರ್ಥಿ ಎನ್ನ ಬಿನ್ನಪವ ಅವಧರಿಸಯ್ಯಾ
ಕೇಳಿದ ಸುಖ ಕಿವಿಗೆ ಬೇಟವಾಯಿತ್ತು
ಕಿವಿಗಳ ಬೇಟ ಕಂಗಳ ಮುಂದೆ ಮೂರ್ತಿಗೊಂಡಿತ್ತು
ಕಂಗಳ ಮುಂದೆ ಕಂಡ ಸುಖ ಮನಕ್ಕೆ ವೇದ್ಯವಾಯಿತ್ತು
ಘನಮಹಿಮರ ದರುಶನದ ಸುಖವ ನೆನೆದು
ಮದವಳಿದು (ಮರಣವ ಗೆಲಿದು) ಮಹವನೊಡಗೂಡಿದ
ಎನ್ನ ಅಜಗಣ್ಣನ ಅಗಲಿದ ದುಃಖ
ನಿಮ್ಮ ಸಂಗದಲ್ಲಿ ಸ್ವಯವಾಯಿತ್ತು ಕಾಣಾ ಪ್ರಭುವೆ ॥೨॥

**ಸೂಚನೆ**

ಭಕ್ತಿಯನು ಮುಕ್ತಾಯಿಗರುಹಿಸಿ ।
ಮುಕ್ತನಾದಜಗಣ್ಣನಿರವನು ।
ವ್ಯಕ್ತದಲಿ ವಿರಚಿಸಿದನೆಮ್ಮಯ ಗುರು ಗುಹೇಶ್ವರನು ॥

ನೆಟ್ಟನರಿವೊಡೆ ಗುಪ್ತಭಕ್ತಿಯ ।
ಬಟ್ಟೆಯನು ಬಯಸುವರು ಭಾವಿಸಿ ।
ಮುಟ್ಟಿ ಮೋಹಿಸಿ ಬಾಹಿರಂಗದ ಭ್ರಮೆಯ ಭರಗೆಡಿಸಿ ॥
ಕೆಟ್ಟ ಕಾಯದ ಕಳವಳಂಗಳ ।
ಕಟ್ಟಿ ಕಳೆದಾ ಪ್ರಳಯಕಾಲನ ।
ಮೆಟ್ಟಿ ನಡೆವರು ತಿಳಿವುದೀ ಪ್ರಭುಲಿಂಗಲೀಲೆಯಲಿ ॥೧॥

ಅಲ್ಲಮಪ್ರಭುರಾಯನಾನತ ।
ರೆಲ್ಲರನು ಸಂಸಾರ ನಿರಸದ ।
ಕಲ್ಲ ಕಾರುವ ಕೋಟಲೆಯ ಮಾಣಿಸಿ ಶರೀರದಲಿ ॥
ಸಲ್ಲಲಿತ ಲಿಂಗಾನುಭಾವದ ।
ಬೆಲ್ಲವನು ಮೆಲಕಲಿಸಿ ನಿಜಸುಖ ।
ದಲ್ಲಿ ನಿಲಿಸುವೆನೆನುತ ಬರುತಿರ್ದನು ವಿನೋದದಲಿ ॥೨॥

ಪೊಡವಿಯಲಿ ನೆರೆ ಗುಪ್ತಭಕ್ತಿಯ ।
ಲೊಡಲಿಗೈಕ್ಯಸ್ಥಳ ಸಮಾಧಿಯ ।
ನೊಡರಿಚಿದನಜಗಣ್ಣನೆಂಬ ಮಹಾತ್ಮನಾತಂಗೆ ॥
ಒಡನೆ ಹುಟ್ಟಿದಳೊಬ್ಬಳರಿಯದೆ ।
ಕಡು ಖತಿಯಲಿರುತಿರಲಿಕಲ್ಲಮ ।
ನಡೆದು ಬಂದನು ಮಾಣಿಸಲು ಮುಕ್ತಾಯ ಮನದಳಲ ॥೩॥

ಬರಲು ಮಿಗೆ ಕಾಣುತಲಿ ಸಲೆ ಸ ।
ತ್ಕರಿಸಿ ವಂದಿಸಿ ತನ್ನ ಚಿಂತೆಯ ।
ಪರಿಹರಿಸುವಂತಪ್ಪನೊಬ್ಬ ಮಹಾತ್ಮ ನೀನೆನಗೆ ॥
ದೊರಕಿದೆಯೆಲಾ ಎನ್ನ ಪುಣ್ಯಕೆ ।
ಸರಿಯದಾರೆನುತಲ್ಲಮಪ್ರಭು ।
ಬರಲು ಮುಕ್ತಾಯಿಗಳು ಪರಿಣಮಿಸಿದರು ಭಕ್ತಿಯಲಿ ॥೪॥

ತಾಯೆ ಭಕ್ತರಿಗುಂಟೆ ಚಿಂತೆಗ ।
ಳಾಯಸಂಗಳು ಲೋಕಲೌಕಿಕ ।
ರಾಯತವ ನೀ ನೆಗಳಿ ಬರಿದೆಗೆ ಹಲವ ಹಂಬಲಿಸಿ ॥
ಬಾಯ ಬಿಡಲಹುದೇ ವೃಥಾ ನಿಃ ।
ಕಾಯದಜಗಣ್ಣಂಗೆ ಮರುಳೇ ।
ಮಾಯೆ ಮೋಹವಿದೇತಕೌ ಮುಕ್ತಾಯಿ ಕೇಳೆಂದ ॥೫॥

ಏನ ಮಾಡುವೆನಯ್ಯ ಎನ್ನ ನಿ ।
ಧಾನವಪ್ಪಜಗಣ್ಣ ತಂದೆಯ ।
ನಾನದೆಂತಗಲುವೆನು ನನಗಿದನಿನಿತ ಸೂಚಿಸದೆ ॥
ತಾನು ಹೋದಡೆ ಬಳಿಕಲೆನಗಿ ।
ನ್ನೇನು ಗತಿಯೆಂದೆನುತ ಕಡು ದು ।
ಮ್ಮಾನವೆಲ್ಲವ ನುಡಿದಳಾ ಮುಕ್ತಾಯಿಯಲ್ಲಮಗೆ ॥೬॥

ಮರುಳಲಾ ನೀನಕ್ಕ ಮುನ್ನೇ ।
ನಿರದಲಿದ್ದನೆ ಬಳಿಕಲೀಗಲಿ ।
ಶರೀರವನು ಸಡಿಲಿಸಿದನೇ ಅಜಗಣ್ಣನಾರೆಂದು ॥
ಪರಿಕಿಸದೆ ಹಂಬಲಿಸಲೇತಕೆ ।
ಗುರು ಗುಹೇಶ್ವರ ಲಿಂಗ ಸಂಗದ ।
ಶರಣನಾತನು ಮರುಗದಿರು ಮುಕ್ತಾಯಿ ಕೇಳೆಂದ ॥೭॥

ಬೆಡಗನಾಡದಿರಯ್ಯ ಕೇಳೆ ।
ನ್ನೊಡನೆ ಹುಟ್ಟಿದನೀಸು ದಿನವೊಂ ।
ದೊಡಲುವಿಡಿದಜಗಣ್ಣನಿರ್ದನು ಗುಪ್ತಭಕ್ತಿಯಲಿ ॥
ನಡೆದು ತೋರಿಸುತೆಲ್ಲರರಿಯಲು ।
ಕಡೆಯಲೀ ಪರಿ ಕಾಣಬಾರದ ।
ತೊಡಕನೊಡ್ಡಿದನೆಂದಳಾ ಮುಕ್ತಾಯಿಯಲ್ಲಮಗೆ ॥೮॥

ಕಾರಣವ ಕಾಣಿಸದ ಮನದ ವಿ ।
ಕಾರಿಗಳಿಗಾ ಶರಣರೊಂದು ಶ ।
ರೀರವನು ತೋರಿದಡೆ ನಿನ್ನವರೆಂದು ನಂಬದಿರು ॥
ಹಾರವಿಸದಿರು ತಿಳಿದು ನೋಡಿ ವಿ ।
ಚಾರಿಸುವೊಡಜಗಣ್ಣನೆಂಬನ ।
ಪಾರ ಮಹಿಮನು ನಿತ್ಯನೌ ಮುಕ್ತಾಯಿ ಕೇಳೆಂದ ॥೯॥

ಆತ ಮಹಿಮನು ನಿತ್ಯನಹನೀ ।
ಮಾತು ಹುಸಿಯದು ತಪ್ಪದಾದಡೆ ।
ಭೂತಳದೊಳಿರುತಿರದೆ ಗುಪ್ತಶಿವಾನುಭಾವನೆಯ ॥
ರೀತಿಯಿಂದಜಗಣ್ಣನುಪಮಾ ।
ತೀತನಾದನು ಬಳಿಕಲೆಮ್ಮಿರ ।
ವೇತಕೆಂದೆನುತಿರ್ದಳಾ ಮುಕ್ತಾಯಿಯಲ್ಲಮಗೆ ॥೧೦॥

ಲೋಕ ಲೌಕಿಕರೊಡನೆ ಬಳಕೆಯ ।
ದೇಕೆ ಪರಮಾರ್ಥದಲಿ ತಾನೇ ।
ಕೈಕನಾದಹೆನೆಂದೆನುತಲಜಗಣ್ಣ ನಿರ್ವಯಲ ॥
ಸ್ವೀಕರಿಸಿದೊಡೆ ನೀನು ನಿನ್ನವಿ ।
ವೇಕದಲಿಯೊಂದೊಂದು ನುಡಿವುದು ।
ಸಾಕೆನುತ ಮುಕ್ತಾಯ ಸಂತೈಸಿದನು ಪ್ರಭುರಾಯ ॥೧೧॥

ದೇವ ನಿಮ್ಮವರುಗಳ ಪರಿಯನು ।
ನೀವೆ ಬಲ್ಲಿರಿ ಹಾವಿನಡಿಯನು ।
ಹಾವುಗಳು ನೆರೆ ಬಲ್ಲವಲ್ಲದೆ ನಮಗೆ ಗೋಚರವೆ ॥
ಭಾವಿಸುವೊಡೆಮಗಿನ್ನು ಗತಿ ಮತಿ ।
ಯಾವುದೆಂದೆನುತಲ್ಲಮಪ್ರಭು ।
ದೇವರಿಗೆ ಮುಕ್ತಾಯಿ ಬಿನ್ನೈಸಿದಳು ಭಕ್ತಿಯಲಿ ॥೧೨॥

ಆಕ್ಕ ಕೇಳೌ ನಿನ್ನ ಹೆಸರಿಗೆ ।
ತಕ್ಕ ಬಯಕೆಯ ನೀನಿ ಬಯಸಿದೆ ।
ಮಿಕ್ಕ ಭವಭಾರಿಗಳು ಬಲ್ಲರೆ ಲಿಂಗಮಾರ್ಗವನು ॥
ಹೊಕ್ಕು ಹೋರಟೆಯೆಲ್ಲವನು ಹೊ ।
ಯ್ದಿಕ್ಕಿ ಸುಖಿಸುವಡಂತು ನಿಜ ಪದ ।
ದಿಕ್ಕೆ ನಿನಗಹುದೆಂದೆನುತ ಮುಕ್ತಾಯಿಗಿಂತೆಂದ ॥೧೩॥

ಹರುಗೊಲನ ಜೋಗೈಸಿಕೊಳುತಲಿ ।
ತೊರೆಯ ದಾಂಟುವರಂತೆ ಲಿಂಗವ ।
ನರಿವವರು ಕರ್ಮೇಂದ್ರಿಯಂಗಳನೊಯ್ಯನೋಸರಿಸಿ ॥
ಹೊರಗೆ ಮಾಡುವ ಮಾಟವೆಲ್ಲವ ।
ತೊರೆವುದಂತರ್ಮಾರ್ಗವೊಂದನೆ ।
ಹೊರುವುದಿದು ಶಿವಭಕ್ತಿಯೌ ಮುಕ್ತಾಯಿ ಕೇಳೆಂದ ॥೧೪॥

ನಿಯತವಿದು ದೇಹಿಗಳು ಕರ್ಮೇಂ ।
ದ್ರಿಯವ ಜರಿದಡೆ ಜೀವವಾವಾ ।
ಶ್ರಯದಲಿಹುದು ಮನಸ್ಸು ಮಚ್ಚುವದೆಂತು ಪಟುವಾಗಿ ॥
ಬಯಲು ತಾನಹ ಪರಿಯದಾವುದು ।
ನಿಯಮಿಸೈ ನೀನೆನಲು ನಿಜ ನಿ ।
ರ್ಣಯವನಾ ಮುಕ್ತಾಯಿಗಲ್ಲಮಲಿಂಗನಿಂತೆಂದ ॥೧೫॥

ಕೇಳಿದೌ ಶಿಶುಗಳಿಗೆ ತಾಯ್ಮೊಲೆ ।
ಹಾಲೆ ಜೀವನವಾದೊಡೆಯು ಎರೆ ।
ವಾಲನೆರಿವುತ ಮೆಲ್ಲಮೆಲ್ಲನೆಯಶನವನು ಸವಿಸಿ ॥
ಬಾಲಕರ ಪಟು ಮಾಡಬಲ್ಲ ಸ ।
ಕೀಲಕರವೊಲು ಹೊರಗ ಮರೆದು ನಿ ।
ರಾಳದಲಿ ನಿಲಲರಿವುದೌ ಮುಕ್ತಾಯಿ ಕೇಳೆಂದ ॥೧೬॥

ಪರಮತತ್ವವ ನುಡಿದು ಹೇಳುವ ।
ಗುರುವೆ ನಿನಗಿನ್ನೂ ವಿಚಾರಿಸೆ ।
ವರಮನೋವಾಕ್ಕಾಯಕರ್ಮಗಳಿರಲು ನೀವೆಮಗೆ ॥
ಹಿರಿದು ಬಲ್ಲವನಂತೆ ವಾಕ್ಚಾ ।
ತುರಿಯವನು ರಚಿಸಿದೊಡೆ ನಂಬುಗೆ ।
ದೊರಕುವುದೆ ನಮಗೆಂದಳಾ ಮುಕ್ತಾಯಿಯಲ್ಲಮಗೆ ॥೧೭॥

ಅಹುದು ಮತ್ತೇನವ್ವ ದಿಟ ಘನ ।
ಮಹಿಮನಾದರೆ ನೋಡಲಿದಿರಿ ।
ಟ್ಟಿಹವೆ ನಿರ್ವಯಲಿಗೆ ಮನೋವಾಕ್ಕಾಯಕರ್ಮಗಳು ॥
ವಿಹಿತವಾ ನಿರ್ಣಯವನರಿದಡೆ ।
ಬಹಳವದು ಸಂಕೋಚದಲಿ ನಿ ।
ರ್ವಹಿಸಿ ಹೇಳುವೆನೆನುತಲಲ್ಲಮನಾಕೆಗಿಂತೆಂದ ॥೧೮॥

ಬೆಂದ ನುಲಿಯಾಕಾರವಾಗಿಹು ।
ದೆಂದಡದು ನೆಯಿವವರು ಕೆಲಸಕೆ ।
ಬಂದುದುಂಟೇ ಮರುಳೆ ಲಿಂಗಜ್ಞಾನವಹ್ನಿಯಲಿ ॥
ಬೆಂದು ಹೋದೊಡಲುಗನು ಭಾವಿಸ ।
ಲೊಂದುವಿಲ್ಲದ ಬಯಲುಗನೊಳಿ ।
ನ್ನೊಂದು ಕಲ್ಪಿಸಲಾಗದೌ ಮುಕ್ತಾಯಿ ಕೇಳೆಂದ ॥೧೯॥

ಒಡೆಯ ಚಿತ್ತಯಿಸಯ್ಯ ನಿರ್ವಯ ।
ಲೊಡಲುಗನು ನೀನಹುದು ದಿಟವಾ ।
ದಡೆಯದೆಂತೆನ್ನೊಳು ವಿವೇಕವಿಚಾರಬೋಧೆಯನು ॥
ನುಡಿವ ಪರಿಯೆಂತಣ್ಣ ನಿನ್ನಯ ।
ಬೆಡಗ ನಾನರಿವಂತೆ ಹೇಳೆನ ।
ಲೊಡನೆಯಲ್ಲಮಲಿಂಗನಾ ಮುಕ್ತಾಯಿಗಿಂತೆಂದ ॥೨೦॥

ತಂಗಿ ಕೇಳಾರಾರ ಭಾವದ ।
ಭಂಗಿಯೆಂತಿಹುದಂತೆ ಮದ್ವಚ ।
ನಂಗಳೆಮ್ಮಯ ತನುಮನಚ್ಛಾಯೆಗಳ ತೋರಿದಡೆ ॥
ಅಂಗವಿದರಾವೆಂದು ನೀ ಮನ ।
ಸಿಂಗೆ ತಾರದಿರೆನುತಲಲ್ಲಮ ।
ಲಿಂಗನಾಕೆಗಿದೊಂದು ರೀತಿಯ ನುಡಿದು ತೋರಿಸಿದ ॥೨೧॥

ಎಲ್ಲವಹುದೈ ದಿಟ ವಿಚಾರಿಸೆ ।
ಬಲ್ಲವರಿಗಾ ಪಿಂಡಮಯತನು ।
ವಿಲ್ಲದಿರೆ ತೊಳೋಷ್ಠ ಸಂಪುಟಸಂಗಶಬ್ದಗಳು ॥
ಎಲ್ಲಿ ಸಂಜನಿಸಿದುವು ನಿಮ್ಮೊಡ ।
ಲಲ್ಲಿ ಪೇಳಿದ ದಸರಿದೊಡಕಿನ ।
ಸೊಲ್ಲಿನಂಗವನೆನುತ ಕೇಳಿದಳಾಕೆಯಲ್ಲಮನ ॥೨೨॥

ಮಗಳೆ ಕೇಳೌ ಪೃಥ್ವಿಮಯ ತನು ।
ಮುಗಿಲಿಗಿಲ್ಲದಡೇನು ಗರ್ಜನೆ ।
ನೆಗಳುತಿರವೇ ಲೋಕವರಿಯಲದೇನು ಸೋಜಿಗವೆ ॥
ಬಗೆಯೆ ಸಾಕ್ಷಾದಪ್ರಮೇಯನ ।
ಸಗುಣನಿರ್ಗುಣವೆನಿಸುವೆನ್ನಯ ।
ವಿಗಡತನಕೇನರಿದು ನುಡಿ ಮುಕ್ತಾಯಿ ಕೇಳೆಂದ ॥೨೩॥

ಅಹುದು ಮತ್ತೇನಯ್ಯ ನಿಮ್ಮಯ ।
ಮಹಿಮೆಗಳನಾವೆತ್ತ ಬಲ್ಲೆವು ।
ಸಹಜವಾದಡೆ ವೇದಶಾಸ್ತ್ರಾಗಮಗಳುಪಮಿಸದ ॥
ಬಹಳ ನಿಧಿಯೇ ನೀನೆ ಶರಣೆಂ ।
ದಿಹೆವು ನಾವೆಮಗೇಕೆ ತರ್ಕ ।
ಸ್ಪೃಹೆಗಳೆಂದೆನುತಿರ್ದಳಾ ಮುಕ್ತಾಯಿಯಲ್ಲಮಗೆ ॥೨೪॥

ಮನದ ಮತ್ಸರವಳಿದು ಸಮತೆಯ ।
ನೆನಹು ನೆಲಸಿ ನಿಗರ್ವತನದೊಂ ।
ದನುಭವಣೆಯಳವಟ್ಟುದಾ ಮುಕ್ತಾಯಿಗೊಲವಿಂದೆ ॥
ವಿನುತ ನಿತ್ಯಾನಂದ ನಿರ್ಮಳ ।
ತನುವೆ ತಾನಹ ಸೌಖ್ಯತೆಯ ಸೂ ।
ಚನೆಯನುಪದೇಶಿಸಿದನೆಮ್ಮಯ ಗುರು ಗುಹೇಶ್ವರನು ॥೨೫॥

ನೂಲ ಹಿಡಿದೋಜೆಯಲಿ ಬೆಟ್ಟದ ।
ಮೇಲನಡರುವರಂತೆ ಭಕ್ತಿಯ ।
ಕೀಲನುಪದೇಶಿಸಿದ ಗುರುವಚನಾಜ್ಞೆಯನು ಹಿಡಿದು ॥
ಲೀಲೆಯಿಂದಾ ಬ್ರಹ್ಮರಂಧ್ರವ ।
ನಾಲಿಸುತಲೊಡಹಾಯ್ದು ನಿಜದ ನಿ ।
ರಾಳದಲಿ ನಿಂದಿರ್ದಳಾ ಮುಕ್ತಾಯಿ ಭಕ್ತಿಯಲಿ ॥೨೬॥

ಸುಖವನೈದಿದಳಲ್ಲಮನ ಪದ ।
ನಖದ ಕಾಂತಿಯ ಕಂಡು ಮನಸಿನ ।
ಮುಖದ ಕತ್ತಲೆ ತಿಳಿಯೆ ಪರಮಾನಂದಭಾವದಲಿ ॥
ಅಖಿಲ ಶರಣರು ನೋಡಲಚಲಿತ ।
ಸುಖದಲೋಲಾಡುತ್ತಲಿರ್ದಳು ।
ನಿಖಿಳ ಸದ್ಯೋನ್ಮುಕ್ತೆ ಮುಕ್ತಾಯಿಗಳು ಜಗವರಿಯೆ ॥೨೭॥

**ಅಂತು ಗತಿ ೧೨ಕ್ಕಂ ಪದನು ೫೩೭ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ –೧೩
# ಅಲ್ಲಮಲಿಂಗನೊಲಿದನು ಸಿದ್ಧರಾಮಂಗೆ

**ವಚನ**

ಕಳ್ಳಗಂಜಿ ಕಾಡಹೊಕ್ಕರೆ ಹುಲಿ ತಿನ್ನದೆ ಮಾಣ್ಬುದೆ ?
ಹುಲಿಗಂಜಿ ಹುತ್ತ ಹೊಕ್ಕರೆ ಸರ್ಪ ಕಚ್ಚದೆ ಮಾಣ್ಬುದೆ ?
ಕಾಲಗಂಜಿ ಭಕ್ತನಾದಡೆ ಕರ್ಮ ತಿನ್ನದೆ ಮಾಣ್ಬುದೆ ?
ಅಯ್ಯಾ ಇಂತೀ ಮೃತ್ಯುವಿನ ಬಾಯ ತುತ್ತಾದ
ವೇಷಡಂಬಕರನಾನೇಂಬೆನಯ್ಯಾ ಗುಹೇಶ್ವರಾ ॥೧॥

ಅಯ್ಯಾ ನಿಮ್ಮ ಸರ ಉಂಡ ಶಬ್ದವೆನ್ನ ಮನಕ್ಕೆ ವೇದ್ಯವಾಯಿತ್ತು
ಅಯ್ಯಾ ನಿಮ್ಮ ನಿಜವುಂಡ ನಿಲವು ಎನ್ನ ಮತಿಗೆ ವೇದ್ಯವಾಯಿತ್ತು
ಅಯ್ಯಾ ನಿಮ್ಮ ಕರುಣಪ್ರಸಾದವೆನ್ನ ಸರ್ವಾಂಗಕ್ಕೆ ವೇದ್ಯವಾಯಿತ್ತು
ಅಂತು ನಿಮ್ಮ ಕಾಯವಿಡಿದಿಪ್ಪ ಕರಸ್ಥಲವೆಂತು ಪೇಳಾ ಕಪಿಲಸಿದ್ದ ಮಲ್ಲಿನಾಥಾ॥೨॥

ದೇಹಭಾವವಳಿದಲ್ಲದೆ ಜೀವಭಾವವಳಿಯದು
ಜೀವಭಾವವಳಿದಲ್ಲದೆ ಭಕ್ತಿಭಾವವಳವಡದು
ಭಕ್ತಿಭಾವವಳವಟ್ಟಲ್ಲದೆ ಅರಿವು ತಲೆದೋರದು
ಅರಿವು ತಲೆದೋರಿದಲ್ಲದೆ ಕುರುಹು ನಷ್ಟವಾಗದು
ಕುರುವು ನಷ್ಟವಾದಲ್ಲದೆ ಮಾಯೆ ಹಿಂಗದು
ಅದು ಕಾರಣ
ಕಾಯದ ಜೀವದ ಹೊಲಿಗೆಯ ಅಳಿವ ಭೇದವ ತಿಳಿಯಬಲ್ಲರೆ
ನಮ್ಮ ಗುಹೇಶ್ವರಲಿಂಗದ ಅರಿವು ಸಾಧ್ಯವಪ್ಪುದು ಕಾಣಾ ಸಿದ್ಧರಾಮಯ್ಯಾ ॥೩॥

ನೀರಕ್ಷೀರದ ಸಂದುಗಳ ಹಂಸೆ ಬಿಚ್ಚಬಲ್ಲುದು ನೋಡಯ್ಯಾ
ದೇಹದ ಜೀವದ ಸಂದುಗಳ ನೀವು ಬಿಚ್ಚಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ
ನೀವಿಕ್ಕಿದ ತೊಡಕ ಬಿಡಿಸಬಾರದು
ನೀವು ಬಿಡಿಸಿದ ತೊಡಕನಿಕ್ಕಬಾರದು
ಕಪಿಲಸಿದ್ದ ಮಲ್ಲಿನಾಥಯ್ಯಾ ನೀವೆನ್ನ ಕಾಯದ ಜೀವದ ಹೊಲಿಗೆಯ ಬಿಡಿಸಾ
ನಿಮ್ಮ ಧರ್ಮ ॥ ॥೪॥

ಎಲೆ ಅಯ್ಯ, ಎನ್ನ ಹೆತ್ತಿಪ್ಪವಳ ನೆತ್ತಿಗಣ್ಣಿನಲಿಪ್ಪ ಲಿಂಗವ
ನಾನೆಚ್ಚತ್ತು ನೋಡವೆನೆಂತಯ್ಯಾ
ನೋಡಹೋದರೆ ನೆತ್ತಿ ಬಿರಿದು ಕಣ್ಣಾಯಿತ್ತು ನೋಡಾ
ನೋಡದಿದ್ದರೆ ಎನಗೆ ಅವಳು ತೋರಳು
ನಾ ಕಾಂಬ ತೆರನ ತೋರಾ ಕಪಿಲಸಿದ್ಧ ಮಲ್ಲಿನಾಥಾ ॥೫॥

**ಸೂಚನೆ**

ಲಿಂಗಪದವನು ಸಿದ್ಧರಾಮ ।
ಯ್ಯಂಗೆ ತೋರಿಸಿ ಗುರು ಗುಹೇಶ್ವರ ।
ಲಿಂಗನಿರ್ದನು ಸೊನ್ನಲಾಪುರದೊಳಗೆ ಲೀಲೆಯಲಿ ॥

ಇಲ್ಲಿ ಕೇಳುವುದಿನ್ನು ಸಾಧಕ ।
ರೆಲ್ಲರಲ್ಪಜ್ಞಾನಮಾರ್ಗವ ।
ಹೊಳ್ಳು ಮಾಡಿ ವಿಶುದ್ದಪೂರ್ವಜ್ಞಾನಮಾರ್ಗದಲಿ ॥
ಒಳ್ಳಿತಾಗಿಹ ಸುಖವ ಬಯಸಲು ।
ಬಲ್ಲ ಭಕ್ತರಿಗರಿವು ತೋರಿಸು ।
ವಲ್ಲಮಪ್ರಭು ಗುರು ಗುಹೇಶ್ವರಲಿಂಗ ಲೀಲೆಯಲಿ ॥೧॥

ತಾನೆ ತನ್ನ ವಿನೋದದಿಂದೆ ಮ ।
ಹಾನುಭಾವವ ಬಯಸಿ ಬಳಲುವ ।
ಮಾನವರಿಗಾ ಪ್ರಾಣಲಿಂಗವನರುಹಿಸುವೆನೆನುತ ॥
ತಾನೆ ಶಿವಲಿಂಗಸ್ವರೂಪವ ।
ನೂನವಿಲ್ಲದೆ ಧರಿಸಿಕೊಂಡಾ ಪ್ರಭುವೆ ಬರುತಿರ್ದ ॥೨॥

ಪಿಂಡದೊಳು ಪಿರಿದೆನಿಪ ನಾಡೀ ।
ಮಂಡಲಂಗಳ ತಾನೆ ಸಾಧಿಸಿ ।
ಕಂಡಖಂಡಜ್ಞಾನದಿಕ್ಕೆಯ ಪರಿಯನಿದಿರಿಟ್ಟು ॥
ಮಂಡಲಿಸಿ ಕಲುಮರನಲೊಡ್ಡಣೆ ।
ಗೊಂಡು ಮಾಡಿಸಿ ಹೆಸರುವಡೆದು ।
ದ್ದಂಡರೀತಿಯ ಸಿದ್ಧರಾಮನ ಪುರಕೆ ಪ್ರಭು ಬಂದ ॥೩॥

ಹಲವು ದೆಸೆಯಲಿ ಚಿತ್ರಪತ್ರದ ।
ಚೆಲುವನಾಗಿರೆ ಪರಿಪರಿಯ ದೇ ।
ಗುಲವ ಮಾಡಿಸುತಿಪ್ಪ ಗುಡ್ಡಗಳೆಕ್ಕವಿಂಡುಗಳ ॥
ನೆಲನೆ ಬೆಸಲಾದಂತೆ ಮಿಗೆ ಮ ।
ಣ್ಗೆಲಸದೊಡ್ಡರು ಬಂಡಿಕಾರರು ।
ಕಲುಕುಟಿಗರಿದ್ದೆಡೆಯ ಸೊನ್ನಲಪುರಕೆ ಪ್ರಭು ಬಂದ ॥೪॥

ನೂಲ ಸಂಕಲೆಗಡಿದು ಕನಕದ ।
ಕೋಳವನು ಕಾಲಿಂಗೆ ಕೀಲಿಪ ।
ಕಾಳು ಮತಿಯವನಂತೆ ಸತಿಸುತಕೂಟ ಭಯವೆಂದು ॥
ಬಾಳಿಕೆಯನತಿಗಳೆದು ಮರಳಿಯು ।
ಬೋಳುಮಂಡೆಯ ಕೀರ್ತಿಗೋಸುಗ ।
ಕೋಳುಹೋದನೆ ರಾಮನೆನುತಲ್ಲಮನು ಬೆರಗಾದ ॥೫॥

ಚಿಕ್ಕ ಸಂಸಾರವನು ಸಡಿಲಿಸಿ ।
ಹೊಕ್ಕನಲ್ಲಾ ಹಿರಿಯ ಸಂಸಾ ।
ರಕ್ಕಕಟ ವಿಖ್ಯಾತಿಪೂಜಾಲಾಭದಿಚ್ಛೆಯಲಿ ॥
ಸಿಕ್ಕಿಬಿದ್ದನು ಸಿದ್ಧರಾಮನು ।
ಮಿಕ್ಕ ಭವಭಾರಿಗಳನಾದಡೆ ।
ಮುಕ್ಕದೇ ವಿಧಿಯೆನುತಲಲ್ಲಮ ನೋಡಿ ಬೆರಗಾದ ॥೬॥

ಒಡ್ಡ ರಾಮನಿದೇನು ಗೊಡವೆಯ ।
ನೊಡ್ಡಿಕೊಂಡು ವೃಥಾ ಮನಸ್ಸನು ।
ಗೊಡ್ಡು ಮಾಡಿಯೆ ಕೆಟ್ಟನೆನುತಲ್ಲಮನು ಕೇಳಿದಡೆ ॥
ಗುಡ್ಡರೆಲ್ಲರು ಗುರುವನಾವನು ।
ಖಡ್ಡತನದಲಿ ಜರೆವನೆನುತವ ।
ರಡ್ಡಹಾಯ್ದರು ತೊಡಗಿದರು ತೋಟಿಯನು ತಮತಮಗೆ ॥೭॥

ಅರೆರೆ ಫಡಫಡದಾರು ನಮ್ಮಯ ।
ಗುರುವನೀಪರಿ ಜರೆದು ಜಾಡಿಸಿ ।
ಹರಿಹರಬ್ರಹ್ಮಾಮರೇಂದ್ರರು ನುಡಿಯಲಮ್ಮುವರೆ ॥
ಮರುಳು ಮಾನವ ನೀನು ನುಡಿದಡೆ ।
ಸರಿಯೆ ಸಿದ್ಧಂಗೆನುತಲಿದ್ದರು ।
ಕೆರಳಿ ಗುಡ್ಡಗಳೆಕ್ಕವಿಂಡುಗಳಲ್ಲಮಪ್ರಭುವ ॥೮॥

ಅಕಟ ನಿಮ್ಮಯ ಗುರುವಿನಾಗಮ ।
ಯುಕುತಿ ಪಾಷಾಣಕ್ಕೆ ಬಂದುದೆ ।
ವಿಕಳ ಸಿದ್ಧನ ನಂಬಿ ಪಡೆದಿರಿ ಗುಡ್ಡಪದವಿಯನು ॥
ಸಕಲ ಕಲ್ಲನು ಕಡಿದು ಕಲ್ಲಿಗೆ ।
ಶಿಖರ ದೇಗುಲವೆಂದು ಮಾಡಿಸಿ ।
ಮಕರಿಸುವರವರೊಡ್ಡರಲ್ಲದೆ ಸಿದ್ಧರಲ್ಲೆಂದ ॥೯॥

ಎಕ್ಕೆವಿಂಡುಗಳೆಲ್ಲರಾಳ್ದನ ।
ಮಿಕ್ಕು ಜರೆವಲ್ಲಮನ ಮಾತಿಗೆ ।
ಕೊಕ್ಕರಿಸಿ ಕೆಕ್ಕರಿಸಿ ಕೋಪಾಟೋಪವಾವರಿಸಿ ॥
ತಕ್ಕಯಿಸಿ ಕೆಡೆಬಡಿವೆವೆನುತಡ ।
ಹೊಕ್ಕು ಮೈದುಡುಕಿದರೆ ನಗುತಲಿ।
ಸಿಕ್ಕದವದಿರಿಗಲ್ಲಮಪ್ರಭುರಾಯನಿಂತೆಂದ ॥೧೦॥

ಸಲುವುದ್ಯೆ ದಿಟವಿನ್ನು ನಿಮಗೆ ।
ಕ್ಕಲನ ಹೆಸರದು ಹುಸಿಯೆ ಅಲ್ಲದ ।
ಡುಲಿದು ಘೂರ್ಮಿಸಿ ಕೆರಳಿ ಮೊಗ್ಗರವಾಯ್ದುದೇ ಬರಿದೆ ॥
ಬಲುಹು ನಿಮ್ಮಯ ಗುರುನಿರೂಪಣೆ ।
ಕಲಹಕಾರಣರಾದಿರೆನುತಲಿ ।
ಹಳಿದು ಹೀಯಾಳಿಸಿದನಲ್ಲಮಲಿಂಗನವರುಗಳ ॥೧೧॥

ನೋಡು ನೋಡಾ ಮತ್ತೆ ಮಾಣದೆ ।
ನಾಡಮಾತನು ಕಲಿತು ನಮ್ಮೊಡ ।
ನಾಡುತಿಹರೆ ದೊಠಾರತನದಲಿ ಮರುಳುತನದಿಂದೆ ॥
ಬೇಡ ಬೇಡಿನ್ನೆಮ್ಮ ಗುರುವನು ।
ಖೋಡಿಗಳೆದರೆ ಕೆಡುವೆ ನೀನೆನು ।
ತಾಡುತಿರ್ದರು ಬರಿಯ ಬೀರದ ಗುಡ್ಡರಲ್ಲಮಗೆ ॥೧೨॥

ಗುಡ್ಡಗಳು ನೀವಕಟ ನಮ್ಮಯ ।
ಖಡ್ಡತನಕಾನುವಿರೆ ನಿಮ್ಮಯ ।
ದೊಡ್ಡನನು ಕರೆತನ್ನಿ ನೋಡುವೆವಾತನಳಬಳವ ॥
ಒಡ್ಡರಾಮನ ರೀತಿಯನು ಭವ ।
ದೊಡ್ಡವಣೆಯನು ಕಾಬೆವೆನುತಲಿ ।
ಗುಡ್ಡರೆಲ್ಲರು ಕೆರಳುವಂತಿರೆ ನುಡಿದನಲ್ಲಮನು ॥೧೩॥

ಕೆಡಹಿಕೊಳ್ಳಿನ್ನೀತನಾಳ್ದನ ।
ಜಡಿದು ನುಡಿದುಕ್ಕಲಿಸಿ ಹೋಹನೆ ।
ಹಿಡಿದು ಕೋ ಕೋ ಎನುತ ಗುಡ್ಡಗಳೆಕ್ಕವಿಂಡುಗಳು ॥
ಬಿಡದೆ ತೆಕ್ಕೆಯೊಳಲ್ಲಮನ ಬಯ ।
ಲೊಡಲ ಬಂಧಿಸಲೆಂದು ಬಿಗಿಯಲು ।
ಹಿಡಿಹಿಗಿಲ್ಲದೊಡವರು ಬೆರಗಾಗಿರ್ದರದ ಕಂಡು ॥೧೪॥

ನೆರವಿ ತಾನಾಗಿಹನು ತತ್ತಡೆ ।
ಹೊರಗೆ ಬಂದಿಹ ದೂರ ಹೋಗಿಹ ।
ತೆರಳ ತೆಕ್ಕೆಗೆ ಸಿಕ್ಕನೀ ಪರಿ ಹಲವು ವಹಣಿಯಲಿ ॥
ಹುರುಳುಗೆಡಿಸಲು ಬಳಿಕ ಗುಡ್ಡರು ।
ಕೆರಳಿ ಕೆಡೆಯೆನುತಲ್ಲಮನ ಮೇ ।
ಲುರವಣಿಸಿ ಕವಿದಿಟ್ಟು ಕರೆದರು ಕಲ್ಲ ಮಳೆಗಳನು ॥೧೫॥

ಪಿಂಡಭಾರದ ದೇಹಿಯನು ಮೈ ।
ಗಂಡು ನೋಯಿಸಬಲ್ಲವಲ್ಲದೆ ।
ಖಂಡಿಸುವವೆ ಬಯಲದೇಹಿಯನಾವ ಕೈದುಗಳು ॥
ಕಂಡುದುಂಟೇನಲ್ಲಮನ ನಿಡು ।
ಗುಂಡುಗಳು ಮೈಗಾಣಿಸದೆ ಭೂ ।
ಮಂಡಲದಲುರುಳಿದುವು ನೋಡುವರೆಲ್ಲ ಬೆರಗಾಗೆ ॥೧೬॥

ನೊಂದು ಸೈರಿಸದವ ಕನಿಷ್ಠನು ।
ನೊಂದು ಸೈರಿಸುವವನು ಮಧ್ಯಮ ।
ನೊಂದೆನೆಂಬುದು ನೆನಹಿಗಿಲ್ಲದಡಾತನುತ್ತಮನು ॥
ಎಂದು ಬಗೆವುತ ತನ್ನ ಮನದಲಿ ।
ನೊಂದೆನಾದಡೆ ಮೂಜಗಂಗಳು ।
ಬೆಂದು ಹೋಹವೆನುತ್ತ ನಸುನಗುತಿರ್ದನಲ್ಲಮನು ॥೧೭॥

ಆಳು ನೆರೆದುದು ಲಕ್ಕ ಸಂಖ್ಯೆಗೆ ।
ಮೇಳವಿಸಿ ಕವಿದಿಡುತಲಲ್ಲಮ ।
ಹೂಳಿಹೋದನು ಕವಣೆಗಲ್ಲಲಿಕೈದುಗಳಲೆನಲು ॥
ಹೇಳಲೇನದ ಕಲ್ಲ ರಾಶಿಯ ।
ಮೇಲೆ ನಿಂದನು ಮತ್ತೆ ತನ್ನಯ ।
ಲೀಲೆಯಲಿ ನಿರ್ಲೇಪನಿರ್ದನು ನಗುತ ಪ್ರಭುರಾಯ ॥೧೮॥

ಮುನಿದು ಮುತ್ತಿಯೆ ಸೆಣಸಿ ಹೋರುವ ।
ಜನಕೆ ಪ್ರತ್ಯೇಕದಲಿ ಬಹು ರೂ ।
ಪನೆ ವಿರಾಜಿಸಿ ಹಲಬರಲ್ಲಮರಾದರೆಂಬಂತೆ ॥
ಎನಿತು ಜನ ಮಾರಾಂತು ನಿಂದಡೆ ।
ಯನಿತು ರೂಪಿನಲಾಂತು ನಿಂದನು ।
ಘನಮಹಿಮನೆಮ್ಮಲ್ಲಮಪ್ರಭುಲಿಂಗ ಲೀಲೆಯಲಿ ॥೧೯॥

ಛಾಯೆಯೊಳು ಕಾಳಗವ ಮಾಡುವ ।
ಮಾಯವಶರುಗಳಂತೆ ಕಡೆತನ ।
ಕಾಯಸವೆ ಕೈಗಟ್ಟಿ ಹೋಯಿತು ಕದನಮುಖದೊಳಗೆ ॥
ಕಾಯವಿರಹಿತನಲ್ಲಮಪ್ರಭು ।
ರಾಯನಾರೆಂದರಿಯಲರಿಯದೆ ।
ಸಾಯಸವನಾಳಿದರು ಗುಡ್ಡಗಳೆಕ್ಕವಿಂಡುಗಳು ॥೨೦॥

ಪರಿಕಿಸಲು ಹರಿಯಾದಡಾಗಳೆ ।
ತಿರುಹಿ ಚಕ್ರದೊಳಿಡುವ ಮೆಣ್ ಪುರ ।
ಹರನು ಮುನಿದಡೆ ಭಾಳನೇತ್ರದ ಕಿಡಿಯ ಕೆದರುವನು ॥
ಅರಿಗಳನು ನೋಯಿಸನು ತಾನೂ ।
ಕೆರಳನೆನುತಲ್ಲಮನ ಮಹಿಮೆಗೆ ।
ಶರಣು ಶರಣೆನುತಿರ್ದರೆಲ್ಲರು ಕೂಡೆ ನೋಟಕರು ॥೨೧॥

ನಮ್ಮ ಸಿದ್ಧನ ಹಳಿದು ನುಡಿವಂ ।
ಗೊಮ್ಮೆ ಶಿಕ್ಷೆಯ ಮಾಡದನ್ನಕ ।
ನಮ್ಮ ಕೋಪಾಟೋಪ ನಿಲ್ಲದೆನುತ್ತ ಪರಿತಂದು ॥
ಸುಮ್ಮನೆಯ್ತಂದೊಬ್ಬ ಜಂಗಮ ।
ಹೆಮ್ಮೆಗೆಡಿಸಿಯೆ ಹಳಿದು ನುಡಿದನು ।
ನಿಮ್ಮನೆಂದರುಹಿದರು ಹದನನು ಸಿದ್ಧರಾಮಂಗೆ ॥೨೨॥

ಆರು ನಮ್ಮನು ಜರೆದವನು ಜಂ ।
ಭಾರಿಯೋ ದನುಜಾರಿಯೋ ಕಾ।
ಮಾರಿಯೋ ತೋರುವನ ಹೆಡತಲೆಗುಗಿವೆ ನಾಲಗೆಯ ॥
ಬೇರುಸಹಿತವೆ ಕೀಳುವೆನು ಕೈ ।
ವಾರವೇಕೆನುತೆದ್ದು ಬಂದನು ।
ಧೀರತನದಲಿ ಸಿದ್ಧರಾಮನು ಗಜರಿ ಗರ್ಜಿಸುತ ॥೨೩॥

ಲೇಸು ಲೇಸೈ ಸಿದ್ಧರಾಮನ ।
ವಾಸಿ ಸಂಸಾರಿಗಳಿಗಿಂದಲಿ ।
ಸಾಸಿರಕೆ ವೆಗ್ಗಳಿಸಿತಲ್ಲಾ ಸುಡು ಯತಿತ್ವವನು ॥
ಈಸು ಕೋಪಾಟೋಪ ರೋಷಾ ।
ವೇಶವೇತಕೆ ಯೋಗಿಯಾದನಿ ।
ರಾಶೆವಂತಂಗೆನುತಲಿದ್ದನು ನಗುತ ಪ್ರಭುರಾಯ ॥೨೪॥

ಆವ ಪರಿಯಿಂದಾದಡೆಯು ಸುಖ ।
ಸೇವೆಯನು ಸೂಚಿಸುವನಲ್ಲದೆ ।
ಸಾವ ಹುಟ್ಟುವ ಕರ್ಮಬಂಧದ ನುಡಿಯನುಸುರುವನೆ ॥
ದೇವನಲ್ಲಮ ನುಡಿದು ತೋರಿದ ।
ಭಾವ ಸೊಗಸದೆ ಕೋಪದುರಿಯಲಿ ।
ತೀವಿ ಕಿಡಿಕಿಡಿವೋಗುತಿರ್ದನು ಸಿದ್ಧರಾಮಯ್ಯ ॥೨೫॥

ಸಾಕು ಸಾಕು ಮಹೇಂದ್ರಜಾಲವ ।
ನೀ ಕಲಿತು ಬಂದೆಮ್ಮ ಮಂದಿಯ ।
ಕಾಕುತನದಲಿ ಕಾಡಿದಾ ಮಗ್ಗಿನ್ನು ನಮ್ಮೊಡನೆ ॥
ನೂಕಲರಿಯದು ನಿನಗೆನುತಲು ।
ದ್ರೇಕದಿಂದಲಿ ಸಿದ್ಧರಾಮನ ।
ನೇಕ ವಹಣಿಯಲಣಕವಾಡುತಲಿರ್ದನಲ್ಲಮನ ॥೨೬॥

ಭಾಪುರೇ ಮರುಳು ಪೂತು ನೀನಹು ।
ದೀ ಪರಿಯಲಿರಬೇಕು ಮನದಾ ।
ಳಾಪದಂಗವಣೆಗಳು ಮಿಗೆ ಮಾಯಾ ಪ್ರಪಂಚಿನಲಿ ॥
ಕೋಪ ನಿಮ್ಮಯ ಸಂಪ್ರದಾಯಕ ।
ಳಾಪದಲಿ ಶಾಶ್ವತವಲಾ ನಿ ।
ರ್ಲೇಪಗೀ ಪರಿಯುಚಿತವೇ ರಾಮಯ್ಯ ಕೇಳೆಂದ ॥೨೭॥

ಕೆಣಕದಿರು ನೀ ಸಂಪ್ರದಾಯಗ ।
ಳೆಣಿಕೆ ನಿನಗೇಕಕಟ ಲೋಕವ ।
ನಣಕವಾಡಿಯೆ ಹೋಹೆಯಲ್ಲದೆ ಯೋಗಮಾರ್ಗದಲಿ ॥
ಸೆಣಸದಿರು ನೀನಾಚೆಯೀಚೆಯ ।
ಬಣಗರಂದದಲೆನ್ನನೆಂದರೆ ।
ಹಣೆಯ ಕಣ್ಣಿನ ಕಿಡಿಯ ಕೆದರುವೆನೆಂದ ರಾಮಯ್ಯ ॥೨೮॥

ಚಾಗು ಚಾಗುರೆ ನೊಸಲಗಣ್ಣಿನ ।
ಬೇಗೆಯಲಿ ಮುನ್ನೆನಿತ ಕೊಂದೆಯೊ ।
ಯೋಗಿಯಹುದ್ಯೆ ನೀನು ಹಿಂಸಾಧರ್ಮಕರ್ಮದಲಿ ॥
ರಾಗದಿಂದುರಿದೇಳುತಿಹ ಭವ ।
ರೋಗಿ ನಿನ್ನಲಿ ಮಾತನಾಡಲಿ ।
ಕಾಗದೆಮಗೆನುತಿರ್ದನಲ್ಲಮ ಸಿದ್ಧರಾಮಂಗೆ ॥೨೯॥

ಜಡಿದು ನುಡಿವುದನೀತನಾದೊಡೆ ।
ಬಿಡನೆನುತ್ತಲಿ ಸಿದ್ಧರಾಮನು ।
ಘುಡಿಘಡಿಸಿ ಘೂರ್ಮಿಸುತ ಕೋಪಿಸಿ ನೊಸಲ ಕಣ್ದೆರೆಯೆ ॥
ಸಿಡಿಲುಗಿಡಿಗಳು ಸೂಸೆಯಲ್ಲಮ ।
ನಡಿಗಳೆಡೆಯನು ಹೊದ್ದಲಮ್ಮದೆ ।
ಸಿಡಿದು ಸೀಕರಿಗರಿಸುತಿರ್ದುವು ಸಕಲ ಜೀವರನು ॥೩೦॥

ಮಾಡಿಕೊಂಡನು ಪರಮಪುರುಷನ ।
ಕೂಡೆ ತೋಟಿಯ ಸಿದ್ಧರಾಮನು ।
ಮೂಢತನದಲಿ ಹವಣನರಿಯದೆ ಶಿವ ಮಹಾದೇವ ॥
ನೋಡೆ ಬಡವನ ಕೋಪ ದವಡೆಗೆ ।
ಕೇಡು ತಹವೊಲ್ ತನ್ನ ಪುರವನೆ ।
ಕೂಡೆ ಸುಡುತಿದೆ ಕಿಚ್ಚುಗಣ್ಣೆಂದೊದರಿತಖಿಳ ಜನ ॥೩೧॥

ಕಡಲನತಿ ಮಥನವನು ಮಾಡಲು ।
ಸುಡುತ ಬಹ ಹಾಲಾಹಲಾಗ್ನಿಯ ।
ಕಡುಹ ನಿಲಿಸಿ ಜಗಂಗಳನು ರಕ್ಷಿಸಿದ ಶಿವನಂತೆ ॥
ತೊಡೆದನಾಗಳೆ ನೊಸಲಕಣ್ಣಿನ ।
ಕಿಡಿಯನೆಲ್ಲರನುಳುಹಿದನು ತ ।
ನ್ನಡಿಯ ಕೃಪೆಯಿಂದಲ್ಲಮಪ್ರಭುರಾಯ ನಿಮಿಷದಲಿ ॥೩೨॥

ಕಲ್ಲ ತಾಗಿದ ಮಿಟ್ಟೆಯಂದದ ।
ಲೆಲ್ಲ ಮುರಿದುವು ನೊಸಲಗಣ್ಣಿನ ।
ದಳ್ಳುರಿಯ ನಾಲಗೆಗಳೊಯ್ಯನೆ ಹುಟ್ಟಿದೆಡೆಗಾಗಿ ॥
ಬಳ್ಳಿ ಮರನನು ಹಬ್ಬುವಂದದಿ ।
ನಿಲ್ಲದಡರಲು ಬಳಿಕ ತಾ ತ ।
ನ್ನಲ್ಲಿ ಸಿಡಿಮಿಡಿವೋಗುತಿರ್ದನು ಸಿದ್ಧರಾಮಯ್ಯ ॥೩೩॥

ನೊಸಲಗಣ್ಣನು ತೋರುವವರಿಗೆ ।
ವಿಷಮತರದಂಗಾಲ ಕಣ್ಣನು ।
ಪಸರಿಸುವರುಂಟಕಟ ಮರುಳೇ ನಿನ್ನ ಹವಣೇನು ॥
ಸಸಿನೆ ಮಾಡಿನ್ನಾದಡೆಯು ಗ ।
ರ್ವಿಸುವ ಬುದ್ಧಿಯನೆನುತ ಮಿಗೆ ಬೋ ।
ಧಿಸಿದನೊಲವಿಂದಲ್ಲಮಪ್ರಭು ಸಿದ್ಧರಾಮಂಗೆ ॥೩೪॥

ನಾಚಿದದು ಮನ ನೊಸಲ ಕಣ್ಣಿಗೆ ।
ಚಾಚಿದುವು ಬಳಿಕೆವೆಯ ಕದಗಳು ।
ಸೂಚಿಸಿತು ಪರಿಪಾಕಭಾವನೆ ಚಿತ್ತವೃತ್ತಿಯಲಿ ॥
ಆಚರಿಸಿತನುತಾಪ ಗರ್ವಕೆ ।
ಮೋಚನವೆ ಮುಖವಾಯ್ತು ಯೋಗದ ।
ಶೌಚತೆಗೆ ಬೇರೂರುತಿರ್ದುದು ಸಿದ್ಧರಾಮನಲಿ ॥೩೫॥

ತ್ರಿಪುರಸಂಹರನೀತನೆಂಬಡೆ ।
ಕುಪಿತನಾತನು ಶಾಂತನೀತನು ।
ಚಪಳಕಾಮವಿರೋಧಿಯಾದಡೆಯರ್ಧನಾರೀಶ ॥
ಉಪಮಿಸುವೊಡೀ ಮಹಿಮನಾದೊಡೆ ।
ವಿಪುಳತರ ನಿರ್ಲೇಪನೀತನೆ ।
ಕಪಿಲಸಿದ್ಧಮಲ್ಲೆಶನಹನೆನುತಿರ್ದ ರಾಮಯ್ಯ ॥೩೬॥

ಕುರಿಗಳಾದಡೆ ಸಲಹಿದೊಡೆಯನ ।
ನರಿದು ಬೆಂಬಿಡವರರೆ ಶಿವ ಶಿವ ।
ಕುರಿಗಳಿಂದಾ ಕಷ್ಟವಲ್ಲಾ ಎನ್ನ ರಕ್ಷಿಸುವ ॥
ಎರೆಯನೈತರಲೆನ್ನ ಮದದಲಿ ।
ಮರೆದೆನೆನುತೊಳಗೊಳಗೆ ಮನದಲಿ ।
ಮರುಗುತಲ್ಲಮನೆಡೆಗೆ ಬಂದನು ಸಿದ್ಧರಾಮಯ್ಯ ॥೩೭॥

ತ್ರಾಹಿ ಕರುಣಾಕರನೆ ಸರ್ವ ।
ದ್ರೋಹವೆನ್ನದು ನಿನ್ನನರಿಯದೆ ।
ಮೋಹ ಮಾಯಾಡಂಬರಕೆ ಮರುಳಾದೆನಿನ್ನೆಬರ ॥
ಊಹೆಗೇಡುಗನವಗುಣದ ಸಂ ।
ದೋಹವನು ನೀ ಮರೆದು ಕರುಣಿಸ ।
ಬೇಹುದೆನುತಾ ರಾಮನಲ್ಲಮನಂಘ್ರಿಗೆರದಿಗನು ॥೩೮॥

ಮನದೊಳಗೆ ನಸುನಗುತಲೀ ಮೂ ।
ರ್ಖನ ಗುಣಂಗಳನೇನ ನೋಡುವೆ ।
ನೆನುತಲಲ್ಲಮ ಸರ್ವಜೀವದಯಾಪ್ರದಾಯಕನು ॥
ತನುಜ ಸಾಕೇಳೇಳು ಖಾತಿಯ ।
ನೆನಹು ನಮ್ಮೊಳಗಿಲ್ಲವೆನುತಲಿ ।
ವಿನಯದಿಂದೆತ್ತಿದನು ರಾಮನ ವಿಮಲಮಸ್ತಕವ ॥೩೯॥

ದೇವ ನೀನೀ ಪರಿಯ ಜಂಗಮ ।
ಭಾವ ಭಣಿತೆಯ ಧರಿಸಿ ಬಂದಡೆ ।
ಗಾವಿಲರು ನಾವೆತ್ತ ಬಲ್ಲೆವು ನಿಮ್ಮ ಮಹಿಮೆಯನು ॥
ಜಾವಳಿಗ ನೀನೆಂದು ಬಗೆದಕ ।
ಟಾವು ಬಳಲಿದೆವಿನ್ನು ಕರುಣಿಸಿ ।
ಕಾವುದೆನುತಲಿ ಸಿದ್ಧರಾಮನು ನುಡಿದನಲ್ಲಮಗೆ ॥೪೦॥

ಹರಸಿಕೊಳ್ಳದೆ ಕೆಲವು ಸಚರಾ ।
ಚರರಿಗೊಳ್ಳಿತ ಪಕ್ಷಪಾತದಿ ।
ಹರಸಿ ಗೋ ಬ್ರಾಹ್ಮರಿಗೆ ಶಾಂತಿಗಳಾಗಲೆಂಬಂತೆ ॥
ಹಿರಿಯರನು ಸತ್ಕರಿಸಿ ಮಿಕ್ಕಾ ।
ದರನು ಧಿಕ್ಕರಿಸುವದು ಯೋಗೀ ।
ಶ್ವರರಿಗನುಚಿತವೆಂಬರೈ ರಾಮಯ್ಯ ಕೇಳೆಂದ ॥೪೧॥

ಚಿತ್ತವಿಸು ಗುರುರಾಯ ನಮ್ಮಯ ।
ಚಿತ್ತದೊಳಗಿನ್ನೂ ವಿಚಾರಿಸ ।
ಲುತ್ತಮಾಧಮ ಪಕ್ಷಪಾತಭ್ರಮೆಗಳಿಡಿದಿಹವು ॥
ಎತ್ತ ಬಲ್ಲೆವು ಸರ್ವರನು ಸಮ ।
ಚಿತ್ತದಲಿ ಕಾಬರಿವ ನೀನೊಲಿ ।
ದಿತ್ತಡೆಮಗಿನ್ನಾದಡಾಗಲಿ ದೇವ ಕೇಳೆಂದ ॥೪೨॥

ಆಗಲದಕೇನೊಂದು ಬಾರಿಯ ।
ಲಾಗುವುದೆ ಸಮಬುದ್ಧಿ ಮೆಲ್ಲನೆ ।
ಲಾಗಿಸುವುದಿರುತಿರುತಲೀ ಪರಿ ಚಿತ್ತಶುದ್ಧಿಯಲಿ ॥
ಯೋಗಮಾರ್ಗವನರಿವಡಖಿಳ ವಿ ।
ಯೋಗಿಯಾದಡೆ ಬಳಿಕಲಾತಗೆ ।
ಬೇಗ ಸಮತೆ ಸಮಾಧಿಯಹುದ್ಯೆ ರಾಮ ಕೇಳೆಂದ ॥೪೩॥

ಎನಗೆ ನಿಮ್ಮಯ ದರ್ಶನ ಸ್ಪ ।
ರ್ಶನವೆ ಸರ್ವಸಮಾಧಿಯೆನಗಾ ।
ಮನುಮುನಿತ್ರಿದಶರುಗಳಿದಿರೆ ದೇವ ಕೇಳಿನ್ನು ॥
ಮನವೊಲಿದು ನೀವಿನ್ನು ಮಲಿಕಾ ।
ರ್ಜುನನ ನೋಡಲು ಬಿಜಯ ಮಾಡುವು ।
ದೆನುತ ತನ್ನಯ ಮಠಕೆ ಕರೆದನು ರಾಮನಲ್ಲಮನ ॥೪೪॥

ಬಿಡು ಮರುಳೆ ಮನೆಯೇನು ಮಠವೇ ।
ನಡವಿಯೇನೂರೇನು ಬೇರೊಂ ।
ದೆಡೆಗಳುಂಟೇ ಸರ್ವಗತನಾದಾ ಮಹಾತ್ಮಂಗೆ ॥
ನುಡಿದುದೇ ಶಿವತತ್ವದಾಗಮ ।
ನಡೆದುದೇ ಶಿವಮಾರ್ಗ ಶರಣರ ।
ಬೆಡಗು ತಾನೀಪರಿ ಕಣಾ ರಾಮಯ್ಯ ಕೇಳೆಂದ ॥೪೫॥

ಅಹುದು ನಿಮ್ಮಯ ಚಿತ್ತ ಬಂದ ।
ಲ್ಲಿಹುದು ನಾವದನೇನ ಬಲ್ಲೆವು ।
ಸಹಜವಾದಡೆ ಸರ್ವತೋಮುಖ ಶರಣರನುಮತವೆ ॥
ವಿಹಿತವೆಮಗಿನ್ನೇನು ಗತಿ ಘನ ।
ಮಹಿಮ ಕರುಣಿಸೆನುತ್ತ ಕಿಂಕಿಲ ।
ಸಹಿತ ಬಿನ್ನಹ ಮಾಡುತಿರ್ದನು ರಾಮನಲ್ಲಮಗೆ ॥೪೬॥

ಚಿತ್ತದಲಿ ಪರಿಪಾಕವಾದ ಮ ।
ಹೋತ್ತಮಂಗಲ್ಲದೆ ನಿರರ್ಥಕೆ ।
ಬಿತ್ತಲಾಗದು ತತ್ವಬೀಜವ ಬದ್ಧ ಭವಿಗಳಲಿ ॥
ಹೊತ್ತು ಹೋಗದೆ ಗೋಷ್ಠಿ ಮಾಡುವ ।
ಕೃತ್ಯವಲ್ಲಿದು ಸಕಲಸಂಗನಿ ।
ವೃತ್ತನಾದಂಗಲ್ಲದಾಗದು ರಾಮ ಕೇಳೆಂದ ॥೪೭॥

ಹಲವು ಬಿನ್ನಹಕಂಜುವೆನು ಕೋ ।
ಟಲೆಗೆ ನಾನಿನ್ನಾರೆ ಕರ್ಮದ ।
ಕಳವಳಕೆ ಬೇಸತ್ತೆ ಖಂಡಜ್ಞಾನಮಾರ್ಗದಲಿ ॥
ಹೊಲಬುಗೆಟ್ಟೆನು ನಿನ್ನ ಪಾದದ ।
ನೆಲೆಯ ಕಾಣದೆ ದೇವ ನೀನೇ ।
ಸಲಹೆನುತಲಲ್ಲಮಗೆ ಮೆಯ್ಯಿಕ್ಕಿದನು ರಾಮಯ್ಯ ॥೪೮॥

ಮತ್ತೆ ಕರುಣಿಸಿ ಹೆರೆನೊಸಲ ಹಿಡಿ ।
ದೆತ್ತಿ ಬಾರೆಂದೆನುತ ತನ್ನಯ ।
ಹತ್ತಿರಕೆ ಕರೆದಾತನನು ಕೈವಿಡಿದು ಕುಳ್ಳಿರಿಸಿ ॥
ಹೆತ್ತ ತಂದೆಯದಾವ ಪರಿಯಲಿ ।
ಪುತ್ರನನು ಬೋಳೈಸುವಂತಿರೆ ।
ನಿತ್ಯನಲ್ಲಮ ಸಿದ್ಧರಾಮನನೊಲಿದು ಮನ್ನಿಸಿದ ॥೪೯॥

ಲಕ್ಷಿಸುವಡೆಂಬತ್ತು ನಾಲುಕು ।
ಲಕ್ಷ ದೇಹಿಗಳೊಳಗೆ ಮಾನವ ।
ಪಕ್ಷದೇಹಿಯೆ ಸಕಲ ಕರ್ಮಕೆ ಕರ್ತನಾಗಿಹನು ॥
ಮೋಕ್ಷಸಾಧಕರಾದವರುಗಳು ।
ಪೇಕ್ಷಿಸದೆ ಸರ್ವೇಂದ್ರಿಯಂಗಳ ।
ಶಿಕ್ಷಿಸಲು ಸುಖಿಯಪ್ಪರೈ ರಾಮಯ್ಯ ಕೇಳೆಂದ ॥೫೦॥

ಇಂದ್ರಿಯಂಗಳನಾವ ಪರಿಯಲಿ ।
ಬಂಧಿಸುವ ಪರಿ ಮೊಲನ ಕಂಡೊಡೆ ।
ನಿಂದುದುಂಟೇ ನಾಯಿಗಳು ದಿಟವಾ ಪ್ರಕಾರದಲಿ ॥
ಮುಂದುವರಿವವು ವಿಷಯದಿಚ್ಛೆಗೆ ।
ಕೊಂದು ಕೂಗುವವತಿ ಮಹಾಬಳ ।
ದಿಂದ್ರಿಯಕೆ ನಾನೇಗುವೆನು ಗುರುರಾಯ ಹೇಳೆಂದ ॥೫೧॥

ಊಹಿಸುವಡಿಂದ್ರಿಯಕೆ ಮನವೇ ।
ಬೇಹ ನಾಯಕನದರ ಗಮಕದ ।
ಗಾಹು ಶಬ್ದ ಸ್ಪರ್ಶರೂಪು ರಸ ಪ್ರಗಂಧದಲಿ ॥
ಮೋಹದಂತಿರೆ ಸೆಳೆದು ಸಮತೆಯ ।
ಸಾಹಸದಲಿರಲಿಂದ್ರಿಯಂಗಳ ।
ಕಾಹುರಂಗಳು ಕೆಡುವವೈ ರಾಮಯ್ಯ ಕೇಳೆಂದ ॥೫೨॥

ಮನದ ಹರಿವರಿ ಹೊನ್ನು ಮಣ್ಣಿನ ।
ವನಿತೆಯರ ಮೇಲಿರದೆ ಸದ್ವ ।
ರ್ತನೆಯಲಿರ್ದದೆ ದೋಷವೇನದರಿಂದೆ ಯತಿಯಾಗಿ ॥
ಜನಕೆ ಬೇಡಿತನಿತ್ತು ಸುಖದಲಿ ।
ಘನದ ಪುಣ್ಯವನರ್ಜಿಸಿರ್ದಡೆ ।
ತನಗೆ ನಿಜಪದವಾಗದೇ ಗುರುರಾಯ ಹೇಳೆಂದ ॥೫೩॥

ಖ್ಯಾತಿ ಪೂಜಾ ಲಾಭದಾಶಾ ।
ಪ್ರೀತಿಯಿಂದಲಿ ದಾನ ಧರ್ಮ ।
ವ್ರಾತವನು ಮಾಡಿದರೆ ಬಿತ್ತಿದ ಬೆಳೆಯನುಂಬಂತೆ ॥
ಆತು ಬಂದ ಸಮಸ್ತ ಭೋಗವ ।
ನೋತು ಭೊಗಿಸುತಿಪ್ಪನಲ್ಲದೆ ।
ಮಾತು ಮಾತಿಗೆ ನಿತ್ಯವುಂಟೇ ರಾಮ ಕೇಳೆಂದ ॥೫೪॥

ತೊರೆದು ಸತಿಸುತಮಾತೆಪಿತರುಗ ।
ಳೆರಕವನು ಯತಿಯಾಗಿ ಸುಖದಲಿ ।
ಕೆರೆಗಳಾರವೆ ಬಾವಿ ದೇಗುಲಗಳನು ರಚಿಸಿದರೆ ॥
ಅರಿಯಬಾರದು ಕಂಡ ಬಳಿಕಿ ।
ನ್ನರಿವ ಪರಿಯೆಂತಯ್ಯ ನಿಜವನು ।
ಬರಿದೆ ಬಣ್ಣಿಸ ಬೇಡವೈ ಗುರುರಾಯ ಹೇಳೆಂದ ॥೫೫॥

ಕಾರಣಿಕನೇ ಮನಸು ಮನಸೇ ।
ಬೇರು ಬಿಟ್ಟಿಹುದನ್ಯಕರ್ಮದ ।
ಕಾರಿಯಂಗಳಲಂತರಂಗವೆ ಹಾಳು ಬಿದ್ದಿಹುದು ॥
ಆರು ಬಲ್ಲರು ಬಳಿಕ ಸುಖವನು ।
ಮಾರಿ ಮಂಡಿಸಿಯವರ ತನುವನು
ಹೀರಿ ಹಿಪ್ಪೆಯ ಮಾಡದಿಹಳೇ ರಾಮ ಕೇಳೆಂದ ॥೫೬॥

ಆದಡಿನ್ನಾ ಸಾವು ತಪ್ಪುವ ।
ಭೇದವಾವುದು ಮುಕ್ತಿಮಾರ್ಗದ ।
ಹಾದಿಯಾವುದು ನಿತ್ಯನಹ ಪರಿಯಾವುದ್ಯೆ ಗುರುವೆ ॥
ವಾದವೇತಕೆ ನಮಗೆ ನಿಮ್ಮಯ ।
ಪಾದ ಶರಣೆನಬಲ್ಲೆವಲ್ಲದೆ ।
ಭೋಧಿಸುವುದೆನಗೆನುತಲಿರ್ದನು ಸಿದ್ಧರಾಮಯ್ಯ ॥೫೭॥

ಹಸನಮಾಡಿಯೆ ಹರಗಿ ಹೊಲದಲಿ ।
ಕಸವ ಬಿತ್ತುವ ಮರುಳನಂತಿರೆ ।
ಮಿಸುಗುವಂತರ್ಮಾರ್ಗದೋಜೆಗೆ ಬಂದ ತನುಮನವ ॥
ಕಿಸುಕುಳದ ಬಹಿರಂಗದಿಚ್ಛೆಯ ।
ಬೆಸನದಲಿ ಬೇಯಿಸದೆ ನಿನ್ನಯ ।
ವಸವ ಮಾಡಲು ನೀನೆ ಸುಖಿಯೈ ರಾಮ ಕೇಳೆಂದ ॥೫೮॥

ಆವನಾದಡೆಯಂತರಂಗದ ।
ಭಾವದಲಿ ಬಗೆವೊಗಲು ಬಹವೈ ।
ಬೇವಸಂಗಳು ಮೊದಲಲವನೆಂತಾನು ತಪ್ಪಿದಡೆ ॥
ದೇವತಾ ಭೋಗಾದಿಗಳು ಸಂ ।
ಭಾವಿಸುವುವವಕೊಲಿದು ಸಿಕ್ಕದ ।
ದೀವಸಿಯೆ ಸುಖಿಯಪ್ಪನೈ ರಾಮಯ್ಯ ಕೇಳೆಂದ ॥೫೯॥

ಶಕ್ರನಹನಜನಹನು ತತ್ತಡೆ ।
ಚಕ್ರಿಯಹನನುಭಾವಭರದಲಿ ।
ನಕ್ರಕೇತನವೈರಿಯಹ ಭಾಳಾಕ್ಷ ತಾನಹನು ॥
ಈ ಕ್ರಮಂಗಳಿವೆಲ್ಲ ಮುಕ್ತಿಗೆ ।
ವಕ್ರವಾಗಿಹವಿವನು ಬಗೆಯದ ।
ವಿಕ್ರಮನೆ ಸುಖಿಯಪ್ಪನೈ ರಾಮಯ್ಯ ಕೇಳೆಂದ ॥೬೦॥

ಕೀಳು ಮಾಂಸದ ಸವಿಗೆ ಗಂಟಲ ।
ಗಾಳವನು ಮಿಗೆ ಕಚ್ಚಿ ದುಷ್ಟನ ।
ದಾಳಿಗೊಳಗಹ ಮೀನಿನಂತಿರೆ ವಿಷಯಸುಖಗಳಿಗೆ ॥
ಲೋಲರಾದರೆ ಹರಿಸುರಬ್ರ ।
ಹ್ಮಾಳಿಗಳು ಮೊದಲಾಗಿ ಕಾಲನ ।
ಕಾಲ ಬಾಯಿಗೆ ಬೀಳ್ವರೈ ರಾಮಯ್ಯ ಕೇಳೆಂದ ॥೬೧॥

ದೇಹಿಗೊಳಹೊರಗೆಂಬ ನೆಲೆಯಲಿ ।
ಬಾಹಿರಂಗವೆ ಸಕಲ ಮಾಯಾ ।
ಮೋಹದಿಂದಿಹುದಂತರಂಗವೆ ನಿಃಪ್ರಪಂಚಿನಲಿ ॥
ಬೇಹುದಾಗಿಹುದಂತು ಕಾರಣ ।
ಸಾಹಸಿಗತನದಿಂದಲಾ ನಿ ।
ರ್ಮೋಹದಲಿ ನಿಲುವವನೆ ನಿತ್ಯನು ರಾಮ ಕೇಳೆಂದ ॥೬೨॥

ಒಳಗು ಹೊರಗೆಂಬೆರಡು ಬಟ್ಟೆಗ ।
ಳೊಳಗೆ ನೀತಿ ಪ್ರೀತಿ ಮಾರ್ಗಗ ।
ಳೊಳವು ತಾವೆರಡೆರಡು ಪಥದಲಿ ಕವಲುವಟ್ಟೆಗಳು ॥
ತಿಳಿವಡವರೊಳು ಮಧ್ಯಮಾರ್ಗದ ।
ಬಳಿವಿಡಿವ ಬಗೆಯುಳ್ಳಡಾತನೆ ।
ನೆಲೆಯ ಕಾಂಬನು ನಿತ್ಯನಪ್ಪನು ರಾಮ ಕೇಳೆಂದ ॥೬೩॥

ವಿಷವ ಹೊರಮೈಗಿಕ್ಕಿದೊಡೆ ವ ।
ರ್ಜಿಸಲು ಬಹುದೆಂತಾದೊಡೆಯು ತ ।
ದ್ವಿಷವನೊಳಮೈಗಿಕ್ಕಿದೊಡೆ ಬಳಿಕಾರು ಕಳೆವವರು ॥
ವಿಷಯವಂತರ್ಮಾರ್ಗದಲಿ ಮೋ ।
ಹಿಸಿದವಾದಡೆ ಬಳಿಕಲಾತನ ।
ಘಸಣೆ ದುಃಖವನೀವುದೈ ರಾಮಯ್ಯ ಕೇಳೆಂದ ॥೬೪॥

ಸಿದ್ಧಸಾಧಕರುಗಳನೇಕರು ।
ಬಿದ್ದು ಸಿಕ್ಕಿದರಂತರಂಗದ ।
ಹೊದ್ದಿಗೆಯಲಿದಿರಿಟ್ಟು ತೋರುವ ಸುಖಮುಖಂಗಳಲಿ ॥
ಬುದ್ಧಿವಂತನದಾವದನು ಹೊಗ ।
ದಿರ್ದನಾದಡೆ ಬಳಿಕ ಬಗೆವಡೆ ।
ಸಿದ್ಧನೆನಿಸುವನಾತನೈ ರಾಮಯ್ಯ ಕೇಳೆಂದ ॥೬೫॥

ಆನೆ ಕೆಸರೊಳಗದ್ದಿ ಬಿದ್ದಡೆ ।
ತಾನೆ ತನ್ನಯ ಭುಜಬಲದ ಸುಯಿ ।
ದಾನದಿಂದೊಡನೇಳ್ವುದಲ್ಲದೆ ಯಾರು ನೆಗಹುವರು ॥
ನೀನೆ ತಪ್ಪಿದ ನಿನ್ನ ನಿಜವನು ।
ನೀನೆ ಸಾಧಿಸಿ ಕಂಡೆಯಾದಡೆ ।
ನೀನೆ ಸದ್ಯೋನ್ಮುಕ್ತನೈ ರಾಮಯ್ಯ ಕೇಳೆಂದ ॥೬೬॥

ರಾಯನಾರೋಗಿಸುವ ಸುಧೆಯನು ।
ನಾಯಿಗಿಕ್ಕದೆ ನಿನ್ನ ಚಿತ್ತೋ ।
ಪಾಯವನು ಕೇಡುಳ್ಳ ಕರ್ಮದ ಕೋಟಿಕೋಟಿಲೆಗೆ ॥
ಬೀಯಮಾಡದೆಯಾತ್ಮಲಿಂಗದ ।
ಬಾಯಲರ್ಪಿಸಬಲ್ಲೆಯಾದಡೆ ।
ಮಾಯೆಯನು ನೀ ಗೆಲುವೆಯೈ ರಾಮಯ್ಯ ಕೇಳೆಂದ ॥೬೭॥

ಕರಣಗಳು ಕೈಗೂಡಿದಾಗಳೆ ।
ಮರಣವನು ಗೆಲಕಲಿತು ಸಂತತ ।
ಶರಣಪದದಲಿ ನಿಂದು ಪರಮಾನಂದ ಸುಖದಿಂದೆ ॥
ಪರಿಣಮಿಸಿ ನಿರ್ಲೇಪನಾಗಿರು ।
ತಿರಲು ಬಲ್ಲಡೆ ಬಳಿಕ ನೀನೇ ।
ಪರಮನಪ್ಪುದು ತಪ್ಪದೈ ರಾಮಯ್ಯ ಕೇಳೆಂದ ॥೬೮॥

ಹಲವು ಮುಖದಲಿ ಹರಿವ ಮನವನು ।
ನಿಲಿಸುವುದು ಲಿಂಗದಲಿ ಲಿಂಗದ ।
ಹೊಲಬ ತಿಳಿದಾ ಪ್ರಾಣಲಿಂಗವನರಿದು ಚೆನ್ನಾಗಿ ॥
ತಿಳಿದು ತೃಪ್ತಿಸ್ಥಾನದಲಿ ನಿ ।
ರ್ಮಳದ ಜ್ಯೋತಿರ್ಲಿಂಗವನು ನೆಲೆ ।
ಗೊಳಿಸ ಕಲಿತಡೆ ನೀನೆ ಸುಖಿಯೈ ರಾಮ ಕೇಳೆಂದ ॥೬೯॥

ಕಾಗುದುರೆಗತ್ಯಂತ ಶಿಕ್ಷೆಗ ।
ಳಾಗಬೇಕಲ್ಲದೆ ವಿಚಾರಿಸ ।
ಲಾ ಗರುವ ಜಾತ್ಯಶ್ವಗೊಂದೇ ರಾಯ ರಾವುತನ ॥
ರಾಗ ವಾಘೆಯೆ ಸಾಲದೇ ಸಬು ।
ದಾಗಮಂಗಳ ಶಿಕ್ಷೆ ನಿನಗಿ ।
ನ್ನೇಗುವುವು ಸಂಸ್ಕಾರಿ ನೀನೈ ರಾಮ ಕೇಳೆಂದ ॥೭೦॥

ಎಂದು ಬಳಿಕೇಕಾಂತದಲಿ ಮುದ ।
ದಿಂದಲೊಪ್ಪುವ ಕಾಯಕರಣದ ।
ಸಂದು ಸಂಬಂಧವನು ಸೂಚಿಸಿ ಜೀವಪರಮರನು ॥
ಒಂದು ಮಾಡುವ ಶಕ್ತಿಭಕ್ತಿಯ ।
ಹೊಂದಿಕೆಯನುಪದೇಶ ಮಾಡಿದ ।
ನಂದು ಕರುಣದೊಳಲ್ಲಮಪ್ರಭು ಸಿದ್ಧರಾಮಂಗೆ ॥೭೧॥

ತಿಳಿದುದಾಗಳೆ ಬಳಿಕ ಹೃದಯ ।
ಸ್ಥಳದ ಮತಿಮಾನಸಸರೋವರ ।
ಹೊಳೆದುದಾಗಳೆ ಪರಮಹಂಸನ ನೆಳಲು ನೆಲೆಗೊಂಡು ॥
ತಳಿತ ನವಚಕ್ರಾಂಬುಜಂಗಳ ।
ಕುಳವನರಿದನು ಮನದ ಸಂಶಯ ।
ವಳಿಯಿತಲ್ಲಮಲಿಂಗನೊಲಿದಡೆ ಸಿದ್ಧರಾಮಂಗೆ ॥೭೨॥

ಗುರುವೆ ನಿನ್ನಯ ಚಾರು ಚರಣಾಂ ।
ಬುರುಹ ಮಕರಂದದಲಿ ಮಿಗೆ ಮಧು ।
ಕರನ ಪರಿ ನಾನಾದಕಾರಣವೆನ್ನ ಭವತಿಮಿರ ॥
ಹರಿದು ದಿವ್ಯಜ್ಞಾನದೀಪಾಂ ।
ಕುರವನರಿದೆನು ನಿನ್ನ ಕೃಪೆಯಲಿ ।
ಪರಮಪಾವನನಾದೆನೈ ಪ್ರಭುರಾಯ ಕೇಳೆಂದ ॥೭೩॥

ಎತ್ತ ಹೋದುದೊ ಸಿದ್ಧರಾಮನ ।
ಮತ್ತತನವಾ ಬಾಹಿರಂಗದ ।
ಕೃತ್ಯದಲ್ಲಿಹ ಮೋಹ ಕೀರ್ತಿಯ ಮೇಲಣಭಿಲಾಷೆ ॥
ಕಿತ್ತು ಕೆಡೆದುವು ಸಕಲ ಭಾವನೆ ।
ಚಿತ್ತ ಚಿತ್ತುವನಪ್ಪುತಿರ್ದುದು ।
ತತ್ತಡುತ್ತಮ ಸಂಗವೀಯದೆ ಸುಖವ ನಿಖಿಳರಿಗೆ ॥೭೪॥

ಶುದ್ಧರಾಗದರಾರು ಸಮತೆಯ ।
ಶ್ರದ್ಧೆಯಾಗದರಾರು ನಿರುಪಮ ।
ಸಿದ್ಧಿಯಾಗದರಾರು ನಿತ್ಯವ ಪಡೆಯದವರಾರು ॥
ಸಿದ್ಧರಾಗದರಾರು ಸೌಖ್ಯಸ ।
ಮೃದ್ಧಿಯಾಗದರಾರು ಪರಮಾ
ರಾಧ್ಯರೆಮ್ಮಯ ಗುರು ಗುಹೇಶ್ವರಲಿಂಗ ಲೀಲೆಯಲಿ ॥೭೫॥

**ಅಂತು ಗತಿ ೧೩ಕ್ಕಂ ಪದನು ೬೪೨ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೧೪
# ಮಣಿದನು ಬಸವನಲ್ಲಮಗೆ

**ವಚನ**

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿರ್ದುದಯ್ಯಾ ಶಿವನ ಪ್ರಕಾಶ
ಆ ಬೆಳಗಿನೊಳಗೊಪ್ಪುತಿರ್ದರಯ್ಯ ಅಸಂಖ್ಯಾತ ಭಕ್ತಮಹಾಗಣಂಗಳು
ಶಿವಭಕ್ತರಿರ್ದ ಕ್ಷೇತ್ರ ಅವಿಮುಕ್ತಕ್ಷೇತ್ರವೆಂಬುದು ಹುಸಿಯೆ ?
ಶವಭಕ್ತರಿರ್ದ ದೇಶ ಪಾವನವೆಂಬುದು ಹುಸಿಯೆ ?
ಗುಹೇಶ್ವರಲಿಂಗದಲಿ ಎನ್ನ ಪರಮಾರಾಧ್ಯ ಸಂಗನಬಸವಣ್ಣನ ಕಂಡು ಬದುಕಿದೆ
ಕಾಣಾ ಸಿದ್ಧರಾಮಯ್ಯಾ ॥೧॥

ಆದಿಯಾಧಾರವಿಲ್ಲದ ಆಗಮನಾಸ್ತಿಯಾಗಿಪ್ಪ
ಸಂಸಾರವಿರಹಿತನನಾರೂ ಅರಿಯರಲ್ಲ
ದಶಮುಖಮಾಣಿಕದ ಎಸಳುಗಂಗಳು
ಪರ್ಬಿಪಸರಿಸಿದುದನಾರೂ ಅರಿಯರಲ್ಲ
ಪಿರಿದೊಂದು ವೃಕ್ಷವು ಅತಿಶಯದ ರೂಪಾಗಿ
ಪೃಥ್ವಿಗಿಂಬಾಗಿರ್ದುದನಾರೂ ಅರಿಯರಲ್ಲ
ಅಂತರಂಗದ ಭುವನವನು ಮೆಟ್ಟಿ ನೋಡುತ್ತ
ಬೆಡಗಿನ ತಾವರೆಯ ಮಧ್ಯದ ತಾರಕಿಯನಾರೂ ಅರಿಯರಲ್ಲ
ಇನಶಶಿಗಳಿಬ್ಬರು ನಯನ ನೋಟದ
ಪುಷ್ಪಪರಿಮಳವಾಗಿರ್ದುದನಾರೂ ಅರಿಯರಲ್ಲ
ಇಂಬುನಯನದಲ್ಲಿ ಸಂಭ್ರಮವಿಲ್ಲದ ರೂಪ

ಮಹತ್ತಾಗಿರ್ದುದನಾರೂ ಅರಿಯರಲ್ಲ
ಸಾಗರದೊಳಗಣ ಜ್ಯೋತಿಯಂತೆ
ಗುಹೇಶ್ವರಲಿಂಗದೊಳಗೆ ಎನ್ನ ಪರಮಾರಾಧ್ಯ ಸಂಗನಬಸವಣ್ಣ
ನಿಂದ ನಿಲವ ಉಪಮಿಸಬಾರದು ಕಾಣಾ ಸಿದ್ಧರಾಮಯ್ಯಾ ॥೨॥

ಯತ್ರ ಯತ್ರ ಮಹೇಶ್ವರರಿರ್ದ ಗ್ರಾಮ
ತತ್ರ ತತ್ರ ಶಿವಲೋಕ ನೋಡಾ
ಸತ್ಯರ ವಚನ ತಪ್ಪುವದೇನಯ್ಯಾ ಕಪಿಲಸಿದ್ಧ ಮಲ್ಲಿನಾಥಾ
ನಿಮ್ಮ ಶರಣ ಬಸವಣ್ಣ ಮೆಟ್ಟಿದ ಧರೆ ಪಾವನವೆಂಬುದು
ಇಂದು ಕಾಣಬಂದಿತ್ತಯ್ಯಾ ಪ್ರಭುವೇ ॥೩॥

ಜಲದಲುದ್ಭವಿಸಿದ ಮುತ್ತು ಜಲವು ತಾನಲ್ಲ
ಜಲವೆಂದಿಪ್ಪರು ಲೋಕದವರು
ಪರಮಗುರು ಬಸವಣ್ಣ ಜಗವ ಪಾಲಿಸಬರಲು
ಎನ್ನ ಪರಿಭವದ ದಂದುಗ ಹರಿಯಿತಯ್ಯಾ
ಸುದ್ದಿಯನರಿಯಲರಿಯದೆ ಬೇಕಾದ ಪರಿಯಲ್ಲಿ
ಅನೇಕ ಜಡರೆಲ್ಲ ನುಡಿವುತ್ತಿಹರು
ಸತ್ತವರ ಪ್ರಾಣವನೆತ್ತಿ ಒಪ್ಪಿರ್ಪನಿರ್ಣಯ
ಮರ್ತ್ಯದವರಿಗುಂಟೇ ಶಿವಂಗಲ್ಲದೆ.
ಶಿವಗುರು ಬಸವಣ್ಣ ಬಸವಗುರು ಶಿವನಾಗಿ
ದೆಸೆಗೆಟ್ಟ ದೇವತಾಪಶುಗಳಿಗೆ ಪತಿಯಾದನು.
ಬಸವಣ್ಣನ ನೆನಹು ಸುಖಸಮುದ್ರವಯ್ಯಾ
ಕಪಿಲಸಿದ್ಧ ಮಲ್ಲಿನಾಥಾ
ಬಸವಣ್ಣನ ತೋರಿದಿರಾಗಿ ನಾನು ಬದುಕಿದೆನು ॥೪॥

ಕರ್ಮವಿಲ್ಲದ ಕಾಯ ಕರಣವಿಲ್ಲದ ಪ್ರಾಣ
ಮಥನವಿಲ್ಲದ ಶಬ್ದ ಗಮನವಿಲ್ಲದ ಮನ

ಗುಹೇಶ್ವರ ನಿಮ್ಮ ಬರವು
ಸಂಗನಬಸವಣ್ಣನ ಮೆಚ್ಚು ನೋಡಾ ॥೫॥

ಉಪಪಾತಕ ಮಹಾಪಾತಕವ ಮಾಡಿದ ಕರ್ಮಂಗಳು ಕೋಟಾನುಕೋಟಿ
ಒಬ್ಬ ಶಿವಶರಣನ ಅಂಗಳವ ಕಂಡಲ್ಲಿ ಹರಿದು ಹೋಹವು ನೋಡಾ
ಅದೇನು ಕಾರಣವೆಂದರೆ ಶಿವಶರಣನಂತರಂಗದಲ್ಲಿ ಶಿವನಿಪ್ಪನಯ್ಯಾ
ಶಿವನಿದ್ದಲ್ಲಿ ಕೈಲಾಸವಿಪ್ಪುದು
ಕೈಲಾಸವಿದ್ದಲ್ಲಿ ಸರ್ವರುದ್ರಗಣಂಗಳಿರ್ಪರು
ಅಷ್ಟಾಷಷ್ಟಿ ತೀರ್ಥಂಗಳಿಪ್ಪುವು
ಶಿವನು ಒಲಿದಲ್ಲಿ ಇನಿತು ನೆಲಸಿಪ್ಪುವಯ್ಯಾ
ಇಂತಪ್ಪ ಶರಣ ಬಸವಣ್ಣನಂಗಳವ ಕಂಡೆನಾಗಿ
ಗುಹೇಶ್ವರಲಿಂಗದ ಕಂಗಳಿಗೆ ತೃಪ್ತಿಯಾಯಿತ್ತು ಕಾಣಾ ಸಿದ್ಧರಾಮಯ್ಯಾ ॥೬॥

ಜಂಗಮದಿಂಗಿತಾಕಾರವ ನೋಡಿ ಲಿಂಗವೆಂದರಿದ ಸದ್ಭಕ್ತರು
ಮನ ಮನ ಬೆರಸಿದ ಕೂರ್ಮನ ಸಿಸುವಿನ ಸ್ನೇಹದಂತೆ
ಕಾಣದ ಮುನ್ನವೆ ತೆರಹಿಲ್ಲದಿರಬೇಕು ನೋಡಾ
ಬಂದ ಬರವನರಿಯದೆ ನಿಂದ ನಿಲವ ನೋಡದೆ
ಕೆಮ್ಮನೆ ಅಹಂಕಾರವ ಹೊತ್ತಿಪ್ಪವರ
ನಮ್ಮ ಗುಹೇಶ್ವರಲಿಂಗನೊಲ್ಲ ಕಾಣಾ ॥೭॥

ಎನ್ನ ಗುಣಾವಗುಣವ ಸಂಪಾದಿಸದಿರಯ್ಯಾ
ಪ್ರತಿಯಿಲ್ಲದಪ್ರತಿಮ ನೀನು
ನಿನಗಾನು ಸರಿಯೆ
ಅನುಪಮ ಮಹಿಮ ಕೂಡಲಸಂಗಮದೇವ
ನೀ ಮಾಡಲಾನಾದೆನಯ್ಯಾ ॥೮॥

ಕೈಯಲ್ಲಿ ಡೊಣ್ಣೆ ಮನದಲ್ಲಿ ಕ್ರೋಧ ವಚನದಲ್ಲಿ ಕಿಂಕಿಲ
ಲಿಂಗದ ವಾರ್ತೆ ನಿನಗೇಕೆ ಹೇಳಾ ಬಸವಾ
ಜಂಗಮವೆ ಲಿಂಗವೆಂಬ ಶಬ್ದ ಸಂದೇಹಸೂತಕಿ ನೀನು
ಸಜ್ಜನಸದ್ಭಕ್ತಿಯ ಮಾತು ನಿನಗೇಕೆ ಹೇಳಾ ಬಸವಾ ?
ಕಬ್ಬುನದ ರೂಪು ಪರುಷವ ಮುಟ್ಟಿ ಹೊನ್ನಾಯಿತಲ್ಲದೆ
ಪರುಷವಪ್ಪುದೆ ಹೇಳಾ ಬಸವಾ ?
ಗುಹೇಶ್ವರನೆಂಬ ಪರುಷವ ಪುತ್ಥಳಿಯನರಿಯಬಲ್ಲಡೆ
ತಿಳಿದು ನೋಡಾ ಸಂಗನಬಸವಣ್ಣಾ ॥೯॥

ಧ್ಯಾನ ಮೌನವೆಂಬ ಶಬ್ದವ ಹಿಡಿದು
ನಿಮ್ಮ ಗೆಲಲರಿಯದೆ
ಅಹಂಕಾರದ ಧಾರೆಯೆಂಬ
ಮೊನೆಯ ಶಸ್ತ್ರವ ಹಿಡಿದು ಕೆಟ್ಟೆನಯ್ಯಾ
ಅಂಜುವೆನಂಜುವೆನಯ್ಯಾ
ಜಂಗಮಲಿಂಗವೆಂಬ ಭಾಷೆ ಪಲ್ಲಟವಾಯಿತ್ತು
ಜಂಗಮಲಿಂಗವೆಂಬ ದೀಕ್ಷಾಶಸ್ತ್ರದಲ್ಲಿ
ಎನ್ನ ಹೊಯ್ದು ಬೈದು ರಕ್ಷಿಸು ಕೂಡಲಸಂಗಮದೇವಾ ॥೧೦॥

**ಸೂಚನೆ**

ಬಸವ ಮೊದಲಾಗಿರ್ದ ಭಕ್ತರ ।
ನಸಮನಲ್ಲಮ ಬಂದು ಕಂಡನು ।
ವಸುಮತಿಗೆ ಚೆಲುವಾದ ವರ ಕಲ್ಯಾಣಪುರದೊಳಗೆ ॥

ಶರಣರೆಲ್ಲರು ಕೇಳುವುದು ಸ ।
ತ್ಕರಿಸಿ ಮುಂದಣ ಸಂಗತಿಯ ಸಡ ।
ಗರಣೆಯನು ಸಲೆ ಸಿದ್ಧರಾಮನ ಬೋಧಿಸಿದ ಬಳಿಕ ॥
ಗುರು ಗುಹೇಶ್ವರನೊಲಿದು ಭಕ್ತರಿ ।

ಗೊರೆದ ಶಿವಪಥದಾದಿಗತಿಯನು ।
ವರ ಮನೋಹರವೆನಿಸುವೀ ಪ್ರಭುಲಿಂಗಲೀಲೆಯಲಿ ॥೧॥

ಬಸವರಾಜನ ಚಾರುಚರಿತೆಯ ।
ಬಿಸಿಲಿಗಖಿಲರ ಮನದ ಭಕ್ತಿಯ ।
ಬಿಸರುಹಂಗಳು ವಿಕಸಿತವನೈದಿರಲು ತಾನರಿದು ॥
ವಸುಮತಿಗೆ ಕಲಿಕಾಲದೊಳಗಿದು ।
ಪೊಸತಲಾ ಎಂದೆನುತ ಸಂತೋ ।
ಷಿಸುತಲಿರ್ದನು ಗುರು ಗುಹೇಶ್ವರಲಿಂಗ ಲೀಲೆಯಲಿ ॥೨॥

ಕಾಡಲೇಕಿನ್ನೆನ್ನ ಭಕ್ತರು ।
ಬೇಡಿದಿಷ್ಟಾರ್ಥಂಗಳನು ಕೈ ।
ಗೂಡಿಸುವೆನೆಂದೆನುತ ಕರುಣರಸಾರ್ದ್ರ ಚಿತ್ತದಲಿ ॥
ಹಾಡುತಾಡುತ ಸಿದ್ಧರಾಮನ ।
ಕೂಡಿಕೊಳುತಲಿ ಬಸವರಾಜನ ।
ನೋಡಲಿಕೆಯಲ್ಲಮನು ಸೊನ್ನಲಪುರವ ಹೊರವಂಟ ॥೩॥

ಕೆರೆ ಸರೋವರ ಬಾವಿ ಕಾಲುವೆ ।
ಯೊರತೆ ಪೂಗಿಡು ತೋಟ ಕಿಕ್ಕಿರಿ ।
ಗಿರಿದ ಮಾದಲ ಮಾವು ನೇರಿಲ ಹಲಸು ನಾರಂಗ ॥
ಅರವಟಿಗೆ ಛತ್ರಗಳು ಪಥದಲಿ ।
ತುರುಗಿದುವು ಬಸವೇಶ ಮಾಡಿಸೆ ।
ಮೆರೆದುವಾ ಕಾನನದ ಪಥಿಕರ ಡಗೆಯನಾರಿಸುತ ॥೪॥

ಲೇಸನಿಸಿ ವಿಶ್ರಮಿಸುವರಿಗೆ ನಿ ।
ವಾಸ ಗೇಹಗಳಲ್ಲಿಗಲ್ಲಿಗೆ ।

ಹಾಸುಗಳು ಹಲವಂದದುಪಚಾರದ ಪದಾರ್ಥಗಳು ॥
ಭಾಸುರತೆಯೆನಿಸಿರ್ದುವಾ ಬಸ ।
ವೇಶ ಮಾಡಿಸಲಡವಿಯಲಿ ಸಂ ।
ತೋಷವನೆ ಸಲೆ ಬೀರುತಿರ್ದುವು ಸಕಲ ಪಥಿಕರಿಗೆ ॥೫॥

ಕೂಡಿ ವಿಪಿನದ ಬಟ್ಟೆ ಸುಖವನೆ ।
ತೀಡುತಿರಲಾ ಸಿದ್ಧರಾಮನ ।
ಕೂಡೆ ಹೇಳುತಲಲ್ಲಮಪ್ರಭುಲಿಂಗ ಲೀಲೆಯಲಿ ॥
ನೋಡಿದನು ಕಣ್ತುಂಬಿ ಮಿಗೆ ಕೊಂ ।
ಡಾಡಿದನು ಬಾಯ್ತುಂಬಿ ಹರುಷವ ।
ಮಾಡಿದನು ಮನ ತುಂಬಿ ಬಸವನ ಧರ್ಮದುನ್ನತಿಗೆ ॥೬॥

ಬರುತ ಬರುತಲಿ ತನ್ನ ಪಾದ ।
ಸ್ಪರುಶನಕೆ ಸಯವಾದ ಸಚರಾ ।
ಚರವನೆಲ್ಲವ ಪಾವನವ ಮಾಡುತ ಮಹಾತ್ಮೆಯಲಿ ॥
ಹರುಷದಿಂದಲಿ ಬಂದು ಕಂಡನು ।
ಪರಮಜಂಗಮಲಿಂಗವಾಗಿಯೆ ।
ಗುರು ಗುಹೇಶ್ವರನೊಲಿದು ಕಲ್ಯಾಣವನು ಕರುಣದಲಿ ॥೭॥

ಎತ್ತ ನೋಡಿದಡತ್ತ ನಗರದ ।
ಸುತ್ತ ಹೊರವಳಯದಲಿ ಕಾಣಿಸಿ ।
ಕತ್ತಲಿಸುವ ಸಮಸ್ತಭೋಗಾರುಹದ ತರುಲತೆಯ ॥
ಮುತ್ತಿ ಮೋಹಿಸಿ ಮಿಗೆ ವಿಳಾಸತೆ ।
ವೆತ್ತ ಶುಕ ಪಿಕ ಕೇಕಿ ಕೋಕದ ।
ಮೊತ್ತಗಳ ನಡೆ ನುಡಿಗಳುದ್ಯಾನವನು ಪ್ರಭು ಕಂಡ ॥೮॥

ಪುರದೊಳಗೆ ಚರಿಯಿಸುವಸಂಖ್ಯಾ ।
ತರ ಮಹೋನ್ನತ ಭಕ್ತಿರಸವಾ ।
ಪುರದೊಳಗೆ ನೆಗೆದುಕ್ಕಿ ವಿಸಟಂಬರಿದು ಚೆಲುವಾಗಿ ॥
ಪುರದ ಹೊರವಳಯದಲಿ ಬಳಸಿತೊ ।
ಹಿರಿದು ಗಂಭೀರತೆಯಲೆನಲಾ ।
ಪರಿಖೆ ಕಲ್ಯಾಣದಲಿ ಕಂಗಿದಿರಾಯಿತಲ್ಲಮಗೆ ॥೯॥

ನಲವಿನಲಿ ಗಿರಿರಾಜನತಿ ನಿ ।
ಶ್ಚಲದ ಶಿವಭಕ್ತರ ಚರಿತ್ರಂ ।
ಗಳ ವಿಳಾಸವ ಸುತ್ತಿ ನೋಡುವೆನೆಂದು ಮಂಡಳಿಸಿ ॥
ನೆಲಸಿದನೊ ಪೇಳೆನಲು ಕೋಟೆಯ ।
ವಳಯ ವರ್ತಿಸಿ ಮೆರೆದು ತೋರುವ ।
ತೊಳತೊಳಪ ಕಲ್ಯಾಣ ಕಂಗಿದಿರಾಯಿತಲ್ಲಮಗೆ ॥೧೦॥

ಬಸವ ಚಾದಗೆವಕ್ಕಿಗಲ್ಲಮ ।
ವೆಸರ ಘನ ನಿಜ ಕರುಣವರುಷವ ।
ನೊಸೆದು ಸುರಿದಪುದಲ್ಲಯೊಕ್ಕುದನುಂಬೆವಾವೆನುತ ॥
ಮುಸುರಿದಮರರ ವರವಿಮಾನ ।
ಪ್ರಸರಗಳೊ ಪೇಳೆನಲು ಗಗನದೊ ।
ಳೆಸೆದುವಟ್ಟಳೆಯೋಳಿ ಕಲ್ಯಾಣದಲಿ ಚೆಲುವಾಗಿ ॥೧೧॥

ಹುಲಿಮುಖಂಗಳ ವಂಕದಾರದ ।
ಹಲವು ನೆಲೆಯುಪ್ಪರಿಗೆಗಳ ಬಾ ।
ಗಿಲುಗಳಂಗಡಿಬೀದಿಗಳ ಸಂಪದವ ಜನಪದದ ॥
ಕಳಕಳದ ಕಲ್ಯಾಣಪಟ್ಟಣ ।
ದೊಳಗೆ ನೋಡುತ ಬಸವರಾಜನ ।
ನಿಳಯಕಲ್ಲಮ ಸಿದ್ಧರಾಮರು ಬಂದರೊಲವಿನಲಿ ॥೧೨॥

ಬಂದು ಮೆಲ್ಲನೆ ಬಸವರಾಜನ ।
ಮಂದಿರಕೆ ಚೆಲುವಾದ ಬಾಗಿಲ ।
ಮುಂದೆ ನಿಂದಿರಲಲ್ಲಮಪ್ರಭುಸಿದ್ಧರಾಮರನು ॥
ಅಂದು ಭಾವಿಸಿ ನೋಡಿಯಿವರೇ ।
ನಿಂದುಮೌಳಿಯ ಸಗುಣನಿರ್ಗುಣ ।
ದಂದವಿಗರೋ ಶಿವಶಿವಾ ಎನುತಿದ್ದುದಖಿಳ ಜನ ॥೧೩॥

ಹಡಪದಪ್ಪಣ್ಣಗಳು ಕಾಣುತ ।
ತಡೆದಿರದೆ ಹರಿತಂದು ಮಹಗಣ ।
ದೊಡನೆ ಶಿವಲಿಂಗಾರ್ಚನೆಯ ವಿರಚಿಸುವ ಕಾಲದಲಿ ॥
ಮೃಡನ ದೃಶ್ಯಾದೃಶ್ಯರೂಪುಗ ।
ಳೊಡೆಯರಿಬ್ಬರು ಬಂದರೆನುತಲಿ ।
ಸಡಗರಿಸಿ ಬಿನ್ನೈಸುತಿರ್ದನು ಬಸವರಾಜಂಗೆ ॥೧೪॥

ಕರತಳದೊಳೆಡೆಗೊಂಡು ಪೂಜಾ ।
ತುರತೆಯಿಂದಿರುತೊಲಿದು ತಾನೇ ।
ಚರವನಂಗೀಕರಿಸಿ ಬಂದಡೆ ಲೇಸು ಲೇಸೆನುತ ॥
ಕರೆಯಿರೇ ಇನ್ನೊಳಯಕೆನ್ನೊಡೆ ।
ಯರನು ತಳುವೇಕೆನುತ ಬಸವನು ।
ಹರುಷದಿಂದಲಿ ಹಡಪದಪ್ಪಣ್ಣಂಗೆ ನೇಮಿಸಿದ ॥೧೫॥

ಬಸವರಾಜನು ಭಕ್ತಿಯಿಂದಲಿ ।
ಬೆಸಸಿದರೆಯಪ್ಪಣ್ಣನತಿ ಭರ ।
ವಸದಲೆಯ್ತಂದಲ್ಲಮಪ್ರಭು ಸಿದ್ಧರಾಮರಿಗೆ ॥
ಒಸೆದು ಮಿಗೆ ಶರಣಾರ್ಥಿಯೆನುತವೆ ।
ಸಸಿನೆ ಸಮ್ಮುಖದಲ್ಲಿ ಕರಯುಗ ।
ಬಿಸರುಹಂಗಳ ಮುಗಿದು ಬಿನ್ನಹ ಮಾಡಲನುಗೆಯ್ದು ॥೧೬॥

ದೇವ ಕರುಣಾಕರನೆ ಬಿಜಯಂ ।
ಗೆಯ್ವುದೊಳಕಡೆಗೆಂದೊಡೆಮಗೊಳ ।
ಗಾವ ತತ್ತವಸರವು ನಮಗೇಕರಸುಮನೆಗಳಲಿ ॥
ಭಾವಿಸಲು ಸಂಚಾರವೆನುತಲಿ ।
ದೇವನಲ್ಲಮ ನುಡಿಯಲದ ತಂ ।
ದಾವರಿಸಿಯಪ್ಪಣ್ಣನರುಪಿದ ಬಸವರಾಜಂಗೆ ॥೧೭॥

ಹರಹರಾ ನಾನಕಟ ಗರ್ವದ ।
ಗಿರಿಯನೇನಡರಿರ್ದೆನೋ ಮೇಣ್ ।
ದುರುಳತನದಲಿಯೆನ್ನ ನಡೆ ನುಡಿ ತಪ್ಪನಪ್ಪಿದುವೋ ॥
ಗುರುವೆ ಕರುಣಿಸಿ ಬಂದು ಬಾರದೆ ।
ತರಹರಿಸಲೇಕೆನುತ ಚಿಂತಾ ।
ಶರಧಿಯೊಳಗದ್ದಿದನು ಕೇಳುತ ಬಸವ ಮನದೊಳಗೆ ॥೧೮॥

ತನಗೆ ತಾನೇ ಭಕ್ತರೆಲ್ಲರ ।
ಮನವ ನೋಡಿಹೆನೆಂದು ಕರುಣಿಸಿ ।
ಮನೆಯ ಬಾಗಿಲಿಗಾ ಮಹಾ ಘನಮಹಿಮನೆಯ್ತರಲು ॥
ಅನುವನರಿಯದೆ ರಾಜಸದ ಹ ।
ಮ್ಮಿನಲಿ ಬಳಿಯಟ್ಟುವದು ಬಸವಾ ।
ನಿನಗಿದುಚಿತವೆ ಎಂದನಾ ಮಡಿವಾಳ ಮಾಚಯ್ಯ ॥೧೯॥

ಕಡಲನೀಸಾಡುವಗೆ ತಾಮಸ ।
ವಡರಿದಂತಾಯ್ತಕ್ಕಟಕ್ಕಟ ।
ಮಡಿವಳಯ್ಯನ ಮಾತಹುದು ತಪ್ಪೆನ್ನದೆಂದೆನುತ ॥
ನಡೆದು ಶಿವಗಣಸಹಿತೆಯಲ್ಲಮ ।
ನಡಿಯೊಳತಿ ಭಯಭಕ್ತಿಯಲಿ ತ ।
ನ್ನೊಡಲನೀಡಾಡಿದನು ಭರದಲಿ ಬಸವದಂಡೇಶ ॥೨೦॥

ನಾನು ಮರವೆಯ ಮರುಳು ಸಂತತ ।
ನೀನೆಯರಿವಿನ ತಿರುಳು ತಿಳಿವಡೆ ।
ನಾನು ರಂಜಕನಖಿಳರರಿಯಲು ನೀ ನಿರಂಜಕನು ॥
ನಾನು ಭಾವಿಸೆ ಪಶು ವಿಚಾರಿಸೆ ।
ನೀನು ಪಶುಪತಿಯೆನ್ನ ತಪ್ಪನು ।
ನೀನೆ ತಿದ್ದುವುದೆನುತ ಮೆಯ್ಯಿಕ್ಕಿದನು ಬಸವಣ್ಣ ॥೨೧॥

ಭ್ರಮಿಸಿದೆನು ನಾನೆನ್ನ ಮದದಲಿ ।
ಕ್ಷಮಿಸುವುದು ನೀ ನಿನ್ನ ಗುಣದಲಿ ।
ರಮಣರಾದವರೆನ್ನ ಕೊರತೆಯ ನೋಡಬೇಡೆನುತ ॥
ವಿಮಳಮತಿ ಭಯಭಕ್ತಿಸಹಿತ ।
ಲ್ಲಮನ ಪಾದಪಯೋಜದಲಿ ನೆರೆ ।
ನಮಿಸುತಿರ್ದನು ಬಸವದಂಡಾಧೀಶನಡಿಗಡಿಗೆ ॥೨೨॥

ಶಿಶುಗಳಲಿ ಗುಣದೋಷವನು ಭಾ ।
ಮಿಸುವರೇ ಕರುಣದಲಿ ಮಿಗೆ ರ ।
ಕ್ಷಿಸುವ ಮೋಹದ ತಂದೆ ತಾಯಿಗಳಾ ಪ್ರಕಾರದಲಿ ॥
ಬಸವರಾಜಗೆ ಮಾತೆ ಪಿತ ನೀ ।
ನೊಸೆದು ಕರುಣಿಸಬೇಕೆನುತ ವಂ ।
ದಿಸುತಲಿದ್ದನು ಚೆನ್ನಬಸವನು ಅಲ್ಲಮನ ಪದಕೆ ॥೨೩॥

ಅರಿಗಳಿದಿರಲಿ ತಪ್ಪಿದೊಡೆ ಸಂ ।
ಗರದೊಳೂಣೆಯವಪ್ಪುದಲ್ಲದೆ ।
ಗರುಡಿಯಲಿ ಕೈಮರೆದಡಾವುದು ಕೊರತೆಯದರಿಂದೆ ॥
ಗುರುವೆ ಬಾಲಾಭ್ಯಾಸಭಕ್ತಿಯ ।
ಪರಿಚರಿಯದೂಣೆಯವ ನೋಡದೆ ।
ಕರುಣಿಸೆನುತಲ್ಲಮಗೆ ಮೆಯ್ಯಿಕ್ಕಿದನು ಮಾಚಯ್ಯ ॥೨೪॥

ತನ್ನ ಕಾಯವೆ ಲಿಂಗ ನೆಟ್ಟನೆ ।
ತನ್ನ ಜೀವವೆ ಚಾರುಜಂಗಮ ।
ತನ್ನ ತಾನೇ ತಿಳಿದ ಬಸವಣ್ಣಂಗೆ ನಿಮ್ಮಡಿಗೆ ॥
ಭಿನ್ನ ಭಾವನೆಯಾವುದ್ಯೆ ಸಾ ।
ಕಿನ್ನು ಕೃಪೆ ಮಾಡೆನುತಲಾಗಳು ।
ಕಿನ್ನರಿಯ ಬೊಮ್ಮಣ್ಣ ಬಿನ್ನೈಸಿದನು ಅಲ್ಲಮಗೆ ॥೨೫॥

ಶ್ರುತಿಗೆ ನಿಲುಕದ ಸಕಲ ಶಾಸ್ತ್ರ ।
ಸ್ಮೃತಿಗೆ ಸಿಕ್ಕದ ದಿವಿಜ ಮುನಿಗಳ ।
ಮತಿಗೆ ಮೈದೋರದ ಮಹಾಘನಮಹಿಮ ನೀನೊಲಿದು ॥
ಕ್ಷಿತಿಗೆ ಬಸವ ನಿಮಿತ್ತ ಬಂದಿ ।
ನ್ನತಿಗಳೆಯಬೇಡೆನುತ ದೇವಗೆ ।
ಸ್ತುತಿಸಿ ಮೆಯ್ಯಿಕ್ಕಿದರು ಶಿವಗಣವೆಯ್ದೆ ತಮತಮಗೆ ॥೨೬॥

ನೋಡಿದ್ಯೆ ರಾಮಯ್ಯ ಭಕ್ತರು ।
ಮಾಡುವದು ತಾನೊಂದು ಮಿಗೆ ಮಾ ।
ತಾಡುವದು ಬೇರೊಂದು ಜಂಗಮವೊಲಿದು ನಡೆತರಲು ॥
ಪಾಡನೇ ಪರುಠವಿಸಿ ನುಡಿವ ಸ ।
ಗಾಡಿಕೆಯನೊಡ್ಡಯಿಸಿ ತಮ್ಮಯ ।
ಖೋಡಿಯನು ತಾವರಿಯರೆಂದನು ನಗುತ ಪ್ರಭುರಾಯ ॥೨೭॥

ಸಲಹಬೇಕೆಂದಖಿಳ ಭಕ್ತರಿ ।
ಗೊಲಿದು ನೀನೇ ಲೀಲೆಯಿಂದಲಿ ।
ಸುಲಭವಾಗಿಯೆ ಸುಳಿದ ಬಳಿಕ್ಕಿನವರ ಗತಿಮತಿಯ ॥
ಹಳಿವನೆಣಿಸುವುದೇನು ಕಾರಣ ।
ವೆಲೆ ಮಹಾತ್ಮನೆ ಕರುಣಿಸೆನುತಲಿ ।
ಸಲುಗೆಯಲಿ ಬಿನ್ನೈಸುತಿರ್ದನು ಸಿದ್ಧರಾಮಯ್ಯ ॥೨೮॥

ದೇವ ದೇವಾ ಸಿದ್ಧರಾಮಯ ।
ದೇವರೆಂದೋಪಾದಿಯಲಿ ಮು ।
ನ್ನಾವ ಭಕ್ತಿಯ ಕಂಡು ಬಿಜಯಂಗೆಯ್ದೆ ನಮಗೊಲಿದು ॥
ಪಾವನವ ಮಾಡಲಿಕೆ ಬಂದಿ ।
ನ್ನಾವ ಕೊರತೆಯನೆಣಿಸದೆಮ್ಮನು ।
ಕಾವುದೆನುತಲಿ ಮತ್ತೆ ಮಣಿದನು ಬಸವನಲ್ಲಮಗೆ ॥೨೯॥

ಮುನ್ನ ನಿರುಪಾಧಿಯಲಿ ಕರುಣಿಸಿ ।
ನಿನ್ನ ಲೀಲೆಯಲೊಲಿದು ನೀ ಬಂ ।
ದಿನ್ನುಪಾಧಿಯನರಸುವದು ಮರಿಯಾದೆಯಲ್ಲೆನುತ ॥
ಚೆನ್ನಬಸವನು ಹಿರಿಯಬಸವನು ।
ಮನ್ನಣೆಯ ಶಿವಭಕ್ತರೆಲ್ಲರು ।
ಬಿನ್ನಹವ ಮಾಡಿದರು ಮಹಿಮಗೆ ಮತ್ತೆ ತಮತಮಗೆ ॥೩೦॥

ಮಾತನೇ ಮಕರಿಸಿದರಲ್ಲದೆ ।
ಜಾತಿಭಕ್ತಿಯ ಹೋದ ಹೊಲಬಿನ ।
ರೀತಿಯನು ತಾವರಿಯರಾವಿನ್ನುಚಿತ ಭಕ್ತಿಯನು ॥
ಈತಗಳಿಗರಹಿಸಲು ಬೇಕೆನು ।
ತೋತು ಬಳಿಕೆಮ್ಮಲ್ಲಮಪ್ರಭು ।
ವಾತಗಳಿಗಿಂತೆಂದು ನುಡಿದನು ಮತ್ತೆ ಕರುಣದಲಿ ॥೩೧॥

ನಡೆವಳಿಗಳೇನಾದೊಡಾಗಲಿ ।
ನುಡಿವಳಿಯಲತಿ ಜಾಣರಾದಿರಿ ।
ಪೊಡವಿಯಲಿ ನೀವಹುದು ಮಝುಭಾಪೆನುತ ನಸುನಗುತ ॥
ನಡೆಯಿರೈ ಶಿವಲಿಂಗಭಕ್ತಿಯ ।
ಬೆಡಗನೇಕಾಂತದಲಿ ನಿಮಗೊಡ ।
ಬಡಿಸಿ ಹೇಳುವೆನೆನುತ ಬಂದನು ಬಳಿಕ ಪ್ರಭುರಾಯ ॥೩೨॥

**ಅಂತು ಗತಿ ೧ಳಿಕ್ಕಂ ಪದನು ೬ಳಿಳಿಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೧೫
# ಮರುಳಶಂಕರಗೊಲಿದ ಪ್ರಭುದೇವ

**ವಚನ**

ಬೀದಿಯಲ್ಲಿ ಬಿದ್ದ ಮಾಣಿಕ್ಯವು ಹೂಳಿದ್ದ ನಿಧಾನವು
ಆರಿಗೆಯೂ ಕಾಣಬಾರದು ನೋಡಾ
ಮರಣವುಳ್ಳವರಿಗೆ ಮರುಜೇವಣಿ ಸಿಕ್ಕುವದೆ ?
ಪಾಪಿಯ ಕಣ್ಣಿಗೆ ಪರುಷ ಕಲ್ಲಾಗಿಪ್ಪಂತೆ
ಅಡಗಿಪ್ಪರಯ್ಯಾ ಶಿವಶರಣರು
ಗುಹೇಶ್ವರನ ಶರಣ ಮರುಳಶಂಕರದೇವರ
ನಿಲವ ನೋಡಾ ಸಂಗನಬಸವಣ್ಣಾ

ಕಾಮನ ಕಣ್ಣ ಮುಳ್ಳ ಕಳೆದು
ಭೂಮಿಯ ತೈಲದ ಸೀಮೆಯ ಕೆಡಿಸಿ
ಹೋಮವನುರುಹಿ ದಕ್ಷನ ತಲೆಯನರಿದು
ನಿಸ್ಸೀಮನಾದ ಮಹಿಮನ ನಿಲವನರಿಯಬಹುದೆ ?
ಅರಿವಿಂಗಸಾಧ್ಯ ಉಪಮಗೆ ಕಡೆಮುಟ್ಟದು
ಗುಹೇಶ್ವರನ ಕರುಣಪ್ರಸಾದಿ
ಮರುಳಶಂಕರದೇವನೆಂತಪ್ಪನೆಂಬುದ ತಿಳಿದು ನೋಡಾ ಸಂಗನಬಸವಣ್ಣ ॥೨॥

ಆದಿಯಲ್ಲಿ ಹುಟ್ಟಿತ್ತಲ್ಲ ಅನಾದಿಯಲ್ಲಿ ಬೆಳೆಯಿತ್ತಲ್ಲ
ಮೂರ್ತಿಯಲ್ಲಿ ನಿಂದುದಲ್ಲ
ಅರಿವಿನೊಳಗೆ ಅರಿದುದಲ್ಲ ಮರಹಿನೊಳಗೆ ಮರೆದುದಲ್ಲ
ಎಂತಿರ್ದಡಂತೆ ಬ್ರಹ್ಮ ನೋಡಾ

ತನುಮನಲೀಯವಾಗಿ ಘನಕ್ಕೆ ಘನ ಒಂದಾದರೆ
ಮನಕ್ಕೆ ವಿಸ್ಮಯವ ಮಾಡಲುಂಟೆ
ಕೂಡಲಚೆನ್ನಸಂಗನ ಶರಣ ಮರುಳಶಂಕರದೇವರು
ಪ್ರಭುದೇವರ ಪ್ರಭೆಯಲ್ಲಿ
ಕಾಯವೆಂಬ ಕಂತೆಯ ಕಳೆಯದೆ ಬಯಲಾದರೆ
ನಿಜವೆಂದು ಪರಿಣಮಿಸಬೇಕಲ್ಲದೆ
ಅಂತಿಂತೆನಲುಂಟೆ ಸಂಗನಬಸವಣ್ಣಾ ॥೩॥

**ಸೂಚನೆ**

ಮರುಳಶಂಕರದೇವರಿಗೆ ನಿಜ ।
ಪರಮ ಪದವಿಯನಿತ್ತು ಮೆರೆದನು ।
ಧರಣಿಯರಿಯಲು ಗುರು ಗುಹೇಶ್ವರಲಿಂಗ ಲೀಲೆಯಲಿ ॥

ಕರಣವೆಲ್ಲವು ಕರಗಿಯಂತಃ ।
ಕರಣಶುದ್ಧಿಯ ಪಡೆದು ಸಲೆ ಶಂ ।
ಕರನ ಸಾಧಕರೊಕ್ಕುಮಿಕ್ಕುದನುಂಬ ಮಹಿಮಂಗೆ ॥
ಗುರುವೆ ಪ್ರತ್ಯಕ್ಷದಲಿ ಕರುಣಿಸಿ ।
ಪರಮ ಪದವಿಯನೀವ ಭೇದವ ।
ಶರಣರೆಲ್ಲರು ತಿಳಿವುದೀ ಪ್ರಭುಲಿಂಗಲೀಲೆಯಲಿ ॥೧॥

ನಿಂದು ನಿಲ್ಲದ ನೆಲಕೆ ನೆಟ್ಟನೆ ।
ಹೊಂದಿ ಹೊಂದದ ರೂಪು ರೇಖೆಗೆ ।
ಬಂದು ಬಾರದ ಸಚ್ಚಿದಾನಂದೈಕರಸಮಯನ ॥
ವಂದಿಸುತ ನಾನಾ ಪ್ರಕಾರಗ ।
ಳಿಂದಲೊಳಕಡೆಗಾಗಿ ತನ್ನಯ ।
ಮಂದಿರಕೆ ನಡೆಗೊಳಿಸಿದನು ಬಸವಣ್ಣ ಭಕ್ತಿಯಲಿ ॥೨॥

ಬರುತ ಕಂಡನು ಪರಮ ಪಾವನ ।
ತರದ ಪಾಪಕ್ಷಯದ ಭವಭೀ ।
ಕರವನಳಿದ ಮಹಾಪ್ರಸಾದದಕುಂಡ ತೀರದಲಿ ॥
ಇರುಳು ಹಗಲೆಡೆವಿಡದೆ ಸೇವಿಪ ।
ಮರುಳಶಂಕರದೇವರನು ನಿಜ ।
ಕರುಣದಲಿ ಬಸವಣ್ಣನರಮನೆಯೊಳಗೆ ಪ್ರಭುರಾಯ ॥೩॥

ಅಲ್ಲಮಪ್ರಭು ಬರುತ ಕಾಣುತ ।
ಮೆಲ್ಲಮೆಲ್ಲನೆ ಬಂದು ತನುಮನ ।
ವೆಲ್ಲವನು ಕವಿದೊಕ್ಕು ಸಾಷ್ಟಾಂಗಪ್ರಣತನಾಗಿ ॥
ಪಲ್ಲವಿಪ ಪರಿಣಮದ ಪಸರಣೆ ।
ಯಲ್ಲಿ ಹಿಗ್ಗುತ ಭಕ್ತಿಭಾವದ ।
ಬುಲ್ಲವಣೆಯಲಿ ಮರುಳಶಂಕರದೇವನಿಂತೆಂದ ॥೪॥

ಗುರುವ ಕಂಡೆನು ಎನ್ನ ಭಾಗ್ಯದ ।
ತರುವ ಕಂಡೆನು ಎನ್ನ ಮುಕ್ತಿಯ ।
ಸಿರಿಯ ಕಂಡೆನು ಜಾಗು ಮಝ ಭಾಪೆನುತಲಗಡಿಗಡಿಗೆ ॥
ಕರಣಗಳು ಪರಿಣಮಿಸಿ ಹರ್ಷೋ ।
ತ್ಕರುಷದಲಿ ಹಾರಯ್ಸಿ ಹೆಚ್ಚುತ ।
ಮರುಳಶಂಕರದೇವ ಸ್ತುತಿಸಿದನಲ್ಲಮಪ್ರಭುವ ॥೫॥

ಶಿಲೆಯ ಮರೆಯಲಿ ಹೊನ್ನು ನೆಟ್ಟನೆ ।
ತಿಲದ ಮರೆಯಲಿ ತೈಲ ಭಾವಿಸೆ ।
ನೆಲದ ಮರೆಯ ನಿಧಾನವಿಹವೊಲು ಮರುಳವೇಷದಲಿ ॥
ಬಳಿಯಲಿರೆ ಸಾಕಾರಶಂಕರ ।
ನೆಲಸಿ ತನ್ನಂಗಣದಲಾತನ ।
ಹೊಲಬನರಿಯನು ಬಸವನೆನುತಲ್ಲಮನು ಬೆರಗಾದ ॥೬॥

ಪ್ರೇಮದಿಂದಲಿ ಮರುಳಶಂಕರ ।
ನಾಮದಲಿ ಶಂಕರನೆ ಬಂದಿರೆ ।
ಭೂಮಿಜರು ತಾವರಿಯರಾಡಂಬರದ ಭಕ್ತಿಯಲಿ ॥
ತಾಮಸವ ತಕ್ಕೈಸಿ ಸಾತ್ವಿಕ ।
ಸೀಮೆಯನು ತಾವರಿಯಲರಿಯರು ।
ರಾಮ ನೋಡೆನುತಲ್ಲಮಪ್ರಭುರಾಯನಿಂತೆಂದ ॥೭॥

ಭಾವಿಸಲು ಶಿವಲಿಂಗಭಕ್ತಿಯ ।
ನಾವ ಪರಿಯಲಿ ಮಾಡಬೇಕೆಂ ।
ಬಾ ವಿಧಾನವನರಿಯದುದ್ದೇಶದಲಿ ಮಾಡಿದಡೆ ॥
ಹಾವಸೆಯಲಡಿಯಿಡುವನಂತೆಯ ।
ದಾವ ಪಾರವನೈದಬಲ್ಲುದು ।
ದೇವನೀ ಪರಿ ಸಿಕ್ಕುವನೆ ರಾಮಯ್ಯ ಕೇಳೆಂದ ॥೮॥

ಅರಿಯಬೇಕಾರಾವ ವೇಷದ ।
ಮರೆಯಲಿಹರೋ ಮೇಣು ಲಿಂಗವ ।
ಬೆರಗಿನಲಿ ಕಂಡವರು ಕಣ್ಣಿಗೆ ಮರುಳರಾಗಿಹರೊ ॥
ಮೆರೆವ ಭಕ್ತರ ಮನವ ನೋಡಲು ।
ಮರೆಸಿಹರೊ ದಿಟವಿವನು ತಿಳಿಯದೆ ।
ಬರಿದೆ ಬಹುದೇ ಭಕ್ತಿಸುಖ ರಾಮಯ್ಯ ಕೇಳೆಂದ ॥೯॥

ಗುರುವೆ ಬಿನ್ನಹ ನಿನ್ನನೊಲಿಸುವ ।
ಪರಿಯ ಭಕ್ತಿಯ ಮಾಡಿ ಮೆಚ್ಚಿಸಿ ।
ವರವ ಹಡೆಯಲದಾರು ಬಲ್ಲರು ಭಾವಿಸಲು ನಿನಗೆ ॥
ಶರಣು ಶರಣೆಂದೆಂಬ ಶಬುದ ।
ಸ್ಮರಣೆಯಿಂದಲಿ ಶುದ್ಧರಲ್ಲದೆ ।
ಹಿರಿದು ಮಾತೇಕೆನುತಲಿದ್ದನು ಸಿದ್ಧರಾಮಯ್ಯ ॥೧೦॥

ನಿನ್ನ ಕೃಪೆಯುಳ್ಳವನೆ ಭಕ್ತನು ।
ನಿನ್ನ ಕೃಪೆಯುಳ್ಳವನೆ ಯುಕ್ತನು ।
ನಿನ್ನ ಕೃಪೆಯುಳ್ಳವನೆ ಮುಕ್ತನು ದಿಟ ವಿಚಾರಿಪಡೆ ॥
ನಿನ್ನ ಕೃಪೆಯೊಂದಿಲ್ಲದಿರೆ ಮಿ ।
ಕ್ಕನ್ಯ ಭಕ್ತಿಯೊಳೇನು ಫಲವೈ ।
ನಿನ್ನ ಕರುಣವೆ ಕಾರಣವಲಾ ಗುರುವೆ ಕೇಳೆಂದ ॥೧೧॥

ಲೇಸು ಭಕ್ತಿಯ ಬಂಧುತನದಭಿ ।
ಲಾಷೆಯಿಂತಿರಬೇಕು ಮರ್ತ್ಯರ ।
ಹೂಸಿ ಹುಂಡರ ನಡೆವಳಿಯ ನೀನೊಪ್ಪವಿಟ್ಟೆಯಲಾ ॥
ಐಸೆ ಮತ್ತೇನಹುದು ದಿಟ ನೀ ।
ನೀಸುವೊಲವರಕಾರನೆಂಬುದ ।
ನೀಸು ದಿನ ನಾವರಿಯೆವೈ ರಾಮಯ್ಯ ಕೇಳೆಂದ ॥೧೨॥

ವಸುಮತಿಯ ಶಿವಭಕ್ತರೆಸಗುವ ।
ಕುಶಲದೊಯ್ಯಾರವನು ನಮ್ಮೀ ।
ಮಸುಳಿಸಿದ ಮತಿಗರಿಯಬಹುದೇ ಸಾಕದಂತಿರಲಿ ॥
ಅಸಮಶಂಕರನೆಂಬ ಮಹಿಮನ ।
ಹೊಸಪರಿಯ ರೀತಿಯನು ನಮಗರು ।
ಹಿಸಲು ಬೇಕೆನುತಲ್ಲಮನ ಕೇಳಿದನು ರಾಮಯ್ಯ ॥೧೩॥

ಮರುಳಶಂಕರನೆಂಬನರಿವಿನ ।
ತಿರುಳು ಲಿಂಗಾಗಮದ ಹೊಳಹಿನ ।
ಹುರುಳು ನಿರ್ಮಳ ಧರ್ಮವರ್ಮದ ಚಾರುಚಾರಿತ್ರ ॥
ನಿರುತ ಶಾಂತಿಯ ಚಿತ್ತವೃತ್ತಿಯ ।
ಪರಮ ಪಾವನಮೂರ್ತಿಯಾತನ ।
ಪರಿಗಳನುಪಮತರ ಕಣಾ ರಾಮಯ್ಯ ಕೇಳೆಂದ ॥೧೪॥

ತೀವಿ ತನ್ನೊಂದುದರಕೋಸುಗ ।
ದಾವ ಕೃತ್ಯವ ಮಾಡುತಿರ್ದಡೆ ।
ಜೀವಜಾಳಕೆ ನೋವು ತಪ್ಪದೆನುತ್ತ ಕರುಣದಲಿ ॥
ಭಾವಿಸುತ ಶಿವಲಿಂಗಭಕ್ತರು ।
ಸೇವಿಸಿದ ಶೇಷಪ್ರಸಾದವ ।
ನಾವರಿಸಿದ ಮಹಾತ್ಮನೀತನು ರಾಮ ಕೇಳೆಂದ ॥೧೫॥

ಕಾಮದಲಿ ಕಂಗೆಡದೆ ಕ್ರೋಧ ।
ಸ್ತೋಮದಲಿ ಮುಂಗೆಡದೆ ಲೋಭದ ।
ಸೀಮೆಯಲಿ ಸಿಕ್ಕದೆ ವಿಮೋಹದ ಬಲೆಗೆ ಬಗೆಗುಡದೆ ॥
ಆ ಮದೋನ್ನತ ಮತ್ಸರಂಗಳ ।
ನೇಮಿಸದೆ ಲಿಂಗಪ್ರಸಾದ ।
ಪ್ರೇಮಿಯಾದ ಮಹಾತ್ಮನೀತನು ರಾಮ ಕೇಳೆಂದ ॥೧೬॥

ಕೇಳುವಾಳೋಕಿಸುವ ರುಚಿಸುವ ।
ಲೀಲೆಯಿಂ ಕಂಪರಿವ ಸೋಂಕುವ ।
ಕಾಳು ವಿಷಯೇಂದ್ರಿಯದ ತವಕವ ತೆಗೆದು ತರಹರಿಸಿ ॥
ಬಾಳಿಕೆಗೆ ನಿರ್ಬಾಧಕದ ಸಂ ।
ಮೇಳವೆಂದೀಶಪ್ರಸಾದದ ।
ಮೇಲೆ ಮೆಚ್ಚಿದ ಮಹಿಮನೀತನು ರಾಮ ಕೇಳೆಂದ ॥೧೭॥

ತರಣಿಯುದಯಿಸೆ ರತ್ನಕಾಂತಿ ।
ಸ್ಫುರಣೆ ಕಂಗಿದಿರಾಗಿ ತೋರುವ ।
ಪರಿಯಲಾನೀ ಮರುಳಶಂಕರನೆಂಬ ಮಹಿಮನನು ॥
ಗುರುವೆ ನೀನೆಯ್ತರಲು ಕಂಡೆನು ।
ಪರಮ ಪಾವನ ನಾನಲಾ ಹರ ।
ಹರ ಎನುತ ಪರಿಣಮಿಸುತಿರ್ದನು ಬಸವದಂಡೇಶ ॥೧೮॥

ಬಸವ ನಿನ್ನಯ ಭಕ್ತಿವೃಕ್ಷದ ।
ಪಸರಣೆಯನಾಶ್ರಯಿಸಬೇಕೆಂ ।
ದೊಸೆದು ಬಂದ ಮಹಾತ್ಮರಗಣಿತವವರೊಳೀತಂಗೆ ॥
ವಸುಮತಿಯೊಳೆಣೆಗಾಣೆನಿಂತ ।
ಪ್ಪಸಮರೆಲ್ಲರು ನಿನ್ನ ಬಾಗಿಲ ।
ಮುಸುರಿಕೊಂಡಿಹರಾಗಿ ನೀನೆ ಕೃತಾರ್ಥನಹುದೆಂದ ॥೧೯॥

ದೇವ ನೀನೊಲಿದನೆ ಕೃತಾರ್ಥನು ।
ಭಾವಿಸಲು ನೀನಾಡಿಸುವ ಸೂ ।
ತ್ರಾವಳಿಯ ಬೊಂಬೆಗಳು ನಮಗುಂಟೇ ಸ್ವತಂತ್ರಗುಣ ॥
ನೀವೆ ಬಲ್ಲಿರಿ ನಿಮ್ಮ ಮಹಿಮೆಯ ।
ನಾವು ಬಲ್ಲೆವೆ ಎನುತಲಲ್ಲಮ ।
ದೇವರಿಗೆ ಬಿನ್ನೈಸುತಿರ್ದನು ಬಸವದಂಡೇಶ ॥೨೦॥

ಮನವ ನೋಡುವೆನೆಂದು ನಿನ್ನನು ।
ಕನಲಿದೆವು ನಾವಿನ್ನೆಬರ ನಿನ ।
ಗಿನಿತು ಮುನಿಸಿನ ಮೊಳಕೆ ಮೈದೋರಿಸದ ಪರಿ ಲೇಸು ॥
ಘನಮಹಿಮ ನೀನಹುದು ಸಮತೆಯ ।
ನೆನಹು ನೆಲಸಿತು ಚಾಗು ಚಾಗೆಂ ।
ದೆನುತ ಬಸವನ ಹೊಗಳುತಲ್ಲಮಲಿಂಗನಿಂತೆಂದ ॥೨೧॥

ಕಾರಣವ ಬಲ್ಲವರಿಗರಿಯಲು ।
ಧಾರುಣಿಯಲೀ ಬಸವನಂಗಣ ।
ವಾರಣಾಸಿ ವಿಮುಕ್ತತೀರ್ಥಕ್ಷೇತ್ರದಿಂದಧಿಕ ॥
ಆರು ಪಡೆವರು ಭಕ್ತರಿಕ್ಕೆಯ ।
ಸಾರಿ ಸದ್ಗತಿ ಪಡೆವುದನು ನಿ ।
ರ್ಧಾರಿಸಲು ಸಾಮಾನ್ಯವೇ ರಾಮಯ್ಯ ಕೇಳೆಂದ ॥೨೨॥

ದೇವ ನಿನ್ನಯ ಕರುಣವೇ ಸಂ ।
ಭಾವಿಸದ ಕಾರಣದಲಾನೀ ।
ಭೂವಳಯದಲಿ ಬಸವಮುಖ್ಯ ಸಮಸ್ತ ಭಕ್ತರನು ॥
ತೀವಿ ಕಂಡು ಕೃತಾರ್ಥನಾದೆನಿ ।
ದಾವ ಪುಣ್ಯದ ಫಲವೊ ಶಿವ ಮಹ ।
ದೇವ ಎನುತಲಿ ಹಿಗ್ಗುತಿರ್ದನು ಸಿದ್ಧರಾಮಯ್ಯ ॥೨೩॥

ಬಸವರಾಜನ ಭಕ್ತಿಯನು ಬ ।
ಣ್ಣಿಸುವಡಾತನ ಮಹಿಮೆಯನು ಲೆ ।
ಕ್ಕಿಸುವಡರಿದಗಣಿತವಲಾ ಕೇಳ್ ಸಿದ್ಧರಾಮಯ್ಯ ॥
ಪಸರಿಸುವದಂತಿರಲಿ ನಾವಿ ।
ನ್ನಸಮ ಶಂಕರಗೈಕ್ಯಪದವಿಯ ।
ನೊಸೆದು ಕೊಡಬೇಕೆನುತಲಲ್ಲಮಲಿಂಗನಿಂತೆಂದ ॥೨೪॥

ಇಂದ್ರಿಯವನತಿಗಳೆದನಳುಪಿನ ।
ದಂದುಗವ ಧಿಕ್ಕರಿಸಿದನು ಭವ ।
ಬಂಧನದ ಬೇರಿಂಗೆ ಕಿಚ್ಚಿಕ್ಕಿದನಲಾ ಎನುತ ॥
ಅಂದು ಬಳಿಕಾ ಮರುಳಶಂಕರ ।
ತಂದೆಯನು ತಾನೊಲಿದು ಪರಮಾ ।
ನಂದದಿಂ ನೋಡಿದನು ನಮ್ಮಯ ಗುರು ಗುಹೇಶ್ವರನು ॥೨೫॥

ಹಲವು ಯುಗ ಯುಗ ಜನ್ಮ ಜನ್ಮಂ ।
ಗಳಲಿ ಸಾಧಿಸಿ ಭೇದಿಸುವ ನಿ ।
ರ್ಮಳ ನಿರಾಕುಳ ಶುದ್ಧ ಶಿವತತ್ವಾನುಭಾವನೆಯ ॥
ಫಲವನೊಂದೇ ನಿಮಿಷದಲಿ ನೆರೆ ।
ನಿಲಿಸಿ ನಿಜ ಪದವಿಯನು ಕೊಟ್ಟನು ।
ಸುಲಭದಲಿ ಶಂಕರಗೆ ನಮ್ಮಯ ಗುರು ಗುಹೇಶ್ವರನು ॥೨೬॥

ಆಡಿ ಕೆಲರಿಗೆ ಕರುಣದಲಿ ಮಾ ।
ತಾಡಿ ಕೆಲರಿಗೆ ನುಡಿಸಿ ಕೆಲರಿಗೆ ।
ನೋಡಿ ಕೆಲರಿಗೆ ಜರೆದು ಕೆಲರಿಗೆ ಜಡಿದು ಕೆಲಬರಿಗೆ ॥
ಹಾಡಿ ಕೆಲರಿಗೆ ಹರಸಿ ಕೆಲರಿಗೆ ।
ಮಾಡಬಲ್ಲನು ನಿತ್ಯ ಸುಖವನು ।
ರೂಢಿಯೊಳು ಘನಮಹಿಮನೆಮ್ಮಯ ಗುರು ಗುಹೇಶ್ವರನು ॥೨೭॥

**ಅಂತು ಗತಿ ೧೫೫ಕ್ಕಂ ಪದನು ೬೭೧ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೧೬
# ಇಷ್ಟಲಿಂಗದ ಮಾರ್ಗವನು ಬೋಧಿಸಿದ ಭಕ್ತರಿಗೆ

**ವಚನ**

ಮೂಗ ಕಂಡ ಕನಸಿನಂತಾಯಿತೆನ್ನ ಶಿವಾಚಾರ
ಹೇಳಬಾರದು ಕೇಳಬಾರದಾರಿಗೆಯು
ಎನ್ನ ಹೆಗ್ಗತನವ ಮಾಣಿಸಯ್ಯಾ ಕೂಡಲಸಂಗಮದೇವಪ್ರಭುವೇ ॥೧॥

ಎಲ್ಲ ಎಲ್ಲವನರಿಯಬಹುದು
ಸಾವನರಿಯಬಾರದು
ಶಿವ ಶಿವ ಮಹಾಪುರುಷರಿಗೆಯು ಸಾವು !
ದೇವದಾನವ ಮಾನವ ಕಾಮ ಕಾಲ ದಕ್ಷಾದಿಗಳಿಗೆಯೂ ಸಾವು
ಈ ಸಾವನರಿದು ಲೋಕಪ್ರಪಂಚವ ಮರೆದು
ಲಿಂಗದಲ್ಲಿಯೇ ನೆನಹು ನೆಲೆಗೊಂಡ ಮಹಾಮಹಿಮಂಗೆ ಮರಣವಿಲ್ಲ
ಸಾವನರಿಯದೆ ಲೋಕಪ್ರಪಂಚವ ಮರೆಯದೆ
ಮರುಳುಗಳು ಅರಿತೆಹೆವೆಂಬದು ಮಹಾ ಹಾನಿ ಕಾಣಾ ಗುಹೇಶ್ವರಾ ॥೨॥

ನಾನು ಭಕ್ತನಲ್ಲವಯ್ಯಾ
ನಾನು ಯುಕ್ತನಲ್ಲವಯ್ಯಾ
ನಾನು ಮುಕ್ತನಲ್ಲವಯ್ಯಾ
ನಾನು ಕಪಟವೇಷಡಂಬಕನಯ್ಯಾ
ಕೂಡಲಸಂಗಮದೇವಾ ಎನ್ನ ಭಕ್ತಿ ಲೊಳಲೊಟ್ಟಿಲು ಎಂಬುದ
ನೀವು ತೋರಿದಿರಾಗಿ ಎನಗೆ ಅರಿಯಬಂದಿತಯ್ಯಾ ಪ್ರಭುವೇ ॥೩॥

ಸಜ್ಜನಸನ್ನಿಹಿತವಾದ ಭಕ್ತಿ ಹೊತ್ತಿಗೊಂದು ಪರಿಯುಂಟೆ ?
ಒಮ್ಮೆ ಅಹಂಕಾರ ಒಮ್ಮೆ ಕಿಂಕಲವೆ ?
ಮನಕ್ಕೆ ಮನ ಸಾಕ್ಷಿಯಾಗಿ ಮಾಡುವ ಭಕ್ತರಲ್ಲಿ
ಗುಹೇಶ್ವರನಲ್ಲದೆ ಪ್ರಪಂಚಿನೊಳಗಿಲ್ಲ ಕಾಣಾ ಸಂಗನಬಸವಣ್ಣಾ ॥೪॥

**ಸೂಚನೆ**

ಬಸವ ಮೊದಲಾಗಿರ್ದ ಭಕ್ತರಿ ।
ಗೊಸೆದು ಲಿಂಗದ ಮಾರ್ಗವನು ಬೋ ।
ಧಿಸಿದನೆಮ್ಮಯ ಗುರು ಗುಹೇಶ್ವರಲಿಂಗ ಲೀಲೆಯಲಿ ॥

ನಿಷ್ಠೆ ನೆಲಸಿರೆ ಮೊಟ್ಟಮೊದಲಲಿ ।
ಇಷ್ಟಲಿಂಗದ ಭಕ್ತಿಮಾರ್ಗದ ।
ಶಿಷ್ಟತೆಯ ಶೀಲವನು ಸಕಲಾಗಮದ ಸಾರವನು ॥
ಕಷ್ಟಕರ್ಮಭ್ರಮೆಯ ಕೇಡನು ।
ದೃಷ್ಟಜನ್ಮದಲಿರ್ದು ಕಾಬರೆ ।
ಶ್ರೇಷ್ಠ ಭಕ್ತರು ತಿಳಿವುದೀ ಪ್ರಭುಲಿಂಗಲೀಲೆಯಲಿ ॥೧॥

ಮರುಳಶಂಕರಗೈಕ್ಯಪದವಿಯ ।
ಪರುಠವಿಸಿ ಕೊಟ್ಟೊಲವಿನಿಂದಲಿ ।
ಪರಿಮಿತಾಲಯಕೆಯ್ದಿ ಪರಮಾನಂದಲೀಲೆಯಲಿ ॥
ಕರುಣ ಮಿಗೆ ನಡೆತಂದು ಬಸವೇ ।
ಶ್ವರನು ಮಾಡುವ ಭಕ್ತಿಯುಕ್ತಾ ।
ದರಣೆಯನು ಕೈಕೊಳುತಲಿರ್ದನು ಗುರು ಗುಹೇಶ್ವರನು ॥೨॥

ಮಣಿಖಚಿತ ಮಂಗಳದ ಪರುಷದ ।
ಕಣಿಯ ಪೀಠದ ಮೇಲೆ ನೆರೆ ನಿ ।
ರ್ಗುಣದ ಸಗುಣದ ನಿರ್ಮಲದ ನಿರ್ವಾಣ ಗುರುವಿರಲು ॥

ಎಣಿಸಬಾರದ ಬಹಳ ಭಕ್ತಿಯ ।
ಗಣನೆಯಲಿ ಕೈಮುಗಿದು ಮೌಳಿಯ ।
ಮಣಿದು ಮಹಿಮಗೆ ಬಸವ ಬಿನ್ನಹ ಮಾಡಲನುಗೆಯ್ದ ॥೩॥

ಕುರುಡ ಕನ್ನಡಿವಿಡಿದ ಮಾಟದ ।
ಪರಿಯಲಿದೆ ಶಿವಭಕ್ತಿಯೆಂಬುದು ।
ಮರುಳು ಕಂಡಾ ಕನಸಿನಂತಿರೆ ಮಾತಿಗರಿದಾಯ್ತು ॥
ಗುರುವೆ ನಾನಿದನರಿವವೊಲು ವಿ ।
ಸ್ತರಿಸಿ ಪೇಳೆಂದೆನುತಲಾ ವರ ।
ಗುರು ಗುಹೇಶಗೆ ಬಿನ್ನಹವ ಮಾಡಿದನು ಬಸವಣ್ಣ ॥೪॥

ಚಾಗು ಭಲರೇ ನೀನಹುದು ನಿಗ ।
ಮಾಗಮಂಗಳ ಸತ್ವಸಾರವ ।
ನಾಗು ಮಾಡಲು ಬಂದ ಕಾರಣಪುರುಷ ನೀನೆನುತ ॥
ಆಗಳಾ ಪ್ರಶ್ನೆಗೆ ಮನೋಮುದ ।
ವಾಗಿ ಮೆಚ್ಚುತಲಲ್ಲಮಪ್ರಭು ।
ವಾ ಗುಣಾರ್ಣವ ಬಸವದಂಡಾಧೀಶಗಿಂತೆಂದ ॥೫॥

ಭಾವಿಸಲು ಭಾಸ್ಕರನ ಬಟ್ಟೆಗೆ ।
ದೀವಿಗೆಯ ಹಂಗೇಕೆ ತಿಳಿವಡೆ ।
ಪಾವಕನ ಪಸಿವಿಂಗೆ ಪಚನಾರಂಭವಿಧಿಯೇಕೆ ॥
ಆ ವಿಚಾರತೆಯಂತೆ ನಿನಗಿ ।
ನ್ನಾವ ಬೋಧೆಗಳ ಪ್ರಯೋಜನ ।
ದೈವಪುರುಷನು ನೀ ಕಣಾ ಬಸವಣ್ಣ ಕೇಳೆಂದ ॥೬॥

ಹರ ಹರಾ ನಾನಾರು ನಿಮ್ಮಯ ।
ಚರಣ ಕಮಲವನರ್ಚಿಸುವ ಕಿಂ ।
ಕರರ ಕಿಂಕರ ನಾನೆಲ್ಲೈ ಎನಗಿಲ್ಲಿಪರಿಯಂತ ॥
ಗುರುವೆ ಭರಭಾರವನು ಹೊರಿಸಲು ।
ಕರುಣವಿಲ್ಲವೆ ನಿನಗೆಯೆನುತಲಿ ।
ನಿರುತ ನಿರಹಂಕಾರನಿಧಿ ಬಸವಣ್ಣನಿಂತೆಂದ ॥೭॥

ಬಿತ್ತಿ ಬೆಳೆಯದ ಮುನ್ನ ಮೊಳಕೆಯ ।
ಕಿತ್ತು ನೋಡುವರೇ ವೃಥಾ ನಾ ।
ನೆತ್ತಲೀ ಸ್ತುತಿಯೆತ್ತ ಶಿವ ಶಿವ ಗುರುವೆ ನೀ ಬಲ್ಲೆ ॥
ಚಿತ್ತವಿಸು ಮನ್ಮನದ ಮಧ್ಯದ ।
ಕತ್ತಲೆಯ ಕಳೆದರಿವಿನರ್ಕನ ।
ತೆತ್ತಿಸೆನ್ನೊಳಗೆನುತಲಿರ್ದನು ಬಸವದಂಡೇಶ ॥೮॥

ಸುಧೆಯ ನಿರುಪಮ ರುಚಿಗೆ ಬೇರೊಂ ।
ದಿದಿರ ಸವಿಗಲಿಸುವರೆ ಆದರೆ ।
ಹದನ ನೀ ಕೇಳಿದರೆ ನಾವದನಲ್ಲವೆನಲೇಕೆ ॥
ವಿದಿತ ನಿರಹಂಕಾರಿ ನಿನಗ ।
ಲ್ಲದೆ ಬಳಿಕ್ಕನ್ನಾರಿಗೈ ಲಿಂ ।
ಗದ ಮಹಾ ಸೇವಾನುಭವಸುಖ ಬಸವ ಕೇಳೆಂದ ॥೯॥

ತಿಳಿವಡೀ ಮಾಯಕದ ಜನ್ಮಂ ।
ಗಳ ಶರೀರಗಳ ಪ್ರಯೋಜನ ।
ಕುಲಗಳಾಗಿಹವಲ್ಲಿ ಮಾನವ ದೇಹವವರೊಳಗೆ ॥
ಸಲುವ ಕರ್ಮಂಗಳಿಗೆ ಕರ್ತನು ।
ಗಳಿಸಿ ಕೊಡುವುದು ಪುಣ್ಯ ಪಾಪಂ ।
ಗಳನು ಮುಂದಕೆ ಬಸವದಂಡಾಧೀಶ ಕೇಳೆಂದ ॥೧೦॥

ಮನುಜದೇಹಿಗಳಾದರೆಯು ತನು ।
ಮನಗಳಲಿ ಪಟುವಾಗಿ ದುರ್ವಾ ।
ಸನೆಯ ಬುದ್ಧಿಗೆ ನಿಲುಕದಿಹುದರಿದಾ ಶರೀರದಲಿ ॥
ಅನಿತರೊಳಗೆಚ್ಚತ್ತು ಜನ್ಮದ ।
ಜಿನುಗಿಗಾನಿನ್ನಾರೆನೆಂಬಾ ।
ಮನುಜನೇ ಕೃತಕೃತ್ಯನಹನ್ಯೆ ಬಸವ ಕೇಳೆಂದ ॥೧೧॥

ಹಾಲು ಹಯನುಳ್ಳಲ್ಲಿ ಹೇಳದೆ ।
ಕೇಳದೇ ಹಬ್ಬವನು ಸವೆವುದು ।
ಗಾಳಿ ಬೀಸುವ ದಿನದಲೇ ತೂರುವುದು ಹೊಟ್ಟುಗಳ ॥
ಕಾಲು ಕೈ ಕಣ್ಣುಗಳು ತನುವಿಹ ।
ಕಾಲದಲಿ ಕಾಲನ ನಿವಾರಿಸಿ ।
ಮೇಲುಗತಿಯರಸುವನೆ ಜಾಣನು ಬಸವ ಕೇಳೆಂದ ॥೧೨॥

ಅದು ನಿಮಿತ್ತದಲಾಗಮಂಗಳ ।
ಹೃದಯದಲಿ ಹುರುಳರಿದು ತನ್ಮಾ ।
ರ್ಗದಲಿ ಬುದ್ಧಿಯನಿಕ್ಕಿ ಗುರುಕಾರುಣ್ಯವನು ಪಡೆದು ॥
ಮೊದಲು ತನು ಮನ ಧನದ ಮೇಲಣ ।
ಮದ ವಿಮೋಹಾದಿಗಳನೆಲ್ಲವ ।
ಕೆದರಿ ಕೆಡಿಸುವನವನೆ ಜಾಣನು ಬಸವ ಕೇಳೆಂದ ॥೧೩॥

ಪ್ರಾಣವಿದು ನೋಡೆಂದು ಪ್ರತಿ ಗುರು ।
ವಾಣತಿಯನಿದಿರಿಡಲು ಕಣ್ಣಿಗೆ ।
ಕಾಣಿಸುವ ತನ್ನಿಷ್ಟಲಿಂಗವನತಿ ಸಮೇಳದಲಿ ॥
ಮಾಣದಾಗಳು ಹಿಡಿದು ಹಿಂಗದೆ ।
ಕೇಣವಿಲ್ಲದೆ ನಿಂದ ನಿಷ್ಠೆಯ ।
ಜಾಣನೇ ಶಿವಭಕ್ತನಹನ್ಯೆ ಬಸವ ಕೇಳೆಂದ ॥೧೪॥

ಕೈಯೊಳಗೆ ಶಿವಲಿಂಗವಿರ್ಪಡೆ ।
ಮೆಯ್ಯ ಸೊಂಕಿರಬೇಕು ವಸ್ತ್ರದ ।
ಹುಯ್ಯಲಿಗೆ ಹೂ ಪತ್ರಿಗಳ ಜಂಜಡಕೆ ಜೊಂಪಿಸದೆ ॥
ಒಯ್ಯನೀಕ್ಷಿಸಿ ತನ್ನಲಿಹ ಮೂ ।
ಮೆಯ್ಯ ವಸ್ತ್ರವ ಮಾಡುವನೆ ಜಗ ।
ದಯ್ಯನೆನಿಸುವ ಭಕ್ತನಹನ್ನೈ ಬಸವ ಕೇಳೆಂದ ॥೧೫॥

ಲಿಂಗದೇವಗೆ ತನ್ನಲಿಹ ಮೂ ।
ರಂಗವೇ ವಸ್ತ್ರಂಗಳಾದಡೆ ।
ಲಿಂಗ ನೆನಹಿನಲಿಹುದು ಸಕಲಾರಂಭವನು ಮರೆದು ॥
ಅಂಗಸುಖವನೆ ಬಯಸುವಡೆ ಶಿವ ।
ಲಿಂಗ ಪೂಜೆಯ ಮಾಡುತಿಹುದಾ ।
ಲಿಂಗ ಪೂಜೆಯ ಮಾಡುವಂದವ ಬಸವ ಕೇಳೆಂದ ॥೧೬॥

ಕರಣದಲಿ ಸಲೆ ಸಕಲ ಸಚರಾ ।
ಚರಚಯಂಗಳ ಮೇಲೆ ಕರಗುವ ।
ಕರುಣಿಯಾಗಿಯೆ ಬಳಿಕ ಲಿಂಗಕೆ ಮಜ್ಜನಕ್ಕೆರೆದು ॥
ಪರಮ ಶಾಂತಿಯ ಚಿತ್ತ ತನಗಾ ।
ವರಿಸಿದೊಡೆ ಲಿಂಗಕ್ಕೆ ಗಂಧವ ।
ನೊರೆಯ ಬಲ್ಲಡೆ ಭಕ್ತನಹನ್ನೈ ಬಸವ ಕೇಳೆಂದ ॥೧೭॥

ಕರ್ಮಗಳ ಕಡೆಗಣಿಸಿ ಭಕ್ತಿಯ ।
ಮರ್ಮವನು ತಾನರಿದು ಸಲೆ ಶಿವ ।
ಧರ್ಮದಲಿ ನೆರೆ ನಿಲುವಡಕ್ಷತೆಯಿಂದಲರ್ಚಿಪುದು ॥
ಕೂರ್ಮೆಯಿಂದಲಿ ತನ್ನ ಬಗೆಯನು ।
ನಿರ್ಮಲತೆಯೆನಿಸುವಡೆ ಪುಷ್ಪದ ।
ವರ್ಮ ಪೂಜೆಯ ಮಾಡ ಕಲಿವುದು ಬಸವ ಕೇಳೆಂದ ॥೧೮॥

ಒಡಲ ದುರ್ಗುಣಗಣವನೆಲ್ಲವ ।
ಸುಡುವೊಡೀವುದು ಧೂಪಧೂಮವ ।
ನಿಡಿದ ತನುವಿನ ತಮವನಳಿಯಲು ಬಲ್ಲಡರ್ತಿಯಲಿ ॥
ಬಿಡದೆ ಬಗೆ ಬಂದನಿತು ದೀಪದ ।
ಗಡಣಗಳನೆತ್ತುವುದು ಭಕ್ತಿಯ ।
ಬೆಡಗನರಿವಂಗಿನಿತುಬೇಹುದು ಬಸವ ಕೇಳೆಂದ ॥೧೯॥

ರುಚಿಪದಾರ್ಥವ ಲಿಂಗನೆನಹಿನ ।
ರಚನೆಯಲಿ ರಂಜಿಸಿದ ಬೋನವ ।
ಶುಚಿತನದಲಾಗೆನಿಸಿ ನೈವೇದ್ಯವನು ಮುಟ್ಟಿಸುತ ॥
ಪ್ರಚುರವೆನಿಪಾನಂದಸಹವಾ ।
ದುಚಿತದಗ್ಗವಣಿಗಳನೀಂಟಿಸ ।
ಲಚಲ ಭಕ್ತಿಯನರಿವನಾತನು ಬಸವ ಕೇಳೆಂದ ॥೨೦॥

ಬಿಟ್ಟು ಸತ್ವರಜಸ್ತಮೋಗುಣ ।
ದೊಟ್ಟಿಲನು ಬಳಿಕಲ್ಲಿ ಲಿಂಗಕೆ ।
ಮುಟ್ಟಿಸುಗೆ ತಾಂಬೂಲವನು ವಿತ್ತಾನುಸಾರದಲಿ ॥
ನೆಟ್ಟನೀ ಪರಿ ಲಿಂಗನೆನಹೇ ।
ಗಟ್ಟಿಯಾದರೆ ಪ್ರಾಣಲಿಂಗದ ।
ಬಟ್ಟೆಯನು ಭೇದಿಸುವನಾತನು ಬಸವ ಕೇಳೆಂದ ॥೨೧॥

ಪ್ರಾಣಿವೆಂತಾ ಮೂರು ತನುವಿನ ।
ಕೋಣೆಯೊಳಗಿಪ್ಪಂತೆ ಲಿಂಗಕೆ ।
ಮಾಣದೊಂದೊಳವಸ್ತ್ರವಿಮ್ಮೆಯ್ ಸೆಜ್ಜೆ ಸೇರಿಸಿದ ॥
ಕಾಣಿಸುವ ಶಿವದಾರ ಸಹ ನಿ ।
ರ್ವಾಣದೊಳಗಳವಡಿಸಬಲ್ಲಡೆ ।
ಜಾಣ ಭಕ್ತಿಯನರಿವನಾತನು ಬಸವ ಕೇಳೆಂದ ॥೨೨॥

ತಿಳಿವೊಡಾ ಶಿವದಾರ ಸೆಜ್ಜೆಗ ।
ಳಳವಡುವಡಾ ಮೂರು ತನುವಿನ ।
ಮಲಕಿನಂತಿರಲೊಂದರಿದೊಂದೊಂದು ಪಿರಿದಾಗಿ ॥
ಲಲಿತ ವಸ್ತ್ರತ್ರಯವನೊಂದಿಸಿ ।
ಬಳಿಕಲವರೊಳಗಿಷ್ಟಲಿಂಗವ ।
ನಿಲಿಸುವನೆ ಶಿವಭಕ್ತನಹನ್ಯೆ ಬಸವ ಕೇಳೆಂದ ॥೨೩॥

ಪರಿವಿಡಿಯಲಿಂತಿಷ್ಟಲಿಂಗವ ।
ನಿರಿಸಿ ಗಂಟೆರಡೆರಡನಿಂತೀ ।
ಪರಿಯಲಿಕ್ಕುವುದೆರಡು ವಸ್ತ್ರಕೆ ಮೇಳು ವಸ್ತ್ರವನು ॥
ನಿರುತ ತನ್ನಂಗದಲಿ ಬಿಡದವ ।
ಧರಿಸಿಕೊಂಡಿರಬಲ್ಲನಾದಡೆ ।
ಪರಮ ಭಕ್ತಿಯನರಿವನಾತನು ಬಸವ ಕೇಳೆಂದ ॥೨೪॥

ಮೂರು ತನುವಿನಲಾ ಷಡುಸ್ಥಳ ।
ತೋರುವಂತಿರೆ ಮೂರು ವಸ್ತ್ರವ ।
ಬೇರೆ ಮಾಡದೆ ಬಲಿದು ಬಳಿಕಿಡಿದಾರುಗಂಟುಗಳು ॥
ಮೀರಿದಳವಡುತಿರ್ದುವಾದಡೆ ।
ಸಾರಿ ಶಾಶ್ವತ ಭಕ್ತಿ ನೆಲೆಗೊಂ ।
ಡೇರತೊಡಗುವುದಾತನಲಿ ಬಸವಣ್ಣ ಕೇಳೆಂದ ॥೨೫॥

ಅಂಗವಿಸಲೀ ಪ್ರಾಣವಿದು ಶಿವ ।
ಲಿಂಗವದಕೆ ತನುತ್ರಯಂಗಳ ।
ಸಂಗ್ರಹವೆ ವಸ್ತ್ರತ್ರಯಂಗಳು ಸಲೆ ಷಡುಸ್ಥಲದ ॥
ಇಂಗಿತದಲಾ ಗ್ರಂಥಿಗಳು ವ ।
ಸ್ತ್ರಂಗಳಲಿ ಬಲಿದಂಗದಲಿ ನಿಲೆ ।
ಲಿಂಗಪದವನು ಕಾಂಬನಾತನು ಬಸವ ಕೇಳೆಂದ ॥೨೬॥

ಲಿಂಗವೇ ಪ್ರಾಣಸ್ವರೂಪೆಂ ।
ದಂಗವಿಸಿ ತಾನೋತು ಬಳಿಕಾ ।
ಲಿಂಗವನು ಬೇರಿರಸಲಾಗದು ಭಕ್ತಿಭಾವಕರು ॥
ಅಂಗಸಂಗದಲಗಲದಂತಿರೆ ।
ಲಿಂಗಧಾರಣವಾದುದಾದರೆ ।
ಮಂಗಳಾತ್ಮಕನಾತನೇ ಬಸವಣ್ಣ ಕೇಳೆಂದ ॥೨೭॥

ಪ್ರಾಣಲಿಂಗಕೆ ಇಷ್ಟಲಿಂಗವ ।
ಕಾಣಿಸಿದ ಷಡುರುಚಿಯ ದ್ರವ್ಯ ।
ಶ್ರೇಣಿಯನು ನೆರೆ ಲಿಂಗನೆನಹಿನೊಳಿತ್ತು ತನ್ನೊಳಗೆ ॥
ಮಾಣದಾ ಸಂತುಷ್ಟಿ ಸೌಖ್ಯ ।
ತ್ರಾಣವನು ಮಿಗೆ ತೃಪ್ತಿಲಿಂಗಕೆ ।
ಜಾಣಿಕೆಯಲೀವವನು ಚದುರನು ಬಸವ ಕೇಳೆಂದ ॥೨೮॥

ವರ ಸಮಾಧಿಯಲೊಳಗೆ ಫಲಿಸುವ ।
ಪರಿಯಲೀ ಗುರುಲಿಂಗಜಂಗಮ ।
ಕರುಣಿಸಿದ ಪಾದೋದಕವಾ ಸುಪ್ರಸಾದವನು ॥
ಧರಿಸುತಿರ್ದಡೆ ಸತ್ಯ ಭಕ್ತಿಯ ।
ಪರುಠವಣೆಗಧಿಕಾರಿಯಾಗಿಯೆ ।
ಪರಮ ಪದವಿಯ ಪಡೆವನೈ ಬಸವಣ್ಣ ಕೇಳೆಂದ ॥೨೯॥

ಇಷ್ಟಗುರುವಿಗೆ ತನುವ ಸಲಿಸುತ ।
ಲಿಷ್ಟಲಿಂಗಕೆ ಮನವ ಸಲಿಸುತ ।
ಲಿಷ್ಟಜಂಗಮಕರ್ಥವನು ಸಲೆ ಸಲಿಸ ಕಲಿತಂಗೆ ॥
ದೃಷ್ಟವಹ ಗುರುಲಿಂಗಜಂಗಮ ।
ಶ್ರೇಷ್ಠವಾಗಿಯೆ ತನ್ನೊಳಗೆಯು ।
ತ್ಕೃಷ್ಟವಾಗಿಯೆ ಕಾಣಿಸುವುದೈ ಬಸವ ಕೇಳೆಂದ ॥೩೦॥

ಇದ್ದ ನೆಲೆಗಳವಡುವ ಭಕ್ತಿಯ ।
ಶ್ರದ್ಧೆಯಲಿ ವಿತ್ತಾನುಸಾರದ ।
ಹೊದ್ದಿಗೆಯನರಿದರಿದು ನಿರ್ವಂಚನೆಯನನುಕರಿಸಿ ॥
ಬುದ್ಧಿಯಲಿ ತನುಮನದ ತವಕವ ।
ತಿದ್ದಿ ತಿಳಿದಳವಟ್ಟಡಾತನೆ ।
ಶುದ್ಧ ಭಕ್ತಿಯನರಿವನೈ ಬಸವಣ್ಣ ಕೇಳೆಂದ ॥೩೧॥

ದಿಟ ವಿಚಾರಸಲಿಷ್ಟಲಿಂಗದ ।
ಘಟಣೆಯೆಂಬುದು ಸರ್ವ ಸಂಗವ ।
ನಟಮಟಿಸಬೇಕಾಗಿಯಂತರ್ಮಾರ್ಗದೋವರಿಗೆ ॥
ಪಟುವೆನಲು ಪತಿಯಾಗಿ ಮಾಯೆಯ ।
ನಟನೆಯನು ನೈವಾರಿಸುವ ಸಂ ।
ಘಟಕೆ ಸಾಧನವೆನಿಸುವುದು ಬಸವಣ್ಣ ಕೇಳೆಂದ ॥೩೨॥

ಅದು ನಿಮಿತ್ತದಲಿಷ್ಟಲಿಂಗವೆ ।
ಮೊದಲು ಬೇಹುದು ನಿತ್ಯ ನಿರ್ಮಲ ।
ಪದವ ಪಡೆದಹೆನೆಂಬ ಪಾವನ ಬುದ್ಧಿವಂತಂಗೆ ॥
ಹೃದಯದೊಳಗಾ ಪ್ರಾಣಲಿಂಗದ ।
ಹದನನರಿವಡೆ ಸಚ್ಚಿದಾನಂ ।
ದದಲಿ ನಿಲುವಡೆ ಮುಖ್ಯವಿದು ಬಸವಣ್ಣ ಕೇಳೆಂದ ॥೩೩॥

ತನ್ನ ತಾನಿಂತರಿವ ಭಕ್ತಿಯ ।
ಬಿನ್ನಣವ ತಾನರಿಯಲರಿಯದೆ ।
ಭಿನ್ನಭಾವಭ್ರಮೆಯಲೊಂದಾನೊಂದು ಕಲ್ಪನೆಯ ॥
ಗನ್ನಗತಕದೊಳಿದ್ದನಾದಡೆ ।
ಮುನ್ನಿನಿಂ ಮಿಗಿಲಾಗಿ ಭವದೊಳು ।
ಬನ್ನಬಡುತಿಹನಾತನೈ ಬಸವಣ್ಣ ಕೇಳೆಂದ ॥೩೪॥

ಶಿವಯುತರ ಸಂಗವನು ಮಾಡದ ।
ಶಿವಯುತರ ಸಂಗತಿಯ ಕೇಳದ ।
ಶಿವಯುತರು ಸವಿದೊಕ್ಕುಮಿಕ್ಕುದ ಹಾರಿಕೊಂಡಿರದ ॥
ಶಿವಯುತರ ನೆರೆ ನಂಬಿ ನಚ್ಚದ ।
ಶಿವಯುತರ ದಾಸೋಹಿಯಾಗದ ।
ಭವವಿಕಾರಿಗೆ ಭಕ್ತಿಯಹುದೇ ಬಸವ ಕೇಳೆಂದ ॥೩೫॥

ಕಾಲನಿಯಮಗಳೆಂಬ ಕರ್ಮದ ।
ಕಾಲಸರ್ಪನ ಬಾಯ್ಗೆ ಸಿಕ್ಕುವ ।
ಶೀಲ ಗೀಲಗಳೆಂಬ ಶೂಲಕೆ ಸಿಕ್ಕಿ ಸೆರೆಯಾಗಿ ॥
ಹಾಳು ಸಂಕಲ್ಪವ್ರತಂಗಳ ।
ಕಾಳು ಕಿಚ್ಚಿನಲುರಿವುತಿಹ ದು ।
ಶ್ಶೀಲವಂತಗೆ ಭಕ್ತಿಯಹುದೇ ಬಸವ ಕೇಳೆಂದ ॥೩೬॥

ವಂದನೆಗೆ ಮೈಗೊಟ್ಟು ನಿಲ್ಲದೆ ।
ನಿಂದೆಗೆಡೆಗೊಟ್ಟೋಡಿ ಹೋಗದೆ ।
ಬಂದ ತಾಗು ನಿರೋಧದಲಿ ಕಳವಳಿಸಿ ಕಂಗೆಡದೆ ॥
ಹಿಂದು ಮುಂದಣ ನೆರವ ಹಾರದೆ ।
ನಿಂದ ಧೀರೋದಾತ್ತಗಲ್ಲದೆ ।
ಹಂದೆಗಹುದೇ ಭಕ್ತಿಯೆಂಬುದು ಬಸವ ಕೇಳೆಂದ ॥೩೭॥

ಭುಲ್ಲವಣೆಯಲಿ ಮಾತನಾಡಲು ।
ಬಲ್ಲೆನೆನುತಲಿಯನುಭವಂಗಳ ।
ಸೊಲ್ಲು ಸೊಲ್ಲಿಗೆ ಮತ್ಸರಿಸಿ ಮಿಗೆ ಮತ್ತತನದಿಂದೆ ॥
ಹೊಳ್ಳುಗಳೆದನ್ಯರನು ಮಿಗೆ ಮದ ।
ದಲ್ಲಿ ಬೆಬ್ಬನೆ ಬೆರೆತು ಬೀಗುವ ।
ಖಿಲ್ಲಗಹುದೇ ಭಕ್ತಿಯೆಂಬುದು ಬಸವ ಕೇಳೆಂದ ॥೩೮॥

ಕೋಪದುರಿಯಲಿ ಕೊರಗಿ ದರ್ಪದ ।
ತಾಪದಲಿ ಲಯವಾಗಿ ಮತ್ಸರ ।
ಕೂಪದಲಿ ಕುಕ್ಕುರಿಸಿ ಡಂಬಿನ ಸೀಮೆಯಲಿ ಸಿಲುಕಿ ॥
ಲೋಪಬುದ್ಧಿಗೆ ಲೋಲನಾಗಿ ಮ ।
ಹಾಪರಾಧದಲುಕ್ಕಿ ಸೊಕ್ಕುವ ।
ಪಾಪಿಗಹುದೇ ಭಕ್ತಿಯೆಂಬುದು ಬಸವ ಕೇಳೆಂದ ॥೩೯॥

ಹಿಸುಣತೆಯ ಹಿಂಗಿಸಿ ಮನಸ್ಸಿನ ।
ಮಸಕವನು ಮಾಣಿಸಿ ವಿಕಾರದ ।
ವಿಷಯ ವಿಧಿಗಳನುರೆ ವಿಸರ್ಜಿಸಿ ಭವಿಯ ಪರಿಹರಿಸಿ ॥
ಮುಸುರಿ ಮುತ್ತಿದ ಸಟೆಯ ಸಡಿಲಿಸಿ ।
ಸಸಿನೆ ಸತ್ಯದಿ ನಡೆವಗಲ್ಲದೆ ।
ಹುಸಿಯ ನುಡಿವಗೆ ಭಕ್ತಿಯಹುದೇ ಬಸವ ಕೇಳೆಂದ ॥೪೦॥

ಹುಟ್ಟಿದೆಡೆಯನು ಹೂಳಿ ಹೊಂದುವ ।
ಬಟ್ಟೆಯನು ನೆರೆ ಕೆಡಿಸಿ ಕರ್ಮದ ।
ಕಟ್ಟಳೆಯನೊಡೆಮೆಟ್ಟಿ ಸಂತತ ಲಿಂಗಸೇವೆಯಲಿ ॥
ಮೆಟ್ಟಿ ಹಸು ತೃಷೆ ನಿದ್ರೆಯೆಂಬಿವ ।
ನಿಟ್ಟೊರಸಿದಾ ಧೀರಗಲ್ಲದೆ ।
ಹೊಟ್ಟೆಹೊರಕಗೆ ಭಕ್ತಿಯಹುದೇ ಬಸವ ಕೇಳೆಂದ ॥೪೧॥

ಅದು ನಿಮಿತ್ತದಲಿಷ್ಟಲಿಂಗದ ।
ಸದಮಲದ ಸೇವಾನುಭಾವನೆ ।
ಹೃದಯದಲಿ ನೆಲೆಗೊಂಡು ಬಿಡದವಳವಟ್ಟು ಬಲಿದಿರಲು ॥
ವಿದಿತವೆನಿಪಾ ಪ್ರಾಣಲಿಂಗದ ।
ನಿಧಿಯನರಿವಂಜನವು ನೇತ್ರಕೆ ।
ಹುದುವಹುದಲ್ಯೆ ತನಗೆ ತಾನೇ ಬಸವ ಕೇಳೆಂದ ॥೪೨॥

ಹಲವು ಪರಿಯಿಂದೀ ಪ್ರಕಾರದ ।
ಲೊಲಿದು ತೋರಿಸುತಿಷ್ಟಲಿಂಗದ ।
ಸಲುವ ಮಾರ್ಗಕ್ರಿಯೆಯನರಿವಂತಿರೆ ನಿರೂಪಿಸಲು ॥
ಸಲೆ ಹಸಾದವ ಸಲಿಸಿ ಬಗೆ ಮಿಗೆ ।
ತುಳುಕಲಲ್ಲಮಲಿಂಗದೇವಗೆ ।
ಬಳಿಕಲೊಯ್ಯನೆ ಬಸವದಂಡಾಧೀಶನಿಂತೆಂದ ॥೪೩॥

ಗುರುವೆ ನೀನೀ ಪೇಳ್ದ ಮಾರ್ಗಾ ।
ಚರಣೆಯನು ಕೇಳಿದಡೆ ಸಾಲದೆ ।
ಪರಿವಿಡಿಯಲಿದನೆಲ್ಲ ಮುಟ್ಟಲಿ ಮಾಡುತಿರಬೇಕು ॥
ಪರಕಿಸಲು ಸಾವಲ್ಲಿ ಪರಿಯಂ ।
ತರವು ಸಾಧನೆ ಮಾಡಿ ಸಮರಕೆ ।
ಗರುವನಹ ದಿನವಿನ್ನದಾವುದು ದೇವ ಹೇಳೆಂದ ॥೪೪॥

ಈಸುವನುವನು ಕೇಳಿದರೆ ಮೇ ।
ಣೇಸು ದಿನ ತಾ ಕಂಡರೇನ ।
ಭ್ಯಾಸಿಯಾಗದೆ ಯಾರು ತೇಲುವ ತೆರನ ತಿಳಿವವರು ॥
ಗಾಸಿಯಾಗದೆ ತನುಮನದ ಮೇ ।
ಲಾಸೆ ಹಿಂಗದೆ ಭಕ್ತಿ ಮಾಡದೆ ।
ಹೂಸಿ ಹುಂಡನಲೇನು ಫಲವೈ ಬಸವ ಕೇಳೆಂದ ॥೪೫॥

ಹೊನ್ನಿನೊಳಗೊಂದೊರೆಯ ವಸ್ತ್ರದ ।
ಮನ್ನಣೆಯಲೊಂದೆಳೆಯನಥವಾ ।
ಧ್ಯಾನದೊಳಗಣುಮಾತ್ರವೆನಗೆನ್ನವರಿಗಿರಲೆಂದು ॥
ದೈನ್ಯತೆಯಲಾ ಜಂಗಮವನತಿ ।
ಮನ್ನಿಸದೆ ಮಲೆತಿರ್ದೆನಾದಡೆ ।
ನಿನ್ನ ಪಾದಕೆ ದೂರನಾನಹೆ ದೇವ ಕೇಳೆಂದ ॥೪೬॥

ಕನಕಗಿರಿ ರಜತಾದ್ರಿ ಹಾಲಿನ ।
ವನಧಿ ಸುರಕುಜ ಕಾಮಧೇನುಗ ।
ಳಿನಿತು ನಿರುಪಮದಷ್ಟಮಹದೈಶ್ವರ್ಯ ಮೊದಲಾದ ॥
ವಿನುತ ವಸ್ತುಗಳೆಲ್ಲವಾ ಲಿಂ ।
ಗನವು ಪ್ರಮಥರವಕಟ ಮರುಳೇ ।
ನಿನಗವೆಲ್ಲಿಯವೇನನಿತ್ತೈ ಬಸವ ಕೇಳೆಂದ ॥೪೭॥

ದೇವ ನಾನಾ ಪರಿಗಳಲಿ ಮೇ ।
ಣಾವ ಮುಖದಲಿ ಬಂದು ಬೇಡಿದ ।
ಡೀವೆ ನೀ ದಣಿವಂತೆಯೆನ್ನಯ ಧನವ ತನು ಮನವ ॥
ಈ ವಿಚಾರಕೆ ಹುಸಿದೆನಾದಡೆ ।
ಭಾವಿಸಲು ಬಳಿಕಾನೆ ನಿನ್ನಯ ।
ಸೇವೆಗತಿ ದೂರಸ್ಥನೈ ಗುರುರಾಯ ಕೇಳೆಂದ ॥೪೮॥

ಧನವ ಕೊಟ್ಟೆನು ತನುವ ಕೊಟ್ಟೆನು ।
ಮನವ ಕೊಟ್ಟೆನು ಕೊಟ್ಟೆನೆಂಬೀ ।
ಬಿನುಗು ಬಿಂಕವನಾಡಲಾ ಧನತನುಮನಂಗಳನು ॥
ನಿನಗೆ ಕೊಟ್ಟವರಾರು ನೀನಾ ।
ರಿನಿತನರಿಯದೆ ಬರಿದೆ ನುಡಿವುದು ।
ನಿನಗಿದುಚಿತವೆ ಬಸವದಂಡಾಧೀಶ ಕೇಳೆಂದ ॥೪೯॥

ಅಂತು ಕಾರಣವಿದನು ಹಮ್ಮಿನ ।
ಭ್ರಾಂತಿಯನು ಬರಿದೆನಿಸಿ ತಾನೋ ।
ರಂತೆ ನಿಜ ನಿರ್ಲೇಪ ಭಕ್ತಿಯನರಿಯಬೇಕಾಗಿ ॥
ಮುಂತೆ ಕಾಣಿಸುವಿಷ್ಟಲಿಂಗದ ।
ಚಿಂತೆಯಲಿ ಸ್ಥಿತನಾಗಿ ತನ್ನಯ ।
ಚಿಂತಿತಾರ್ಥವ ಹಡೆಯಬೇಹುದು ಬಸವ ಕೇಳೆಂದ ॥೫೦॥

ದೇವ ಬಿನ್ನಹವಿಷ್ಟಲಿಂಗದ ।
ಸೇವೆಯನು ಸಲೆ ಮಾಡುತಿದ್ದರೆ ।
ಭಾವಿಸಲು ಶಿವಭಕ್ತನಹ ಪರಿ ಬಳಿಕಲಹುದೆಂದು ॥
ನೀವು ಚಿತ್ತೈಸಿದಿರಿ ದಿಟವಿ ।
ನ್ನಾವ ಪರಿಯಲಿ ಭಕ್ತಿಯನುವನು ।
ತೀವಿ ತಿಳಿವಂತೆನಗೆ ವರ ಗುರುರಾಯ ಹೇಳೆಂದ ॥೫೧॥

ಕುಸುಮ ಸೌರಭವಿಂತುಟೆಂದಾ ।
ರುಸುರ ಬಲ್ಲರು ತುಂಬಿಯೊಳು ಭಾ ।
ವಿಸಲು ಭಕ್ತಿಯ ಮಾರ್ಗವಂತಿಂತೆಂದು ನಿನ್ನೊಳಗೆ ॥
ಬೆಸಸ ಬಲ್ಲವರಿಲ್ಲ ವೈಪರಿ ।
ಕಿಸಲು ನೀನೇ ಪರಮ ಪುರುಷನು ।
ಬಸವ ಕೇಳೆನುತಲ್ಲಮಪ್ರಭುರಾಯನಿಂತೆಂದ ॥೫೨॥

ಕೇಳಿದ್ಯೆ ಬಸವಣ್ಣ ಮೊದಲಲಿ ।
ಕೋಲುವಿಡಿದಭ್ಯಾಸ ಮಾಡಿಯೆ ।
ಮೇಲೆ ರಣರಂಗದಲಿ ಕೈದುವ ಹಿಡಿದು ಹಗೆಗಳನು ॥
ಸೋಲಿಸುವನಂತಿಷ್ಟಲಿಂಗದ ।
ಕೀಲಣೆಯನರಿದಲ್ಲದಾಗದು ।
ಹೇಳುವಡೆ ಶಿವಭಕ್ತಿಯದು ಸಾಮಾನ್ಯವಲ್ಲೆಂದು ॥೫೩॥

ಗುರುವೆಯಮೃತವನುಂಡ ಬಳಿಕೇ ।
ನರುಚಿಯರುದಿಂಗಳಿಗೆ ಹೋಹುದೆ ।
ನಿರುತ ನಿನ್ನ ಕಟಾಕ್ಷವಿಕ್ಷೇಪಂಗಳೆಮ್ಮೊಳಗೆ ॥
ಬೆರಸಿ ಬಳಿಕಿನ್ನೆಲ್ಲಿಪರಿಯಂ ।
ತರವು ಕಾಲಕ್ಷೇಪವನು ವಿ ।
ಸ್ತರಿಪ ಕಾರಣವಾವುದ್ಯೆ ಪ್ರಭುರಾಯ ಹೇಳೆಂದ ॥೫೪॥

ಶಶಿಕಳಾಲಂಕಾರವೆಂತಾ ।
ಶಶಿಧರಂಗಳವಟ್ಟುದಂತಾ ।
ಶಶಿಕಳಾಮೃತ ಸೇವನಾ ಸದ್ಭಕ್ತಿ ಸಾರಾಯ ॥
ಬಸವ ನಿನಗೊಚ್ಚತವಲಾ ಭಾ ।
ವಿಸಲು ಬಳಿಕಿನ್ನಾರಿಗದು ವೇ ।
ದಿಸುವುದೇ ಕೇಳೆನುತಲಾ ಪ್ರಭುರಾಯನಿಂತೆಂದ ॥೫೫॥

ನಿನ್ನ ಹೆಸರನು ಕೇಳಿದಡೆ ಮೇಣ್ ।
ನಿನ್ನ ಮೂರ್ತಿಯ ನೋಡಿ ಕಂಡಡೆ ।
ನಿನ್ನ ನೆನೆದಡೆ ನಿನ್ನ ನೆರೆದಡೆ ನಿನ್ನ ಹೊಗಳಿದಡೆ ॥
ನಿನ್ನ ಭಜಿಸಿದಡವರು ಭಕ್ತಿಯ ।
ಬಿನ್ನಣವನರಿದೈಕ್ಯರಹರೆನೆ ।
ನಿನ್ನ ಮಹಿಮೆಯನೇನನೆಂಬೆನು ಬಸವ ಕೇಳೆಂದ ॥೫೬॥

ಹುಸಿವುದೇ ಕೈ ನೆಲನ ಹೊಯ್ದರೆ ।
ಹುಸಿವುದೇ ಕಣೆ ಗಿರಿಯನೆಚ್ಚಡೆ ।
ಹುಸಿವುದೇ ಕೇಳೆನ್ನನರಿದಿಹೆನೆಂಬ ನಿನ್ನರಿವು ॥
ಹುಸಿಯಲರಿವುದೆ ನನ್ನ ಕಾರಣ ।
ವಸುಮತಿಗೆ ನೀ ಬಂದೆಯದರಿಂ ।
ಹುಸಿಯ ಮಾಯೆಯ ಹುಸಿಸಿ ತೋರುವೆ ಬಸವ ಕೇಳೆಂದ ॥೫೭॥

ಈ ತೆರದೊಳರಿದಿಷ್ಟಲಿಂಗ ।
ಪ್ರೀತಿಮಾರ್ಗಾಚಾರವನು ವಿ ।
ಖ್ಯಾತಿಯುತ ಬಸವಣ್ಣ ಮೊದಲಾದಖಿಳ ಭಕ್ತರಿಗೆ ॥
ಓತು ನಿಯಮಿಸಿ ನಿರ್ವಿಕಾರದ ।
ನೀತಿ ನಿಶ್ಚಯ ಭಕ್ತಿಮಾರ್ಗದ ।
ರೀತಿದಾಯಕನೊಪ್ಪುತಿರ್ದನು ಗುರು ಗುಹೇಶ್ವರನು ॥೫೮॥

**ಅಂತು ಗತಿ ೧೬ಕ್ಕಂ ಪದನು ೭೨೯ ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೧೭
# ಬೀಳ್ಕೊಂಡಳಲ್ಲಮನ ಮಹದೇವಿ

**ವಚನ**

ಅಂಗವಿಕಾರದ ಸಂಗವಮರೆದು
ಲಿಂಗವನೊಡಗೂಡುತಿಪ್ಪವರ ತೋರಾ ಎನಗೆ.
ಕಾಮವಿಕಾರದ ಕತ್ತಲೆಯಳಿದು
ಭಕ್ತಿಯೇ ಪ್ರಾಣವಾಗಿಪ್ಪವರ ತೋರಾ ಎನಗೆ.
ತ್ರಿಕರಣಶುದ್ಧವಾಗಿ ನಿಮ್ಮ ನೆರೆ ನಂಬಿದ
ಸದ್ಭಕ್ತರ ತೋರಾ ಎನಗೆ ಚೆನ್ನಮಲ್ಲಿಕಾರ್ಜುನಾ ॥೧॥

ಕಲ್ಯಾಣವೆಂಬುದಿನ್ನಾರಿಗು ಹೊಗಬಾರದು ಅಸಾಧ್ಯವಯ್ಯಾ
ಆಸೆ ಆಮಿಷವನಳಿದಂಗಲ್ಲದೆ
ಕಲ್ಯಾಣದತ್ತಲಡಿಯಿಡಬಾರದು.
ಒಳಗು ಹೊರಗು ಶುದ್ಧವಾದಂಗಲ್ಲದೆ
ಕಲ್ಯಾಣವ ಹೊಗಬಾರದು.
ನೀನೆಂಬುದನರಿದು ನಾನೆಂಬುದ ಮರೆದು
ತಾನು ತಾನಾದಂಗಲ್ಲದೆ ಕಲ್ಯಾಣವ ಹೊಕ್ಕು ಬೆರಸಬಾರದು.
ಲಜ್ಜೆಗೆಟ್ಟೆನಲಾ ಸತಿಬೇಟಕ್ಕೊಲಿದು.
ನಾನಾವುದನು ಅರಿಯೆನಾಗಿ
ಚೆನ್ನಮಲ್ಲಿಕಾರ್ಜುನನ ಧರ್ಮದಿಂದ
ನಾನು ಕಲ್ಯಾಣವ ಕಂಡೆನು. ॥೨॥

ಗಿರಿಯೊಳು ವನದೊಳು ಗಿಡಗಿಡದತ್ತ
ದೇವ ಎನ್ನ ದೇವ ಬಾರಯ್ಯಾ

ತೋರಯ್ಯಾ ನಿಮ್ಮ ಕರುಣವನೆಂದು
ನಾನು ಅರಸುತ್ತ ಅಳಲುತ್ತ ಕಾಣದೆ
ಸುಯಿದು ಬಂದು ಕಂಡೆ ಶರಣರ ಸಂಗದಿಂದ
ಅರಸಿ ಹಿಡಿದೇನೆಂದಡೆ ನೀನಡಗುವ ಠಾವ ಹೇಳಾ ಚೆನ್ನಮಲ್ಲಿಕಾರ್ಜುನಾ ॥೩॥

ಅರಸಿ ತೊಳಲಿದರಿಲ್ಲ ಹರಸಿ ಬಳಲಿದರಿಲ್ಲ
ಬಯಸಿ ಹೊಕ್ಕರಿಲ್ಲ ತಪಸ್ಸು ಮಾಡಿದರಿಲ್ಲ
ಅದು ತನ್ನ ತಾನಹ ಕಾಲಕಲ್ಲದೆ ಸಾಧ್ಯವಾಗದು
ಶಿವನೊಲಿದಲ್ಲದೆ ಆಗದು
ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ
ನಾನು ಸಂಗನಬಸವಣ್ಣನ ಶ್ರೀಪಾದವ ಕಂಡು ಬದುಕಿದೆನಯ್ಯಾ. ॥೪॥

ಆಯ್ಯಾ ನಿಮ್ಮ ಸದ್ಭಕ್ತರ ಕಂಡೆನಾಗಿ ಎನ್ನ ಕಂಗಳ ಪಟಲ ಹರಿಯಿತ್ತು
ಅಯ್ಯಾ ನಿಮ್ಮ ಸಜ್ಜನ ಸದ್ಭಕ್ತರ ಶ್ರೀಚರಣಕ್ಕೆರಗಿದೆನಾಗಿ
ಎನ್ನ ಹಣೆಯ ಲಿಖಿತ ತೊಡೆಯಿತ್ತು
ಚೆನ್ನಮಲ್ಲಿಕಾರ್ಜುನದೇವಾ ನಿಮ್ಮ ಶರಣ ಸಂಗನಬಸವಣ್ಣನ ಕಂಡು
ಮಿಗೆ ಮಿಗೆ ನಮೋ ನಮೋ ಎನುತಿರ್ದೆನಯ್ಯಾ. ॥೫॥

ಕಾಯದ ಲಜ್ಜೆಯ ಕಲ್ಪಿತವಳಿದು
ಜೀವದ ಲಜ್ಜೆಯ ಮೋಹವನಳಿದು
ಮನದ ಲಜ್ಜೆಯ ನೆನಹ ಸುಟ್ಟು
ಭಾವದ ಕೂಟ ಬತ್ತಲೆ ಎಂದರಿದು
ತವಕದ ಸ್ನೇಹ ವ್ಯವಹಾರಕ್ಕೆ ಹೋಗದ
ಕೂಡಲಸಂಗಮದೇವರಲ್ಲಿ
ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ
ನಿಲವ ನೋಡಾ ಪ್ರಭುವೇ. ॥೬॥

ರೂಪಿಲ್ಲದವಂಗೆ ಒಲಿದವರಿಗೆ ತನುವಿನ ಹಂಗುಂಟೇ
ಮನವಿಲ್ಲದವಂಗೆ ಮಚ್ಚಿದವರಿಗೆ ಅಭಿಮಾನದ ಹಂಗುಂಟೇ
ಕೂಡಲಸಂಗಮದೇಯ್ಯಾ
ಮಹಾದೇವಿಯಕ್ಕನೆಂಬ ಭಕ್ತೆಯ ರೂಪಿಂಗೆ
ಆವ ಹೊಲ್ಲೆಯವಿಲ್ಲಾ ಪ್ರಭುವೇ ॥೭॥

ಉನ್ಮದ ಯೌವನವನೊಳಕೊಂಡ ಸತಿ ನೀನು
ಇತ್ತಲೇಕೆ ಬಂದೆ ಹೇಳವ್ವಾ
ಸತಿಯೆಂದರೆ ಮುನಿವರು ನಮ್ಮ ಶರಣರು
ನಿನ್ನ ಪತಿಯ ಕುರುಹು ಹೇಳಿದರೆ ಬಂದು ಕುಳ್ಳಿರು
ಅಲ್ಲದಿರ್ದರೆ ತೊಲಗು ತಾಯೇ
ಗುಹೇಶ್ವರನ ಶರಣರಲ್ಲಿ
ಲಿಂಗದ ಸಂಗಸುಖವ ಬಯಸುವರೆ
ನಿನ್ನ ಪತಿಯ ಕುರುಹು ಹೇಳಾ ಎಲೆ ಅವ್ವಾ. ॥೮॥

ಗುರುವೆ ತೆತ್ತಿಗನಾದ
ಲಿಂಗವೇ ಮದವಣಿಗನಾದ
ನಾನು ಮದವಣಗಿತ್ತಿಯಾದೆನು
ಈ ಭುವನವೆಲ್ಲವರಿಯಲು
ಅಸಂಖ್ಯಾತರು ಎನಗೆ ತಾಯಿತಂದೆಗಳಾಗಿ
ಕೊಟ್ಟರು ಎನಗೆ ಸಾದೃಶ್ಯಮಪ್ಪ ವರನ ನೋಡಿ
ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನಾದ ಬಳಿಕ
ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲಯ್ಯಾ. ॥೯॥

ಸಾವಿಲ್ಲದ ಸಹಜಂಗೆ ರೂಹಿಲ್ಲದ ಚೆಲುವಂಗೆ
ಭವವಿಲ್ಲದಭವಂಗೆ ನಿಶ್ಚಯದ ನಿಶ್ಚಲಗೆ
ನಾನೊಲಿದೆನಯ್ಯಾ

ಚೆನ್ನಮಲ್ಲಿಕಾರ್ಜುನಂಗೊಲಿದ ಕಾರಣ
ಮಿಕ್ಕಿನವರಾರು ಸಂಬಂಧವಿಲ್ಲಯ್ಯಾ. ॥೧೦॥

ರೂಪಿಂಗೆ ಕೇಡುಂಟು ನಿರೂಪಿಂಗೆ ಕೇಡಿಲ್ಲ
ರೂಪು ನಿರೂಪಿನೊಳೊಡಗೂಡುವ ಪರಿಯೆಂತು ಹೇಳಾ
ಸಂಬಂಧ ಅಸಂಬಂಧವಾಗಿದೆ
ಪಂಚೇಂದ್ರಿಯವೆಂಬ ಜಾತಿಸೂತಕವಿರಲು
ಗುಹೇಶ್ವರಲಿಂಗವ ಮುಟ್ಟಬಾರದು ಕೇಳವ್ವಾ. ॥೧೧॥

ಎನ್ನ ತನು ಶುದ್ಧವಾಯಿತ್ತು ಶಿವಭಕ್ತರೊಕ್ಕುದನುಂಡು
ಎನ್ನ ಮನ ಶುದ್ಧವಾಯಿತ್ತು
ಅಸಂಖ್ಯಾತರ ನೆನೆನೆನೆದು
ಎನ್ನ ಕಂಗಳು ಶುದ್ಧವಾದುವು
ಇಂದು ಸಕಲ ಶಿವಗಣಂಗಳ ಮುಖವ ನೋಡಿ
ಎನ್ನ ಶ್ರೋತ್ರ ಶುದ್ಧವಾಯಿತ್ತು
ಅವರ ಕೀರ್ತನೆಯ ಕೇಳಿ
ಎನ್ನ ಭಾವನೆ, ಎನಗಿದು ಜೀವನವು ಕೇಳಾ ಲಿಂಗತಂದೆ
ನೆಟ್ಟನೆ ನಿಮ್ಮ ಪೂಜಿಸಿ ಭವಗೆಟ್ಟೆನು ಕಾಣಾ ಚೆನ್ನಮಲ್ಲಿಕಾರ್ಜುನಾ. ॥೧೨॥

ಲಿಂಗಸುಖಸಂಗದಲ್ಲಿ ಮನ ವೇದ್ಯವಾಯಿತ್ತು
ಇನ್ನೆಂತಯ್ಯಾ ಎನಗೆ ನಿಮ್ಮಲ್ಲಿ ನಿರವಯವು
ಇನ್ನೆಲ್ಲಿಯದಯ್ಯಾ ನಿಮ್ಮಲ್ಲಿ ಕೂಡುವದು
ಪರಮಸುಖಪರಿಣಾಮ ಮೇರೆದಪ್ಪಿ
ನಾನು ನಿಜವೈದುವ ಠಾವಹೇಳಾ ಚೆನ್ನಮಲ್ಲಿಕಾರ್ಜುನ ಪ್ರಭುವೇ. ॥೧೩॥

ಕದಳಿಯ ಬನ ಹೊಕ್ಕು ಹೊಲಬು ತಿಳಿಯದನ್ನಕ್ಕ
ಬಯಲ ಗಾಳಿಯ ಹಿಡಿದು ಗಟ್ಟಿ ಮಾಡದನ್ನಕ್ಕ

ಬರಿದೆ ಬಹುದೇ ಶಿವಜ್ಞಾನ
ಅರಿಷಡ್ವರ್ಗವಳಿಯದನ್ನಕ್ಕ ಬರಿದೆ ಬಹುದೇ
ಅಷ್ಟಮದವ ನಷ್ಟಮಾಡದನ್ನಕ್ಕ ಬರಿದೆ ಬಹುದೇ
ಮದ ಮತ್ಸರ ಮಾಡಲಿಲ್ಲ ಹೊದಕುಳಿಗೊಳಲಿಲ್ಲ
ಗುಹೇಶ್ವರಲಿಂಗ ಕಲ್ಪಿತದೊಳಗಿಲ್ಲ. ॥೧೪॥

ನೀನು ನಾನೆಂಬುಭಯಸಂಗವಳಿದು
ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ಮೆಟ್ಟಿ
ತುಟ್ಟತುದಿಯಲಿ ನೋಡಲು
ಬಟ್ಟಬಯಲು ಕಾಣಬಹುದು ನೋಡಾ
ಆ ಬಟ್ಟಬಯಲ ಬೆರಸುವರೆ
ಶ್ರೀಗಿರಿಯೊಳಗೊಂದು ಕಾಣಬಾರದ ಕದಳಿಯುಂಟು ನೋಡಾ
ಆ ಕದಳಿಯ ತಳದಲ್ಲಿ ಒಳಹೊಕ್ಕು ನೋಡಲು
ತೊಳಗಿ ಬೆಳಗುವ ಜ್ಯೋತಿಯುಂಟು ನೋಡಾ
ನಡೆಯಲ್ಲಿಗೆ ತಾಯೆ ಗುಹೇಶ್ವರಲಿಂಗದಲ್ಲಿ ಪರಮ ಪದವು
ನಿನಗೆ ಸಯವಪ್ಪುದು ನೋಡಾ. ॥೧೫॥

**ಸೂಚನೆ**

ಶರಣರರಿಯಲು ಪ್ರಾಣಲಿಂಗಾ ।
ಚರಣೆಯನು ಮಹದೇವಿಯಕ್ಕಗೆ ।
ಕರುಣಿಸಿಯೆ ಕಳುಹಿದನು ನಮ್ಮಯ ಗುರು ಗುಹೇಶ್ವರನು ॥

ಇಷ್ಟಲಿಂಗದ ಮಾರ್ಗದಲಿ ಸಂ ।
ತುಷ್ಟರಾಗಿ ಶಿವಾನುಭಾವದ ।
ಗೋಷ್ಠಿಯನು ಸಲೆ ಕೇಳಿ ಕೇಳಿ ಮನೋನುರಾಗದಲಿ ॥
ದುಷ್ಟ ದುರ್ವಾಸನೆಯ ನೀಗಿ ವಿ ।

ಶಿಷ್ಟವೆನಿಪಾ ಪ್ರಾಣಲಿಂಗದ ।
ನಿಷ್ಟರಪ್ಪರು ತಿಳಿವುದೀ ಪ್ರಭುಲಿಂಗಲೀಲೆಯಲಿ ॥೧॥

ಗುರುವನರಸುವೆನೆಂದು ತಿರ್ರನೆ ।
ತಿರುಗಿದಳು ಗಿರಿಗಂಹರಂಗಳ ।
ಗುರುವನರಸುವೆನೆಂದು ತೊಟ್ಟನೆ ತೊಳಲಿದಳು ಧರೆಯ ॥
ಗುರುವನರಸುವೆನೆಂದು ಕಾಯವ ।
ಕರಗುತಿರ್ದಳು ಕಾತರಿಸಿ ಸ ।
ದ್ಗುರುವನರಸುವ ವೇಧೆಯಲಿ ಮೆರೆದಳು ಮಹಾದೇವಿ ॥೨॥

ಹೊಂಪುಳಿಯ ಘನಸೌಖ್ಯ ಮಿಕ್ಕಳಿ ।
ಗಂಪುಗಳಲಿಲ್ಲೆನುತ ತನ್ನಯ ।
ಜೊಂಪಿಸುವ ಮನವೆಂಬ ತುಂಬಿಯ ಭಾವ ಮಿಗೆ ತುಂಬಿ ॥
ಸಂಪಗೆಯ ಸಾರ್ವಂತೆ ಬಂದಳ ।
ಲಂಪಿನಲಿ ಮಹದೇವಿ ಅರಿವಿನ ।
ಸೊಂಪು ಶೋಭಿಸುವಲ್ಲಮಪ್ರಭುರಾಯನಿದ್ದೆಡೆಗೆ ॥೩॥

ಅರಲುಗೊಂಡವನಿದಿರಲಮೃತದ ।
ತೊರೆಯನೇ ಕಂಡಂತೆ ಕುರುಡಗೆ ।
ಮೆರೆವ ಕೂದಲ ಕೂಪವೆಲ್ಲವು ಕಂಗಳಾದಂತೆ ॥
ನೆರೆ ನಿರಂತರ ನಿರ್ವಿಕಾರದ ।
ನಿರಿಗೆಯಮಲಜ್ಞಾನವನು ಕ ।
ಣ್ದೆರಸುವಾ ಪ್ರಭುರಾಯನನು ಕಂಡಳು ಮಹಾದೇವಿ ॥೪॥

ನೋಡಿ ಕಂಡಳು ವೇದತತಿ ಕೈ ।
ನೀಡಿದರೆ ಮೈ ನಿಲುಕದಾತನ ।
ಹಾಡಿಹೊಗಳುತಲೊಡಲನೀಡಾಡಿದಳು ಚರಣದಲಿ ॥

ಕೂಡೆ ಶರಣೆನೆ ಶಿವಗಣಕೆ ಕೈ ।
ಗೂಡಿ ಶರಣೆಂದೆನುತ ಭಕ್ತಿಯ ।
ಗೂಡು ತಾನೆಂಬಂತೆ ಕಾಣಿಸಿದಳು ಮಹಾದೇವಿ ॥೫॥

ಬಸವ ನೋಡಾ ಭಕ್ತಿ ಬೇಟದ ।
ಬೆಸನದಲಿ ಮೈಮರೆತು ಲಜ್ಜೆಯ ।
ಹೆಸರ ಹೆಮ್ಮೆಯ ಕೆಡಿಸಿ ತನುಮೋಹವನು ಪಲ್ಲಟಿಸಿ ॥
ಹಸು ತೃಷೆಯ ಹರವರಿಗಳನು ಭಂ ।
ಗಿಸಿ ದಿಗಂಬರೆಯಾಗಿ ಮಿಗೆ ಕಾ ।
ಣಿಸುವ ಮಹದೇವಿಯರನೆನುತಾ ಪ್ರಭು ನಿರೀಕ್ಷಿಸಿದ ॥೬॥

ಬತ್ತಲೆಯ ಬಗೆಗೊಂಡು ಹೆಂಗೂ ।
ಸಿತ್ತಲೇತಕೆ ಬಂದೆ ಕಾಮದ ।
ಕತ್ತಲೆಯ ಕಳೆಯದೆ ವೃಥಾ ವೈರಾಗ್ಯವೇಷದಲಿ ॥
ಹತ್ತಿರಿದ್ದರೆ ನಮ್ಮ ಶರಣರು ।
ಚಿತ್ತದಲಿ ಕೆರಳುವರು ಕೇಳೆನು ।
ತೊತ್ತಿ ನೋಡಿದನಾಕೆಯಂತಸ್ಥವನು ಪ್ರಭುರಾಯ ॥೭॥

ಜಗಭರಿತಗೊಲಿದವಳಿಗುಡಿಗೆಯ ।
ತೊಗಲದೇತಕೆ ತನುಮನಂಗಳ ।
ನಗಲದೀಶಂಗಿತ್ತೆನಗೆ ಸಲೆಕಾಮವೆಂದೆಂಬ ॥
ಬಗೆಯದೇತಕೆಯೆನ್ನ ಕಂಡರೆ ।
ಭುಗಿಲಿಡಲದೇಕಯ್ಯ ಶರಣರ ।
ಮಿಗಿಲು ನುಡಿಗಾನಮ್ಮೆನೆನುತಿರ್ದಳು ಮಹಾದೇವಿ ॥೮॥

ಕಾಣಿಸುತ ನೀನಿದ್ದು ನೆಟ್ಟನೆ ।
ಕಾಣಬಾರದ ಶಿವನನೊಲಿಸುವ ।

ಜಾಣತನವೆಂತವ್ವ ವಾಗದ್ವೈತಭಕ್ತಿಯಲಿ ॥
ಕೇಣಿಕಾರರು ನೀವು ನಿಮ್ಮೊಳು ।
ಹೂಣಿಸಲು ಹುರುಳಿಲ್ಲವೆನುತಲಿ ।
ಮಾಣದಾಕೆಯ ಮತ್ತೆ ಜರೆದನು ನಗುತ ಪ್ರಭುರಾಯ ॥೯॥

ರೂಪುವಿಡಿದಿರ್ದಲ್ಲದೆಂತು ನಿ ।
ರೂಪ ಬೆರಸುವ ಭೇದವರಿವಡೆ ।
ರೂಪಿನೊಳಗೆ ನಿರೂಪು ತಿಳಿಯೆ ನಿರೂಪಿನೊಳು ರೂಪು ॥
ಈ ಪರಿಯಲೊಂದೊಂದನಗಲದೆ ।
ವ್ಯಾಪಿಸಿಹವೆಂದರಿದು ನಾನಾ ।
ರೂಪವನು ನೆಲೆಗೊಂಡೆನೆಂದಳು ಮತ್ತೆ ಮಹದೇವಿ ॥೧೦॥

ಹಾಲಿನೊಳು ನೆರೆ ತುಪ್ಪವಿಪ್ಪುದ ।
ಹೇಳಿದರೆ ಹರಿಯದು ತದಂಗದ ।
ಕೀಲನರಿಯದೆ ಬರಿಯ ನುಡಿಯಲಿ ಬಸುರು ತುಂಬುವುದೆ ॥
ಕಾಳುಮಾತು ನಿರೂಪು ರೂಪಿನ ।
ಮೇಳವಿಲ್ಲದ ಮಹಿಮನಲಿ ಸಂ ।
ಮೇಳ ನಿನಗೆಂತಾದುದೌ ಮಹದೇವಿ ಹೇಳೆಂದ ॥೧೧॥

ಸಾರೆಯಲಿ ಶಿವಸಂಗವೆಂದೇ ।
ಹಾರವಿಸಿಕೊಂಡಿದ್ದೆನಂತದ ।
ದೂರ ದೂರವದೆಂದು ನೀನೇ ಹೆದರಿಸಿದಡೆನಗೆ ॥
ಆರು ಕರುಣಿಸಿ ಕಾಣಿಸುವರೆನ ।
ಗಾರು ಗತಿಮತಿಯೆನುತ ಕರುಣಾ ।
ಕಾರಗಾ ಮಹದೇವಿ ಬಿನ್ನೈಸಿದಳು ಭಕ್ತಿಯಲಿ ॥೧೨॥

ಆರು ನನ್ನನು ತಿಳಿವೆವೆನುತಲಿ ।
ಸಾರೆಯೆಂದಿದಿರಿಟ್ಟು ನೋಡಲು ।
ದೂರವಾಗಿಹೆನಲ್ಲದಿರ್ದಡೆ ದೂರವೆಂದೆನಲು ॥
ಸಾರೆಯಾಗಿಹೆನೀ ಪರಿಯನಿದ ।
ನಾರಿಗುಪಮಿಸಬಹುದು ಭಕ್ತಿ ವಿ ।
ಚಾರವನು ಬಸವಣ್ಣನಲಿ ಮಹದೇವಿ ಕೇಳೆಂದ ॥೧೩॥

ಎನ್ನರಿವು ಬಸವಣ್ಣನೆನಗಾ ।
ಚೆನ್ನಬಸವನೆ ಗುರುವೆಲ್ಯೆ ದಿಟ ।
ವೆನ್ನ ಲಿಂಗವೆ ನೀನು ಜಂಗಮವೆನಗೆ ರಾಮಯ್ಯ ॥
ಎನ್ನ ತನುವೇ ಮಡಿವಳನು ನಾ ।
ನಿನ್ನು ಸುಖಿಯಹುದೇನು ಸೋಜಿಗ ।
ನಿನ್ನ ದಾಸರ ದಾಸಿಯಾನೆಂದಳು ಮಹಾದೇವಿ ॥೧೪॥

ಲೋಕದೊಳು ಸತಿಜನ್ಮವನು ತಾ ।
ಸ್ವೀಕರಿಸಿ ತನು ಮೋಹ ಲೋಭವ ।
ನೂಕಿ ನಿಸ್ಪೃಹೆಯಾಗಿ ನಿಲುವವರಾರು ಸೃಷ್ಟಿಯಲಿ ॥
ಈಕೆಗಾರೆಣೆ ಶಿವ ಶಿವಾ ಎನು ।
ತಾಕೆಯನು ಬಸವಣ್ಣ ಮುಖ್ಯರ ।
ನೇಕ ಪರಿಯಲಿ ಹೊಗಳುತಿರ್ದರು ಶರಣು ಶರಣೆನುತ ॥೧೫॥

ಕರಣಗಳು ಸಲೆ ಶುದ್ಧವಾದುವು ।
ಶರಣರನು ನೆನೆನೆನೆದು ಸಂತತ ।
ಶರಣರಿಗೆ ಶರಣೆಂದು ಕಾಯ ಪುನೀತಮದಾಯ್ತು ॥
ಶರಣರಿಂದಾನಿಂದು ಶುಚಿಯಾ ।
ಗಿರಲು ತನುಮನಗಳ ವಿಕಾರದ ।
ಭರಕೆ ನಾನಂಜುವೆನೆಯೆಂದಳು ಮತ್ತೆ ಮಹದೇವಿ ॥೧೬॥

ಇಂತು ನಿರಹಂಕಾರದಿಂದೋ ।
ರಂತೆ ಕಾಯಮನೋವಿಕಾರದ ।
ಸಂತತಿಯ ಸೈತಿಟ್ಟು ಪರಿಪಾಕಪ್ರಭಾವದಲಿ ॥
ಸಂತಗೊಂಡು ಸಮಸ್ತಭಾವ ।
ಭ್ರಾಂತಿಯಳಿದೊಮ್ಮುಖವನೈದಿ ನಿ ।
ರಂತರದಲತಿ ಮೆರೆವುತಿರ್ದಳು ಮತ್ತೆ ಮಹದೇವಿ ॥೧೭॥

ನರೆ ತೆರೆಗಳಿಡಿದಡರಿ ತನು ಜ ।
ರ್ಜರಿತವಾಗಿಯನೇಕ ದಿನದಲಿ ।
ಹಿರಿಯರೆಂದೆನಿಸಿದರೆ ಹಿರಿಯರೆ ಬೆಟ್ಟದಂದದಲಿ ॥
ಹಿರಿದು ದಿನವಿರೆ ಹಿರಿಯರಹರೇ ।
ನಿರುತ ನಿರಹಂಕಾವಿಲ್ಲದ ।
ಹಿರಿಯತನ ಮಹದೇವಿಗಾಯಿತ್ತೆಂದುದಭವಗಣ ॥೧೮॥

ಬಳಿಕಲಾಕೆಯ ಚಿತ್ತವತಿ ನಿ ।
ರ್ಮಳತೆಯಾದುದನರಿದು ತಾ ತ ।
ನ್ನೊಳಗೆ ಸಂತೋಷಿಸುತ ಹೋ ಮಝು ಮಾಯೆ ಎಂದೆನುತ ॥
ತಿಳಿಯಬೇಕೆಂದೆನ್ನ ಕಾರಣ ।
ತೊಳಲಿ ಬಳಲಿದಳಿನ್ನು ಕರುಣಿಸಿ ।
ನಿಲಿಸಬೇಕೆಂದಲ್ಲಮಪ್ರಭುರಾಯನಿಂತೆಂದ ॥೧೯॥

ಆಯತವನಳವಡಿಸಿ ದಿಟವಾ ।
ಸ್ವಾಯತವನವಗಯಿಸಬೇಕೆಂ ।
ಬಾಯತಕೆ ಸರ್ವಾಂಗವನು ಸಲೆ ಸವೆದರಾರುಂಟು ॥
ಬಾಯ ನುಡಿಗಳ ಚದುರರಲ್ಲದೆ ।
ಕಾಯದಲಿ ಕಲಿ ಯಾರು ಭಕ್ತಿಯ ।
ದಾಯ ನಿನ್ನಲಿ ನೆಲಸಿತೌ ಮಹದೇವಿ ಕೇಳೆಂದ ॥೨೦॥

ಹಾಲ ಹದದಲಿ ಹೆಪ್ಪನೆರೆದರೆ ।
ಮೇಲೆ ತುಪ್ಪವನುಂಬರಾ ಪರಿ ।
ಹೇಳಬಲ್ಲೊಡೆ ನಿನ್ನ ನಿರ್ಮಳ ಭಾವಭೂಮಿಯಲಿ ॥
ಲೀಲೆ ಮಿಗೆ ಶಿವತತ್ವಬೀಜವ ।
ಹೂಳಿದರೆ ಫಲಿಸುವುದೆನುತ ಕರು ।
ಣಾಳು ವರಗುರುರಾಯನಾ ಮಹದೇವಿಗಿಂತೆಂದ ॥೨೧॥

ಆನು ನೀನೆಂಬುಭಯದನುಸಂ ।
ಧಾನವನು ಮಿಗೆ ಮೀರಿ ಸಮ ಸಂ ।
ಸ್ಥಾನದಲಿ ಸುಯಿದಾನಿಯಾಗಿ ನಿರಾಳದಲಿ ನಿಂದು ॥
ಜ್ಞಾನ ಜ್ಯೋತಿಯ ಬೆಳಗಿ ಕಾಯದ ।
ನೂನ ಕದಳಿಯ ಗೆಲಿದು ನಿನ್ನಲಿ ।
ನೀನೆ ಮುಕ್ತಿಯನರಿವುದೌ ಮಹದೇವಿ ಕೇಳೆಂದ ॥೨೨॥

ಎನುತಲಾ ಮಹದೇವಿಯಕ್ಕಗೆ ।
ತನುಮನೋವಾಯುಗಳ ಸಂಚವ ।
ನನಲನಲಿ ಸಲೆ ಸುಡುವ ಸಮತೆಯ ಜೀವಪರಮರನು ॥
ಅನುಗೊಳಿಸಿ ನಿರ್ವಯಲ ಮಾಡುವ ।
ನೆನಹಿನುಪದೇಶವನು ಮಾಡಿದ ।
ನನುಪಮೋಪಮ ಸಗುಣ ನಿರ್ಗುಣ ಗುರು ಗುಹೇಶ್ವರನು ॥೨೩॥

ಪರುಷ ಮುಟ್ಟಲು ಮುಂದೆ ಕಬ್ಬುನ ।
ವರುಷದಲಿ ಹೊನ್ನಹುದೆ ನಿಮಿಷಕೆ ।
ಗುರುನಿರೂಪಜ್ಞಾನಜ್ಯೋತಿಪ್ರಭೆ ಪ್ರಕಾಶಿಸಲು ॥
ಹರಿದುದಾಗಳೆ ಸಂದು ಸಂಶಯ ।
ನೆರವಿಗತ್ತಲೆ ನಿತ್ಯ ನಿರ್ಮಳ ।
ಗಿರಿಯ ಗಹನಕೆ ಗಮಿಸಿದಳು ಮಹದೇವಿ ಮನದೊಳಗೆ ॥೨೪॥

ಎಲ್ಲರಲಿ ಶರಣಾರ್ಥಿಯೆಂದೆನು ।
ತೆಲ್ಲರಲಿ ಹರಕೆಯನು ಕೈಕೊಳು ।
ತೆಲ್ಲ ಶರಣರ ಚರಣವನು ನೆನಹಿನಲಿ ನೆಲೆಗೊಂಡು ।
ಭುಲ್ಲವಿಸಿ ಮೈಮಣಿದು ಪಸರಿಸಿ ।
ಪಲ್ಲವಿಸಿ ಮಹದೇವಿ ಬಳಿಕೆ ।
ಮ್ಮಲ್ಲಮಪ್ರಭುರಾಯನನು ಬೀಳ್ಕೊಂಡಳರ್ತಿಯಲಿ ॥೨೫॥

ನಡೆದು ಬಳಿಕೇಕಾಂತವಾಸದೊ ।
ಳಿಡಿದ ಕಾಯದ ಕದಳಿಯನು ಹೊ ।
ಕ್ಕಡರಿ ನಿಜ ಸಿರಿಗಿರಿಯ ಶಿಖರದ ಸಿದ್ಧಪೀಠದಲಿ ॥
ಬಿಡದೆ ನೆಲಸಿದಳಚಲ ಪದವಿಯ ।
ಪಡೆದಳಾ ಮಹದೇವಿ ಸುಖದಲಿ ।
ಪೊಡವಿಯರಿಯಲು ಗುರು ಗುಹೇಶ್ವರಲಿಂಗ ಲೀಲೆಯಲಿ ॥೨೬॥

**ಅಂತು ಗತಿ ೧೭ಕ್ಕಂ ಪದನು ೭೫೫ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೧೮
# ಅನುಭವವನನವರತ ಮಾಡುತಿಹುದು

**ವಚನ**

ಸಂಬಂಧ ಸಂಬಂಧವೆಂದು ಹೆಸರಿಟ್ಟುಕೊಂಡು ನುಡಿವಿರಿ
ಸಂಬಂಧವಾವುದು ಬಲ್ಲರೆ ಹೇಳಿರೇ
ಕಾಯ ಜೀವ ಪ್ರಾಣ ಈ ತ್ರಿವಿಧಸಂಬಂಧವನರಿದಡೆ
ಗುಹೇಶ್ವರಲಿಂಗದಲ್ಲಿ ಆತನೇ ಸಂಬಂಧಿ. ॥೧॥

ಒಳಗೆ ತೊಳೆಯಲರಿಯದೆ
ಹೊರಗನೆ ತೊಳೆದು ಕುಡಿವುತಿರ್ದರಲ್ಲಾ
ಪಾದೋದಕ ಪ್ರಸಾದವನರಿಯದೆ
ಭವಬಂಧನದಲ್ಲಿ ಮುಳುಗುತ್ತಿಹರು ಗುಹೇಶ್ವರಾ. ॥೨॥

ಆಧಾರದಲ್ಲಿ ಅಜನೆಂಬ ಸ್ವಾಯತ,
ಸ್ವಾಧಿಷ್ಠಾನದಲ್ಲಿ ವಿಷ್ಣುವೆಂಬ ಸ್ವಾಯತ,
ಮಣಿಪೂರಕದಲ್ಲಿ ರುದ್ರನೆಂಬ ಸ್ವಾಯತ,
ಅನಾಹತಲ್ಲಿ ಈಶ್ವರನೆಂಬ ಸ್ವಾಯತ,
ವಿಶುದ್ಧಿಯಲ್ಲಿ ಸದಾಶಿವನೆಂಬ ಸ್ವಾಯತ,
ಆಜ್ಞಾಚಕ್ರದಲ್ಲಿ ಶಾಂತ್ಯತೀತನೆಂಬ ಸ್ವಾಯತ
ಗುಹೇಶ್ವರಲಿಂಗದಲ್ಲಿ ವ್ಯೋಮ ವ್ಯೋಮವ ಕೂಡಿದಂತೆ. ॥೩॥

ಊರಕ್ಕಿ ಊರೆಣ್ಣೆ ಉಣ್ಣು ಮಾರಿಕವ್ವಾ
ತಾಯೆ ಬಾರೇ ಕುಮಾರನ ತಲೆಗಾಯಿ ಎಂಬಂತೆ
ಕಾಡಹೂವಿನಲಿ ಕಲ್ಲ ಲಿಂಗಪೂಜೆಯ ಮಾಡುವ

ಭವಿಯ ಭಕ್ತನೆಂಬರು ನೋಡಾ ಹಾಗಲ್ಲ
ತನ್ನ ತನುವೇ ಲಿಂಗ ಮನವೇ ಪುಷ್ಪವಾಗಿ
ಪೂಜೆಯ ಮಾಡುವಾತನೇ ಸದ್ಭಕ್ತ ಕಾಣಾ ಗುಹೇಶ್ವರಾ. ॥೪॥

ಇಷ್ಟಲಿಂಗವೇ ಪ್ರಾಣಲಿಂಗವೆಂದು ನುಡಿವ
ಮಿಟ್ಟೆಯ ಭಂಡರು ನೀವು ಕೇಳಿರಯ್ಯ
ಇಷ್ಟಲಿಂಗವನು ಪ್ರಾಣಲಿಂಗವನು ಕಾಯವನು
ಮೆಟ್ಟಿ ಹೂಳುವಲ್ಲಿ ಬಿಟ್ಟು ಹೋಹ ಪ್ರಾಣಕಿನ್ನಾವುದು ಲಿಂಗ
ಹೇಳಾ ಗುಹೇಶ್ವರಾ ? ॥೫॥

ಅಸ್ಥಿಗೆ ಚರ್ಮವಾಧಾರವಾಗೆ
ಪ್ರಾಣಕ್ಕೆ ಪ್ರಸಾದವೇ ಮೃತ್ತಿಕೆಯಾಗೆ
ಇದು ಪ್ರಾಣಲಿಂಗ ಸಂಬಂಧವಲ್ಲ ನಿಲ್ಲಿ ಭೋ
ಪ್ರಾಣಲಿಂಗಸಂಬಂಧವೆಂಬುದು ಕರ ಕಷ್ಟ ನೋಡಾ
ಒಡೆದ ಮಡಕೆಗೆ ಒತ್ತಿ ಮಣ್ಣು ಮೆತ್ತಿದರೆ
ಅದು ತರಹರವಾಗಬಲ್ಲುದೇ ಗುಹೇಶ್ವರಾ. ॥೬॥

ಪ್ರಾಣ ಲಿಂಗವೆಂಬ ಶಬುದಕ್ಕೆ ನಾಚಿತ್ತು ಎನ್ನ ಮನ
ಪ್ರಾಣ ಹೋದರೆ ಕಾಯ ಬಿದ್ದರೆ ಲಿಂಗ ಒಂದೆಸೆಯಾದರೆ
ನಾಚಿತ್ತು ನಾಚಿತ್ತು ಎನ್ನ ಮನ
ಪ್ರಾಣಲಿಂಗಸಂಬಂಧಿ ಗುಹೇಶ್ವರಾ ನಿಮ್ಮ ಶರಣನು. ॥೭॥

ಸುತ್ತಿ ಸುತ್ತಿ ಬಂದಡಿಲ್ಲ
ಲಕ್ಷ ಗಂಗೆಯ ಮಿಂದಡಿಲ್ಲ
ತುತ್ತತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ
ಸುತ್ತಿ ಸುಳಿವ ಮನವ ಚಿತ್ತದಲಿ ಸಂತೈಸಬಲ್ಲಡೆ
ಬಟ್ಟಬಯಲು ಕಾಣಾ ಗುಹೇಶ್ವರಾ. ॥೮॥

ಒಕ್ಕು ಮಿಕ್ಕುದನುಂಬ ನಿಚ್ಚ ಪ್ರಸಾದಿಗಳು ನೀವು ಕೇಳಿರೋ
ಒಕ್ಕು ಹೋಹುದಾವುದು ಮಿಕ್ಕು ಹೋಹುದಾವುದು ಬಲ್ಲರೆ ನೀವು ಹೇಳಿರೋ
ಒಕ್ಕು ಹೋಹುದೇ ಕಾಯ, ಮಿಕ್ಕು ಹೋಹುದೇ ಪ್ರಾಣ
ಇವು ತಕ್ಕುವೆಂದರಿದು ಸಿಕ್ಕಿಸಿಕೊಳಬಲ್ಲಡೆ
ಸಿಕ್ಕದಾದ ಕಾಣಾ ನಮ್ಮ ಗುಹೇಶ್ವರಾ. ॥೯॥

ಕಾಮನ ಕೊಂದಾತನಲ್ಲದೆ ಶುದ್ಧಪ್ರಸಾದಿಯಲ್ಲ
ಕಾಲನ ತಿಂದಾತನಲ್ಲದೆ ಸಿದ್ಧಪ್ರಸಾದಿಯಲ್ಲ
ತ್ರಿಪುರವ ಸುಟ್ಟಾತನಲ್ಲದೆ ಪ್ರಸಿದ್ಧಪ್ರಸಾದಿಯಲ್ಲ
ಕೆಸರಲ್ಲಿ ಕಿಚ್ಚನಿಕ್ಕಿ ಬಸುರ ಬಡಿದುಕೊಂಡಾತಗಲ್ಲದೆ
ಈ ತ್ರಿವಿಧಪ್ರಸಾದವಿಲ್ಲ ಕಾಣಾ ಗುಹೇಶ್ವರಾ. ॥೧೦॥

'ತನು ಹೊರಗಿರಲು ಪ್ರಸಾದ ಒಳಗಿರಲು ಏನೆಂಬೆನಯ್ಯಾ
ನಿಮ್ಮ ಮನಕ್ಕೆ ಮನ ನಾಚದು
ಪ್ರಾಣಲಿಂಗದಲ್ಲಿ ಪ್ರಸಾದವ ಕೊಂಡರೆ
ವ್ರತಕ್ಕೆ ಭಂಗ ಕಾಣಾ ಗುಹೇಶ್ವರಾ. ॥೧೧॥

ತಲೆಯಲಟ್ಟುಣಲೊಲ್ಲದೆ ಒಲೆಯಲಟ್ಟುಂಬರು
ಒಲೆಯಲಟ್ಟುಂಡು ಒಡಲ ತುಂಬಿದರೆ
ಹೊಗೆ ಘನವಾಯಿತ್ತು
ಇದು ಕಂಡಾದರೆಯೂ ಹೇಸಿ ಬಿಡಬೇಡವೇ ಗುಹೇಶ್ವರಾ. ॥೧೨॥

**ವಚನ**

ಬಸವರಾಜಗೆ ಸಾಧಕಾಂಗದ ।
ಬೆಸುಗೆಯನುವಿನ ಭೇದವನು ಬೋ ।
ಧಿಸಿದನೆಮ್ಮಯ ಗುರು ಗುಹೇಶ್ವರಲಿಂಗ ಲೀಲೆಯಲಿ ॥

ಆರು ಮೊದಲಲಿ ಭಕ್ತಿ ಮಾರ್ಗದ ।
ದಾರಿಯನು ಸಲೆ ತೆರಹು ಮಾಡಿ ಮ ।
ನೋರಥವ ಹಡೆವವರು ಕಾಯದ ಕೀಲನರಿವವರು ॥
ಕಾರಣಂಗಳ ಮೂಲವನು ಕ ।
ಣ್ಣಾರೆ ಕಾಂಬ ಮಹಾಂತರುಗಳವ ।
ಧಾರಿಪುದು ಮುದದಿಂದಲೀ ಪ್ರಭುಲಿಂಗ ಲೀಲೆಯನು ॥೧॥

ನಿಲಿಸಿ ನಿರ್ವಯಲಿನ ಸಮಾಧಿಯ ।
ನಳವಡಿಸಿ ಮಹದೇವಿಯಕ್ಕನ ।
ಕಳುಹಿ ತದನಂತರದಲಗ್ಗದ ಬಸವರಾಜಂಗೆ ॥
ತಿಳುಹುವೆನು ಶಿವತತ್ವಭಕ್ತಿಯ ।
ಬಳಕೆಯನುಭಾವದ ವಿವೇಕ ।
ಸ್ಥಲವನೆಂದೆನುತಲ್ಲಮಪ್ರಭುರಾಯನಿಂತೆಂದ ॥೨॥

ಒಸೆದು ತಾ ಹಿಡಿದಿಷ್ಟಲಿಂಗದ ।
ಬೆಸನದಲಿ ಗುರುಲಿಂಗಜಂಗಮ ।
ವಶದಲಿಂತಿರುತಿರಲಿಕಂತಃಕರಣವೃತ್ತಿಗಳ ॥
ಬೆಸುಗೆ ಬಿಡುವುದು ಪ್ರಾಣಲಿಂಗದ ।
ದೆಸೆಗೆ ಮನವೆಳಸುವುದು ಮಾಯೆಯ ।
ಮಸಕವೆಲ್ಲವು ಮಾದು ಹೋಹುದು ಬಸವ ಕೇಳೆಂದ ॥೩॥

ದೇವ ಚಿತ್ತೈಸಾದಡಾ ನಿ ।
ನ್ನಾವ ಪರಿಯಲಿ ಭಕ್ತಿಭರಸಂ ।
ಭಾವಿಯಹೆನ್ನೈ ಸಹಜಭಕ್ತಿಯನರಿವ ಪರಿಯೆಂತು ॥
ಈ ವಿಕಾರವ ಕಳೆದು ಕಾಯ ಕ।
ಳಾವಿಳಾಸವ ತಿಳಿದು ನಿಖಿಲ ನಿ ।
ರಾವಲಂಬವನೆಂತು ಕಾಂಬೆನು ಗುರುವೆ ಹೇಳೆಂದ ॥೪॥

ಉಣ್ಣೆ ಕೆಚ್ಚಲಲೇಸುದಿನವಿ ।
ದ್ದಣ್ಣೆವಾಲುಣಬಲ್ಲುದೇ ಕೇ ।
ಳೆನ್ನ ಭಕ್ತಿದ್ವಾರವನು ಹುಗದನ್ಯಮಾರ್ಗದಲಿ ॥
ಕಣ್ಣುಗಾಣದೆ ನಡೆದರದರಲಿ ।
ನನ್ನರಿವುದು ಹುಸಿ ಕಣಾ ಬಸ ।
ವಣ್ಣ ಕೇಳೆನುತಲ್ಲಮಪ್ರಭುರಾಯನಿಂತೆಂದ ॥೫॥

ಗಿಡುವಳುಕೆ ಹೂ ಪತ್ರೆಗೋಸುಗ ।
ಮಡು ನಡುಗೆಯಗ್ಗವಣಿಗೋಸುಗ ।
ಕಡಿದುವುಪಹಾರಕ್ಕೆ ಸಕಲೌಷಧಿ ವನಸ್ಪತಿಯ ॥
ಕೆಡಿಸುತೀಪರಿ ಹೆರರುಗಳ ತ ।
ನ್ನೊಡಲ ವಂಚಿಸಿ ಬಾಹ್ಯಭಕ್ತಿಯ ।
ನಡೆವವರ ನಾ ಮೆಚ್ಚೆನೈ ಬಸವಣ್ಣ ಕೇಳೆಂದ ॥೬॥

ತೇಗು ಬಿಕ್ಕುಳು ಸೀನು ಉದುಗರ ।
ವಾಗಳಿಕೆಯಾಲಸ್ಯ ಕೆಮ್ಮುಗ ।
ಳೋಗಡಿಕೆ ಮದ ನಿದ್ರೆ ತೂಕಡು ಕನಸು ಕಳವಳಿಕೆ ॥
ಆಗು ಹೋಗೆಂದೆಂಬ ಗೊಡವೆಯ ।
ನೀಗಿ ನಿಮ್ಮಯ ಸಿದ್ಧರಾಮನ ।
ಲಾಗಿನಂತಿರಬೇಕು ಭಕ್ತರು ಬಸವ ಕೇಳೆಂದ ॥೭॥

ಉಸುರುಗರಗಸದಲ್ಲಿ ತನುವಿನ ।
ಬೆಸುಗೆಯನು ಬಿಡಮಾಡಿ ಬಿಸುಡದೆ ।
ಹಸು ತೃಷೆಯ ಹರಿಹುಗಿಲಿನುಪಟಳಕಂಜಿ ಮುಖಗೊಡದೆ ॥
ದಶವಿಧೇಂದ್ರಿಯ ದಾಳಿಯಲಿ ಶಂ ।
ಕಿಸದೆ ನಿಲುವಡೆ ಸಿದ್ಧರಾಮನ ।
ದೆಸೆಯ ನೆನೆಯಲು ಭಕ್ತರಹರೈ ಬಸವ ಕೇಳೆಂದ ॥೮॥

ದೇವ ದೇವ ಮಹಾಪ್ರಸಾದವಿ ।
ದಾವ ಶಬ್ದವ ಚಿತ್ತವಿಸಿದಿರಿ ।
ನೀವು ನಿಮ್ಮಯ ಕಿಂಕರರೊಳಿನ್ನಾರ ಹೋಲುವೆನು ॥
ದೇವ ನೀ ಮನ್ನಿಸಿದಡಧಮನೆ ।
ಪಾವನಾತ್ಮಕನಲ್ಲದಡೆ ಜಡ ।
ಜೀವರಿಂದತಿಕಷ್ಟವೆಂದನು ಸಿದ್ಧರಾಮಯ್ಯ ॥೯॥

ಪರಮ ಪೂರ್ವಾಚಾರ್ಯ ಬಸವೇ ।
ಶ್ವರನು ಘನಗುರು ಚೆನ್ನಬಸವನು ।
ನಿರುಪಮಜ್ಞಾನೈಕನಿಧಿ ಮಡಿವಾಳ ಮಾಚಯ್ಯ ॥
ವರ ಮಹಾಗಣ ತಿಂತಿಣಿಯೊಳನಿ ।
ಬರೊಳು ಗಣಿಸುವಡಾನದೇಸರ ।
ಹುರುಳು ಹೇಳಾ ದೇವ ಎಂದನು ಸಿದ್ಧರಾಮಯ್ಯ ॥೧೦॥

ಪೂತು ಮರುಳೇ ಸಿದ್ಧರಾಮನ ।
ಮಾತು ತಪ್ಪದು ಭಕ್ತರುಪಮಾ ।
ತೀತರಹುದೈ ಬಸವ ಮಡಿವಳ ಚೆನ್ನಬಸವಣ್ಣ ॥
ಈತಗಳು ಸಾಕ್ಷಾತ ಲೋಕ ।
ಖ್ಯಾತಪುರುಷರು ಸತ್ಯವೆನುತ ಪು ।
ರಾತರನು ಮಿಗೆ ಹೊಗಳುತಾ ಪ್ರಭುರಾನಿಂತೆಂದ ॥೧೧॥

ಆದಿಪುರುಷನು ಬಸವರಾಜನ ।
ನಾದಿಪುರುಷನು ಬಸವರಾಜನು ।
ನಾದಪುರುಷನು ಬಸವರಾಜನು ಬಸವರಾಜನನು ॥
ವೇದಶಾಸ್ತ್ರಗಳರಸಲರಿಯದೆ ।
ಹೋದುವೆನುತಲಿ ಬಸವರಾಜನ ।
ನೆಯ್ದೆ ಹೊಗಳುತಲಲ್ಲಮಪ್ರಭುರಾಯನಿಂತೆಂದ ॥೧೨॥

ಆದೊಡಾಲಿಸಿ ಕೇಳು ಭಕ್ತಿಯ ।
ಹಾದಿಗೊಂದೇ ಕೀಲು ದಿಟ ಬೇ ।
ಕಾದುದೀ ತನು ತನುವಿಡಿದು ಕಾಬುದು ಸಮಸ್ತವನು ॥
ಆಧರಿಸಿಯೇ ತನುವ ಲಿಂಗೋ ।
ಪಾದಿಯಲಿ ಜೋಗೈಸಿಕೊಳುತಲಿ ।
ಸಾಧಿಸುವುದು ಸಮಾಧಿಯನು ಬಸವಣ್ಣ ಕೇಳೆಂದ ॥೧೩॥

ಅನುಶ್ರವಣ ಮನನದ ನಿಧಿಧ್ಯಾ ।
ಸನದಲೊಚ್ಚತನಾಗಿ ತನ್ನಯ ।
ತನುಮನೋವಾಕ್ಕಾಯಕರ್ಮಗಳೊಂದು ಹುರಿಯಾಗಿ ॥
ನೆನಹು ನೆಲೆಗೊಂಡಾ ಮಹಾತ್ಮಗೆ ।
ಘನವದಾವುದು ಗಮಿಸಿದರೆಯಾ ।
ತನೆ ಕಣಾ ಸ್ವಾತಂತ್ರ ಭಕ್ತನು ಬಸವ ಕೇಳೆಂದ ॥೧೪॥

ತನ್ನೊಳಗೆ ಗುರುಲಿಂಗಜಂಗಮ ।
ತನ್ನೊಳಗೆ ಪಾದೋದಕಾಮೃತ ।
ತನ್ನೊಳಗೆ ಪರಮಪ್ರಸಾದ ಸಮಸ್ತವೆಲ್ಲವನು ॥
ತನ್ನೊಳರಯದೆಯಿದಿರೊಳರಸುವ ।
ಭಿನ್ನ ಭಾವಭ್ರಾಂತಭವಿಗಳು ।
ನನ್ನ ಸಾಧಿಸಲರಿಯರೈ ಬಸವಣ್ಣ ಕೇಳೆಂದ ॥೧೫॥

ಅದು ನಿಮಿತ್ತದಲಂತರಂಗದ ।
ಪದರದೊಳು ಗುರುಲಿಂಗಜಂಗಮ ।
ದೊದವನಾ ಪಾದೋದಕಾಮೃತ ಸುಪ್ರಸಾದವನು ॥
ಹೃದಯದಲಿ ಕಾಬನ್ನಬರ ತ ।
ಮ್ಮಿದಿರಿನಲಿ ಪೂಜಿಪರಲೈ ಪ್ರತಿ ।
ನಿಧಿಯ ನಿಯಮಿಸಿ ಪೂರ್ವಪುರುಷರು ಬಸವ ಕೇಳೆಂದ ॥೧೬॥

ವ್ಯಾಧಿಗಳ ನೆರೆ ಗೆಲಿದು ಶೀತೋ ।
ಷ್ಣಾದಿಗಳ ಪರಿಹರಿಸಿ ತಾಗು ನಿ ।
ರೋಧವೆಲ್ಲವ ನೀಗಿ ನಿಂದಾಸ್ತುತಿಗೆ ಸಮನಾಗಿ ॥
ಐದು ಮುಖದಲಿ ಹರಿವ ಮನವನು ।
ಸೇದಿ ನಿಶ್ಚಲವೆನಿಸಿ ಸತ್ಯಸ ।
ಮಾಧಿಯಲಿ ನಿಂದವನೆ ಭಕ್ತನು ಬಸವ ಕೇಳೆಂದ ॥೧೭॥

ಮನವನೊಬ್ಬಳಿ ಮಾಡಿದಲ್ಲದೆ ।
ತನುವಿನೊಳಗನು ಕಾಣಬಾರದು ।
ತನುವಿನೊಳಗನು ಕಾಣಿದಿರ್ದಡೆ ಭಕ್ತಿರತಿಯಿಲ್ಲ ॥
ವಿನುತ ಭಕ್ತಿಯ ರತಿಯ ಕಾಣದೆ ।
ಘನವನೆಯ್ದಲುಬಾರದಂತಾ ।
ಘನವ ಬೆರಸದೆ ಮುಕ್ತಿಯಾಗದು ಬಸವ ಕೇಳೆಂದ ॥೧೮॥

ವಾರುವನನೇರುವಡೆ ವಾಘೆಯ ।
ದಾರವನು ಹಿಡಿದಲ್ಲದಾಗದು ।
ಧೀರತನದಲಿ ಸಂಚಲಿಸುತಿಹ ಮನವ ನಿಲಿಸುವಡೆ ॥
ಮಾರುತನ ಗತಿಗೆಡಿಸಿ ಕಾಯದ ।
ಕಾರಣವನರಿದಲ್ಲದಾಗದು ।
ವೀರಶೈವದ ಬಟ್ಟೆಯಿದು ಬಸವಣ್ಣ ಕೇಳೆಂದ ॥೧೯॥

ಮಾಯೆಯೆಂಬುದು ಮನವು ಮನವೇ ।
ಮಾಯವಾಗಿಹುದಾ ಮನಸ್ಸೇ ।
ವಾಯುರೂಪಾಗಿರುತಲಿಹುದಾ ವಾಯು ಹರಿದಾಡಿ ॥
ಕಾಯವನು ಕಂಗೆಡಿಸಿ ಭಕ್ತಿಯ ।
ಬಾಯ ಕಾಣಿಸಲೀಯದಂತಾ ।
ವಾಯುವನು ಗೆಲಿದವನೆ ಭಕ್ತನು ಬಸವ ಕೇಳೆಂದ ॥೨೦॥

ಹೇಳುವಡೆ ಮನವೆಂಬ ಹಕ್ಕಿಗೆ ।
ಕಾಲುಗಳೆಲ್ಯೆ ತೊಳಲುತಿಹ ಕ ।
ಣ್ಣಾಲಿಗಳು ದಿಟವದಕೆ ಪಕ್ಕಗಳೀಡೆ ಪಿಂಗಳದ ॥
ಗಾಳಿಯಾಗಿಹುದಂತುಕಾರಣ ।
ವಾಲಿಯೇ ಸಾಧನಕೆ ಸಾಧನ ।
ಮೂಲವನು ನಿಲಿಸುವನೆ ಭಕ್ತನು ಬಸವ ಕೇಳೆಂದ ॥೨೧॥

ಆಲಿ ನಿಂದೊಡೆ ಸುಳಿದು ಸೂಸುವ ।
ಗಾಳಿ ನಿಲುವುದು ಗಾಳಿ ನಿಲೆ ಮನ ।
ಮೇಲೆ ನಿಲುವುದು ಮನವು ನಿಂದೊಡೆ ಬಿಂದು ನಿಂದಿಹುದು ॥
ಲೀಲೆಯಿಂದಾ ಬಿಂದು ನಿಂದಡೆ ।
ಕಾಲಕರ್ಮವ ಗೆದ್ದು ಮಾಯೆಯ ।
ಹೇಳಹೆಸರಿಲ್ಲೆನಿಸಬಹುದ್ಯೆ ಬಸವ ಕೇಳೆಂದ ॥೨೨॥

ಅಂಗಭೂಮಿಯಲನ್ನ ಬೀಜವ ।
ಲಿಂಗನೆನಹಿನಲಿಕ್ಕಿ ಜಲಪಾ ।
ನಂಗಳಿಂದವೆ ಸಪ್ತಧಾತುಸಮೇಳದಲಿ ಬೆಳೆಸಿ ॥
ಹಿಂಗದೊದವಿದ ಬಿಂದುಫಲವನ ।
ನಂಗಗೀಯದೆ ವಿಮಲವೆನಿಸಿಯೆ ।
ಸಂಗಡಿಸಿಕೊಂಡಿಹನೆ ಭಕ್ತನು ಬಸವ ಕೇಳೆಂದ ॥೨೩॥

ಸಲೆ ಷಡಾಧಾರಾಂಬುಜಂಗಳ ।
ನೆಲೆಯನರಿಯಲಿಬೇಕು ಬೇಹಡೆ ।
ಬಲಿವುದಿಂತು ಷಡುಸ್ಥಳಂಗಳನವರ ಮೇಳದಲಿ ॥
ಇಳೆ ಜಲಾನಲ ವಾಯು ಗಗನ ।
ಸ್ಥಲಕುಲಂಗಳನಾತ್ಮತತ್ವದೊ ।
ಳಿಳುಹಿ ಸುಖಿಸುವನವನೆ ಭಕ್ತನು ಬಸವ ಕೇಳೆಂದ ॥೨೪॥

ಆರು ಭೂತಗಳಾರು ಚಕ್ರಗ ।
ಳೇರಿಹವು ಪರಿವಿಡಿಯಲವರೊಳು ।
ಮೀರಿದಜ ಹರಿ ರುದ್ರನೀಶ ಶಿವಾತ್ಮತತ್ವಗಳು ॥
ತೋರುವುವು ನೆಲೆವಿಡಿದು ಸಲೆ ಬಲು ।
ಹೇರಿ ಸಾಧಿಸಿಯಂತವೆಲ್ಲವ ।
ಸಾರಿ ದಾಂಟುವನವನೆ ಭಕ್ತನು ಬಸವ ಕೇಳೆಂದ ॥೨೫॥

ನೆಟ್ಟನಾ ಗುದಲಿಂಗನಾಭಿಯ ।
ಮುಟ್ಟಿ ಗುರುನೆಲೆ ನಾಭಿ ಹೃದ್ಗಳ ।
ಮುಟ್ಟಿ ಜಂಗಮದಿಕ್ಕೆಗಳ ಭ್ರೂ ಬ್ರಹ್ಮರಂಧ್ರಗಳು ॥
ನಿಟ್ಟಿಸಲು ಶಿವಲಿಂಗದೋವರಿ ।
ಯೊಟ್ಟಿಲಾಗಿಹವಿವನು ಬೆರಸುವ ।
ಕಟ್ಟಳೆಯ ಕಂಡವನೆ ಭಕ್ತನು ಬಸವ ಕೇಳೆಂದ ॥೨೬॥

ಬಿಂದುವಸ್ತವ ಗುರುಮುಖಾಗ್ನಿಗೆ ।
ತಂದು ಪಚನಿಸಿ ಜಂಗಮದ ಮುಖ ।
ದಿಂದೆ ಲಿಂಗಕೆ ನೀಡಿ ತನ್ಮುಖದಿಂದಲೊಕ್ಕುಳಿದ ॥
ಸಂದ ಸುಧೆಯನಿಪಾ ಪ್ರಸಾದವ ।
ನೊಂದು ಮನಸಿನಲುಂಡು ಪರಮಾ ।
ನಂದವನು ಪಡೆದವನೆ ಭಕ್ತನು ಬಸವ ಕೇಳೆಂದ ॥೨೭॥

ಧರೆ ಜಲಾಗ್ನಿಯನೆಯ್ದಿರೆ ಸ ।
ದ್ಗುರುಕುಮಾರಕನಗ್ನಿ ವಿಡಿದಾ ।
ಮರುತ ಗಗನವನೆಯ್ದಿದರೆ ಜಂಗಮದಲವಧಾನಿ ॥
ವರಗಗನವಾತ್ಮಸ್ಥಲವನೇ ।
ಯ್ದಿರಲು ಶಿವಲಿಂಗೈಕ್ಯನಿಂತೀ ।
ಪರಿಯನರಿದವನೆನ್ನ ಭಕ್ತನು ಬಸವ ಕೇಳೆಂದ ॥೨೮॥

ಧರಣಿ ಜಲದಲಿ ಕರ್ಮಿ ಪಾವಕ ।
ಮರುತ ಮಂಡಲದಲ್ಲಿ ಭಕ್ತನು ।
ಪರಿಯ ಗಗನಾತ್ಮಕಸ್ಥಳಾನ್ವಿತನಾಗೆ ಸುಜ್ಞಾನಿ ॥
ಪರಿವಿಡಿಯಲವನಿಳಿಹಿ ನಿಂದರೆ ।
ಪರಕೆ ಪರತರ ವಸ್ತುವಾಗಿಯೆ ।
ನೆರೆವನೆನ್ನಲಿ ಬಳಿಕಲಾತನು ಬಸವ ಕೇಳೆಂದ ॥೨೯॥

ಶಕ್ತಿಯೆಡೆ ಗುದಲಿಂಗವಂತಾ ।
ಭಕ್ತಿಯೆಡೆಯಾ ನಾಭಿ ಹೃದಯವು ।
ಮುಕ್ತಿಯೆಡೆಯಾ ತಾಲು ಹುಬ್ಬುಗಳದು ನಿಮಿತ್ತದಲಿ ॥
ಶಕ್ತಿಯಲಿ ಸಂಪನ್ನನಾಗಿಯೆ ।
ಭಕ್ತಿಯಲಿ ಭಾವಜ್ಞನಾದಡೆ ।
ಮುಕ್ತಿಯೆಂಬುದು ಮುಂದೆ ನಿಲುವುದು ಬಸವ ಕೇಳೆಂದ ॥೩೦॥

ತನ್ನನೊಲಿವಡೆ ಶಕ್ತಿಯಿದಲಾ ।
ತನ್ನನರಿವಡೆ ಭಕ್ತಿಯಿದಲಾ ।
ತನ್ನನಳಿವಡೆ ಮುಕ್ತಿಯಿದಲಾ ಲಿಂಗವಂತಂಗೆ ॥
ತನ್ನ ತಾನಿಂತಡರಿ ತನ್ನೊಳು ।
ತನ್ನ ತಾನಾಗಿದ್ದನಾದಡೆ ।
ನನ್ನ ನಚ್ಚಿನ ಭಕ್ತನಾತನು ಬಸವ ಕೇಳೆಂದ ॥೩೧॥

ಶುದ್ಧವೆನಿಪಾ ಪೂರ್ವಪಶ್ಚಿಮ ।
ಸಿದ್ಧ ಮುದ್ರಾಬಂಧ ಮೊದಲಾ ।
ಗಿದ್ದ ನಾನಾ ಪರಿಪರಿಯ ಯೋಗೋಪದೇಶಗಳ ॥
ಉದ್ಧರಿಸಲಾ ಬಸವರಾಜನ ।
ಬುದ್ಧಿ ಪ್ರಜ್ವಲವಾಗಿ ಪಸರಿಸು ।
ತಿದ್ದುದೇನೆಂದೆಂಬೆನಾ ಪ್ರಭುಲಿಂಗನೊಲುಮೆಯನು ॥೩೨॥

ಮಾಡುತಿಹುದನವರತಲನುಭವ ।
ಕೂಡುವನ್ನಕವನುಭವಂಗಳ ।
ಗಾಢದಲಿ ಗಮನಿಸುವುದೂರ್ಧ್ವಪದ ಪ್ರಚಾರಣೆಗೆ ॥
ನೀಡಿ ನಿಲುಕುವುದಂತರಂಗದ ।
ನಾಡನಾಳುವಡೀ ಪ್ರಕಾರವ ।
ಜೋಡಿಸುತ್ತಿರುತಿಹುದು ಭಕ್ತರು ಬಸವ ಕೇಳೆಂದ ॥೩೩॥

ಅನುಭವಣೆಯಳವಡುವ ಪರಿಯಂ ।
ತನುಮತವನೊಳಗೊಂಡು ನಿಶ್ಚಲ ।
ದನುವನಂಗೀಕರಿಸಿ ನೀವಿರಲಾ ದಿನಂಗಳಲಿ ॥
ಮನವೊಲಿದು ನಾ ಬಂದು ಮೇಲಣ ।
ನೆನಹಿಗಾ ಕ್ಷಣ ಹರುವ ಮಾಡುವೆ ।
ನೆನುತಲಾ ಪ್ರಭುರಾಯನಾ ಬಸವಣ್ಣಗಿಂತೆಂದ ॥೩೪॥

ನೋಡಬೇಕಾರಾರು ಭಕ್ತಿಯ ।
ಮಾಡಿ ಮುಕ್ತಿಯ ಹಡೆವೆವೆಂದನು ।
ಗೂಡಿ ನಿಚ್ಚಟರಾಗಿ ಧೀರೋದಾರ ವೃತ್ತಿಯಲಿ ॥
ಖೋಡಿವೋಗದೆ ನಿರ್ವಹಿಸಿ ಹೇ ।
ಡಾಡದವರನು ಕಾಬೆವಾವಿ ।
ನ್ನಾಡಿ ಬಹೆವೆಂದೆನುತಲಿರ್ದನು ಗುರು ಗುಹೇಶ್ವರನು ॥೩೫॥

**ಅಂತು ಗತಿ ೧೮೪ಕ್ಕಂ ಪದನು ೭೯೦ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೧೯
# ಮೋಕ್ಷದೀಕ್ಷೆಯನಿತ್ತ ಗೋರಕ್ಷಂಗೆ ಪ್ರಭುರಾಯ

**ವಚನ**

ಕಳ್ಳಗಂಜಿ ಕಾಡ ಹೊಕ್ಕರೆ ಹುಲಿ ತಿನ್ನದೆ ಮಾಬುದೆ ?
ಹುಲಿಗಂಜಿ ಹುತ್ತ ಹೊಕ್ಕರೆ ಸರ್ಪ ತಿನ್ನದೆ ಮಾಬುದೆ ?
ಕಾಲಗಂಜಿ ಭಕ್ತನಾದರೆ ಕರ್ಮ ತಿನ್ನದೆ ಮಾಬುದೆ ?
ಮೃತ್ಯುವಿನ ಬಾಯ ತುತ್ತಾದ ವೇಷಡಂಬಕರ ನಾನೇನೆಂಬೆನು ಗುಹೇಶ್ವರಾ.॥೧॥

ನಾರುಬೇರಿನ ಕುಟಿಲಕರ್ಮದ ಯೋಗವಲ್ಲಿದು ನಿಲ್ಲಿ ಭೋ
ಕಾಯಸಮಾಧಿ ಕರಣಸಮಾಧಿಯ ಯೋಗವಲ್ಲಿದು ನಿಲ್ಲಿ ಭೋ
ಜೀವಸಮಾಧಿಯೆಂಬುದಲ್ಲ ನಿಜಸಹಜಸಮಾಧಿನಿಧಿ ಕಾಣಾ ಗುಹೇಶ್ವರಾ.॥೨॥

**ಸೂಚನೆ**

ಶರಣರೆಲ್ಲರ ನಿಲಿಸಿ ಹೋಗುತ ।
ಕರುಣದಲಿ ಗೋರಕ್ಷನಾಥಗೆ ।
ವಿರಚಿಸಿದನೆಮ್ಮಲ್ಲಮಪ್ರಭು ಲಿಂಗತತ್ವವನು ॥

ನರ ತೊಗಲು ಎಲು ಮಿದುಳು ಕಲ್ಮಷ ।
ಕರುಳು ಕಂಡ ಪುರೀಷ ಪುಂಜದ ।
ಶರಿರವೇ ಸ್ವಯವಾಗಿ ಸಿದ್ಧಿಯ ಪಡೆವೆವೆಂದೆಂಬ ॥
ಮರುಳುತನವನು ನಿಲಿಸಿ ಸಾಕ್ಷಾತ್ ।
ಪರಮ ಪದವಿಯಲಿರಿಸುವನುವನು ।
ಶರಣರೆಲ್ಲರು ತಿಳಿವುದೀ ಪ್ರಭುಲಿಂಗಲೀಲೆಯಲಿ ॥೧॥

ಸಾಧಿಸುವುದಿನ್ನಿನ್ನು ನಿಮ್ಮೊಳು ।
ನಾದ ಬಿಂದು ಕಳಾ ಪ್ರಪಂಚದ ।
ಹಾದಿಯನು ಹರುಮಾಡುತಿಹುದೇಕಾಗ್ರಚಿತ್ತದಲಿ ॥
ಆ ದಿನಕೆ ನಾ ಬಂದು ನಿಮ್ಮಸ ।
ಮಾಧಿಗಳ ಸಾಹಸದ ಪ್ರಾಪ್ತಿಯ ।
ನೆಯ್ದೆ ನೋಡುವೆನೆನುತಲಾ ಪ್ರಭುರಾಯನಿಂತೆಂದ ॥೨॥

ಸ್ತುತ್ಯರಾಗಿಹುದಖಿಳ ಭಕ್ತರು ।
ನಿತ್ಯರಾಗಿಹುದಚಲ ಭಕ್ತರು ।
ಸತ್ಯರಾಗಿಹುದಮಲ ಭಕ್ತರು ಭಕ್ತಿಯಿಂದೆನುತ ॥
ಮತ್ತೆ ಮುದದಲಿ ಸಿದ್ಧರಾಮನ ।
ನುತ್ತಮೋತ್ತಮ ಬಸವರಾಜನ ।
ಚಿತ್ತದಣಿಯಲು ಹರುಷದಲಿ ಹರಸಿದನು ಪ್ರಭುರಾಯ ॥೩॥

ಮನವೊಲಿದು ಶಿವಶರಣರೆಲ್ಲರು ।
ತನತನಗೆ ಸಾಷ್ಟಾಂಗಸಹಿತವೆ ।
ತನುವನೀಡಾಡಿದರು ಗುರುವಿಗೆ ಬಳಿಕಲವರುಗಳ ॥
ವಿನಯದಿಂದಿರಹೇಳಿ ಮರ್ತ್ಯದ ।
ಮನುಜರನು ಪಾವನವ ಮಾಡುವೆ ।
ನೆನುತ ಗಮಿಸಿದನಲ್ಲಮಪ್ರಭುಲಿಂಗ ಲೀಲೆಯಲಿ ॥೪॥

ಇತ್ತಲೀ ಬಸವಣ್ಣ ಮೊದಲಾ ।
ದುತ್ತಮದ ಶಿವಭಕ್ತರೆಲ್ಲರು ।
ಚಿತ್ತದಲಿ ನಿಜಗುರುನಿರೂಪವ ಮಾಡತೊಡಗಿದರು ॥
ಅತ್ತ ಸೊನ್ನಲಪುಕೆ ಹೋಗಿ ಸು ।
ಚಿತ್ತದಿಂದಲಿ ಸಿದ್ಧರಾಮನು ।
ಮತ್ತೆ ಮನದಲಿ ಮಾಡುತಿರ್ದನು ಶಿವಸಾಮಾಧಿಯನು ॥೫॥

ಧರಣಿಯೊಳಗಾರಾರದಾವಾ ।
ಚರಣೆಗಳನಾಚರಿಸುತಿಹರಾ ।
ಪರಿಯಲವರವರಿಗೆ ಯಥೋಚಿತ ಸುಪ್ರಸನ್ನತೆಯ ॥
ಕರುಣಿಸುವೆನೆಂದೆನುತ ಸಚರಾ ।
ಚರರಿಗುಪಕಾರಾರ್ಥವಾಗಿಯೆ ।
ಗುರುಗುಹೇಶ್ವರಲಿಂಗ ಸುಳಿದನು ತನ್ನ ಲೀಲೆಯಲಿ ॥೬॥

ಒಸೆದು ಕುಲಗಿರಿಕುಲವನೊಲಿದೀ ।
ಕ್ಷಿಸಲು ಪರುಷದ ಪರ್ವತಂಗಳ ।
ಹೆಸರ ಹಡೆದುವು ತರುಲತಾನಿಕರವ ನಿರೀಕ್ಷಿಸಲು ॥
ಮಿಸುಪ ಸುರತರು ಕಲ್ಪಲತೆಯೆಂ ।
ಬೆಸಕವಾದುವು ನೋಡೆ ಸರಸಿ ।
ಪ್ರಸರವಮೃತಗಳಾದುವಾ ಪ್ರಭುಲಿಂಗಲೇಲೆಯಲಿ ॥೭॥

ಪೊಡವಿಯನು ಪಾವನವ ಮಾಡುತ ।
ನಡೆದು ನಲವಿಂ ಬರುತ ಬರುತಲಿ ।
ಬಡಗ ಭೂಮಿಯ ಪುಣ್ಯಪುರುಷರ ಚಾರುಚರಿತೆಯನು ॥
ಬಿಡದೆ ನೋಡುವೆನವರು ಬೇಡಿತ ।
ಕೊಡುವೆನೆಂದೆನುತೊಲಿದು ಕರುಣದ ।
ಕಡಲಿನಂತಿರೆ ಬಂದನಾ ಪ್ರಭುಲಿಂಗ ಲೀಲೆಯಲಿ ॥೮॥

ಇದಿರುವರಿತಂದಲ್ಲಮಪ್ರಭು ।
ಪದಪಯೋಜಸ್ಪರುಶನದ ಸಂ ।
ಪದದ ಸತ್ತ್ವದಲಾದುವಗ್ಗದ ಪುಣ್ಯನದಿನಿಕರ ॥
ಮುದದಲೆಡೆಗೆಯ್ದೆಡೆಗಳೆಲ್ಲವು ।
ಸದಮಲಕ್ಷೇತ್ರಂಗಳಾದುವು ।
ವಿದಿತವೆಮ್ಮಯ ಗುರು ಗುಹೇಶ್ವರಲಿಂಗ ಲೀಲೆಯಲಿ ॥೯॥

ನಿಧಿಯ ಚಿಂತಾಮಣಿಯ ದಿವ್ಯೌ ।
ಷಧಿಯ ಪರುಷದ ಕಣಿಯ ಸುಲಲಿತ ।
ಸುಧೆಯ ಬಿಲಗಳ ಸಿದ್ಧರಸ ಪಾದುಕೆಯನಂಜನವ ॥
ನಿಧಿ ನಿಧಾನದ ವಸ್ತುಗಳ ತ ।
ಮ್ಮಿದಿರಲರಸುವ ಸಾಧಕರ ತವ ।
ನಿಧಿಯೆನಿಪ ಶ್ರೀಗಿರಿಯ ಕಂಡನು ಬರುತ ಪ್ರಭುರಾಯ ॥೧೦॥

ನಡೆವ ಲತೆಗಳು ನಗುವ ಗಿಡುಗಳು ।
ನುಡಿವ ಶಿಲೆಗಳು ತೇಜದಿಂದುರಿ ।
ಯಿಡುವ ತರುಗಳು ದಿವ್ಯರುಚಿಗಳನೀವ ಗುಲ್ಮಗಳು ॥
ಕುಡಿದೊಡಂತಃಕರಣಶುದ್ಧಿಯ ।
ಕೊಡುವ ಮಡುಗಳು ಜಾತಿವೈರವ ।
ತೊಡದ ಖಗ ಮೃಗ ಮೆರೆದುದಾ ಶ್ರೀಗಿರಿಯ ಶಿಖರದಲಿ ॥೧೧॥

ಏರಿ ನೋಡಲು ಸತ್ಯಲೋಕಕೆ ।
ಹಾರಿಸುವ ಗಿರಿಶಿಖರಗಳು ಮಿಗೆ ।
ಮೀರಿ ಹೊಕ್ಕಡೆ ಸಪ್ತ ಪಾತಾಳದ ಸಘಾಟಿಕೆಯ ॥
ತೋರಿಸುವ ಬಿಂಕದ ಬಿಲಂಗಳು ।
ಸಾರಿ ಸಾಧಕರೇನ ಬಗೆದುದ ।
ಹೇರಿ ಕೊಡುವ ಸುವಸ್ತುವಿರ್ದುವು ಪರ್ವತಾಗ್ರದಲಿ ॥೧೨॥

ಆ ಮಹಾ ಶ್ರೀಗಿರಿಯ ಶಿಖರದೆ ।
ಕಾಮಿತಾರ್ಥವ ಹಡೆವೆನೆಂದು ।
ದ್ಧಾಮತೆಯ ಗೋರಕ್ಷನೆಂಬ ಸಮಸ್ತಸಾಧಕನು ॥
ಪ್ರೇಮದಿಂದಿರುತಿರಲಿಕಾ ದಿನ ।
ವೀ ಮನೋಹರಮೂರ್ತಿಮಯ ನಿ ।
ಸ್ಸೀಮನಲ್ಲಮನಲ್ಲಿಗೆಯ್ತಂದನು ವಿನೋದದಲಿ ॥೧೩॥

ರೋಗಿಯಲ್ಲಿಗೆಯಮೃತವೇ ಮೆ ।
ಯ್ಯಾಗಿ ನಡೆತಂದಂತೆ ಜೀವವಿ ।
ಯೋಗತನುವಿಗೆ ಮುಟ್ಟಿ ಮರುಜೇವಣಿಗೆ ಬಂದಂತೆ ॥
ಮೂಗಗಮಲ ವಚೋವಿಳಾಸತೆ ।
ಯಾಗುದೋರಿಸಿದಂತೆ ಕೃಪೆಯಿಂ ।
ದಾಗಳಾ ಗೋರಕ್ಷನಲ್ಲಿಗೆ ಬಂದ ಪ್ರಭುರಾಯ ॥೧೪॥

ಬರಲಿಕಾ ಪ್ರಭುರಾಯನಡಿಗಳಿ ।
ಗೆರಗಲ್ಲೊಲ್ಲದೆ ಹಮ್ಮಿನಿಂದಲಿ ।
ಬೆರೆತು ಬಿಂಕದ ಬಿಮ್ಮಿನಲಿ ಕೈ ಮುಗಿದು ಶರಣೆಂದು ॥
ಉರುತರಾಸನದಲ್ಲಿ ಮಿಗೆ ಕು ।
ಳ್ಳಿರಿಸಿ ಕೂರ್ಮೆಯಲೊಯ್ಯನೊಯ್ಯನೆ ।
ಪರಿವಿಡಿಯಲಲ್ಲಮಗೆ ಬಿನ್ನೈಸಿದನು ಗೋರಕ್ಷ ॥೧೫॥

ಆವ ಕಡೆಯಿಂ ಬಿಜಯ ಮಾಡಿದಿ ।
ರಾವ ಕಾರಣ ಬಂದ ಬರವೆಮ ।
ಗಾವುದೈ ಬೆಸನೇನು ಹದನ ನಿರೂಪಿಸಾ ಪ್ರಭುವೆ ॥
ನೀವು ಬಹುದೆಮಗತುಳ ಭಾಗ್ಯಫ ।
ಲಾವಳಿಗೆ ಕಾರಣವಲಾ ಮಹ ।
ದೇವ ಎನುತಲಿ ಉಚಿತ ವಚನವ ನುಡಿದ ಗೋರಕ್ಷ ॥೧೬॥

ನುಡಿಯನಾಲಿಸಿ ಕೇಳು ಭಕ್ತಿಯ ।
ಕಡೆಯಲಾವೆಯ್ತಂದೆವೆಮಗೀ ।
ಕಡೆಯ ಮನುಜರ ಮನಕೆ ಕಡೆಯನು ಮಾಡಬೇಕಾಗಿ ॥
ಒಡಲಿನಾಸೆಗೆ ಕುದಿದು ಕೋಟಲೆ ।
ಬಡುವವರ ಕಳವಳವ ಕಳಚಲು ।
ನಡೆದು ಬಂದವರಾವೆಲೈ ಗೋರಕ್ಷ ಕೇಳೆಂದ ॥೧೭॥

ಹೊಸತಲಾ ಲೌಕೀಕದುಚಿತವ ।
ಪಸರಿಸಲು ಪರಮಾರ್ಥವನು ಸೂ ।
ಚಿಸುತಲಿಹನೆಯದಲ್ಲದೆನ್ನನು ಮುನ್ನ ಪರಿಕಿಸದೆ ॥
ಹೆಸರುಗೊಳುತಲಿದಾನೆಯೀತನ ।
ಗಸಣೆ ತಾನೇಯಾದಿನಾಥನ ।
ಬೆಸುಗೆಯಾಗಲು ಬೇಕೆನುತ ಗೋರಕ್ಷನಿಂತೆಂದ ॥೧೮॥

ಎಲೆ ಮಹಾಪುರಷಾ ನಿಧಾನಿಸಿ ।
ತಿಳಿಯೆ ನಿನ್ನಂತಸ್ಥವೆಂಬುದು ।
ನಿಲುಕದೆಮ್ಮಯ ಮತಿಗೆ ನಿನ್ನಯ ರೀತಿ ಹೊಸತಾಗಿ ॥
ಹೊಲಬು ಹುಗದೆಮ್ಮರಿವುಗಿರಿವಿನ ।
ಸಲುಗೆ ಸಲ್ಲದು ಸಾಕು ನಿನ್ನಯ ।
ನೆಲೆಯ ನೀನೇ ಬಲ್ಲೆಯೆಂದನು ಬಳಿಕ ಗೋರಕ್ಷ ॥೧೯॥

ತನ್ನನರಿಯದ ಮಂದಮತಿಗಳಿ ।
ಗಿನ್ನು ಪೆರರಂತಸ್ಥವೆಂಬುದು ।
ಕಣ್ಣು ಕಾಣದ ಕುರುಡ ಕನ್ನಡಿವಿಡಿದ ತೆರನಂತೆ ॥
ನನ್ನ ನಿಜದ ನಿಧಾನವನು ಬಳಿ ।
ಕಿನ್ನು ಕಾಬವರಾರು ಮಾತಿನ ।
ಬಿನ್ನಣಿಗರಿಗೆ ಸಾಧ್ಯವೇ ಗೋರಕ್ಷ ಕೇಳೆಂದ ॥೨೦॥

ಕಾಯವೆಂಬುದು ತಾನು ತಾನೇ ।
ಕಾಯವಾಗಿಹನಿಂತು ತನ್ನೊಂ ।
ದಾಯತದ ತಿಳಿವೆಂಬುದಿದು ಕಾಪಾಲಮಾರ್ಗದಲಿ ॥
ನ್ಯಾಯಧರ್ಮವು ನನ್ನನರಿವ ವಿ ।
ಡಾಯವೆನಗೇನರಿದು ಪ್ರಭುವೇ ।
ಬಾಯನುಡಿಗಳ ಬಲ್ಲಿದರು ನಾವಲ್ಲ ಕೇಳೆಂದ ॥೨೧॥

ಎಲು ತೊಗಲು ಮಲ ಮೂತ್ರ ನೆತ್ತರ ।
ಕೊಳಚೆಯಾಗಿಹ ಹೇಸಿಕೆಯ ತನು ।
ಗೊಳೆಯೊಡಲು ತಾನೆಂಬ ಮೂರ್ಖನು ತನ್ನನರಿದಪನೆ ॥
ಸಲುವುದೇ ಕಾಪಾಲಮಾರ್ಗಕೆ ।
ಹಳಿವ ತಹರೇ ಸಂಪ್ರದಾಯದ ।
ನೆಲೆಯನರಿವುದು ಸೂರೆಯೇ ಗೋರಕ್ಷ ಕೇಳೆಂದ ॥೨೨॥

ಮಾಡಲರಿಯದವಂಗೆ ಕೊಳಚೆಯ ।
ಮಾಡವೀ ತನು ತಪ್ಪದ್ಯೈ ದಿಟ ।
ಮಾಡಬಲ್ಲೊಡೆಯೀ ಶರೀರವೆ ರತ್ನವಾಗಿಹುದು ॥
ಖೋಡಿಗಳೆವುದು ಮಾಯೆಗೀಯೆಯ ।
ನೇಡಿಸುವುದಾ ಮಿತ್ತು ಗಿತ್ತುವ ।
ರೂಢಿಯಲಿ ತನುಸಿದ್ಧರಾವೈ ಪ್ರಭುವೇ ಕೇಳೆಂದ ॥೨೩॥

ಎಲೆ ಮರುಳೆ ಮೃದುವಾದ ಮಾಯೆಯ ।
ಬಲೆಯ ಬಲ್ಲಿತ ಮಾಡಿ ಸಾವನು ।
ಗೆಲಿದೆನೆಂದು ನಿರರ್ಥದಲಿ ಹಾರೈಸದಿರು ಬರಿದೆ ॥
ತಿಳಿವೊಡೀ ತನು ತಾನೆ ಕಾಲನ ।
ನಿಳಯ ನೀನಿದ ನಂಬಿ ನುಡಿದರೆ ।
ಪ್ರಳಯ ನಿನ್ನನು ಬಿಡುವುದೇ ಗೋರಕ್ಷ ಕೇಳೆಂದ ॥೨೪॥

ಆದೊಡಿನ್ನೇಳೇಳು ಹಿಡಿ ಹಿಡಿ ।
ಕೈದುವಿದೆ ಕೋ ನನ್ನ ತನುವನು ।
ಹೊಯ್ದು ನೋಡಾ ನೀನು ನಿನ್ನಾಪನಿತು ಸತ್ವದಲಿ ॥
ಕೂದಲೊಳಗೊಂದಿನಿತು ಹರಿಮುರಿ ।
ಯಾದರಕಟಾ ನಾನು ಸಿದ್ಧನೆ ।
ವಾದವೇತಕೆ ದೃಷ್ಟವಿದಲಾ ಪ್ರಭುವೆ ನೋಡೆಂದ ॥೨೫॥

ಕೊಂದು ನೋಡುವುದಿದು ಪರೀಕ್ಷಿಸು ।
ವಂದವೇ ನಾವರಿಯೆವಾಸುರ ।
ಬಂಧಕರ್ಮವನಿದು ಗುಹೇಶ್ವರಲಿಂಗಮತವಲ್ಲ ॥
ಇಂದು ನಿನ್ನ ಶರೀರವಳಿದಡೆ ।
ಮುಂದೆ ಸಿದ್ಧಿಯ ಹಡೆವರಾರೈ ।
ಮಂದಮತಿಗಾನಂಜುವೆನು ಗೋರಕ್ಷ ಕೇಳೆಂದ ॥೨೬॥

ಸಾವು ಬಂದಡೆ ನಾವು ಸಿದ್ಧಿಸಿ ।
ತಾವುದೈ ತನುವಳಿವುದೇ ಶ ।
ಸ್ತ್ರಾವಳಿಗೆ ದಿಟವಣಿಯಬಾರದ ಮಡಕೆಯಡಬಹುದೆ ॥
ಈ ವಿಕಲ್ಪವ ಬಿಟ್ಟು ನಿರ್ಭಯ ।
ಭಾವಭರದಲಿ ಹೊಡೆದು ನೋಡಿ ।
ನ್ನಾವ ಸಂಶಯವೇತಕೆಲೆ ಪ್ರಭುರಾಯ ಹೇಳೆಂದ ॥೨೭॥

ಒಲ್ಲೆವೆಂದೆನಲೇಕೆ ಹುಟ್ಟಿಸ ।
ಬಲ್ಲವನು ಹೊಂದಿಸಿದಡಾತಗೆ ।
ಹೊಲ್ಲವಾವುದು ನಾವು ಸಲಿಸುವೆವೀತನರ್ತಿಯನು ॥
ನಿಲ್ಲದೆರಗಲು ಸತ್ತನಾದಡೆ ।
ಬಲ್ಲಿತಹ ಗೋರಕ್ಷನನು ನಾ ।
ವಿಲ್ಲಿ ಸೃಜಿಸುವೆವೆನುತಲಾ ಪ್ರಭುರಾಯನನುವಾದ ॥೨೮॥

ಹಿಡಿದು ಹಿಂಗದೆ ಬಲಿದು ಝಳಪಿಸಿ ।
ಜಡಿದು ಹೊರಕೈಯಿಂದೆ ಖಣಿಖಟಿ ।
ಲಿಡಲಿಕಾ ಪ್ರಭುವಬ್ಬರಿಸಿ ಬಿರು ಹೊಯಿಲನೆರಗಿದರೆ ॥
ನಡುಗಿದುದು ನೆಲ ಶಿಲೆಗಳನು ಮೈ ।
ಗೊಡಹಿದುದು ಗಿರಿಯೊಂದು ಕೂದಲು ।
ಕಡಿಯದಾ ಗೋರಕ್ಷನಲಿಯೇನೆಂಬೆನಚ್ಚರಿಯ ॥೨೯॥

ಮೋಹದಲಿ ಮಾಯಾಪ್ರಪಂಚಿನ ।
ದೇಹಸಿದ್ಧಿಯ ಪಡೆದೆನೆಂಬೀ ।
ಗಾಹಿನಿಂದಲಿ ವಜ್ರಪಿಂಡಶರೀರ ಫಲಿಸಿದಡೆ ॥
ಊಹಿಸುವಡಾ ಪ್ರಳಯವನು ಸಂ ।
ದೇಹವಿಲ್ಲದೆ ಗೆಲುವೆಯೋ ಸುಡು ।
ದೇಹಸಿದ್ಧಿಯನೆನುತಲಾ ಪ್ರಭು ಖಂಡೆಯವ ಬಿಸುಟ ॥೩೦॥

ಸಿದ್ಧಿಯುಳ್ಳವನಂಗದಲಿ ಖಣಿ ।
ಲೆದ್ದು ಧ್ವನಿ ಹುಟ್ಟುವುದೆ ಹೊಯಿದೊಡೆ ।
ಸಿದ್ಧಿಯೆಂಬುದು ತಿಳಿವೊಡೀ ತೆರನಲ್ಲ ನಂಬದಿರು ॥
ಹೊದ್ದಿತಲ್ಲಾ ಪ್ರಳಯವೀ ಪರಿ ।
ಬದ್ಧ ದೇಹಿಗೆಯಕ್ಕಟಕ್ಕಟ ।
ಸಿದ್ಧತನ ಸಾಮಾನ್ಯವೇ ಗೋರಕ್ಷ ಕೇಳೆಂದ ॥೩೧॥

ಬರಸಿಡಿಲು ಶೀತೋಷ್ಣ ಖಡುಗದ ।
ಬಿರುಬುಹೊಯಿಲಿಗೆ ಕೆಡದೆ ವಜ್ರದ ।
ಬಿರಿಸಿನಂತೆನಿಸಿದ ಶರೀರವು ಸಿದ್ಧಿಯಲ್ಲದಡೆ ॥
ಪೆರತದಾವುದು ಸಿದ್ಧನಾದಡೆ ।
ಕುರುಹದಾವುದು ನೀನು ಬಲ್ಲಡೆ ।
ಬರಿಯ ಮಾತನು ಬಿಟ್ಟು ದಿಟವನು ಪ್ರಭುವ ತೋರೆಂದ ॥೩೨॥

ಹಿಡಿದುಕೋ ಖಂಡೆಯವನಾದಡೆ ।
ಹೊಡೆದು ನೋಡೆಮ್ಮುವನು ಮುಂಗೈ ।
ಮುಡಹಿಗೆನಿತುಳ್ಳನಿತು ನಿನ್ನಯ ಸರ್ವ ಸತ್ವದಲಿ ॥
ಖಡುಗ ಮುಖದಲಿ ಕಾಬುದಲ್ಲದೆ ।
ನುಡಿಯ ನುಣ್ಣಿಸಲೇನುಕಾರಣ ।
ತಡವಿದೇತಕೆ ತಥ್ಯವನು ಗೋರಕ್ಷ ನೋಡೆಂದ ॥೩೩॥

ನೋಡಬೇಕಿನ್ನಾದಡೀತನ ।
ಗಾಡಿಯನು ಸಲೆ ಸಿದ್ಧತನದಾ ।
ರೂಢವನು ಸಾಧಕಗಿದೇ ಮಹನವಮಿಯೆಂದೆನುತ ॥
ನೀಡಿ ನಿಜ ಸರ್ವಾಂಗಸತ್ವದ ।
ಮೋಡಿಯಲಿ ಬಿಡದೆರಗುತಿರಲೀ ।
ಸಾಡಿತವನಸಿಯಮಮ ಪ್ರಭುವಿನ ಬಯಲ ದೇಹದಲಿ ॥೩೪॥

ಸೊಪ್ಪುಳಾಗದು ಕೈದುವಾನದು ।
ಒಪ್ಪವಳಿಯದು ಜಂತ್ರಜೋಕೆಗೆ ।
ತಪ್ಪುದೋರದು ಹೊಡೆಯೆ ಹಾರುವ ಹದ್ದಿನಂದದಲಿ ॥
ನಿಪ್ಪಸರದಸಿ ಬಯಲ ದೇಹಿಯ ।
ನಪ್ಪಲರಿಯದಿದೇನು ಚೋದ್ಯವೊ ।
ತಪ್ಪದೀತನೆ ಗುರುವೆನುತ ಗೋರಕ್ಷನಿಂತೆಂದ ॥೩೫॥

ಅಣಕವಲ್ಲಿದು ತನ್ನ ಹೊಯಿದಡೆ ।
ಖಣಿಲೆನುತ ಖಂಡೆಯಕೆ ಮಾರಾಂ ।
ತಣೆದುದೆನ್ನಸಿ ನಿನ್ನ ಹೊಯಿದೊಡೆ ಬಯಲ ಹೊಯಿದಂತೆ ॥
ನುಣುಚಿ ನುಣ್ಣಗೆ ಕಡೆಗೆ ಕಂಡೆಯ ।
ಜುಣುಗಿ ಹೋಯಿತಿದಾವ ಮಹಿಮೆಯ ।
ಗುಣವೊ ನಮಗಿದನರಿಯಬಾರದು ಪ್ರಭುವೆ ಹೇಳೆಂದ ॥೩೬॥

ಕಾಯ ಬಲಿದಡೆ ಮಾಯೆ ಬಲಿವುದು ।
ಮಾಯೆ ಬಲಿದಡೆ ಛಾಯೆ ಬಲಿವುದು ।
ಕಾಯ ಮಾಯಾ ಛಾಯೆ ಬಲಿದಡೆ ಸಿದ್ಧತನವಲ್ಲ ॥
ಕಾಯ ಮಾಯಾ ಛಾಯದಾಗಿನ ।
ದಾಯವನು ಕಳೆದುಳಿದನಾದಡೆ ।
ರಾಯನಾತನು ಸಿದ್ಧರಲಿ ಗೋರಕ್ಷ ಕೇಳೆಂದ ॥೩೭॥

ಆದಿನಾಥನೆ ತಾನಿದೊಂದು ವಿ ।
ನೋದವೇಷವ ಧರಿಸಿ ತನ್ನಯ ।
ಸಾಧಕರ ಸಂಕಲ್ಪಸಿದ್ಧಿಯನೀಯಬೇಕೆಂದು ॥
ಮೇದಿನಿಗೆ ಮೆಯ್ಗಾಣಿಸಿದನಿ ।
ನ್ನಾದುದಾನರಸುವ ಮನೋರಥ ।
ವೆಯ್ದೆ ಫಲಸಿದುದೆನುತಲಾ ಗೋರಕ್ಷನಿಂತೆಂದ ॥೩೮॥

ಅರಿಯೆ ನಾನಿನ್ನೆಬರ ನಿನ್ನಯ ।
ತೆರನನೆನ್ನಯ ಮತ್ತತನದಲಿ ।
ಬೆರೆತುಕೊಂಡಾನಿರ್ದೆನೆನ್ನದು ಸರ್ವ ತಪ್ಪೆನುತ ।
ನೆರೆ ಶರೀರವ ನೀಡಿ ಕೈಮುಗಿ ।
ದೆರಗಿದನು ಭಯಭಕ್ತಿಭಾರದ ।
ಲೊರಗುವಂತಾ ಪ್ರಭುವಿನಡಿಯೊಳು ಬಳಿಕ ಗೋರಕ್ಷ ॥೩೯॥

ಬಿಸಿಯ ಹದನನು ತಿಳಿದು ಲೋಹವ ।
ಬೆಸುವವೊಲು ಪರಿಪಾಕಭಾವದ ।
ಹಸನನರಿದಿನ್ನೀತಗುಪದೇಶಿಸುವೆನೆಂದೆನುತ ॥
ಒಸೆದು ಹಣೆವಿಡಿದೆತ್ತಿ ಕರುಣವ ।
ಪಸರಿಸುತ ಗೋರಕ್ಷನನು ಮ ।
ನ್ನಿಸಿದನೆಮ್ಮಯ ಗುರು ಗುಹೇಶ್ವರಲಿಂಗ ಲೀಲೆಯಲಿ ॥೪೦॥

ನೋಡಿದರೆ ಮದಮತ್ಸರಗಳೆ ।
ದ್ದೋಡಿದುವು ಕರುಣದಲಿ ಗುರು ಮಾ ।
ತಾಡಿದಡೆ ಮಗ್ಗಿದುದು ಮನಸಿನ ಮರವೆ ನಿಮಿಷದಲಿ ॥
ನೀಡಿ ಕೈಮುಟ್ಟಿದಡೆ ಕಾಯದ ।
ಖೋಡಿ ಹೋಯಿತು ವಿಮಲ ತನು ಮನ ।
ಮೂಡಿತಾ ಗೋರಕ್ಷನಲಿ ಪ್ರಭುಲಿಂಗಲೀಲೆಯಲಿ ॥೪೧॥

ಬಳಿಕಲಾ ಗೋರಕ್ಷನತಿ ಕಿಂ ।
ಕಲವಂಗೀಕರಿಸಿ ಮನದೊಳು ।
ನಲಿದು ನೋಡುತ ರೋಮಪುಳಕದ ಗುಡಿಯ ನೆಗಹುತಲಿ ॥
ಎಲೆ ಮಹಾಘನ ಮಹಿಮ ಕರುಣಾ ।
ಜಲಧಿಯೇ ನಾನಾವ ಗತಿಯಲಿ ।
ನಿಲುವೆನೆನುತಾ ಪ್ರಭುವಿಗೆಂದನು ಭಕ್ತಿಯುಕ್ತಿಯಲಿ ॥೪೨॥

ಆದೊಡಾಲಿಸಿ ಕೇಳು ಕಠಿಣತೆ ।
ಯಾದ ತನುವಿದು ಕಾಯಸಿದ್ಧಿಯ ।
ಭೇದವಿಲ್ಲದೆ ನಿತ್ಯಮುಕ್ತಿಯ ಸಿದ್ಧಿಯಿಂತಲ್ಲ ॥
ಈ ದುರಾಶೆಯ ಹೋದ ಹೊಲಬಿನ ।
ಹಾದಿಯನು ಹುಗದಾ ಗುಹೇಶ್ವರ ।
ಪಾದಕೆರಗಲು ಸಿದ್ಧನಹನೈ ಕಂದ ಕೇಳೆಂದ ॥೪೩॥

ನಂಬುವಡೆ ಹೇಳಾ ಗುಹೇಶ್ವರ ।
ನೆಂಬನಾವನು ವಾಸಿಸಲು ತನ ।
ಗಿಂಬದಾವುದು ಭಜಿಸಲೆಂತಾತನನು ಹೇಳೆನಲು ॥
ಹಂಬಲಿಸಲೇಕಾ ಗುಹೇಶ್ವರ ।
ನೆಂಬವನೆ ನಾನಿದಕೆ ಸಂಶಯ ।
ವೆಂಬುದಿಲ್ಲೈ ಸತ್ಯವಿದು ಗೋರಕ್ಷ ಕೇಳೆಂದ ॥೪೪॥

ಗುಹೆಯೆಲ್ಲೈ ಕೇಳಾತ್ಮನಂತಾ ।
ಗುಹೆಗೆ ಪತಿಯಾನೆನ್ನ ನಾಮದ ।
ಮಹಿಮೆ ತಾನು ಗುಹೇಶ್ವರಾಂಕಿತವಾದ ಕತದಿಂದೆ ॥
ಮಹಿಯ ಲೌಕಿಕರಲ್ಲಿ ಮರಹಿಸಿ ।
ವಿಹಿತವೆಂಬಂತಿರೆ ಗುಹೇಶ್ವರ ।
ಸಹಜನಾಮವ ನಟಿಸಿದೆನು ನಾನೆನ್ನ ಲೀಲೆಯಲಿ ॥೪೫॥

ಅದು ನಿಮಿತ್ತದಲಖಿಳ ಜೀವರ ।
ಹೃದಯವಲ್ಲಭನೈ ಗುಹೇಶ್ವರ ।
ನದರ ಭೇದವ ತಿಳಿದು ಸೋಹಂಭಾವ ಬುದ್ಧಿಯಲಿ ॥
ಸದಮಲಜ್ಞಾನೈಕನಾದರೆ ।
ನಿಧಿಯ ಕಾಬನು ನಿತ್ಯಮುಕ್ತಿಯ ।
ಪದಕೆ ಪತಿಯಹನಾತನೈ ಗೋರಕ್ಷ ಕೇಳೆಂದ ॥೪೬॥

ಜಾಣ ನುಡಿಗಳ ಬಿಡು ಗುಹೇಶ್ವರ ।
ನೀನೆಯಾದಡೆ ನಿನ್ನ ಕೈಯಲಿ ।
ದೇನು ಕುರುಹಿನ ಲಿಂಗವಿದೆಯಿದಿರಿಟ್ಟು ಬೇರೆನಿಸಿ ॥
ನೀನು ತಾನಾಗಿದ್ದ ಬಳಿಕಲಿ ।
ದೇನು ಕಾರಣ ಕರ್ಮಭಕ್ತಿ ।
ಜ್ಞಾನದಾಯತದಿಂಗಿತಂಗಳು ಗುರುವೆ ಹೇಳೆಂದ ॥೪೭॥

ಅಂಗವಿಸಿ ತಾನೀ ಪ್ರಕಾರದ ।
ಲಿಂಗನಿಷ್ಠೆಯಲಖಿಳರಿಗೆ ಮು ।
ಕ್ತ್ಯಂಗನೆಯ ಮದುವೆಯನು ಮಾಡುವೆನೆಂದು ಕರುಣದಲಿ ॥
ಹಿಂಗದೀ ಪರಿ ನಟಿಸಿದರೆಯೆನ ।
ಗಂಗಲಿಂಗಕೆ ಭೇದ ಭಾವದ ।
ಸಂಗವುಂಟೆಂದೆಂಬರೇ ಗೋರಕ್ಷ ಕೇಳೆಂದ ॥೪೮॥

ತೆತ್ತಿಸಿದ ಶಿವಲಿಂಗ ಭಕ್ತಿಯ ।
ಹೆತ್ತವೊಲು ವಚನಗಳ ನಾನೆಂ ।
ಬತ್ತು ಕೋಟಿಯ ಹಾಡಿದೆನು ಹಲವಂದ ಛಂದದಲಿ ॥
ತಥ್ಯವನು ಹೇಳುವಡೆ ಭಕ್ತರ ।
ಚಿತ್ತದಲಿ ಸುಜ್ಞಾನ ಬೀಜವ ।
ಬಿತ್ತಲೀ ಪರಿ ನಟಿಸಿದೆನು ಗೋರಕ್ಷ ಕೇಳೆಂದ ॥೪೯॥

ನಾನು ಮಾಡಿದೆನೆಂಬುದೊಂದನು ।
ಮಾನವನು ನಾ ನಟಿಸದಿದ್ದರೆ ।
ತಾನದೆಲ್ಲಿಯದೈ ಧರಿತ್ರಿಯ ಮೇಲೆ ಶಿವಭಕ್ತಿ ॥
ಮಾನವರಿಗುಪಕಾರಿಯಾಗಿರ ।
ಲಾನು ತೋರಿದೆನೀ ಪ್ರಕಾರವ ।
ನಾನು ನಿರ್ಲೇಪನು ಕಣಾ ಗೋರಕ್ಷ ಕೇಳೆಂದ ॥೫೦॥

ಆವ ಪರಿಗಳಲಾರ ಬುದ್ಧಿಯ ।
ಭಾವವಿಹುದವರವರಿಗಾ ಪರಿ ।
ಭಾವವನು ಶುದ್ಧೈಸಿ ಸಮ್ಯಗ್‌ಜ್ಞಾನ ಜ್ಯೋತಿಯನು ॥
ತೀವಿ ಸುಖಿಗಳ ಮಾಡಲೋಸುಗ ।
ವೀ ವಿನೋದದಲಿದ್ದೆನಿಂತು ನಿ ।
ರಾವಲಂಬನು ನಾನೆಲೈ ಗೋರಕ್ಷ ಕೇಳೆಂದ ॥೫೧॥

ಅರಿಯದವರಿಗೆ ಅಂಗಲಿಂಗದ ।
ತೆರದಲಿಹೆ ನಾನೆನ್ನ ನೆಟ್ಟನೆ ।
ಯರಿದ ಮಹಿಮಗೆ ಸಚ್ಚಿದಾನಂದಸ್ವರೂಪಾನು ॥
ಬರಿಯ ಮಾತಲ್ಲಾದಡಿದ ಕೋ ।
ಕುರುಹು ತೆರಹಿಲ್ಲಂಬ ಪರಿಯನು ।
ನೆರೆ ಪರೀಕ್ಷೆಯ ಕೊಂಬುದೆಲೆ ಗೋರಕ್ಷ ಕೇಳೆಂದ ॥೫೨॥

ತೊಳಪ ತೇಜದ ಮುಗಿಲು ಮಿಂಚನು ।
ಝಳುಪಿಸುವವೊಲು ಕೈಯ ಕುರುಹಿನ ।
ಬೆಳಗ ಬಿದಿರಿಸಲುದರರಂಗದಲೈಕ್ಯವಾಗಿರಲು ॥
ಸೆಳೆದು ತುಡುಕಲು ಕೈಗೆ ಬಯಲಿನ ।
ಹೊಳಹದಾಗಿರೆ ಕಂಡು ಗುರುವಿನ ।
ನಿಲುಕಡೆಗೆ ಬೆರಗಾಗುತಿರ್ದನು ಬಳಿಕ ಗೋರಕ್ಷ ॥೫೩॥

ಸಾಕು ಸಾಕಿನ್ನೆಲ್ಲಿ ತನಕ ವಿ ।
ವೇಕತನದಾಳಾಪವೆನಗಿ ।
ನ್ನೇಕೆ ನಿಮ್ಮಯ ಮಹಿಮೆಯನು ನೋಡುವಡೆಯೆನ್ನಳವೆ ॥
ಕಾಕುತನಗಳು ಹೋಗಲೆನಗೆ ನಿ ।
ರಾಕುಳ ಶ್ರೀಹಸ್ತದಂಗದ ।
ಜೋಕೆಯನು ಕೃಪೆ ಮಾಡಬೇಹುದು ಪ್ರಭುವೆ ಕೇಳೆಂದ ॥೫೪॥

ಗುರುವೆ ತಾನೆಂಬಂತೆ ಶಿಷ್ಯನು ।
ಗುರುವ ಚೆನ್ನಾಗಿರೆ ಪರೀಕ್ಷಿಸಿ ।
ಗುರುಪದವ ಬಳಿಕಿತ್ತು ಶಿಷ್ಯತ್ವವನು ತಾ ಹಿಡಿದು ॥
ಗುರುಕುಮಾರಕನಹನು ದಿಟವಾ ।
ಪರಿಯಲೆನ್ನನು ಪರಿಕಿಸಿದೆ ಸ ।
ತ್ಪುರುಷನಹುದೋ ನೀನೆ ದಿಟ ಗೋರಕ್ಷ ಕೇಳೆಂದ ॥೫೫॥

ಲಕ್ಷಿಸಿದನೀ ಪರಿಯಲಾ ಗೋ ।
ರಕ್ಷನಲಿ ಸಾಧಕತನಂಗಳ ।
ಲಕ್ಷಪರಿಯಲಿ ಬಳಿಕಲಾತನ ನೋಡಿ ಕರುಣದಲಿ ॥
ರಕ್ಷಿಸುವೆನೆಂದೆನುತ ಶೂನ್ಯದ ।
ಲಕ್ಷ್ಯವನು ದೀಕ್ಷೆಯನು ಮಾಡಿದ ।
ಮೋಕ್ಷಮಾರ್ಗದಲಿಂದು ಗೋರಕ್ಷಂಗೆ ಪ್ರಭುರಾಯ ॥೫೬॥

ಪೊಂಗೆ ಪರಿಮಳವಿನಿದೆನಿಪ ಕ ।
ಬ್ಬಿಂಗೆ ತನಿವಣ್ಣಾದ ತೆರದಲಿ ।
ಹಿಂಗದಾ ಗೋರಕ್ಷಗೀ ಪ್ರಭುಲಿಂಗನೊಲವಾಗೆ ॥
ಮಂಗಳವೆ ನೆಲೆಯಾಯ್ತು ಮಾಯೆಯ ।
ಹಂಗು ಹಿಂಗಿತು ರಾಜಯೋಗದ ।
ಸಂಗ ಸಾರಿತು ಬಳಿಕಲಾ ಗೋರಕ್ಷನಾಥಂಗೆ ॥೫೭॥

ಬಿದ್ದು ಹೋಯಿತು ಮನದ ಮಾಯಾ ।
ಬದ್ಧಭವಿತನ ನಿಮಿಷಮಾತ್ರಕೆ ।
ಹೊದ್ದಿ ಹೊರೆಯೇರಿದುದು ಸಮ್ಯಗ್‌ಜ್ಞಾನಸಾರಾಯ ॥
ಶುದ್ಧ ಸೂಕ್ಷ್ಮಸ್ಥೂಲಕಾಯವ ।
ಮೆದ್ದು ಕಾರಣಕಾಯದಲಿ ತಾ ।
ನಿದ್ದ ನಿಜದ ವಿಳಾಸದಲಿ ಗೋರಕ್ಷ ಜಗವರಿಯೆ ॥೫೮॥

ಕೀಡಿ ತುಂಬಿಯ ಬಿಡದೆ ನೆನೆದೊಡೆ ।
ನೋಡಲಾಕ್ಷಣ ತುಂಬಿಯಾಗದೆ ।
ರೂಢಿಯರಿಯಲು ವಜ್ರತನುಗೋರಕ್ಷ ನಿಮಿಷದಲಿ ॥
ಮಾಡಿಕೊಂಡನು ಭಕ್ತಿಯಲಿ ಕೈ ।
ಗೂಡಿ ವಿಮಲಾಕಾಶಕಾಯದ ।
ಜೋಡಣೆಯನೆಮ್ಮಲ್ಲಮಪ್ರಭುಲಿಂಗಲೀಲೆಯಲಿ ॥೫೯॥

**ಅಂತು ಗತಿ ೧೬ಕ್ಕಂ ಪದನು ೮೪೯ ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೨೦
# ಪಾವನವ ಮಾಡಿದನು ಸರ್ವರನು

**ವಚನ**

ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ
ಗಳಿಗೆಯ ಬೇಟವ ಮಾಡಿಹೆನೆಂಬ ಪರಿಯ ನೋಡಾ
ತನ್ನ ನಿಕ್ಕಿ ನಿಧಾನವ ಸಾಧಿಸಿಹೆನೆಂಬ ಬಿನ್ನಾಣ ತಪ್ಪಿತ್ತು ಗುಹೇಶ್ವರಾ. ॥೧॥

ಜಗವ (ಜವನ) ಕದ್ದ ಕಳ್ಳನು ಅಗಲಿ ಮಿಕ್ಕು ಹೋದರೆ
ಗಗನ ಅಗಲಕ್ಕೆ ಹಬ್ಬಿತ್ತು ಅಲ್ಲಲ್ಲಿಗೆ ನೋಡಲು
ಶರಣರ ಸಂಗವನರಸುವರೆಲ್ಲರು ಅಲ್ಲಲ್ಲಿಗೆ ನೋಡಲು
ಸಾಧಕರೆಲ್ಲರು ಸಾಧಿಸಹೋಗಿ
ಆ ಭೇದವನರಿಯದೆ ಕೆಟ್ಟರು ಗುಹೇಶ್ವರಾ. ॥೨॥

ದೇಶ ಗುರಿಯಾಗಿ ಲಯವಾಗಿ ಹೋದವರ ಕಂಡೆ
ತಮಂಧ ಗುರಿಯಾಗಿ ಲಯವಾಗಿ ಹೋದವರ ಕಂಡೆ
ಕಾಮ ಗುರಿಯಾಗಿ ಬೆಂದು ಹೋದವರ ಕಂಡೆ
ನೀ ಗುರಿಯಾಗಿ ಹೋದವರನಾರನೂ ಕಾಣೆ ಗುಹೇಶ್ವರಾ. ॥೩॥

**ಸೂಚನೆ**

ಸಾಧಕರು ಮೊದಲಾದ ವಿಷಯ ।
ವ್ಯಾಧಿಗತರಿಗೆ ತನ್ನ ಕರುಣಾ ।
ಮೋದಸುಧೆಯನು ಸುರಿದನೆಮ್ಮಯ ಗುರು ಗುಹೇಶ್ವರನು ॥

ಜ್ಞಾನವನು ಗೋರಕ್ಷಗನುಸಂ ।
ಧಾನವೆನಿಸಿದ ಬಳಿಕ ತನ್ನ ಮ ।
ನೋನುರಾಗದಲಲ್ಲಮಪ್ರಭುಲಿಂಗ ಲೀಲೆಯಲಿ ॥
ಏನ ಮಾಡಿದನೆಂಬ ಹದನ ನಿ ।
ಧಾನಿಸುವುದು ಶಿವೈಕ್ಯಭಕ್ತಿಯ ।
ಮಾನನಿಧಿಗಳು ಮುದದಲೀ ಪ್ರಭುಲಿಂಗಲೀಲೆಯಲಿ ॥೧॥

ಪ್ರೀತಿಯಲಿ ಗೋರಕ್ಷಗನುಪಮ ।
ನಾಥ ಪದವಿಯನಿತ್ತು ಬಳಿಕೊಲಿ ।
ದಾತನಲಿ ಗುರುಪೂಜೆನಯನು ಕೈಕೊಂಡು ಕರುಣದಲಿ ॥
ಭೂತಳದಲಜ್ಞಾನಿಗಳನಾ ।
ನೋತು ಸುಜ್ಞಾನಿಗಳ ಮಾಡುವೆ ।
ನಾತಗಳನೆಂದೆನುತಲಾ ಪ್ರಭುರಾಯ ಬರುತಿರ್ದ ॥೨॥

ಬರುತ ಬರುತಲಿ ತನ್ನ ಸಾಧಿಸಿ ।
ಕರುಣವನೆ ಸಲೆ ಪಡೆಯಬೇಕೆಂ ।
ದಿರುತಲಿಹ ಸಾಧಕತಪೋಧನರಾಶ್ರಮವ ಕಂಡು ॥
ಹರುಷದಲಿ ಸುಜ್ಞಾನಧರ್ಮವ ।
ನೊರೆವೆನಿನ್ನೀತಗಳಿಗೆನುತಲಿ ।
ಗುರು ಗುಹೇಶ್ವರಲಿಂಗ ಬಂದನು ತನ್ನ ಲೀಲೆಯಲಿ ॥೩॥

ಸಾಧನೆಗೆ ನಾನಾಪ್ರಕಾರಗ ।
ಳಾದ ಬಗೆಗಳನೆಡೆವಿಡದೆ ಬೆಸ ।
ಲಾದ ಮನಮಾಣಿಕವ ತಮ್ಮ ಶರೀರಶರಧಿಯಲಿ ॥
ಸಾಧಿಸಿಯೆ ಶಿವಸಾಣೆಯಲಿ ಸಲೆ ।
ತೇದು ಮಿಗೆ ಸುಜ್ಞಾನಕಾಂತಿಯ ।
ನೆಯ್ದಿಸುವುದನು ಪೇಳ್ದನಾ ಪ್ರಭು ತನ್ನ ಭಕ್ತರಿಗೆ ॥೪॥

ಮಿರುಪ ಮನವೆಂದೆಂಬ ಮಣಿಯನು ।
ಕೊರೆದು ನಿಷ್ಠಾವಜ್ರಸೂಚಿಯ ।
ಲುರುವ ಜೀವಾನಿಲನದಾರವ ಹಿಡಿದು ಬೆಂಬಿಡದೆ ॥
ನೆರೆ ಶಿಖಾರತ್ನವನು ಮಾಡಿಯೆ ।
ಮೆರೆವ ನಿತ್ಯಾನಂದಪದವಿಯ ।
ನಿರಿಗೆಯನು ನಿಯಮಿಸಿದನಾ ಪ್ರಭುಲಿಂಗ ಭಕ್ತರಿಗೆ ॥೫॥

ಲೆಪ್ಪವಿಲ್ಲದೆಯೂರ್ಧ್ವಬಿಂದುವೆ ।
ನಿಪ್ಪ ಪಶ್ಚಿಮವಾಹಿನಿಯಲಿಂ ।
ತೊಪ್ಪದಿಂದಲಿ ಮಿಂದು ಮೀರಿದ ಮೂಲನಾದವನು ॥
ಅರ್ಪಿತ ಪ್ರಾಣಸ್ವರೂಪದ ।
ಸುಪ್ರಭೆಯಲಿಹ ಸುಖವನಿತ್ತನು ।
ತಪ್ಪದಾ ಸಾಧಕತಪೋನಿಧಿಗಳಿಗೆ ಪ್ರಭುರಾಯ ॥೬॥

ಬಳಿಕಲಾ ಸಾಧಕತಪೋನಿಧಿ ।
ಗಳಿಗೆ ನಿರುಪಮ ನಿಃಪ್ರಪಂಚಿನ ।
ನೆಲೆಯ ನೆಟ್ಟನೆ ಕೊಟ್ಟು ತಾನಲ್ಲಿಂದ ನಡೆಗೊಂಡು ॥
ತಳಿತ ತರುಲತೆ ಗುಲ್ಮತೃಣಸಂ ।
ಕುಲದಿ ಚರಿಸುವ ಖಗಮೃಗದ ಕಳ ।
ಕಳದ ಕಾನನಮಧ್ಯದಲಿ ಬರುತಿರ್ದ ಪ್ರಭುರಾಯ ॥೭॥

ಕೊಲುವುದನೆ ಸಲೆ ಕೊಂದು ಹಸಿವಿನ ।
ಹೊಲೆಯನಳಿಯದೆ ನಾಡನಾಯ್ಗಳ ।
ಬಳಿವಿಡಿದು ನಾನಾ ಪ್ರಕಾರದ ಜೀವಜಾಲವನು ॥
ಅಳಿದು ಹೊಟ್ಟೆಯ ಹೊರೆದು ದುರ್ಗತಿ ।
ಗಿಳಿವ ಲುಬ್ಧಕನನ್ನು ಕಾನನ ।
ದೊಳಗೆ ಕಂಡನು ಕರುಣದಿಂದಾ ಪ್ರಭು ಸಮೀಪದಲಿ ॥೮॥

ತನ್ನ ಕಣ್ಗಿದಿರಾದ ಮೂಢನ ।
ನಿನ್ನು ತಿಳುಹದೆ ನಾನು ಹೋಹುದು ।
ನನ್ನ ಹೆಮ್ಮೆಗೆ ಕೊರತೆಯೆನುತ ಕಿರಾತಗೊಲವಿನಲಿ ॥
ತನ್ನ ಕರುಣದ ಸಿದ್ಧರಸ ಕಾ ।
ರ್ಬೊನ್ನಿನಂದದ ಖಳನನೊಳ್ಳಿಹ ।
ಹೊನ್ನ ಮಾಡಲೆ ಬೇಹುದೆನುತಾ ಪ್ರಭು ನಿರೀಕ್ಷಿಸಿದ. ॥೯॥

ನೆಲಸಿದಾಹಂಕಾರಮೃಗವನು ।
ಸುಲಲಿತಾಂತಃಕರಣಶುನಕನ ।
ಬಳಿಸಲಿಸಿ ಮಾರುತಶರಾಸನವನು ದೃಢೀಕರಿಸಿ ॥
ಚಲಿಸದೇಕೋಭಾವಶರದಲಿ ।
ಕೊಲುವ ಭೇದವನಾತ್ಮ ತೃಪ್ತಿಗೆ ।
ನಿಲುವ ನಿರಿಗೆಯ ಪೇಳ್ದನಾ ಪ್ರಭು ಬೇಂಟೆಕಾರಂಗೆ ॥೧೦॥

ಉಸುರವಲೆ ಮೈಗಾಡು ಬುದ್ಧಿಯ ।
ಬೆಸುಗೆ ಕೈ ನಿಶ್ಚಲದ ಮನವೇ ।
ಮಿಸುಪ ಕಂಗಳು ತಿಳಿವೆ ಲುಬ್ಧಕನಾಗಿ ಹಮ್ಮೆಂಬ ॥
ಅಸಮ ಖಗಮೃಗಜಲಚರವನೊಂ ।
ದಿಸುತ ಸುಜ್ಞಾನಾಗ್ನಿಯಲಿ ಪಚ ।
ನಿಸಿಯೆ ದಣಿಯುಣಕಲಿಸಿದನು ಪ್ರಭು ಬೇಂಟೆಕಾರಂಗೆ ॥೧೧॥

ಈ ಪರಿಯಲಾ ಸರ್ವಜೀವದ ।
ಯಾಪರವನುಪದೇಶಿಸಿಯೆ ನಿ ।
ರ್ಲೇಪದಲಿ ನಿಲಿಸಿದ ಪುರಾತನನಾ ಕಿರಾತಂಗೆ ॥
ಆ ಪರವ ನೆರೆಯರುಪಿ ನಿತ್ಯ ।
ಶ್ರೀಪದವನೊಲಿದಿತ್ತು ತೆರಳಿದ ।
ನಾ ಪರಬ್ರಹ್ಮಸ್ವರೂಪ ಪ್ರಭು ವಿನೋದದಲಿ ॥೧೨॥

ಕಾಮಿನಿಯರಿಗೆ ಸೋತು ಕಾಮನ ।
ಸೀಮೆಯಲಿ ಸಲೆ ಸತ್ತು ಹುಟ್ಟುವ ।
ಕಾಮಿಗಳಿಗಾ ಕುಂಡಲೀಶಕ್ತಿಯ ಮಹಾರತಿಯ ॥
ನೇಮಿಸಿಯೆ ನಿರ್ಮಾಯದಲಿ ನಿ ।
ಸ್ಸೀಮನಿತ್ಯಾನಂದಸುಖದು ।
ದ್ದಾಮತೆಯನೊಲಿದಿತ್ತನಾ ಪ್ರಭುಲಿಂಗ ಕೆಲಬರಿಗೆ ॥೧೩॥

ರಸದ ಸಿದ್ಧಿಯ ಸಸಿನೆಯರಿಯದೆ ।
ವ್ಯಸನವಿಧಿಯಲಿ ಸತ್ತುಹುಟ್ಟುವ ।
ಪಶುಗಳಿಗೆ ಬಳಿಕಂತರಂಗದ ಬಿಂದುವೆಂದೆಂಬ ॥
ರಸವ ಕಟ್ಟಿ ಭಯಂಗಳನು ವ ।
ರ್ಜಿಸುವ ಪರಿಯನು ಕೆಲಬರಿಗೆ ಬೋ ।
ಧಿಸಿದನೆಮ್ಮಯ ಗುರು ಗುಹೇಶ್ವರಲಿಂಗಲೀಲೆಯಲಿ ॥೧೪॥

ಬಿಂದುವೇ ರಸವೌಷಧಿಯೆ ನಿ ।
ಷ್ಪಂದವಾಯು ಮನಸ್ಸು ಮೂಷಿಕೆ ।
ಸಂದ ಮಣಿಪೂರಕವೆ ಕಿಚ್ಚುನ್ಮನಿಯೆ ರಸಘಟಿಕೆ ॥
ಮುಂದೆ ರುದ್ರೇಶ್ವರ ಸದಾಶಿವ ।
ರಿಂದ ಮೀರಿದ ಸುಖವೆ ಸಿದ್ಧಿಗ ।
ಳೆಂದು ನಿಯಮಿಸಿ ಕೆಲರನಾ ಪ್ರಭು ಸಿದ್ಧರೆನಿಸಿದನು ॥೧೫॥

ಏನ ಹೇಳುವೆನೀ ಪರಿಯಲ ।
ಜ್ಞಾನಿಗಳು ಹಲಬರಿಗೆ ಸಲೆ ಸು ।
ಜ್ಞಾನಮಾರ್ಗವ ತೋರಿ ಸದ್ಯೋನ್ಮುಕ್ತರೆನಿಸುತಲಿ ॥
ತಾನೆ ತನ್ನಯ ಕರುಣದಿಂದಲಿ ।
ಮಾನವರ ಮನದಂಧಕಾರಕೆ ।
ಭಾನುವಾದನು ಗುರು ಗುಹೇಶ್ವರಲಿಂಗಲೀಲೆಯಲಿ ॥೧೬॥

ಬರುತ ಬರುತೀ ಪರಿಯಲುತ್ತರ ।
ಧರಣಿತಳದಲಿ ಋಷಿಗಳಾಶ್ರಮ ।
ವಿರಚಿಸುವ ತನಿರಸದ ಪರಿಪಾಕದ ಫಲಾವಳಿಯ ॥
ತರುಲತಾಳಿಯ ತಿಳಿಗೊಳಂಗಳ ।
ವರ ನಿನಾದದ ವಿಹಗವಿತತಿಯ ।
ನೆರವಿಗಳಲೊಪ್ಪುವ ಮಹಾಕಾನನವ ಪ್ರಭು ಕಂಡ ॥೧೭॥

ಕಾಲಕಾಲದ ನಿತ್ಯಕರ್ಮವ ।
ಮೇಳವಿಸಿ ಬಳಿಕಾ ಕ್ಷುಧಾಗ್ನಿ ।
ಜ್ವಾಲೆಗಾಹುತಿಗಾಗಿ ಬಹ ಭಿಕ್ಷುಕಮುನೀಶ್ವರರ ॥
ವೇಳೆಯರಿದುಚಿತದಲಿ ಸಂಫಲ ।
ದಾಳಿಗಳನೊಲಿದೀವ ತರುಲತೆ ।
ಯೋಳಿ ವನದಲಿ ಮೆರೆವುತಿರ್ದುವು ಕೂಡೆ ಕತ್ತಲಿಸಿ ॥೧೮॥

ತೃಷೆಯ ಕಳೆವರು ಬನ್ನಿ ಹೊಟ್ಟೆಯ ।
ಹಸಿವನಳಿವರು ಬನ್ನಿ ಬಟ್ಟೆಯ ।
ಬಿಸಿಲಿನಲಿ ಧೂಪಿಸಿದ ಪಥಿಕರು ಬನ್ನಿಯೆಂದೆನುತ ॥
ಹೊಸತೆನಿಪ ತನಿವಣ್ಣ ತರುಗಳ ।
ಪಸರಿಸಿದ ಕೊಂಬಿನಲಿ ಕುಳ್ಳಿತು ।
ವುಸುರಿಕೊಡುವಂತುಲಿದುವಲ್ಲಿಯ ಶುಕಪಿಕಾಳಿಗಳು ॥೧೯॥

ಆರು ಬೇಡಿದವರಿಗೆ ಬೇಡಿದ ।
ಭೂರುಹಂಗಳ ಫಲಗಳಿವೆಯೆಂ ।
ದೋರಣಿಸಿ ಕರೆಕರೆವವೊಲು ನಾನಾ ಪ್ರಕಾರದಲಿ ॥
ಸಾರವೆನಿಪ ನಿನಾದಗಳು ಸಲೆ ।
ಪೂರವಿಸಲಾ ವನದೊಳಗೆ ಗಂ ।
ಭೀರಸ್ವರದಲಿ ಕೂಗುತಿರ್ದುವು ಕೂಡೆ ಖಗನಿಕರ ॥೨೦॥

ನಡೆವ ವೃದ್ಧ ಮುನೀಂದ್ರರಿಗೆ ಕೈ ।
ಗುಡುವ ಕಪಿಗಳು ಕಾಲಕರ್ಮವ ।
ನಡೆಸಲೆಂದು ನದೀತಟಾಕದ ಬಿಸಿಯ ಬಿಸಿಲೊಳಗೆ ॥
ಬಿಡದೆ ಬಿದ್ದಹವರಿಗೆ ಪಚ್ಚೆಯ ।
ಕೊಡೆಯವೊಲು ನೆಳಲಾಗಿ ಗಿಳಿಗಳ ।
ಗಡಣ ಮಂಡಳಿಸಿಹವು ಗಗನದೊಳಾ ವನಾಂತರದೆ ॥೨೧॥

ಬಡ ತಪಸ್ವಿಯ ಬಹಳ ಜಡೆಗಳ ।
ಮುಡಿಯ ತಾವೆ ಮಾಡಿ ಬಂಧಿಸಿ ।
ಬಿಡದೆ ಬಿಗಿದಿಹವುತ್ತಮಾಂಗದ ಬಾಲಸರ್ಪಗಳು ॥
ಬಿಡದೆ ಪವನನಿರೋಧಿಗಳ ಬೆವ ।
ರೊಡಲನಾರಿಸಲೆಂದು ಕಿವಿಗಳ ।
ಕೊಡುವುತಿಹ ಮರಿಯಾನೆ ಮೆರೆದುವು ತದ್ವನಾಂತರದೆ ॥೨೨॥

ಆಸನಸ್ಥಿರರಾಗಿ ತಪದುಪ ।
ವಾಸದಿಂದಿಹವರಿಗೆ ನೆಮ್ಮುವ ।
ದಾಸಿಯಾಗಿಯೆ ಮಂಡಲಿಸಿ ಮಲಗಾದ ಹೆಬ್ಬುಲಿಯ ॥
ಬೇಸರದೆ ಸೊಂಡಿಲಲಿ ಮೊಗೆತಂ ।
ದಾಶ್ರಮಕೆ ತಣ್ಣೀರ ಚಳೆಯುವ ।
ಸೂಸುತಿರುತಿಹ ಭದ್ರಹಸ್ತಿಯಲೊಪ್ಪಿತಾ ವನವು ॥೨೩॥

ಮೇಳವಿಸಿ ಮುಂಜಿಗಳ ಮಾಡುವ ।
ಬಾಲಕರಿಗಾ ಮೆದೆಯ ಹುಲ್ಲನು ।
ಸೀಳಿ ಸೀಳಿ ಸಮೀಪದಲಿ ಕೈಗೈವ ಕರಡಿಗಳ ॥
ಲೀಲೆಯಲಿ ಯಜ್ಞೋಪವೀತದ ।
ನೂಲಿಗೆಂದಂಬುಜದ ನಾಳವ ।
ನೋಳಿಯಿಂ ತಂದಿಡುವ ಹಂಸೆಯಲೊಪ್ಪಿತಾ ವನವು ॥೨೪॥

ನಂದಬಾರದ ಹೋಮದಗ್ನಿಯ ।
ನಂದಲೀಯದೆ ಶುಷ್ಕಸಮಿಧೆಯ ।
ತಂದು ನೆರೆ ಹೊತ್ತಿಕ್ಕಿ ಹೊಗೆಸುವ ವೃದ್ಧಕಪಿಗಳಲಿ ॥
ಬಂದು ಪಕ್ಕವ ಬೀಸಿ ಮಾರುತ ।
ನಿಂದಲಗ್ನಿಯ ಪಟುವ ಮಾಡುತ ।
ನಿಂದು ನರ್ತಿಸಿ ನಲಿವ ನವಿಲಿನಲೊಪ್ಪಿತಾ ವನವು ॥೨೫॥

ಸಾವಧಾನದಲೊರಗಿ ಸಲೆ ಸಂ ।
ಭಾವಿತದಲಿಹ ಮುನಿಗಳಿಗೆ ನಿ ।
ದ್ರಾವಿಳಾಸತೆ ಲೋಗರಿಂದಳಿಯದ ಉಪಾಯದಲಿ ॥
ತಾವೆ ಬಂದಾ ಪರ್ಣಶಾಲೆಯ ।
ನೋವಿ ಬಾಗಿಲ ಕಾಯ್ದುಕೊಂಡಿಹ ।
ವಾ ವನಾಂತದೊಳಲ್ಲಿಗಲ್ಲಿಗೆ ಪಂಚಮುಖನಿಕರ ॥೨೬॥

ಕೆಲರು ವೇದವನೋದುವರು ಕೆಲ ।
ಕೆಲರು ಶಾಸ್ತ್ರವ ಕೇಳುವರು ಕೆಲ ।
ಕೆಲರು ವೇದಾರ್ಥವನುಪನ್ಯಾಸವನು ಮಾಡುವರು ॥
ಕೆಲರು ದರ್ಶನತರ್ಕಭೇದಂ ।
ಗಳನು ತಿಳಿವರದೆಲ್ಲಿ ನೋಡಲು ।
ತುಳುಕುತಿರ್ದುದು ಶಬ್ದ ಸಂಭ್ರಮವಾ ವನಾಂತದಲಿ ॥೨೭॥

ಸಾರಣೆಯ ಮಾಡೆಂಬವರು ದೇ ।
ಹಾರಕೆಡೆ ಮಾಡೆಂಬುವರುವುಪ ।
ಹಾರಕೊಳ್ಳಿಹ ಕಂದಮೂಲವ ತನ್ನಿಯೆಂಬುವರು ॥
ಸಾರ ಮಂತ್ರಾಗಮಗಳಲಿ ಕ ।
ಯ್ಯಾರೆ ಭೂತಿಯ ಮಾಡುವರುಗಳು ।
ನಾರಸೀರೆಯ ನೆಯ್ವವರು ಮೆರೆದರು ವನಾಂತದಲಿ ॥೨೮॥

ಬೇಹ ಧರ್ಮದ ಬೀಡು ಕರ್ಮಸ ।
ಮೂಹದಾಗರ ಸಗುಣಯೋಗ ।
ವ್ಯೂಹದೊಡ್ಡಣೆ ಜಾತಿವರ್ಣಾಶ್ರಮದ ನೆಲೆಗಾಡು ॥
ಸ್ನೇಹದಂಬುಧಿ ಯಜ್ಞ ವಿಧಿಯ ವಿ ।
ವಾಹಶಾಲೆಯಿದೆಂಬ ಋಷಿಸಂ ।
ದೋಹದಾಶ್ರಮವಿದ್ದುವಾ ಕಾನನದ ಮಧ್ಯದಲಿ ॥೨೯॥

ಉಡುವುದಾದಡೆ ನಾರು ಹಸಿದುಂ ।
ಬಡೆ ಸದಾ ವನತರುಫಲಂಗಳು ।
ತೊಡುವುದಾದಡೆ ಭೂತಿ ಹಕ್ಕೆಯ ಹಾಸ ನೋಡಿದಡೆ ॥
ಕಡವಸಗಳಿಹ ವಾಸವಾದಡೆ ।
ಯಡವಿಯೀ ಸಂಸಾರ ಮುನಿಗಳ ।
ಬಿಡದಲಾ ಎಂದೆನುತಲಲ್ಲಮ ನೋಡಿ ಬೆರಗಾದ ॥೩೦॥

ನಾರಸೀರೆಗೆ ಮರನುಗಳನಾ ।
ಹಾರದಾಸೆಗೆ ಕಂದಮೂಲವ ।
ನೀರತೃಷೆಗನವರತ ನಾನಾ ನದಿ ಸರೋವರವ ॥
ಹಾರಿಕೊಂಡಿಹ ಘೋರತರ ಸಂ ।
ಸಾರ ಮುನಿಗಳ ಬಿಡದುವುಳಿದರ ।
ನಾರು ಬಲ್ಲರು ಸುಡಲೆನುತಲಲ್ಲಮನು ಬೆರಗಾದ ॥೩೧॥

ಸ್ನಾನ ಜಪ ತಪ ನಿತ್ಯ ನಿಯಮ ।
ಧ್ಯಾನ ವೇದಾಧ್ಯಯನ ಯಜ್ಞ ವಿ ।
ಧಾನ ಮೊದಲಾಗಿರ್ದ ನಾನಾ ವಿಧದ ಗೊಡವೆಗಳ ॥
ಏನ ಮಾಡಿದರೇನು ಜೀವದ ।
ಹಾನಿ ಹರಿಬವನರಿಯಲರಿಯರು ।
ಕಾನನವ ಹೊಕ್ಕೇನು ಫಲವೆನುತಿರ್ದನಲ್ಲಮನು ॥೩೨॥

ಎಲ್ಲಿತನಕಲಿ ಮಾಯೆ ತನಗು ।
ಳ್ಳಲ್ಲಿ ಮುಟ್ಟಲಿ ಕಲಿತ ಜೀವವ ।
ಕೊಲ್ಲದಿರಲಿಕೆ ಬಾರದವ ಕೊಂದವಗೆ ಕೊಲೆ ಬಿಡದು ॥
ಎಲ್ಲಿ ಹೊಕ್ಕಡೆ ಮಾರಿ ತನ್ನಯ ।
ಹಲ್ಲು ಬಾಯಲಿ ತಿಂದು ತೇಗದೆ ।
ನಿಲ್ಲದವರನು ಸುಡಲಿ ಮಾಟವನೆಂದನಲ್ಲಮನು ॥೩೩॥

ಮಾಟದಲಿ ಗತವಾಗಿ ಭವಭವ ।
ಕೋಟಿಯಲಿ ಸಂಸಾರದುಃಖದ ।
ಕೂಟವನೆ ಕೈಗೈವ ಮುಖ್ಯಮುನೀಂದ್ರರೆಲ್ಲರನು ॥
ದಾಟಿಸುವೆನಾ ಭವಭವಾಬ್ಧಿಯ ।
ನಾಟಿಸುವೆನವರರಿವಿಗರಿವನು ।
ಮಾಟವೆಲ್ಲವ ಮಾಣಿಸುವೆನೆನುತಿರ್ದ ಪ್ರಭುರಾಯ ॥೩೪॥

ಮುಂದೆ ಮಾಡುವ ಮಾಟಕೂಟದ ।
ದಂದುಗಂಗಳ ತನುಮನಂಗಳ ।
ಹೊಂದದೋಜೆಯ ಮಾಟದಿಂದಿವರುಗಳ ಬಗೆಬಗೆಯ ॥
ಸಂದ ಮಾಯಾಪಾಶದಾಶಾ ।
ಬಂಧನಂಗಳ ಬಿಡಿಸಿ ಪರಮಾ ।
ನಂದ ಸುಖಿಗಳ ಮಾಡುವೆನು ನಾನೆನುತ ಗುರು ಬಂದ ॥೩೫॥

ಅದರೊಳಗೆ ಕೆಲಕಲರು ಯಜ್ಞದ ।
ವಿಧಿಯ ವಿರಚಿಸುತಿರಲು ಕಾಣುತ ।
ಅದರಲೇನುಂಟಕಟ ಬಂಧನಮೋಕ್ಷವಾದಪುದೆ ॥
ಇದಿರಲಿದಿರಿಟ್ಟಾವ ಕರ್ಮವ ।
ನೊದಗಿ ಮಾಡಲು ದುಃಖವಲ್ಲದೆ ।
ಸದಮಲ ಸ್ವಾತಂತ್ರಸುಖವಿಲ್ಲೆಂದ ಗುರುರಾಯ ॥೩೬॥

ಜನನಮರಣಣಭ್ರಮೆಯ ಭವಬಂ ।
ಧನಕೆ ತಾರದ ಕರ್ಮವೇ ಕಾ ।
ರಣವಲಾ ಕೈವಲ್ಯಪದವಿಯನೊಲಿವ ಜೀವರಿಗೆ ॥
ಇನಿತನೇನುವನರಿಯಲರಿಯದೆ ।
ಮನಸಿನಿಚ್ಛೆಗೆ ಹರಿವುದನುಚಿತ ।
ವೆನುತಲುಪದೇಶಿಸಿದನಾ ಪ್ರಭು ಮುನಿಜನಂಗಳಿಗೆ ॥೩೭॥

ಲೇಪಿಸಿದಹಂಕಾರವೇ ಪಶು ।
ಯೂಪಕಂಭವೆ ಮನಸು ಪವನ ।
ಸ್ಥಾಪಿತವೆ ಬಂಧಿಸುವ ಪಾಶ ವಿವೇಕವೇ ಶಸ್ತ್ರ ॥
ವ್ಯಾಪಿಸಿದ ಸುಜ್ಞಾನವಹ್ನಿ ಸ ।
ದಾ ಮುನೀತಮಯಾತ್ಮನಧ್ವರಿ ।
ಯಾ ಪರಿಯನರುಹಿಸಿದನಾ ಪ್ರಭು ಪರಮ ಮುನಿಗಳಿಗೆ ॥೩೮॥

ಮಿಥ್ಯವೆಲ್ಲವು ಹೋಮದಾಹುತಿ ।
ತಥ್ಯವೇ ಶೇಷಪ್ರಸಾದವು ।
ನಿತ್ಯನಿರ್ಮಲ ನಿಜದ ಪರಮಾನಂದವೇ ತೃಪ್ತಿ ॥
ಸತ್ಯ ಶಾಶ್ವತ ಸ್ವರೂಪದ ।
ತತ್ವ ತಾನೆಂದರವುದೇ ಫಲ ।
ವೃತ್ತಿಯೆಂದುಪದೇಶಿಸಿದನಾ ಪ್ರಭು ಮುನಿವಜ್ರಕೆ ॥೩೯॥

ಜಪವ ಮಾಡಿದಡೇನಹುದು ಮೇಣ್ ।
ತಪವ ಮಾಡಿದಡೇನಹುದು ಮೇ ।
ಣಪರಿಮಿತದುದ್ದೇಶಖಂಡಜ್ಞಾನಮಾರ್ಗದಲಿ ॥
ಉಪನಯನ ಮೊದಲಾದ ನಾನಾ ।
ಚಪಳತರವಹ ಬಾಹ್ಯಭಾವನೆ ।
ಯುಪಚರಣೆ ಮುನಿಗಳಿಗೆಯನುಚಿತವೆಂದನಲ್ಲಮನು ॥೪೦॥

ಎನುತ ಯಾಗಕೆಯಾತ್ಮಯಾಗವ ।
ನನುರತಿಗೆ ನಿಜರತಿಯ ದೇವಾ ।
ರ್ಚನೆಗೆ ಹೃದಯವನುಪನಯನಕಾ ನಿಜ ನಿರೀಕ್ಷಣೆಯ ॥
ಎನಿತು ಬಾಹ್ಯದ ಕರ್ಮಭಕ್ತಿಗ ।
ಳನಿತನಂತರ್ಮಾರ್ಗದಲಿ ಸೂ ।
ಚನೆಯ ಮಾಡಿದನಲ್ಲಮಪ್ರಭು ಪರಮ ಮುನಿಗಳಿಗೆ ॥೪೧॥

ಅವರು ತಿಳಿದರು ಮಾಯೆ ಹುಟ್ಟಿದ ।
ದಿವಸದಲಿ ದೂರ್ವಾಸಮುನಿಪತಿ ।
ವಿವರಿಸಿದ ಹದನಿಂದಲಾ ಪ್ರಭುವೀತನಹುದೆಂದು ॥
ತವಕದಲಿ ತಮತಮ್ಮ ಮನದು ।
ತ್ಸವವ ಪಡೆದು ಕೃತಾರ್ಥರಾದರು ।
ಭುವನದೊಳಗೆಮ್ಮಲ್ಲಮಪ್ರಭುಲಿಂಗಲೀಲೆಯಲಿ ॥೪೨॥

ಸಾವ ಹುಟ್ಟುವ ವಿಧಿಯ ಮಾನವ ।
ಜೀವಜಾಳಕೆಯವರವರು ಮು ।
ನ್ನಾವ ಕಾಯಕವಿಡಿದು ತಾವಿಹರಾ ಪ್ರಕಾರದಲಿ ॥
ತೀವಿಯಂತರ್ನಿಷ್ಠೆಯಲಿ ನಾ ।
ನಾವಿಧೋಪಾಯವನು ಬೋಧಿಸಿ ।
ಪಾವನವ ಮಾಡಿದನು ಸರ್ವರನೆಮ್ಮ ಗುರುರಾಯ ॥೪೩॥

ಭೂತನಾಥನ ನೇಮದಿಂದಲಿ ।
ಭೂತಳದೊಳಿಹ ಕಾರಣೀಕರ ।
ನೀತರದಲವರವರಿಗುಚಿತಜ್ಞಾನಮಾರ್ಗದಲಿ ॥
ಓತು ಸದ್ಯೋನ್ಮುಕ್ತರೆನಿಸಿದ ।
ನಾತಗಳನೆಲ್ಲರನು ಲೀಲಾ ।
ಪ್ರೀತಿಯಿಂದೆಮ್ಮಲ್ಲಮಪ್ರಭುಲಿಂಗಲೀಲೆಯಲಿ ॥೪೪॥

**ಅಂತು ಗತಿ ೨೦ಕ್ಕಂ ಪದನು ೮೯೩ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೨೧
# ಶೂನ್ಯಪೀಠವ ಬಸವ ನಿರ್ಮಿಸಿದ

**ವಚನ**

ಅಷ್ಟದಳಕಮಲದ ಹೂಗಲ್ಲ ಹಿಡಿದು ಶೂನ್ಯಸಿಂಹಾಸನಕ್ಕೆ
ಧವಳಾಲಯವೆತ್ತಿತ್ತು
ಚಂದ್ರಕಾಂತದ ಶಿಲೆಯಲ್ಲಿ
ಪಶ್ಚಿಮದ್ವಾರಮಂ ತೆಗೆದು ನೋಡುವರೆ ವಿಪರೀತ
ವಿಕೋಭಾವವೆಂಬುದೊಂದು ಕಂಬ
ಅದಕ್ಕೆ ಅನೇಕ ಚಿತ್ರಂಗಳಡಗಿದ ಪ್ರಭೆಯೊಳಗೆ
ಬ್ರಹ್ಮರಂಧ್ರವೆಂಬ ಮಸ್ತಕದ ಮೇಲೆ
ಪವಳಹಾರದ ಪಂಜರಮಂ ಕಟ್ಟಿ
ಪಂಚ ಮೌಕ್ತಿಕದ ಮಾಲೆಯನಿಳಿಯಬಿಟ್ಟು
ಮಲಕು ಮಲಕಿನ ನಡುವೆ ಕಟ್ಟಿದುವು ನವರತ್ನದ ಗೊಂಡೆಯಂಗಳು
ಕಾಳಿಕೆಯ ಕಪ್ಪಡವದಕೆ ಮೇಲು ಹೊದಕೆ
ಉಲುಹಿನರಳೆಲೆಯ ಬಳಸುದೋರಣವ ಕಟ್ಟಿ
ದಶವಾಯುಗಳನೊಂದುಮಾಡಿ
ಲಿಂಗಸುಖವಾಯುವ ಸಂತೈಸಿ ಆಲವಟ್ಟವಂ ಮಾಡಿ
ಲಂಬಿಸಿದ ಮಂದಾನಿಲನಂ ಮಲಗಂ ಮಾಡಿ
ಹರುಷನೀವ ವಸಂತನ ಚೌಕವಟ್ಟಿಗೆಯ ಆಸನವಂ ಮಾಡಿ
ನವನಾಳಸುನಾಳದೊಳು ಮೊರೆವ ಶಬ್ದಮಂ
ಶುಕಪಿಕಭ್ರಮರಾಮೋದಮಂ ಮಾಡಿ
ಪರಮಶಾಂತಿಯೆಂಬ ಶೈತ್ಯಾಕಾರ ಸೋಂಕಿನ
ಚೂತಫಲಂಗಳಂ ಹಾಸಿ

ಉತ್ತರ ದ್ವಾರವೆಂಬ ನುಸುಳುಗಂಡಿಯಂ ರಚಿಸಿ
ಪೂರ್ವಯೋಗಂಗಳೆಂಬ ಸೋಪಾನಮಂ ಮಾಡಿ
ಪಶ್ಚಿಮದ್ವಾರವೆಂಬ ನಿಜದ್ವಾರಮಂ ಮಾಡಿ
ಸಪ್ತವ್ಯಸನ ಪಂಚೇಂದ್ರಿಯಂಗಳೆಂಬ ಗವಾಕ್ಷಿಯನಿಕ್ಕಿ
ಆಶೆಯಾಮಿಷವನು ಕೆಡಿಸಿ
ಊರ್ಧ್ವಚಕ್ರವೆಂಬ ಮೇಲುಪ್ಪರಿಗೆಯಂ ಮಾಡಿ
ಚಂದ್ರಸೂರ್ಯರೆಂಬ ದೀಪಗಳಂ ಬೆಳಗಿ
ಶಿವೋಹಮೆಂಬ ಶಿಖರಿಯ ಮೇಲೆ
ಮಹಾಜ್ಞಾನಪ್ರಕಾಶವೆಂಬ ಹೊನ್ನಕಳಶವ ಸಿಂಗಾರವಂ ಮಾಡಿ
ನಿಃಶೂನ್ಯ ನಿರಾಳವೆಂಬ ಶೂನ್ಯಸಿಂಹಾಸನಮಂ ಮಾಡಿದ
ಬಸವಪ್ರಿಯ ಕೂಡಲಚೆನ್ನಸಂಗನಲ್ಲಿ ಎನ್ನ ಪರಮಗುರು ಸಂಗನಬಸವಣ್ಣ ॥೧॥

ಅಂಗದ ಪ್ರಕೃತಿ ಲಿಂಗದಲ್ಲಿ ಅಳಿದು
ಮನದ ಪ್ರಕೃತಿ ಅರಿವಿನಲ್ಲಿ ಅಳಿದು
ಜೀವನ ಭ್ರಾಂತಿ ನಿಶ್ಚಿಂತದಲ್ಲಿ ಅಳಿದು
ನಿಃಶೂನ್ಯ ನಿರಾಮಯವಾದ ನಿವಾಸಕ್ಕೆ
ಸದಾಚಾರವೆಂಬ ಕೆಸರಗಲ್ಲನಿಕ್ಕಿ
ಸರ್ವಾಚಾರ ಸಂಪತ್ತೆಂಬ ಹೂಗಲ್ಲ ಮುಚ್ಚಿ
ಅಂತಕರಣಚತುಷ್ಟಯದ ನಾಲ್ಕು ಕಂಬವ ನಿಲಿಸಿ
ಜ್ಞಾತೃವೆಂಬ ಭಿತ್ತಿಯ ಮೇಲೆ
ಜ್ಞಾನವೆಂಬ ಶಿಖರಿಯನನುಗೊಳಿಸಿ
ಜ್ಞೇಯಮೆಂಬ ಹೊನ್ನ ಕಳಶವಂ ಶೃಂಗಾರಮಂ ಮಾಡಿ
ಬ್ರಹ್ಮರಂಧ್ರದ ಊರ್ಧ್ವದ್ವಾರವೆಂಬ ನಿಜದ್ವಾರಮಂ ಮಾಡಿ
ನಿರ್ವಯಲಲಿ ನೆಲೆಗೊಳಿಸಿ
ಬಸವಪ್ರಿಯ ಕೂಡಲಚೆನ್ನಸಂಗನ ಶರಣ ಪ್ರಭುದೇವರ ಬರವಿಂಗೆ
ಶೂನ್ಯಸಿಂಹಾಸನವ ರಚಿಸಿ
ಬರವಹಾರುತ್ತಿರ್ದ ನಮ್ಮ ಪರಮಗುರು ಸಂಗನಬಸವಣ್ಣನು ॥೨॥

**ಸೂಚನೆ**

ತನ್ನೊಳಗೆ ತಾ ಸಾಧಿಸಿದ ಸಂ ।
ಪನ್ನತೆಯನಿದಿರಿಟ್ಟು ರಚಿಸಿದ ।
ಶೂನ್ಯಸಿಂಹಾಸನವನೆಮ್ಮಯ ಬಸವದಂಡೇಶ ॥

ಗುರು ಗುಹೇಶ್ವರ ತಾನದಾರಿಗೆ ।
ಕರುಣಸಿದನವರವರನಾಕ್ಷಣ ।
ಪರಮ ಪದವಿಯಲಿರಿಸಿ ತಾನೊಲಿದಾಡುತಿರಲಿತ್ತ ॥
ಗರುವ ಗುಣನಿಧಿ ಬಸವದಂಡೇ ।
ಶ್ವರನು ಕಲ್ಯಾಣದಲಿ ರಚಿಸಿದ ।
ಪರಿಯನೆಲ್ಲರು ತಿಳಿವುದೀ ಪ್ರಭುಲಿಂಗಲೀಲೆಯಲಿ ॥೧॥

ಬೇಸರದೆ ನೆರೆ ಪೂರ್ವಯೋಗಾ ।
ಭ್ಯಾಸದಲಿ ಪಶ್ಚಿಮದ ಪವನಾ ।
ವಾಸದಲಿ ಸರ್ವೇಂದ್ರಿಯಂಗಳ ನಿಗ್ರಹಂಗಳಲಿ ॥
ಸೂಸದಂತಃಕರಣಶುದ್ಧಿಯ ।
ಭಾಸುರತೆಯಲಿ ಬಸವದಂಡಾ ।
ಧೀಶನೊಪ್ಪಿದನೇಕನಿಷ್ಠೆಯ ದಿವ್ಯತೇಜದಲಿ ॥೨॥

ಅರಿಗಳೆಂಬಭಿಧಾನವಡಗಿದ ।
ವರರೆ ಅರಿಷಡ್ವರ್ಗನೃಪರಿಗೆ ।
ನಿರುತ ನಿರ್ಮಲವಾದವಂಡಲೆವಷ್ಟಮದಗಜಕೆ ॥
ನೆರೆದ ತನುಗುಣರಾಜಿ ರಾಜಿಸಿ ।
ಪರಿಚರಿಯಕರರಾದರಿಂತೀ ।
ಪರಿಯಲೆಸೆದುವು ಬಸವರಾಜನ ರಾಜಯೋಗದಲಿ ॥೩॥

ಹೇಳಿದಂತಿರಕಲಿತವಿಂದ್ರಿಯ ।
ಜಾಳವಾಜ್ಞಾಮಾತ್ರದಿಚ್ಛೆಗೆ ।
ಮೇಳವಿಸಿ ನೆಲೆಗೊಂಡವಂತಃಕರಣ ಶರಣೆಂದು ॥
ಕೀಲಿಸಿದ ಕುಂಡಲಿಯ ಸರ್ಪನ ।
ಕಾಲುದೊಡಕದು ಸುಸರವಾಯಿತು ।
ಹೇಳಲೇನಾ ಬಸವರಾಜನ ರಾಜಯೋಗದಲಿ ॥೪॥

ಹೋಗ ಹೋಗಲು ಕುಂಡಲಿಯ ಹೆ ।
ಬ್ಬಾಗಿಲಲಿ ಕೆಡಹಿದನು ಕಾಮನ ।
ಮೇಗೆ ಹೃದಯಕವಾಟದಲಿ ಕಡಿದಿಕ್ಕಿದನು ಜವನ ॥
ಲಾಗಿಸಿದನಖಿಳಾಧಿಪತ್ಯವ ।
ಭೋಗಿಸುವ ಭ್ರೂಮಧ್ಯಭುವನಕೆ ।
ರಾಗದಿಂದನುಭಾವಮುಖದಲಿ ಬಸವದಂಡೇಶ ॥೫॥

ಇಂತು ಸಲೆ ಸಸ್ವಾನುಭಾವದ ।
ಲಂತರಂಗದ ರಾಜ್ಯವೆಲ್ಲವ ।
ಸಂತವಿಟ್ಟು ಸಮಸ್ತದಲಿ ಸಂಪನ್ನನಾಗಿರುತ ॥
ಮುಂತೆ ನಿರ್ಗುಣಯೋಗಮಾರ್ಗವ ।
ನೆಂತು ಕಾಂಬೆನೆನುತ್ತ ಮನದಲಿ ।
ಚಿಂತಿಸುತಲಾ ಬಸವದಂಡಾಧೀಶನಿಂತೆಂದ ॥೬॥

ಗುರು ಗುಹೇಶ್ವರ ಜಾರುಚರಣಾಂ ।
ಬುರುಹಗಳ ನಾನಾವ ಪರಿಯಲಿ ।
ವರಿಸಿಯೆನ್ನ ಮನಃಸಮಾಧಿಯನೆಂದು ಪಡೆದಪೆನೊ ॥
ಪರಮಪುರಷನದಾವ ವೇಷವ ।
ಧರಿಸಿ ಬಹನೋ ಆ ಮಹಾತ್ಮನ ।
ಹುರುಳನಾನೆಂತರಿವೆನೆನುತಲಿ ಬಸವ ಚಿಂತಿಸಿದ ॥೭॥

ಆವ ವೇಷದಲಾದಡೆಮ್ಮಯ ।
ದೇವನೊಲಿದ್ಯೈತಂದಡಾತನ ।
ಭಾವಭಣಿತೆಯನರಿವವೊಲು ನಾನೊಂದುಪಾಯವನು ॥
ತೀವಿ ತೆಕ್ಕನೆ ಸಿಕ್ಕಿಸುವೆನಾ ।
ನಾವ ಪರಿಯಿಂದಾದೊಡೆಯು ಮ ।
ಜ್ಜೀವತೇಶನನೆನುತಲಾ ಬಸವಣ್ಣನನುಗೆಯ್ದ ॥೮॥

ಅನುಗೊಳಿಸಿದನು ಶೂನ್ಯಸಿಂಹಾ ।
ಸನವಿದೆಂದದಕಿಟ್ಟು ಹೆಸರನು ।
ವಿನುತ ಪಶ್ಚಿಮಮಾರ್ಗದಲಿ ತಾ ಕಂಡುದೆಲ್ಲವನು ॥
ಕನಕಮರಕತಮುಖ್ಯ ಮಣಿಗಳ ।
ಘನತರದ ಕೇವಣದ ಲಹರಿಯ ।
ಮಿನುಗಿ ಮಿಸುಗುವ ವಿಮಲ ಪೀಠವ ಬಸವ ನಿರ್ಮಿಸಿದ ॥೯॥

ಇಂದುಕಾಂತದ ಶಿಲೆಯ ಹಪ್ಪಳೆ ।
ಬಂಧಿಸಿದ ಸೋಪಾನ ಸುತ್ತಲು ।
ಹೊಂದಿ ಹೊರಗಾಣಿಸದ ಸಪ್ತಾವರಣಮಯಭಿತ್ತಿ ॥
ಒಂದರಿಂದೊಂದಧಿಕತರವೆನ ।
ಲೊಂದುಗೂಡಿದ ಶೂನ್ಯಪೀಠದ ।
ನಿಂದ ನಿಲವರಿದಾಯ್ತು ಲೋಕದ ಜನದ ಕಣ್ಮನಕೆ ॥೧೦॥

ಕೀಲಣೆಯ ನವರತುನರಾಜಿಯ ।
ಮೇಳವದ ಪ್ರತ್ಯೇಕ ಪಂಕ್ತಿಗ ।
ಳೋಳಿಯಲಿ ತೆತ್ತಿಸಿದ ತೊಳಪದ ಸಪ್ತಲೋಹಗಳ ॥
ಮೇಲೆ ಮೇಲಡಕಿಲುಗಳಂದದ ।
ಲೇಳು ನೆಲೆಯಲಿ ಭಕ್ತಿಭೂಮೀ ।
ಪಾಲ ಬಸವನು ಶೂನ್ಯಸಿಂಹಾಸನವ ವಿರಚಿಸಿದ ॥೧೧॥

ಹೊರವಳಯದೊಂಬತ್ತು ಬಾಗಿಲು ।
ಮೆರೆವ ಮಧ್ಯಕೆ ನಾಲ್ಕು ಬಾಗಿಲು ।
ನೆರೆ ವಿರಾಜಿಸುವೆರಡು ಬಾಗಿಲು ಗರ್ಭವಳಯದಲಿ ॥
ಮಿರುಪ ಮೇಲಣ ಕೆಲಸಗತಿ ಕಣ್ ।
ದೆರೆದ ಬಾಗಿಲು ಶಿಖರದಲಿ ಮಹ ।
ದರಿವಿನಂಬರಪೀಠವೆಸೆದು ಬಸವನಾಜ್ಞೆಯಲಿ ॥೧೨॥

ಸ್ವಾನುಭಾವಾಧಾರ ಸ್ವಾಧಿ ।
ಷ್ಠಾನ ಮಣಿಪೂರಕವನಾಹತ ।
ವಾ ನವೀನದ ಕೆಲಸಗತಿಯ ವಿಶುದ್ಧಿಯಾಜ್ಞೇಯ ॥
ಸ್ಥಾನಗಳ ನೆಲೆಗೊಳಿಸಿ ಬ್ರಹ್ಮ ।
ಸ್ಥಾನವನು ಮೇಲೆನಿಸಿ ರಚಿಸಿದ ।
ಮಾನನಿಧಿ ಬಸವಣ್ಣನೀಪರಿ ಶೂನ್ಯಪೀಠವನು ॥೧೩॥

ಪರವಿಡಿಯಲಿಳೆ ಸಲಿಲ ಪಾವಕ ।
ಮರುತ ಗಗನಾತುಮ ನಿರಾಳದ ।
ತರತರದ ಶಿವಭಕ್ತಿ ಮಾಹೇಶ ಪ್ರಸಾದಿಗಳ ॥
ಪರಮ ವರದ ಪ್ರಾಣಲಿಂಗಿಯ ।
ಶರಣನೈಕ್ಯನ ಭೇದ ನೆಲೆಗಳ ।
ನೆರವಿಯಂತಿರೆ ಶೂನ್ಯಪೀಠವ ಬಸವ ನಿರ್ಮಿಸಿದ ॥೧೪॥

ನೆಲದ ನೆಲೆಯಲಿ ಕಠಿಣತರವನು ।
ಜಲದ ನೆಲೆಯಲಿ ರಸಮಯವನಾ ।
ಜ್ವಲನ ನೆಲೆಯಲಿ ಬಿಸಿಯ ಮರುತನ ನೆಲೆಗೆ ಮಾರುತನ ॥
ಸಲೆ ನಭವ ನೆಲೆಗಂಬರವ ಮನ ।
ನಿಲುಕದನುಪಮದೆಡೆಗೆ ಶೂನ್ಯವ ।
ನಿಲಿಸಿ ಬಸವನು ಶೂನ್ಯಸಿಂಹಾಸನವ ನಿರ್ಮಿಸಿದ ॥೧೫॥

ಈಡೆ ಪಿಂಗಳ ವರ ಸುಷುಮ್ನಾ ।
ನಾಡಿಗಳು ಬಲಿದೆಂಟು ದಿಕ್ಕಿನ ।
ಕೋಡ ಕೈಯಲಿ ಮದಗಜಂಗಳು ಮೇಲು ನೆಲೆಯೊಳಗೆ ॥
ಕೂಡೆ ಬೆಳಗುವ ಸೋಮಸೂರಿಯ ।
ರಾಡುತಿಹ ವೀದಗಳು ಭುವನದ ।
ಬೀಡಿದೆನಲಾ ಬಸವನೊಡ್ಡಿದನಂಬರಾಸನವ ॥೧೬॥

ಪರಮ ಪ್ರಣಮವೆ ಬೇರು ಸಕಲ ।
ಸ್ವರವೆ ಬುಡ ವರ ಶೈವಪಂಚಾ ।
ಕ್ಷರಿಯೆ ಶಾಖೆ ಸುವರ್ಣ ಕುಸುಮಗಳಕ್ಷರಾಳಿಗಳು ॥
ವರ ಪದಾರ್ಥವೆ ಫಲಗಳೆಂಬಂ ।
ತಿರಲು ನಾದಮಹೀಜದೊಲು ವಿ ।
ಸ್ತರಿಸಿದುದು ಮಣಿಮಯದ ತರುವಾ ಶೂನ್ಯಪೀಠದಲಿ ॥೧೭॥

ಆ ಮರನ ಹಬ್ಬಿರ್ದ ಲತೆಯವೊ ।
ಲಾ ಮಹಾಶಿವತತ್ವದಹಿಯ ಫ ।
ಣಾಮಣಿಯ ಬೆಳಗೆನೆ ಪರಂಜ್ಯೋತಿ ಪ್ರಕಾಶತೆಯ ॥
ಸೀಮೆಯೆನಲಾ ಪ್ರತಿನಿಧಿಗೆ ನಾ ।
ನಾಮಯದ ನೆಮ್ಮುಗೆಯ ನಿಲಿಸಿದ ।
ನಾ ಮನೋಹರ ಶೂನ್ಯಸಿಂಹಾಸನಕೆ ಬಸವಣ್ಣ ॥೧೮॥

ಅಳವಡಿಸಿದನು ಪಂಚಭೂತದ ।
ನೆಲೆಗಳಲಿ ಹದಿನಾಲ್ಕು ಲೋಕದ ।
ಹೊಲಿಗೆಯನು ಮೇಲಾತ್ಮತತ್ವದಲೈಕ್ಯಪದವಿಯನು ॥
ನಿಲಿಸಿ ನಿರುಪಮ ನಿರ್ವಿಕಾರ ।
ಸ್ಥಲವನಲ್ಲಿಂದೇಳನೆಯ ತುದಿ ।
ನೆಲೆಯೊಳೊಡ್ಡಿದ ಶೂನ್ಯಸಿಂಹಾಸನಕೆ ಬಸವಣ್ಣ ॥೧೯॥

ಅಲ್ಲಿಗಲ್ಲಿಗೆ ಬೇಹ ಶಕ್ತಿಗ ।
ಳಲ್ಲಿಗಲ್ಲಿಗೆ ಬೇಹ ನಾಡಿಗ ।
ಳಲ್ಲಿಗಲ್ಲಿಗೆ ಕರ್ಮಭಕ್ತಿಜ್ಞಾನತತ್ವಗಳು ॥
ಅಲ್ಲಿಗಲ್ಲಿಗೆ ಸಗುಣನಿರ್ಗುಣ ।
ವೆಲ್ಲವನು ತಾ ಕಂಡ ತೆರನಲಿ ।
ಪಲ್ಲವಿಸಿ ಬಸವಣ್ಣ ರಚಿಸಿದನೆಂಬರಾಸವನ ॥೨೦॥

ಅಂಡಪಿಂಡನ್ಯಾಯವೊಂದೇ ।
ಕಂಡಿರೇ ಎಂದೆಂಬುದನು ಭೂ ।
ಮಂಡಲದೊಳಾ ಶೂನ್ಯಸಿಂಹಾಸನದಲರಿವಂತೆ ॥
ದಂಡಿಯಾಗಿರೆ ನಿರ್ಮಿಸಿದನದ ।
ಕಂಡವರು ಬೆರಗಾಗೆ ಬಸವನು ।
ದಂಡನಾಯಕನಲ್ಲಮನ ಬರವಿಂಗೆ ಭರದಿಂದ ॥೨೧॥

ಈ ತೆರದಲನುಭವದಲರಿದ ಮ ।
ಹಾತಿಶಯದ ಮನಸ್ಸಮಾಧಿಯ ।
ರೀತಿಯಂತಿರೆ ಶೂನ್ಯಸಿಂಹಾಸವನಿದಿರಿಟ್ಟು ॥
ಪ್ರೀತಿ ಮಿಗೆ ಪಿರಿದೆನಿಸಿ ನಾನಾ ।
ಜಾತಿ ಭಾವದಲೊಡ್ಡಿಯುಪಮಾ ।
ತೀತವೆಂದೆನೆ ಬಸವದಂಡಾಧೀಶ ವಿರಚಿಸಿದ ॥೨೨॥

ಇನ್ನರಿಯಬಹುದಾವನಿಂತೀ ।
ಶೂನ್ಯಸಿಂಹಾಸನವನೇರಿದ ।
ಡೆನ್ನ ಹೃದಯಾಂಬುಜರವಿಪ್ರಭುರಾಯನಹುದೆಂದು ॥
ತನ್ನೊಳಗೆ ನಿಶ್ಚೈಸಿ ನಿಜ ಸಂ ।
ಪನ್ನತೆಯಲಿರುತಿರ್ದನವನೀ ।
ಮಾನ್ಯನೆಮ್ಮಯ ಬಸವದಂಡಾಧೀಶನರ್ತಿಯಲಿ ॥೨೩॥

ನಡೆವ ಗತಿಯಲಿ ಹಂಸೆಯನು ಸರ ।
ವಿಡುವಗತಿಯಲಿ ಕೋಗಿಲೆಯ ನುಣ್ ।
ನುಡಿಗಳಿಂದಲಿ ರಾಜಕೀರನನರಿವ ತೆರನಂತೆ ॥
ಸಡಗರಿಸಿದೀ ಶೂನ್ಯಪೀಠವ ।
ನಡರಿ ನಿಲುವ ಮಹಾತ್ಮನೇಯೆ ।
ನ್ನೊಡೆಯನಹುದಹುದೆಂದು ನಿಶ್ಚೈಸಿದನು ಬಸವಣ್ಣ ॥೨೪॥

ಕಂಗಳಿದಿರಿನ ಕತ್ತಲೆಯನು ಪ ।
ತಂಗನಲ್ಲದೆ ಕಳೆಯಬಹುದೇ ।
ಅಂಗಸಹಜಾನಾದಿಗತ ಮಾಯಾತಮಂಧವನು ॥
ಹಿಂಗಿಸುವಡಾ ಗುರು ಗುಹೇಶ್ವರ ।
ಲಿಂಗನೆಯ್ತಂದಲ್ಲದಹುದೇ ।
ಸಂಗ ತಾನೇ ಬಲ್ಲನೆಂದೆನುತಿರ್ದ ಬಸವಣ್ಣ ॥೨೫॥

ತೃಷೆಯ ಕಳೆಯಲಿ ಬಹರು ಕೆಲಬರು ।
ಹಸಿವ ಕಳೆಯಲಿ ಬಹರು ಕೆಲಬರು ।
ವ್ಯಸನಗಳಿಗರ್ಥವನು ಬೇಡಲಿ ಬಹರು ಕೆಲಬರು ॥
ಸಸಿನೆ ಬಂದೀ ಶೂನ್ಯಪೀಠದ ।
ದೆಸೆಯ ನೋಡುವ ಪರಮ ಪುರುಷರ ।
ಹೆಸರ ಕಾಣೆನದೇನ ಹೇಳುವೆನದರ ಕೌತುಕವ ॥೨೬॥

ಆರು ಬಲ್ಲರು ಬಸವನೊಡ್ಡಿದ ।
ಪ್ರೇರಣೆಯನೆಂದೆನುತಲೆಲ್ಲರು ।
ದೂರದಲಿ ನೆರೆ ನೋಡಿ ಬೆರಗಹರಲ್ಲದದರನುವ ॥
ಆರು ಬಲ್ಲವರಾರು ಮೊಗಸುವ ।
ರಾರು ಹುಗುವವರಾರು ಮಹವಿ ।
ಸ್ತಾರವೆನಿಸಿದ ಶೂನ್ಯಸಿಂಹಾಸನದ ಸುಳಿವಳಿಯ ॥೨೭॥

ಹುತ್ತಿನೊಳಗಣ ಹೊಳ್ಳು ಹಾವಿಂ ।
ಗೆತ್ತ ಹೋದೊಡೆ ಸಸಿನವಲ್ಲದೆ ।
ಮತ್ತೆ ಮಿಕ್ಕಿನ ಜೀವಜಾಳಕಭೇದ್ಯವಾದಂತೆ ॥
ಎತ್ತ ಬಲ್ಲರು ಭಕ್ತರಲ್ಲದ ।
ಮತ್ತ ಭವಿಗಳು ಶೂನ್ಯಪೀಠದ ।
ಬಿತ್ತರವನೆಂದೆನುತ ಬೆರಗಾದುದು ಬುಧಸ್ತೋಮ ॥೨೮॥

ಮಂತ್ರ ಹಠ ಲಯ ರಾಜಯೋಗದ ।
ಸಂತೆಗಳ ಶಬ್ದಗಳ ಜಾಣರು ।
ಯಂತ್ರ(ಮಂತ್ರ) ವಾದಿಗಳಾರು ದರ್ಶನ ವೇಷಧಾರಿಗಳು ॥
ಇಂತು ಮೆರೆವವರೆಲ್ಲರೆಮ್ಮ ಮ ।
ಹಂತನೊಡ್ಡಿದ ಶೂನ್ಯಪೀಠದ ।
ಚಿಂತೆಯನೆ ವಿಸ್ತರಿಸರೇನೆಂದೆಂಬೆನಚ್ಚರಿಯ ॥೨೯॥

ಸಾರಿ ಲಕ್ಕದ ಮೇಲೆ ತೊಂಬ ।
ತ್ತಾರುಸಾವಿರ ಮಿಂಡಜಂಗಮ ।
ಮೀರಿ ಬಾಲರು ವೃದ್ಧರೆಯ್ತುಹರೆಣಿಕೆಗರಿದೆನಿಸಿ ॥
ಹೇರಿ ದಣಿದರು ತಮ್ಮ ಮನಸಿಗೆ ।
ತೋರಿದಿಷ್ಟಾರ್ಥಂಗಳಿಂದಲಿ ।
ನೀರ ಬಸವನ ಮನೆಯಲನುದಿನವಖಿಳ ಜಗವರಿಯೆ ॥೩೦॥

ಏನನೆಂಬೆನು ಬಸವನಾ ಸು ।
ಜ್ಞಾನಸಿಂಹಾಸನವ ತನ್ನ ಮ ।
ಹಾನುಭಾವದ ಭಣಿತೆಯಂತೆ ಸಮಸ್ತ ವಿಧದಿಂದೆ ॥
ತಾನು ನಿರ್ಮಿಸಿ ಬಳಿಕ ತನ್ನ ಮ ।
ನೋನುರಾಗದಲಮಳಹೃದಯ ।
ಧ್ಯಾನದಲಿ ನೆರೆ ನೆನೆವುತಿರ್ದನು ಗುರುಗುಹೇಶ್ವರನ ॥೩೧॥

**ಅಂತು ಗತಿ ೨೧ಕ್ಕಂ ಪದನು ೯೨೪ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೨೨
# ಅಲ್ಲಮಪ್ರಭು ಮೂರ್ತಗೊಂಡನು ಶೂನ್ಯಪೀಠದಲಿ

**ವಚನ**

ಕೆದರಿದ ತಲೆಯ ತೊನೆವ ನಡೆಯ ಹಣೆಯ ಬುಗುಟಿನ
ಕರಸ್ಥಲದ ಅನಿಮಿಷದಿಂ ಬಹಿರಂಗದ ವಚನತಪ್ಪಿ
ಇದಿರುಗೊಯಿಲು ತಾಗಿ ಪುರ್ಬೊಡೆದು
ಕಣ್ಣು ತರೆದು ಕಿವಿ ಹರಿದು ಜೋಲುವ ರಕ್ತಧಾರೆಯ
ಗಾಳಿಯ ಧೂಳಿಯ ಮಳೆಯ ಜೋರಿನ
ಬೆನ್ನಬಾಸುಳದ ಎಡಬಲದ ಬದಿಯ ತಟ್ಟಿನ
ಮುಳ್ಳುದರಹಿನ ಕಂಕುಳ ಸೀಳಂ ಕಂಡು
ನೋಡುವ ಜನರು ಬೆರಗಾಗೆ
ಪೊರವಾರಿನ ಮಸಿಯ ದಿಗಂಬರದ ಬಣಗು ಸುರಿವುತ್ತೆ
ಅಪ್ಯಾಯನವರತು ಬಿದ್ದು ಮೊಣಕಾಲೊಡೆದು
ಹೊಸ ಹುಣ್ಣಿನ ರಕ್ತದ ಜೋರು ಹರಿದು
ಮುಂಗಾಲು ತಲೆಯೊಡೆದು ಕಣಕಾಲು ಸಂದು ತಪ್ಪಿ
ಕಿರಿಬೆರಳು ಎಡಹಿ ಬೊಟ್ಟೊಡೆದು ಗಾಯದ
ಉರುಗುಟೊಂಕದ ಬರುಗುಂಟನ ನೋಡಾ ಚನ್ನಬಸವಣ್ಣಾ
ಅತ್ಯಂತ ಮಲಿನ ಕೂಡಲಸಂಗಮದೇವರ ಕುರುಹು ವಿಪರೀತ
ನೋಡುವರೆ ಭಯಂಕರವಾಗಿದೆ ಅಯ್ಯಾ ॥೧॥

ಅಟ್ಟಿ ಹಾಯುತ್ತ ಭೋಂಕನೆ ನಿಲ್ಲುತ್ತ ಒಮ್ಮೆ ಜಿನುಗುತ್ತ
ಒಮ್ಮೆ ಮರುಳನಂತೆ ಮಂಕಿನಂತೆ ದೆಸೆದೆಸೆಯ ನೋಡುತ್ತ
ಅಂಗಡಿಯ ರಾಜಬೀದಿಯ

ಶೃಂಗಾರಂಗಳಂ ನಲಿನಲಿದು ನೋಡುತ್ತ
ಇತ್ತರದ ಭದ್ರದ ಮೇಲೆ ನಾಂಟ್ಯವನಾಡುವವರಿಗೆ ಇದಿರಾಗಿ
ತಾ ಮರಳಿ ಆಡುತ್ತ ಹಾಡುತ್ತ ಬೈಯುತ್ತ ಕೆರಳಿ ನುಡಿವುತ್ತ
ವಾದ್ಯಮೇಳಾಪವ ಕಂಡು ಅಳಿಗೊಂಡು ನಗುತ್ತ
ಹಸ್ತವನಾಡಿಸಿ ಗತಿಯನುಚ್ಚರಿಸಿ ಕಯ್ಯೊಡನೆ ಮರುಳಾಟವನಾಡುತ್ತ
ಮೆಲ್ಲಮೆಲ್ಲನೆ ನಿಂದು ನೋಡಿ ನಲಿವುತ್ತ
ಎಂದಿನ ಸುಳಿಹಿನೊಳಗಲ್ಲದ ಸುಳುಹು
ಬಸವ ನಿಮ್ಮಾಣೆ ಸೊಡ್ಡಳನಲ್ಲದೆ ಮಾಣನು ॥೨॥

ಬಾಲನಹನೊಮ್ಮೆ ಲೋಲನಹನೊಮ್ಮೆ
ವೃದ್ಧನಹನೊಮ್ಮೆ ಮತ್ತನಹನೊಮ್ಮೆ
ಹೊಳೆದು ತೋರುವನೊಮ್ಮೆ ತೋರಿಯಡಗುವನೊಮ್ಮೆ
ವಿಶ್ವ ನೋಡಿ ಬೆರಗಾಗುತ್ತಿರೆ
ಇದ್ದ ಠಾವಿನಲಿದ್ದು ಮುಂದೆ ತೋರುತ್ತಿರಲು
ಸಂಪ್ರದಾಯದವರು ಒಡನೊಡನೆ ಹರಿದು ಬಂದು ಹೇಳುತ್ತಿರಲು
ಹತ್ತೆ ಸಾರಿದ ಬಸವಣ್ಣನ ಮಹಮನೆಯ ತಲೆಯೆತ್ತಿ ನೋಡಿ
ಮಗಿಲ ಮೂಲೆ ತಪ್ಪದೆ
ಕುಸುರಿಗೆಲಸದ ನಂದಿಯ ಮಂಟಪಂಗಳ ಮೇಲೆ
ನಗುತ್ತ ಮುತ್ತಿನ ತೋರಣಕೆ ಹಾರೈಸಿ
ಬಸವಣ್ಣನವರ ಮನೆಯ ಹೊಕ್ಕ ಕಲಿದೇವರ ದೇವನು ॥೩॥

ಬಲಕ್ಕೆ ಮುರಿದನು
ಪೌಳಿಯ ಉತ್ತರಬಾಗಿಲಲ್ಲಿ ತಲೆವಾಗಿ ಹೊಕ್ಕು
ತ್ರಿವಿಧ ಗತಿಯ ಶೂನ್ಯಸಿಂಹಾಸನದ ಮೇಲೆ
ಮುಕ್ತಕೇಶದ ಪರಮಗುರುರಾಜನೇರಿದ ನೋಡಾ
ಕಲಿದೇವರ ದೇವನು ॥೪॥

ಇದ್ದ ಪರಿಯಿಂತು ಅರಿದೆ ನೋಡಯ್ಯಾ
ನಿಂದರೆ ನೆಳಲಿಲ್ಲ ನಡೆದರೆ ಹೆಜ್ಜೆಯಿಲ್ಲ
ಭೂತದೊಳಗೆ ತಾನು ಕಂಡುದಿಲ್ಲ
ಇಂತಪ್ಪ ನಿಯಮ ಸುಳುಹು ಅಹುದಹುದು, ಅರಿದು ಜಂಗಮ ಸ್ಥಲ
ಇಂತುಟಲ್ಲದೆ ಎಂತುಟು ಹೇಳಾ
ಅಪ್ಯಾಯನದರಿಕೆಯ ಹೊಲಬ ಕಾಣಬಾರದು
ಊಡಿದಡೆ ಉಣ್ಣನೋ ಉಂಬನೋ
ಉಂಬುದುಂಟಾದರೆ ನೀಡುವೆನು ಕೂಡಲ ಸಂಗಮದೇವರಿಗೆ
ಚೆನ್ನಬಸವಣ್ಣನು ಅಹುದಹುದೆನಲಿಕೆ ॥೫॥

ವಿಪಿನದೊಳು ಮದಕರಿಯ ಹಿಂಡು
ಆನಂದದ ಲೀಲೆಯೊಳಾಡುತ್ತಿರಲು ಕೇಸರಿ ಬರಲು
ಮದಕರಿಗಳೆಲ್ಲ ಕೆದರಿ ಓಡುವ ತೆರನಂತೆ
ಸಾಕಾರ ಸೊಡ್ಡಳ ನಿಮ್ಮ ಶರಣ ಪ್ರಭುದೇವರು ಬರಲೊಡನೆ
ಹಾರಿದರಯ್ಯಾ ನೆರೆದ ಶಿವಗಣಂಗಳು ॥೬॥

**ಸೂಚನೆ**

ಪ್ರಾರ್ಥನೆಗೆ ಪರಿಣಮಿಸಿ ಕಾರಣ ।
ಕರ್ತೃವೆನಿಸಿ ಗುರು ಗುಹೇಶ್ವರ ।
ಮೂರ್ತಿಗೊಂಡನು ಶೂನ್ಯಸಿಂಹಾಸನವ ಶಿಖರದಲಿ ॥

ಪ್ರತಿರಹಿತ ಪರಮಾರ್ಥ ಜಾರಿ ।
ತ್ರತೆಯನೊಳಕೊಂಡಪ್ರಮೇಯನ ।
ಗತಿಯ ಗಂಭೀರತೆಯ ನಿರ್ದೇಹಿಯ ನಿಜಾಕೃತಿಯ ॥
ಮತಿಯುತು ಮಿಗೆ ತತ್ವವಿತ್ತುಗ ।
ಳತಿಶಯದಿ ಲಾಲಿಸುವುದೀ ಸಂ ।
ಗತಿಯ ಸಂಗ್ರಹಿಸಿದ ಮಹಾ ಪ್ರಭುಲಿಂಗಲೀಲೆಯಲಿ ॥೧॥

ದೂರದಲಿ ಪತಿಯಿರಲು ಸತ್ಕುಲ ।
ನಾರಿ ಪುಷ್ಟಿತೆಯಾಗಿ ಸಲೆ ಸುಕು ।
ಮಾರನಾಪೇಕ್ಷೆಯಲಿ ತನ್ನಯ ವಲ್ಲಭನ ಬರವ ॥
ಹಾರುವಂತೆ ಶಿವಾನುಭಾವವಿ ।
ಚಾರದಿಂದಲಿ ನಿತ್ಯಸುಖಮಯ ।
ಕಾರಣಕೆ ಬಸವಣ್ಣ ಬಯಸಿದನಲ್ಲಮನ ಬರವ ॥೨॥

ಹಣ್ಣಿ ಹನ್ನೆರಡಬ್ದವಾಯಿತು ।
ಶೂನ್ಯಸಿಂಹಾಸನವನಕಟಾ ।
ಎನ್ನ ಗುರುವಿನ್ನೆಂದು ಬಿಜಯಂಗೈದು ಕರುಣದಲಿ ॥
ಕಣ್ಣಬರವನು ತಿಳುಹಿ ತೆಕ್ಕನೆ ।
ತನ್ನ ಮೂರ್ತಿಯ ತೋರಿ ತೊಲಗದೆ ।
ಮನ್ನಿಸುವನೋ ಎನುತಲಾ ಬಸವಣ್ಣ ಚಿಂತಿಸಿದ ॥೩॥

ಅರಸನರಿಯದ ಬಿಟ್ಟಿಗೆಲಸದ ।
ಪರಿಯಲಾಯಿತೆ ಎನ್ನ ಮಾಟದ ।
ಪರಿಕರಣೆ ಫಲವೀಯಲರಿಯದೆ ಶಿವ ಮಹಾದೇವ ॥
ಹರ ಹರಾ ಎಂದೆನುತ ಚಿಂತಾ ।
ತುರತೆಯಲಿ ಹೊರಗೊಳಗನಾಲಿಸು ।
ತಿರುತಲಿದ್ದನು ಬಯಸಿ ಬರವನು ಬಸವನಲ್ಲಮನ ॥೪॥

ಅತನಂತಃಕರಣವಾತನ ।
ಮಾತ ಕೇಳುವುವಾಗಿ ದಿಟ ಬಳಿ ।
ಕಾತನಾಜ್ಞಾ ಮಾತ್ರದಿಂದಾ ಸ್ಥೂಲ ತನುವಿನಲಿ ॥
ಓತಿರಲು ಬೇಡೆಂದಡಾಗಳೆ ।
ಭೀತಿಯಿಂದೊಳವೊಕ್ಕು ತಮ್ಮಯ ।
ಧಾತುಗೆಟ್ಟಿಹವೇನನೆಂಬೆನು ಬಸವನನುಭವವ ॥೫॥

ಈ ತೆರದಲಾ ಶಿವಸಮಾಧಿ ।
ಪ್ರೀತಿಯಿಂದಿರಲೊಂದು ದಿನ ತಾ ।
ನೋತು ತನ್ನಯ ಸುಲಲಿತಾಂತರ್ಮುಖದ ಮುಕುರದಲಿ ॥
ಪ್ರೀತಿಯಲಿ ತನಗಲ್ಲಮಪ್ರಭು ।
ವೈತಹುದನೊಲಿದಮಲತತ್ವ ವಿ ।
ಭೂತಿಯನು ತನಗೀವುದನು ನೆರೆ ಕಂಡ ಬಸವಣ್ಣ ॥೬॥

ಕಂಡು ಕಡು ಸುಮ್ಮಾನ ಸುಖವೆಡೆ ।
ಗೊಂಡು ರೋಮಾಂಚನದ ಬಿಗುಹಿನ ।
ದಂಡಿ ಕಡುದಟ್ಟೈಸುತಿರೆ ಬಳಿಕಿತ್ತಲಾ ಮನವ ॥
ಮಂಡಿಸಿದನಾ ಸ್ಥೂಲಕಾಯದ ।
ಮಂಡೆಯಲಿ ಪಸರಿಸಿದುವಾಗಳೆ ।
ತಂಡತಂಡದ ನಾಡಿಗಳು ಬಸವಣ್ಣನವಯವದ ॥೭॥

ಬಲದ ಭುಜ ಬಲಗಣ್ಣು ಬಲಮೈ ।
ಯಲುಗ ತೊಡಗಿದುದೊಡನೊಡನೆ ಮಿಗೆ ।
ನಲಿವುತಿರ್ದುದು ಚಿತ್ತಚಿಂತಾಯಕನ ಬರವಿಂಗೆ ॥
ಒಲಿದು ಬಳಿಕಾ ಹದನನೆಲ್ಲವ ।
ತಿಳುಹಿದನು ವಿಸ್ತರಿಸಿ ಭಕ್ತಿಗೆ ।
ತಿಲಕವೆನಿಸಿದ ಚೆನ್ನಬಸವಣ್ಣಂಗೆ ಬಸವಣ್ಣ ॥೮॥

ತಡೆಯದೀಕ್ಷಣವಿಷ್ಟಸಿದ್ಧಿಯ ।
ಕೊಡುವ ಶುಭಸೂಚನೆಗಳಾದುವು ।
ಬಿಡು ದುಮಾನವ ಕಟ್ಟಿಸಿನ್ನೇಳುಪ್ಪರದ ಗುಡಿಯ ॥
ಅಡಸಿ ವೇದನಿಕಾಯವರಸಿದ ।
ಡಡಿಯ ತೋರಿಸದಮಲ ಬೊಮ್ಮವೆ ।
ನಡೆದು ಬರುತಿಹದೆಂದು ನುಡಿದನು ಚೆನ್ನಬಸವಣ್ಣ ॥೯॥

ಭಣಿತೆಯಲಿ ಬಸವನ ನಿರೂಪದ ।
ಲಣಿವರಿದು ಪುರದೊಳಗೆ ಗುಡಿತೋ ।
ರಣಪತಾಕೆಗಳಾದಿಯಾದ ಸಮಸ್ತ ಸಂಭ್ರಮವ ॥
ಕ್ಷಣದೊಳಗೆ ರಚಿಸಿದರು ಸುರಪುರ ।
ಕೆಣೆಯೆನಲು ಸೌರಂಭದಿಂದಲಿ ।
ಕಣುಮನಕೆ ಕಲ್ಯಾಣವೇ ತಾನಾಯ್ತು ಕಲ್ಯಾಣ ॥೧೦॥

ಕತ್ತುರಿಯ ಕರ್ದಮದ ಕದಡಿನ ।
ಸುತ್ತವಳಯದಿ ತೊಳಗಿ ಬೆಳಗುವ ।
ಮುತ್ತಿನೋಳಿಯ ರಂಗವಾಲಿಯ ಚಿತ್ರವೀದಿಗಳ ॥
ತೆತ್ತಿಸಿದ ಪೂವಲಿಯ ಪೂರದ ।
ಹೊತ್ತಿ ಹೊಗೆವ ಸುಗಂಧ ಧೂಪದ ।
ಲೆತ್ತನೋಡಿದಡತ್ತ ಕಡು ಚೆಲುವಾಯ್ತು ಕಲ್ಯಾಣ ॥೧೧॥

ತಳಿದ ಗುಡಿ ತೋರಣ ಪತಾಕೆಯ ।
ನೆಣಲು ರವಿಕಿರಣಗಳ ದಾಳಿಯ ।
ದಳದುಳಕೆ ಮಾರಾಂತು ನಿಂದುವು ಬೀದಿ ಬೀದಿಯಲಿ ॥
ಸುಳಿವ ಗಣಿಕಾಜನದ ನಗೆಗಂ ।
ಗಳ ವಿಳಾಸದ ಬೆಳಗು ಬೆಳುದಿಂ ।
ಗಳನೆ ಬೀರುತ್ತಿರ್ದುದಾ ಕಲ್ಯಾಣಪುರದೊಳಗೆ ॥೧೨॥

ಮನದೊಡನೆ ಮನೆ ತಳಿತು ರೋಮಾಂ ।
ಚನದೊಡನೆ ಗುಡಿ ಹೆಚ್ಚಿ ಹಿಗ್ಗುವ ।
ತನುವಿನೊಡನೆ ಸಮಸ್ತ ಭಕ್ತಸ್ತೋಮ ನಿಮಿಷದಲಿ ॥
ಅನುಕರಿಸಿ ಕೈಗೆಯ್ದುದಾಗಳೆ ।
ಘನಕೆ ಘನವೆನೆ ಬಸವರಾಜನ ।
ಮನೆಯೊಳಾ ಪ್ರಭುರಾಯ ಬಹ ಮಂಗಳ ಮಹೋತ್ಸವಕೆ ॥೧೩॥

ಆವ ವೇಷವ ತೊಟ್ಟಿಹನೋ ಮೇ ।
ಣಾವ ಪಥದಲಿ ಸುಳಿವನೋ ದಿಟ ।
ವಾವ ವೇಳೆಯಲೊಲಿದು ಬಹನೋ ಶಿವ ಮಹಾದೇವ ॥
ಭಾವಿಸುವೊಡರಿದೆನುತಲಾ ಪ್ರಭು ।
ದೇವರಿಗೆ ತಾನಿದಿರುವೋಗುತ ।
ಲೀ ವಿಚಾರವನೆಣಿಸುತಿರ್ದನು ಬಸವದಂಡೇಶ ॥೧೪॥

ಇಡಿದ ಸರ್ವಾಂಗದ ವಿಭೂತಿಯ ।
ಜಡಿದ ರುದ್ರಾಕ್ಷೆಗಳ ಮಾಲೆಯ ।
ತೊಡಿಗೆಗಳ ಧವಳಾಂಬರಂಗಳ ಮೆಯ್ಯ ಮುಖಕಳೆಯ ॥
ಮಡಿವಳಯ್ಯನು ಚೆನ್ನಬಸವನು ।
ಹಡಪದಪ್ಪಣ್ಣಗಳು ಸಹಿತವೆ ।
ನಡೆದನಿದಿರನು ಬಸವದಂಡಾಧೀಶನಲ್ಲಮಗೆ ॥೧೫॥

ದೆಸೆದೆಸೆಯ ಕಂಪಡಲಿಕನುಲೇ ।
ಪಿಸಿದ ಮೆಯ್ಗಂಪುಗಳ ಭೂಷಣ ।
ವಿಸರ ಲಹರಿಯ ರತ್ನರಾಜಿಯ ಬೆರಕೆವೆಳಗುಗಳ ॥
ಮುಸುರಿ ಮುಂಗುಡಿಗಳಲಿ ಕೈವಾ ।
ರಿಸುವ ಕೈವಾರಿಗಳ ನೆರವಿಯ ।
ವಸುಮತೀಶರು ಸಹಿತ ನಡೆದನು ಬಸವದಂಡೇಶ ॥೧೬॥

ಎಡಬಲಂಗಳೊಳೆಯ್ದೆ ಭಕ್ತರ ।
ಗಡಣ ಹಿಂಭಾಗದಲಿ ನಾನಾ ।
ಪೊಡವಿಪಾಲಕುಮಾರಕರ ಸಂದಣಿಯ ಸಂದೋಹ ॥
ಬಿಡದೆ ಕೈವಾರಿಸುವ ನೆಲನು ।
ಗ್ಘಡಣೆಕಾರರ ಮೊತ್ತಗಳು ಮುಂ ।
ಗುಡಿಯಲೊಪ್ಪಿರೆ ನಡೆದನಿದಿರನು ಬಸವದಂಡೇಶ ॥೧೭॥

ಮಾವುತರು ಮನ್ನೆಯರು ರಥಿಕರು ।
ರಾವುತರು ಕರಣಿಕರು ಕವಿಗಳು ।
ಭಾವುಕರು ಭರತಜ್ಞರೆಲ್ಲಾ ಪರಿಯ ಪರಿಣತೆಯ ॥
ಸೇವಕರು ಸಹಿತಲ್ಲಮಪ್ರಭು ।
ದೇವರಡಿಗಿದಿರಾಗಿ ನಡೆದನು ।
ಪಾವನಾತ್ಮಕ ಬಸವದಂಡಾಧೀಶನರ್ತಿಯಲಿ ॥೧೮॥

ಪರಿಪರಿಯ ಸತ್ತಿಗೆಯ ಸಾಲಿನ ।
ಪರಿಪರಿಯ ಚಾಮರದ ಚಾಳಿಯ ।
ಪರಿಪರಿಯ ಕೈಕಂಬಿಕಾರರು ಜಡಿವ ಗಡಿಬಿಡಿಯ ॥
ಪರಿಪರಿಯ ಮೆಯ್ದೊಡಹಿನುಲುಹಿನ ।
ಪರಿಪರಿಯ ಭುಜಬಲದ ಸುಭಟರ ।
ನೆರವಿ ಸಹಿತಿದಿರಾಗಿ ನಡೆದನು ಬಸವನಲ್ಲಮಗೆ ॥೧೯॥

ಕನ್ನಡಿಯ ಕಳಸದವಿಲಾಸದ ।
ಹೊನ್ನಕೇದಗೆಗರಿಯ ಮುತ್ತಿನ ।
ಚೆನ್ನ ದಂಡೆಯ ಪೂವಿಡಿದ ನರುಗಂಪುಗಳ ಮುಡಿಯ ॥
ರನ್ನದಲಿ ರಂಜಿಸಿದ ತೊಡಿಗೆಗ ।
ಳುನ್ನತಿಯ ಸಿಂಗಾರವೊಪ್ಪುವ ।
ಕನ್ನೆಯರು ಸಹಿತಿದಿರುವೋದನು ಬಸವನಲ್ಲಮಗೆ ॥೨೦॥

ನಡೆವ ಗಮಕದ ನಗುವ ಚೆಲುವಿನ ।
ನುಡಿಯ ನುಂಪಿನ ಸೊಬಗನೇ ಸಾ ।
ಲಿಡುವ ನೋಟದ ನಟನೆಯನೆ ನಾಟಿಸುವ ತನುಲತೆಯ ॥
ಒಡನೆ ಕವಿತಹ ತುಂಬಿಗುಚಿತವ ।
ಕೊಡುವ ಮೆಯ್ಗಂಪುಗಳ ಸೊಂಪಿನ ।
ಮಡದಿಯರು ಪಿಡಿದೆಯ್ದುತಿರ್ದರು ಮಂಗಳಾರತಿಯ ॥೨೧॥

ಒಳದೊಡೆಯು ನಸುದೋರಲಿಕೆ ನಿರಿ ।
ತೊಲಗೆ ನಳಿತೋಳುಗಳ ಬೀಸುವ ।
ಚೆಲುವಿಕೆಯಲೋಸರಿಸೆ ಮೇಲುದ ತೋರ ಮೊಲೆಯಲುಗೆ ॥
ಬಳಲು ಮುಡಿ ಬಸವಳಿಯೆ ಬಡನಡು ।
ಬಳುಕೆ ರವೆಯದ ರತ್ನಭೂಷಣ ।
ಘುಲುಘುಲುಸುತಿರಲಿದಿರ ನಡೆದರು ವಾರವನಿತೆಯರು ॥೨೨॥

ಹಿರಿದು ಗರ್ಜಿಸುವಾನೆಗಳು ಕೇಂ ।
ಕರಿಸುತಿಹ ವಾಹಿಗಳು ದಿಗುತಟ ।
ಬಿರಿಯೆ ಚೀರುವ ಶಂಖ ಮೌರಿಯು ಕೊಂಬು ಕಹಳೆಗಳು ॥
ಧರಣಿಯದಿರಲು ಗಿರಿಗಳುರುಳಲು ।
ನೆರೆದು ಮೊಳಗುವ ಭೇರಿ ತಂಬಟೆ ।
ಕರಡೆ ನಿಸ್ಸಳ ಸಹಿತಲಿದಿರೆಯ್ದಿದನು ಬಸವಣ್ಣ ॥೨೩॥

ಎಲ್ಲಿ ನೋಡಲು ಛತ್ರ ಚಾಮರ ।
ವೆಲ್ಲಿ ನೋಡಲು ಸಿಂಧ ಸೀಗುರಿ ।
ಯೆಲ್ಲಿ ನೋಡಲು ಸೊಕ್ಕಿದಾನೆಯ ಸುಳಿವ ಹೆಕ್ಕಳವು ॥
ಎಲ್ಲಿ ನೋಡಲು ಕುಣಿವ ಕುದುರೆಗ ।
ಳೆಲ್ಲಿ ನೋಡಲು ನಲಿವ ಪುರಜನ ।
ವೆಲ್ಲಸಹಿತಿದಿರಾಗಿ ನಡೆದನು ಬಸವದಂಡೇಶ ॥೨೪॥

ಬೊಟ್ಟನನಿತು ವಿಭೂತಿಯಿಟ್ಟೊಡೆ ।
ಬೆಟ್ಟದನಿತು ಪಿಶಾಚತನವಳ ।
ವಟ್ಟು ನಿಲುವುದು ದಿಟವಲಾ ಬರಿದೇಕೆ ಪುರದೊಳಗೆ ॥
ಕಟ್ಟಿಸಿದ ಗುಡಿಗಳನು ಬಸವನ ।
ಕಟ್ಟಳೆಯೆ ಕಡುಚೋದ್ಯವೆನುತಲಿ ।
ಮುಟ್ಟಿಸಿದರಾ ಹದನನಾಗಳೆ ಖಳರು ಬಿಜ್ಜಳಗೆ ॥೨೫॥

ಕನಸಿನಲಿ ಪಕ್ವಾನ್ನಫಲಗಳ ।
ಘನತರವ ಕಂಡೆದ್ದು ಕರೆ ಬಿ ।
ದ್ದಿನರಿಗುಣಲಿಕ್ಕೆಂಬರಂತೀ ಬಸವದಂಡೇಶ ॥
ತನಗೆ ಶುಭಸೂಚನೆಗಳೊದಗಿದು ।
ವೆನುತ ವಿಭವದಲಿದಿರು ಹೋದನು ।
ಜನಪ ಚಿತ್ತೈಸೆಂದರಾ ಲಾವಕರು ಬಿಜ್ಜಣಗೆ ॥೨೬॥

ಏನು ಕೌತುಕ ದಂಡನಾಯಕ ।
ನೇನ ನೆಗಳಿದನಾರು ಬಂದಹ ।
ರೇನ ಕಂಡರದೇನನೆಂಬೆವು ಭಕ್ತರಭಿಮತವ ॥
ತಾನೆ ಬಲ್ಲನು ತನ್ನ ಮಹಿಮೆಯ ।
ನೇನ ನಾವೆನಬಹುದು ತುದಿಯಲಿ ।
ತಾನೆ ಕಾಣಲಿಬಹುದು ಕಾರಿಯವೆಂದನವನೀಶ ॥೨೭॥

ಇತ್ತಲೀ ಹದನಾಯ್ತು ಬಳಿಕಿ ।
ನ್ನತ್ತಲಾ ಬಸವಣ್ಣ ತನ್ನಯ ।
ಚಿತ್ತದಲಿ ಚಿಂತಿಸಿದನಾ ಪ್ರಭು ಬಾರನೇ ಎನುತ ।
ಅತ್ತಲೀ ಸ್ಥಿತಿಗತಿಯನಾ ಸ ।
ರ್ವೋತ್ತಮ ಪ್ರಭುರಾಯ ಲೀಲಾ ।
ವೃತ್ತಿಯಿಂದರಿದನುವ ನೆನೆದನು ತಾನೆ ತನ್ನೊಳಗೆ ॥೨೮॥

ವಂದನೆಯ ವೇಷಂಗಳಂದವ ।
ಹೊಂದದೆಲ್ಲರ ಕಂಗೆ ಮರುಳಿನ ।
ಚಂದದಿಂಗಿತದಿಂದೆ ಸುಳಿದರೆ ಬಸವ ಬಳಿಕೆನ್ನ ॥
ಅಂದದೊಳಗನು ತಿಳಿವನೋ ಮೇಣ್ ।
ಮಂದಮತಿಯಾಗಿಹನೊ ನಾನಿದ ।
ನಿಂದು ನೋಡುವೆನೆನುತಲಾ ಪ್ರಭುರಾಯನನುಗೆಯ್ದು ॥೨೯॥

ಅಣಕಿಸುವ ಬಾಧಕರ ಬಾಯನೆ ।
ಟೊಣೆದು ಬಸವನ ಭಕ್ತಿಭಾರದ ।
ಹೊಣಕೆಯನೆ ಹುಂ (ಮುಂ?)ಕೊಂಡು ಪೂರೈಸಲಿಕೆ ಬೇಕೆನುತ ॥
ಎಣಿಸಬಾರದ ನೆರೆದ ನೆರವಿಯ ।
ಕಣುಮನಕೆ ಕಾಣಿಸಿದನೊಂದೇ ।
ಕ್ಷಣದೊಳಗೆ ನಮ್ಮಲ್ಲಮಪ್ರಭುಲಿಂಗ ಲೀಲೆಯಲಿ ॥೩೦॥

ಬೀದಿಬೀದಿಗಳೊಳಗೆ ನೋಟಕ ।
ರಾದಿಯಾದ ಸಮಸ್ತ ಪುರಜನ ।
ವೆಯ್ದೆ ನಿರ್ಮಲವಾಗಿಯೊಂದೇ ಬಾರಿ ಕಾಂಬಂತೆ ॥
ಆದಿಮಧ್ಯಾಂತರಗಳಿಲ್ಲದ ।
ನಾದಿ ಸಿದ್ಧನು ಹಲವು ಮೈಯಲಿ ।
ಭೇದವಿಲ್ಲದೆ ಸುಳಿದನಾ ಪ್ರಭುಲಿಂಗ ಲೀಲೆಯಲಿ ॥ ॥೩೧॥

ಪಟ್ಟಣಕೆ ಬೇಕಾಗಿ ರಚಿಸಿದ ।
ಬಟ್ಟೆಬಟ್ಟೆಗಳೊಳಗೆ ನಡೆತಂ ।
ದಿಟ್ಟಣಿಸಿ ನೋಡುವವರಿಗಲ್ಲಲ್ಲಿಗೆ ವಿನೋದದಲಿ ॥
ನೆಟ್ಟನಾ ಪ್ರಭು ಕಪಟಕಾಯದ ।
ಕಟ್ಟಳೆಯ ಕಾಣಿಸಿದನಂತದ ।
ನಿಟ್ಟಿಸುವೊಡರಿದಾದುದೇನೆಂದೆಂಬೆನಚ್ಚರಿಯ ॥೩೨॥

ಬಿಟ್ಟ ಮಂಡೆಯ ಕೆಂಚುಗೂದಲು ।
ನಿಟ್ಟೊಡಲ ನಿಡುದೋಳ ತೊನಹಿನ ।
ಮುಟ್ಟದೆವೆಗಳ ನಟ್ಟ ನೋಟದ ಲಂಬಕರ್ಣಗಳ ॥
ದಟ್ಟಡಿಯ ಮಲೆವಂಗದೊಲಹಿನ ।
ಕಟ್ಟಳೆಯ ಕಡು ಮರುಳು ವೇಷದ ।
ತೊಟ್ಟು ತೊಟ್ಟನೆ ಸುಳಿದನಾ ಪ್ರಭುಲಿಂಗ ಲೀಲೆಯಲಿ ॥೩೩॥

ಉರುಗು ಟೊಂಕದ ಕುಂಟಗಾಲಿನ ।
ಬೆರೆತ ಬಿಂಕದ ಮೆಯ್ಯ ಬಿಗುಹಿನ ।
ತರೆದ ಬಾಸುಳ ಬದಿಯ ಮುಸುರುವ ನೊಣದ ಹುಣ್ಣುಗಳ ॥
ಕಿರುನಗೆಯ ಕಟವಾಯ ಜೋರಿನ ।
ಕುರುಹನಡಗಿಸಿಕೊಂಡ ಹಸ್ತದ ।
ನಿರಿಗೆಯಲಿ ನೆರೆಸುಳಿದನಾ ಪ್ರಭುಲಿಂಗ ಲೀಲೆಯಲಿ ॥೩೪॥

ನೋಡುವವರ ನೆರೆಯಟ್ಟಿ ಮುಟ್ಟಿಸಿ ।
ಯೋಡಿಹೋಗುತ ಮರಳಿ ಹಿಂದಕೆ ।
ಕೋಡಕಯ್ಯವರುಗಳನೇಡಿಸಿ ಬೀಳುತೇಳುತಲಿ ॥
ಹಾಡುತಲಿ ನಲಿನಲಿದು ಹರಿಸುಟಿ ।
ಯಾಡುತಲಿ ನಾನಾ ವಿನೋದವ ।
ಮಾಡುತಿರ್ದನು ಜಗದೊಳಾ ಪ್ರಭುಲಿಂಗ ಲೀಲೆಯಲಿ ॥೩೫॥

ಒಮ್ಮೆ ಶಿಶುವಹನೊಮ್ಮೆ ಗುರುವಹ ।
ನೊಮ್ಮೆ ಬಣಗಹನೊಮ್ಮೆ ಪಟುವಹ ।
ನೊಮ್ಮೆ ರೂಪಹನೊಮ್ಮೆ ಬಕ್ಕಟ ಬಟ್ಟ ಬಯಲಹನು ॥
ಒಮ್ಮೆಯಿಲ್ಲಿಹನೊಮ್ಮೆಯಲ್ಲಿಹ ।
ನೊಮ್ಮೆಯೆಲ್ಲಾಯೆಡೆಯೊಳಿಹ ಪರ ।
ಬೊಮ್ಮನಲ್ಲಮಲಿಂಗ ನಟಿಸಿದನೀ ಪ್ರಕಾರದಲಿ ॥೩೬॥

ಹಾಡಿದಡೆ ಹಾಡುವನು ಪಾತ್ರವ ।
ನಾಡಿದಡೆ ತಾನಾಡುವನು ಕೊಂ ।
ಡಾಡಿದಡೆ ಕೊಂಡಾಡುವನು ನಮಿಸಿದಡೆ ನಮಿಸುವನು ॥
ನೋಡಿದಡೆ ನೋಡುವನು ಜೀವರು ।
ಮಾಡಿದಂತಿರೆ ಮಾಡಿ ನಿರ್ಗುಣ ।
ಗಾಢವನೆ ಪಸರಿಸಿದನಾ ಪ್ರಭುಲಿಂಗ ಲೀಲೆಯಲಿ ॥೩೭॥

ಕಂಡವರು ಬೆರಗಾಗಿ ಬೆಬ್ಬಳ ।
ಗೊಂಡು ನೋಡುತಲಿರ್ದರಾತನ ।
ದಂಡಿಯನು ತಾವರಿಯಲರಿಯದೆ ಕೂಡೆ ಜನವೆಲ್ಲ
ಕಂಡನಾತನ ಕಪಟವೇಷದ ।
ಕಂಡಿಯನು ನೆರೆ ನೋಡಿ ಭಾವಿಸಿ ।
ದಂಡನಾಯಕ ಬಳಿಕ ನಿಶ್ಚಯಿಸಿದನು ಗುರುವೆಂದು ॥೩೮॥

ನೆಲನ ಮರೆಗೊಂಡಿಹ ನಿಧಾನದ ।
ಹೊಲಬನಂಜನವಿಡಿದ ಕಣ್ಣಿನ ।
ಬಲುಹನುಳ್ಳವ ಕಾಬವೊಲು ಕರ ವಿಕೃತ ವೇಷದಲಿ ॥
ಸುಳಿವ ಸಾಕ್ಷಾದಪ್ರಮೇಯನ ।
ನಿಲವನರಿದನು ಕರಣಗಳ ನಿ ।
ರ್ಮಲತೆಯೊಳು ನಿಶ್ಚಯಿಸಿ ಬಳಿಕಾ ಬಸವದಂಡೇಶ ॥೩೯॥

ಉಕ್ಕಿದುದು ಮನವರಿದು ಕಂಗಳು ।
ಮುಕ್ಕುಳಿಸಿದುವು ಮೂರ್ತಿಯನು ಕವಿ ।
ದೊಕ್ಕುವಾನಂದಾಶ್ರು ತಲೆದೋರಿದುವು ತನುಪುಳಕ ॥
ಮಿಕ್ಕು ಮಿಗೆ ಮತಿ ಮರೆದು ಹರುಷವು ।
ಹಕ್ಕೆಗೊಂಡುದು ನಲವಿನಲಿ ಮೈ ।
ಯಿಕ್ಕದನು ಬಸವಣ್ಣನಲ್ಲಮಲಿಂಗನಂಘ್ರಿಯಲಿ ॥೪೦॥

ಘನಮಹಿಮ ಶಿವಭಕ್ತರೆಲ್ಲರು ।
ತನತನಗೆ ಹರಿತಂದು ತಮ್ಮಯ ।
ತನುವನೀಡಾಡಿದರು ಬಳಿಕಾ ಪ್ರಭುವಿನಂಘ್ರಿಯಲಿ ॥
ವನಿತೆಯರು ನಲವಿನಲಿ ಜಯ ಜಯ ।
ವೆನುತ ಕರ ನಖ ನಯನಗಳ ಬೆಳ ।
ಗನೆ ನಿವಾಳಿಸುತೆತ್ತುತಿರ್ದರು ಮಂಗಳಾರತಿಯ ॥೪೧॥

ಶರಣು ಶರಣೆಂದಿದಿರುಗೊಂಡರು ।
ತಿರುಗಿದುದು ಜನವೆಲ್ಲ ನೆರೆದ ।
ಬ್ಬರಿಸಿದುವು ವಾದ್ಯಗಳು ಮಿಗೆ ಕಲ್ಯಾಣಪುರದೊಳಗೆ ॥
ಬರುತಲಿರ್ದನು ಸಕಲ ಪದದಲಿ ।
ಭರಿತನಾಗಿಯಿದೇನು ಮಹಿಮೆಯ ।
ಹರಹಿಕೊಂಡೆಯ್ತಂದನೋ ಪ್ರಭುಲಿಂಗಲೀಲೆಯಲಿ ॥೪೨॥

ಬಗೆವಡಾ ಹನ್ನೆರಡು ಯೋಜನ ।
ದಗಲವಾಗಿಯೆ ಬಹಳವೆನಿಸಿದ ।
ನಗರದೊಳಗೆಲ್ಲೆಲ್ಲಿ ನೋಡಿದಡಲ್ಲಿಯಲ್ಲಮನು ॥
ಬಗಿದು ಹುಗಲೆಡೆಯಿಲ್ಲವೆಂಬವೊ ।
ಲಗಣಿತಪ್ರತಿಯಾಗಿ ಸುಳಿದನು ।
ಪೊಗಳ ಬಲ್ಲವರಾರು ದಿಟವಾತನ ಮಹಾತ್ಮೆಯನು ॥೪೩॥

ಕೇರಿಕೇರಿಯೊಳಾಡುತಿಹ ಸುಕು ।
ಮಾರಕರ ಕಂಡಾಡುವನು ಪರಿ ।
ವಾರದೊಳು ದಿಟದಂತೆ ಪಾಯಕತನವ ಪಸರಿಸುವ ॥
ಆರು ಕಂಡರೆಯವರವೊಲು ಸಾ ।
ಕಾರನಾಗಿಹನಲ್ಲದೊಂದು ಶ ।
ರೀರ ತಾನಲ್ಲೆಂಬುದನು ತೋರಿದನು ಪ್ರಭುರಾಯ ॥೪೪॥

ಹಸು ತೃಷೆಯ ಹರಿವರಿಯನರಿಯದೆ ।
ಮಿಸುಗುವೆವೆ ಕಣ್ಣಾಲಿಗಳನಾ ।
ಡಿಸದೆ ನಡೆತಂದಾ ಮಹಾತ್ಮನ ಕೂಡೆ ನೋಡುತಲಿ ॥
ಎಸೆವ ಪರುಜನವೆಯ್ದೆ ತಾವನಿ ।
ಮಿಷರ ತೆರದಲಿ ಮೆರೆಯುತಿರ್ದರು ।
ದೆಸೆದೆಸೆಯ ಬೀದಿಗಳಲಾ ಕಲ್ಯಾಣಪುರದೊಳಗೆ ॥೪೫॥

ಬಂದನಾಗಳೆ ಬಸವರಾಜನ ।
ಮಂದಿರಕೆ ಸಲೆ ಸಕಲ ಸಂಭ್ರಮ ।
ದಿಂದಲಾ ಪ್ರಭುಲಿಂಗ ಭಕ್ತಾಧೀನಯುಕ್ತಿಯಲಿ ॥
ಮುಂದೆ ಜಯ ಜಯವೆನುತ ಪರಮಾ ।
ನಂದದಲಿ ಪರಿಪರಿಯ ಭಕ್ತರ ।
ಸಂದಣಿಯ ಸೌರಭದಿಂದಾ ಶೂನ್ಯವಿಷ್ಟರಕೆ ॥೪೬॥

ಜಗದ ಜಂತ್ರದ ಸೂತ್ರಧಾರಿಗೆ ।
ಸಗುಣ ನಿರ್ಗುಣನಹ ಮಹಾತ್ಮಗೆ ।
ಬಗೆದು ನೋಡಲು ಬಲ್ಲಿತಾವುದು ದಿಟ ವಿಚಾರಿಪಡೆ ॥
ಹಗಲುಗತ್ತಲೆಯೆನಿಸಿ ಹಲಬರ ।
ಬೆಗಡುಗೊಳಿಸುವ ಶೂನ್ಯಪೀಠವ ।
ನಗುತಲಡರಿದನಲ್ಲಮಪ್ರಭುಲಿಂಗ ಲೀಲೆಯಲಿ ॥೪೭॥

ನಾಡಿಗಳನಾವಾವ ಪರಿಯಲಿ ।
ತೀಡಿ ಜೀವರ ದೇಹಯಂತ್ರವ ।
ನಾಡಿಸುವವೊಲು ಶೂನ್ಯಸಿಂಹಾಸನದ ಸೂತ್ರವನು ॥
ಕೂಡಿ ನೋಡಿ ಷಡುಸ್ಥಲದ ಸಮ ।
ಜೋಡನೆಲ್ಲವ ಮುಟ್ಟಿ ಮುಂದಕೆ ।
ನೀಡಿ ನಡೆದೇರಿದನು ಬಳಿಕಾ ಪ್ರಭು ವಿನೋದದಲಿ ॥೪೮॥

ಆರು ಚಕ್ರವನಾರು ಶಕ್ತಿಯ ।
ನಾರು ಮತಿಗಳನಾರು ಗತಿಗಳ ।
ನಾರು ವರ್ಣವನಾರು ನಿರ್ಣಯವಾದ ಸಂಪದವ ॥
ಆರು ಪರಿಯಲಿ ಸವೆದು ಸಲೆ ನೆಲೆ ।
ದೋರುವೆಡೆಗಳನೆಯ್ದೆ ನೋಡುತ ।
ಲೇರುತಿರ್ದನು ಶೂನ್ಯಸಿಂಹಾಸನವ ಪ್ರಭುರಾಯ ॥೪೯॥

ಕುಂಡಲಿಯನಂಡಲೆದು ರವಿಶಶಿ ।
ಮಂಡಲಂಗಳ ಮೀರಿ ಕಾಮದ ।
ಕಂಡಿಗಳ ಕೀಲಿಸಿ ಸುಷುಮ್ನಾನಾಳದೊಳಗಡರಿ ॥
ಮಂಡಿಸಿದನಾ ಶೂನ್ಯಪೀಠದ ।
ಮಂಡೆಯೊಳು ತೊಳತೊಳಗಿ ಬೆಳಗಿಯ ।
ಖಂಡ ತೇಜೋಮೂರ್ತಿಯಲ್ಲಮಲಿಂಗ ಲೀಲೆಯಲಿ ॥೫೦॥

ಪ್ರಣವತರುವನೆ ನೆಮ್ಮಿ ಮಂತ್ರಾ ।
ಗ್ರಣಿಯ ಪಂಚಬ್ರಹ್ಮಸರ್ಪನ ।
ಫಣಿಯ ಮಣಿಯಿಂದತ್ತಲದ್ವೈತಸ್ಥಲಾದಿಗಳ ॥
ಕಣೆಯನೆಲ್ಲವ ಕಳೆದ ನೆರೆ ನಿ ।
ರ್ಗುಣ ನಿರಾಳದ ನಿರುಪಮದ ಮೇ ।
ಲಣ ಮಹಾಸನದಲ್ಲಿಯಾ ಪ್ರಭುಲಿಂಗ ಮಂಡಿಸಿದ ॥೫೧॥

ಅಲ್ಲಿಗಲ್ಲಿಗೆ ತಕ್ಕರೂಪಿನ ।
ಲಲ್ಲಿಗಲ್ಲಿಗೆ ತಕ್ಕ ನಡೆಗಳ ।
ಲಲ್ಲಿಗಲ್ಲಿಗೆ ತಕ್ಕ ಸಕಲೈಶ್ವರ್ಯ ಶಕ್ತಿಯಲಿ ॥
ಅಲ್ಲಿಗಲ್ಲಿಗೆ ಸುಳಿದು ಸೂತ್ರಗ ।
ಳೆಲ್ಲವನು ಚೇಷ್ಟಿಸುತಲೇರಿದ ।
ನಲ್ಲಮಪ್ರಭು ಶೂನ್ಯಸಿಂಹಾಸನದ ಶಿಖರದಲಿ ॥೫೨॥

ಆದಿಮಧ್ಯಾಂತಂಗಳಿಲ್ಲದ ।
ವೇದಶಾಸ್ತ್ರಂಗಳಿಗೆ ನಿಲುಕದ ।
ನಾದಬಿಂದುಗಳೆಂಬ ಸಂಪುಟದೊಳಗೆ ಸಮನಿಸದ ॥
ಆದರಿಸುವಾತ್ಮತ್ರಯಂಗಳ ।
ಹಾದಿಯಲಿ ಹಂಗಿಲ್ಲದನುಪಮ ।
ವಾದ ಘನ ಗುರು ಮೂರ್ತಗೊಂಡನು ಶೂನ್ಯಪೀಠದಲಿ ॥೫೩॥

ಬಾಪುರೇ ಬಸವಣ್ಣ ಭುವನ ।
ವ್ಯಾಪಿಯಹುದ್ಯೈ ದಿಟ ವಿಚಾರಿಸ ।
ಲೀ ಪರಿಯಲಾರರಿವರಂತರ್ಮಾರ್ಗದೊಡ್ಡಣೆಯ ॥
ತ್ರೈಪುರಂಗಳನಳಿಯಬಲ್ಲ ಮ ।
ಹಾಪುರುಷ ನೀನೆನುತ ಹೊಗಳಿದ ।
ನಾ ಪರಬ್ರಹ್ಮಸ್ವರೂಪನು ದಂಡನಾಯಕನ ॥೫೪॥

ತಳಿತ ತನುವಿನ ರೋಮಕೂಪದ ।
ಕುಳಿಗಳೆಲ್ಲವು ಕಂಗಳಾಗಿರೆ ।
ಬಳಸಿ ಭಾವಿಸಿ ಪರಮ ಗುರುವಿನ ದಿವ್ಯಮೂರ್ತಿಯನು ॥
ತೊಲಗದೀಕ್ಷಿಸಿ ಚಿತ್ತದಲಿ ಮು ।
ಕ್ಕುಳಿಸಿಯಾನಂದಾಶ್ರುಜಲಧಿಯ ।
ತುಳುಕುತಿರ್ದನು ಬಸವದಂಡಾಧೀಶ ಭಕ್ತಿಯಲಿ ॥೫೫॥

ಹಾಡುತಿರ್ದರು ಕೆಲರು ನೃತ್ಯವ ।
ನಾಡುತಿರ್ದರು ಕೆಲರು ಸೇವೆಯ ।
ಮಾಡುತಿರ್ದರು ಕೆಲರು ಜಯ ಜಯ ಉಘೇ ಉಘೇ ಎನುತ ॥
ನೋಡುತಿರ್ದರು ಪರಮ ಭಕ್ತಿಯ ।
ಗಾಡಿಕಾರರು ತಮತಮಗೆ ಹರಿ ।
ದಾಡುತಿರ್ದರು ಹರುಷದಲಿ ಗುರು ಮೂರ್ತಿಗೊಂಡಿರಲು ॥೫೬॥

ಹಲವು ಚೆಲುವಿನ ಭದ್ರಮಂಟಪ ।
ದೊಳಗೆ ನೆರೆದಿಹ ಜಂಗಮದ ಸಂ ।
ಕುಳದ ಭಕ್ತರ ಪರಿಚರದ ಭಾವೆಯರ ಮಧ್ಯದಲಿ ॥
ತೊಳಗಿ ಬೆಳಗುವ ಶೂನ್ಯಪೀಠದ ।
ನೆಲೆಯನೆಲ್ಲವ ಮಿರಿ ಬಯಲಲಿ ।
ನೆಲಸಿ ನಿಂದನಿದೇನು ಮಹಿಮೆಯೊ ಗುರು ಗುಹೇಶ್ವರನ ॥೫೭॥

**ಅಂತು ಗತಿ ೨೨ಕ್ಕಂ ಪದನು ೯೮೧ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೨೩
# ತಾನುಂಡಖಿಳಜೀವರ ಹಸಿವನೂಂಕಿದ

**ವಚನ**

ಒಂದಾದುದು ಎರಡಪ್ಪುದೆ
ಎರಡಾದುದು ಒಂದಪ್ಪುದೆ
ಪರಿಣಾಮದ ವೇಳೆಯಲ್ಲಿ ಸಂದೇಹ ಹುಟ್ಟಲುಂಟೆ ?
ಬಂದ ಜಂಗಮದ ನಿಲವನರಿಯದೆ
ಹಿಂದನೆಣಿಸಿ ಹಲವ ಹಂಬಲಿಸುವರೆ ?
ಈ ಒಂದು ನಿಲವಿಂಗೆ ಪರಿಣಾಮವ ಮಾಡಬಲ್ಲಡೆ
ನಿನ್ನ ಲಕ್ಕದ ಮೇಲೆ ತೊಂಬತ್ತಾರು ಸಾವಿರಜಂಗಮಕ್ಕೆ
ಪರಿಣಾಮವಹುದು ನೋಡಾ
ಗುಹೇಶ್ವರನೆಂಬ ಲಿಂಗದ ನಿಲವನರಿಯದೆ
ಮರುಳಾದೆಯಲ್ಲಾ ಸಂಗನಬಸವಣ್ಣ ॥೧॥

ದೇವ ದೇವ ಮಹಾಪ್ರಸಾದ
ನಿಮ್ಮಡಿಗಳೆಂದಂತಲ್ಲದೆ ಇನ್ನೆನಗೆ ಬೇರೆ ಸ್ವತಂತ್ರವುಂಟೇ ?
ಸಂದುಸಂಶಯವುಂಟೆ ?
ದರ್ಪಣದೊಳಗಣ ಪ್ರತಿಬಿಂಬವ ನೋಡುವ ಮುಖಕ್ಕೆ
ಭಿನ್ನಭಾವವುಂಟೆ ?
ಚರಿಸಿ ಬಹ ಅನಂತ ಸುಳುಹಿನೊಳಗೆ ನೀನೊಬ್ಬ
ನಿನ್ನೊಳಗೆ ಅನಂತ ಸುಳುಹು ಅಡಗಿದುವು
ನಿನಗೆ ಮಾಡಿದ ಸುಯಿದಾನವ ನಿನಗೆ ನೀಡುವೆ
ಅವಧರಿಸಯ್ಯಾ ಕೂಡಲಸಂಗಮದೇವ ಪ್ರಭುವೆ ॥೨॥

ಹೆಡಗೆ ಹಾರ ಮೊರ ಹಾರ ಕೆರಸಿ ಹಾರ ಮಡಕೆ ಹಾರ
ದೆಸೆದೆಸೆಯಲು ತಂದು ನೀಡುತ್ತಿರಲು
ಹೊಸ ಪರಿಯ ಆರೋಗಣೆಯನವಧರಿಸುತಿರ್ದನು
ಆವಾ ದೆಸೆಗಳಲ್ಲಿ ತಂದು ನೀಡುತ್ತಿದ್ದರೆ ಆ ದೆಸೆಗಳಲ್ಲಿ ಬಾಯಾಗಿ
ಕೊಳುತಿರ್ದನು
ಎತ್ತ ನೋಡಿದಡತ್ತ ಮುಖವಾಗೆ
ಎವೆ ಹೊಯ್ದಂತೆ ತೆರಹಿಲ್ಲ ದೊಂದು ನಿಮಿಷ ಎಡಹಿದರೆ
ಅಕ್ಕಿಗಚ್ಚು ನುಚ್ಚು ತವುಡು ಮೊದಲಾದ ಪದಾರ್ಥವೆಲ್ಲವು ಸಂದವು
ನಿಮಿಷದಲ್ಲಿ
ಭಕ್ತಿ ಬಂಧುಗಳೆಲ್ಲ ತಮ್ಮ ತಮ್ಮ ಮಠದಲಾದ
ಸುಯಿದಾನಂಗಳಂ ತಂದು ಸಾರಗಟ್ಟಿ ನೀಡುತಿರ್ದಡೆ
ಅದ್ಭುತವಾದ ಆರೋಗಣೆಯಂ ಕಂಡು
ಪರಿಪರಿದು ಪಾಕಪ್ರಯತ್ನಮಂ ಮಾಡಿ ಎನುತ
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಸಂತೋಷದಲೋಲಾಡುತಿರ್ದನೆನ್ನ ಪರಮಗುರು ಬಸವಣ್ಣನು ॥೩॥

ಗುರುವೇ ಬೋನ ಶಿಷ್ಯನೇ ಮೇಲೋಗರ
ಲಿಂಗಕ್ಕೆ ಪದಾರ್ಥ ಅರ್ಪಿತವಯ್ಯಾ
ಘನಕೆ ಮನವೆ ಅರ್ಪಿತ
ಘನದೊಳಗೆ ಮನವು ತಲ್ಲೀಯವಾದ ಬಳಿಕ
ಅರ್ಪಿಸುವ ಭಕ್ತರಾರು ಆರೋಗಿಸುವ ದೇವರಾರು
ನಿತ್ಯತೃಪ್ತನುಣಕಲಿತನೆಂದಡೆ ಅರ್ಪಿಸಲುಂಟೇ ದೇವ ಮತ್ತೊಂದನು
ಕೂಡಲಸಂಗಮದೇವಪ್ರಭುವೇ ಸುಚಿತ್ತದಿಂದ ಆರೋಗಿಸಯ್ಯಾ ॥೪॥

ಮನಯುಕ್ತಿ ವಿವೇಕವೆಂಬಕ್ಕಿಯನು ಗುಪ್ತವೆಂಬ ಒರಳೊಳಗಿಕ್ಕಿ
ಅಭಿನ್ನಮಥನವೆಂಬ ಒನಕೆಯಲ್ಲಿ ಥಳಿಸಿ
ಕಲ್ಮಷವೆಂಬ ತೌಡು ಹಾರಿಸಿ

ಸಮತೆಯೆಂಬ ಸಲಿಲದಲ್ಲಿ ಜಾಳಿಸಿ
ಅಳುಪೆಂಬ ಹರಳು ಕಳೆದು
ದಯಾಮೃತವೆಂಬ ಹಾಲಿನಲ್ಲಿ ಬೋನಮಂ ಮಾಡಿ
ಸಮರಸ ರುಚಿಕರವೆಂಬ ಶಾಕಪಾಕಂಗಳಂ ಮಾಡಿ
ನೆನಹಿನ ಅವಲಂಬವೇ ಅಭಿಘಾರವಾಗಿ
ನಿರ್ಮಳವೆಂಬ ಶಿವದಾನವನಳವಡಿಸಿ
ಕಾದಿದ್ದರಯ್ಯಾ ಪಂಚೇಂದ್ರಿಯವೆಂಬ ಶುನಕ ಮುಟ್ಟದಂತೆ
ಕಾದಿದ್ದರಯ್ಯಾ ಷಡುವರ್ಗವೆಂಬ ತೊತ್ತಿರು ಮುಟ್ಟದಂತೆ
ಕಾದಿದ್ದರಯ್ಯಾ ಅಷ್ಟಮದಂಗಳೆಂಬ ಮಕ್ಕಳು ಮುಟ್ಟದಂತೆ
ಇನಿತು ಹೀನಂಗಳಿವಾವು ಮುಟ್ಟದಂತೆ ಕಾದಿದ್ದರಾಗಿ
ಈ ಬೋನ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು ಕಾಣಾ ಚೆನ್ನಬಸವಣ್ಣಾ ॥೫॥

ಭಕ್ತಿಯುಕ್ತಿಯ ಹೊಲಬ
ಮೂರು ಲೋಕದೊಳಗೆ ಬಲ್ಲವರಾರನು ಕಾಣೆನು
ಲಿಂಗದಲ್ಲಿ ಭಕ್ತಿ ಮಾಡಿದಡೆ ಭವ ಹರಿಯದೆಂದು
ಜಂಗಮಮುಖ ಲಿಂಗವೆಂದರಿದು
ಅರ್ಚಿಸಿ ಪೂಜಿಸಿ ದಾಸೋಹವ ಮಾಡಿ
ಪ್ರಸನ್ನತೆಯ ಹಡೆದು
ಆ ಪ್ರಸನ್ನತೆಯ ರುಚಿಯನುಪಮಿಸಬಾರದು
ಆ ಬಸವಣ್ಣನ ಭಕ್ತಿಪ್ರಸಾದ ಕೊಂಡು
ನಾನು ಬದುಕಿದೆನು
ಆ ಬಸವಣ್ಣನ ಪ್ರಸಾದವ ಕೊಂಡು
ಆ ಅಲ್ಲಮಪ್ರಭು ತೃಪ್ತನಾದನು
ಅಲ್ಲಮಪ್ರಭು ಕೊಂಡ ಪ್ರಸಾದದ ತೃಪ್ತಿ
ಲಕ್ಕದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ ತೃಪ್ತಿಯಾಯಿತ್ತು
ಆ ಲಕ್ಕದ ಮೇಲೆ ತೊಂಬತ್ತಾರು ಸಾವಿರ ಜಂಗಮ ತೃಪ್ತಿಯಾದಲ್ಲಿ
ಸಚರಾಚರವೆಲ್ಲವು ತೃಪ್ತಿಯಾಯಿತ್ತು

ಇಲ್ಲವೆಂದು ಬಿಜ್ಜಣ ತರ್ಕಿಸಲು
ಕಪ್ಪೆಯ ಒಡಲೊಳಗೆ ಪ್ರಭುವಿನ ಪ್ರಸಾದವ ತೋರಿದ ಬಸವಣ್ಣನು
ಇದು ಕಾರಣ ನಮ್ಮ ಕೂಡಲಚೆನ್ನಸಂಗಮದೇವರಲ್ಲಿ
ಬಸವಣ್ಣನ ಪ್ರಭುದೇವರ ಪ್ರಸಾದದ ಘನವು
ತ್ರೈಲೋಕದೊಳಗೆ ಬೆಳವಿಗೆಯಾಯಿತ್ತು ॥೬॥

ತೊರೆಯುದಕವ ಕೆರೆಯುಂಡು ತೃಪ್ತವಾಗಲು
ಆ ಕೆರೆಯುದಕವ ಹಲವು ಕೆಲವು ಸ್ಥಾವರ ಜಂಗಮಗಳುಂಡು
ತೃಪ್ತಿಪಡೆದಂತೆ
ಪ್ರಭುದೇವರ ತೃಪ್ತಿ ಅಸಂಖ್ಯಾತ ಮಹಾಗಣಂಗಳೆಲ್ಲಕ್ಕೆ
ತೃಪ್ತಿಯಾಯಿತ್ತು ನೋಡಾ
ಬಸುರ ಹೆಂಗಸು ಉಂಡಲ್ಲಿ ಒಡಲ ಶಿಶು ತೃಪ್ತಿಯಾದಂತೆ
ಸಚರಾಚರವೆಲ್ಲವು ತೃಪ್ತಿಯಾದವು ನೋಡಾ
ಕೂಡಲಸಂಗಮದೇವಾ
ಪ್ರಭುದೇವರ ಪ್ರಸಾದದ ಮಹಿಮೆಗೆ ನಮೋ ನಮೋ ಎಂಬೆನು ॥೭॥

**ಸೂಚನೆ**

ಒಸೆದು ತಾನುಂಡಖಿಳ ಜೀವರ ।
ಹಸಿವ ನೂಕಿದ ಲೋಕವರಿಯಲು ।
ಬಸವರಾಜನ ಭಕ್ತಿವತ್ಸಲ ಗುರುಗುಹೇಶ್ವರನು ॥

ಅನುವಿಡಿದು ಗುರು ಲಿಂಗ ಜಂಗಮ ।
ದನುವ ನಿಶ್ಚಯಿಸುವರು ನಿರ್ವಂ ।
ಚನೆಯ ಭಕ್ತಿಗೆ ತನು ಮನೋಧನಗಳನು ಸವೆವವರು ॥
ವಿನುತ ಮತಿಯುತರೆಲ್ಲರತಿ ವಂ ।
ದನೆಯಲಾಲಿಸಿ ಕೇಳಿ ಸುಖಿಸುವು ।
ದನುಪಮದ ಸಂಗತಿಯನೀ ಪ್ರಭುಲಿಂಗ ಲೀಲೆಯಲಿ ॥೧॥

ಬಯಲು ಸಿಂಹಾಸನದ ಮೇಲಣ ।
ಬಯಲು ಬಯಲಲಿ ತೊಳಗಿ ಬೆಳಗುತ ।
ಬಯಲ ತನುವಿಡಿದಲ್ಲಮಪ್ರಭು ಮೂರ್ತಿಗೊಂಡಿರಲು ॥
ಪ್ರಿಯದಲುಬ್ಬುವ ಭುಲ್ಲವಿಪ ಬು ।
ದ್ಧಿಯನು ಬೋಳೈಸುತಲಿ ಬಳಿಕತಿ ।
ಶಯದ ಸತುಕರಣೆಗಳನನುಗೊಳಿಸಿದನು ಬಸವಣ್ಣ ॥೨॥

ಚೆನ್ನಬಸವನು ಬಾಚರಸನ ।
ಪ್ಪಣ್ಣ ಮಡಿವಳ ಮಾಚಿದೇವನು ।
ಕಿನ್ನರಿಯ ಬೊಮ್ಮಯ್ಯಗಳು ಮೋಳಿಗೆಯ ಮಾರಯ್ಯ ॥
ಮಾನ್ಯತೆಯ ಶಿವಭಕ್ತರೆಲ್ಲರು ।
ಶೂನ್ಯಸಿಂಹಾಸನದ ಗುರುವಿನ ।
ಬಿನ್ನಣಕೆ ಬೆರಗಾಗುತಿರ್ದರು ನಟ್ಟನೋಟದಲಿ ॥೩॥

ಬಂದು ಲಿಂಗಾರ್ಚನೆಯ ಮಾಡಲಿ ।
ಕೆಂದು ಮುನ್ನಿನ ದಿವಸ ದಿವಸದ ।
ಛಂದದಿಂದಲಿ ಮೂರ್ತಿಗೊಂಡು ಮನೋನುರಾಗದಲಿ ॥
ಮುಂದೆ ನಾನಾ ರಾಗ ರಂಜನೆ ।
ಯಿಂದಲಾದ್ಯರ ವಚನಗಳನೊಲ ।
ವಿಂದೆ ಕೇಳುತಲೊಪ್ಪುತಿರ್ದುದು ಜಂಗಮವ್ರಾತ ॥೪॥

ಜಡೆಯ ರುದ್ರಾಕ್ಷಿಯ ವಿಭೂತಿಯ ।
ಕೊಡೆಯ ಕೌಪೀನದ ಮೃಗಾಜಿನ ।
ದುಡುಗೆಗಳ ನಿರ್ವಾಣ ಕಾಶಾಂಬರದ ಹಾವುಗೆಯ ॥
ಹಿಡಿದ ಲಿಂಗದ ಯೋಗದಂಡದ ।
ಮೃಡನ ಲಿಂಗದ ಮೂರ್ತಿವೆತ್ತಿಹ ।
ಒಡೆಯರಿರ್ದರು ಶೂನ್ಯಸಿಂಹಾಸನದ ಬಳಸಿನಲಿ ॥೫॥

ನೆರೆದುದಾರೋಗಣೆಗೆ ನಾನಾ ।
ಪರಿಯ ಜಡೆಗಳ ತಾಳುಬೋಳಿನ ।
ವರ ವಿಭೂತಿಯ ಲಿಂಗದಂಗದ ಕರಕಮಂಡಲದ ॥
ಬೆರಳ ಜಪಮಣಿಮಾಲಿಕೆಯ ವಿ ।
ಸ್ತರದ ಕಂಬಳಿ ಕಂಥೆಗಳ ಭಾ ।
ಸುರದ ಜಂಗಮ ಶೂನ್ಯಸಿಂಹಾಸನದ ಬಳಸಿನಲಿ ॥೬॥

ಧ್ಯಾನ ಧಾರಣ ಯಮ ನಿಯಮ ಸುಯಿ ।
ದಾನ ಸೂಕ್ಷ್ಮ ವಿಚಾರ ಶೀಲ ವಿ ।
ಧಾನ ಹೂವಗ್ಗವಣಿಯಾರತಿ ಧೂಪ ಬೋನಗಳ ॥
ಮೌನ ಮೊದಲಾಗಿರ್ದ ಹಲವವ ।
ಧಾನ ನಿಷ್ಠೆಯ ನಿತ್ಯ ನೇಮದ ।
ಮಾನಿಗಳು ನೆರೆದಿರ್ದರಾ ಮಂಟಪದ ಬಳಸಿನಲಿ ॥೭॥

ಬಳಸಿದಗ್ಗದ ಸಭೆಯೊಳಗೆ ತೊಳ ।
ತೊಳಗಿ ಬೆಳಗುವ ಶೂನ್ಯಪೀಠದ ।
ತಲೆಯ ಬಯಲಾಸನದಲಮಲ ಬ್ರಹ್ಮ ನೆಲಸಿರಲು ॥
ನಲಿದು ನೋಡುವ ಕಣ್ಣು ಮನಗಳು ।
ತೊಲಗಲರಿಯದೆ ಬಂದ ಜಂಗಮ ।
ಗಳನದೇನೆಂದರಿಯದಿರ್ದನು ಬಸವದಂಡೇಶ ॥೮॥

ಹೊಸತ ಮಾಡಿದನಿಂದು ಜಂಗಮ ।
ಹಸಿದು ಬಿಜಯಂಗೈದೊಡಿತ್ತಣ ।
ದೆಸೆಯ ನೋಡುವುದಿಲ್ಲ ಸತುಕರಿಸುವುದು ಮುನ್ನಿಲ್ಲ ॥
ಬಸವನಾದಡೆಯಿಂದ್ರಜಾಲದ ।
ಹಸರಿಗಗೆ ಮರುಳಾದನಾತನ ।
ಗಸಣೆ ನಮಗೇಕೆನುತಲೆದ್ದುದು ಜಂಗಮಸ್ತೋಮ ॥೯॥

ಭೋರನಲ್ಲಿಂದುಭಯ ಶಂಖವ ।
ಪೂರವಿಸಿಕೊಳುತೆದ್ದು ಹೋದರು ।
ಸಾರಭಕ್ತಿಯ ಶರಧಿಯರಿದನು ಬಳಿಕಲಾ ಹದನ ॥
ದೂರವಾದೆನೆ ಸಮಯಕವರುಪ ।
ಚಾರಗಳಿಗಾನೊದಗಲಮ್ಮದೆ ।
ಮೇರೆದಪ್ಪಿದೆನೇ ಶಿವಾ ಎನುತಿರ್ದ ಬಸವಣ್ಣ ॥೧೦॥

ನಾವು ಬಡಜಂಗಮವು ಬಂದಡೆ ।
ನೀವು ನಮ್ಮ ಸುತುಷ್ಟಿಬಡಿಸದ ।
ದಾವಕಾರಣ ನೀನು ಚಿಂತಿಸುತಿರ್ದೆ ಬಸವಣ್ಣ ॥
ಭಾವಿಸುವಡಾ ಸಾಧನದ ಸಂ ।
ಭಾವನೆಗಳು ಸಮಗ್ರವವನಿ ।
ನ್ನಾವನಾರೋಗಿಸುವನೈ ಪ್ರಭುರಾಯ ಹೇಳೆಂದ ॥೧೧॥

ಮೀರಿ ನುಡಿವಡೆ ನಿನ್ನೊಳಗೆ ನಾ ।
ನಾರೆ ಲಕ್ಕದ ಮೇಲೆ ತೊಂಬ ।
ತ್ತಾರು ಸಾವಿನ ಜಂಗಮವು ಸಂತುಷ್ಟಿಬಡುಂತೆ ॥
ತೋರುವೆನು ಮೊದಲೆನ್ನ ಹಸಿವಿನ ।
ದೂರ ನೀ ದಿಟ ನಿಲಿಸಬಲ್ಲಡೆ ।
ಮಾರು ಮಾತುಗಳೇನುಕಾರಣ ಬಸವ ಕೇಳೆಂದ ॥೧೨॥

ಎನಲು ಪನ್ನೀರಿನಲಿ ಪಾದಾ ।
ರ್ಚನೆಯ ಮಲಯಜಹಿಮಗಳನುಲೇ ।
ಪನವ ಮೌಕ್ತಿಕದಕ್ಷತೆಯ ನವಕುಸುಮ ಪೂಜೆಗಳ ॥
ವಿನುತ ಧೂಪದ ರತ್ನ ದೀಪವ ।
ನನುಗೊಳಿಸಿ ವಂದಿಸಿದನೀ ಪರಿ ।
ಮನವೊಲಿದು ಬಸವಣ್ಣನಾ ಪ್ರಭುಲಿಂಗಮೂರ್ತಿಯನು ॥೧೩॥

ಎಸೆವ ನವರತ್ನಾಳಿಯಲಿ ತೆ ।
ತ್ತಿಸಿದ ಹೊನ್ನಡ್ಡಣಿಗೆಗಳು ಮಿಗೆ ।
ಪಸರಿಸಿದ ಪರಿಯಾಣಗಳು ಕೆಲವಟ್ಟಲೋಳಿಯಲಿ ॥
ಬಿಸಿಬಿಸಿಯ ಪರಿಪಾಕತೆಯ ಷಡು ।
ರಸಮಯಂಗಳ ಬೋನವನು ಗಡ ।
ಣಿಸಿ ಸಮರ್ಪಿಸಿದನು ಮಹೋತ್ಸಾಹದಲಿ ಬಸವಣ್ಣ ॥೧೪॥

ತೆಗೆದನೊಂದೆವೆ ಹಳಚುವದರೊಳ ।
ಗಗಲಲಿಕ್ಕದ ಬೋನದೊಳಗೊಂ ।
ದಗುಳು ಮಿಗದಂತೆಲ್ಲವನು ಬಸವಣ್ಣನದ ಕಂಡು ॥
ಹೊಗಳಿ ಹಿಗ್ಗುತ ಹರುಷದಲಿ ಮಿಗೆ ।
ಮೊಗೆಮೊಗೆದು ತಂದೊಟ್ಟಲಂತವ ।
ನಗಿದನಾಗಳೆ ನಿಮಿಷದೊಳಗಾ ಪ್ರಭು ವಿನೋದದಲಿ ॥೧೫॥

ಊಡಬಹುದಿಂತುಂಬ ದೇವಗೆ ।
ನೀಡಬಹುದಹುದಲ್ಲವೆಂಬೀ ।
ಖೋಡಿಯಿಲ್ಲದೆ ಕೊಂಡು ಸುಖಿಸುವ ಸರ್ವಭಕ್ಷಂಗೆ ॥
ಮಾಡಿ ಮನೆಗಳಲಿದ್ದ ಬೋನವ ।
ತೋಡಿ ತನ್ನಿಯೆನಲ್ಕೆ ಪುನರಪಿ ।
ನೀಡತೊಡಗಿದರೆಂಟು ದೆಸೆಯಲಿ ಬಸವ ನೇಮಿಸಲು ॥೧೬॥

ಹೊನ್ನ ಹೆಡಗೆಗಳಡಿಗಡಿಗೆ ರಾ ।
ಜಾನ್ನದೋಗರ ತುಂಬಿ ಭಕ್ತರ ।
ಚೆನ್ನ ಹಸ್ತಂಗಳಲಿ ಬರುತಿರ್ದುವು ಸಮಗ್ರದಲಿ ॥
ಎಣ್ಣೆಯೂ (ಹೂ?) ರಿಗೆಯಿಡ್ಡಲಿಗೆ ಕಡು ।
ಸಣ್ಣ ಸೇವಗೆ ಸರವಳಿಗೆ ಮಿಗೆ ।
ಕಣ್ಣಗಾರಿಗೆಯೊಟ್ಟುತಿರ್ದುವು ದೇವನಿದಿರಿನಲಿ ॥೧೭॥

ಕ್ಷೀರಗಾರಿಗೆಯೊಟ್ಟಿಲನು ಬೆ ।
ಚ್ಚೂರಿಗೆಯ ಬಣಬೆಗಳನೊಡೆಗಳ ।
ತೋರ ರಾಶಿಯ ಶಾಳಿ ಸೊಪ್ಪುಳಿ ಫೇಣಿ ಪರಡಿಗಳ ॥
ನೀರವತ್ತಿಗೆ ತರಗು ಕಡಬುಗ ।
ಳೇರಿಗಳನೊಟ್ಟಿದರೆ ಕಾಣುತ ।
ಭೋರನೊಂದೇ ತುತ್ತಿನಲಿ ಕಬಳಿಸಿದ ಗುರುರಾಯ ॥೧೮॥

ಪ್ರೀತಿಯಿಂದಾರೋಗಿಸುವ ಗುರು ।
ವೀತನಹುದೆನ್ನೊಡೆಯನೀ ಪರಿ ।
ಯಾತನಾದೊಡೆ ನೀಡುವೆನು ತಾ ಮಚ್ಚುವಂತೆನುತ ॥
ಓತು ಮತ್ತೆ ಸಮಸ್ತ ಭಕ್ತ ಸ ।
ಮೇತವನು ಪಾಯಸಗಳನು ನವ ।
ನೀತ ಸದ್ಯೋಘೃತವನರ್ಪಿಸುತಿರ್ದ ಬಸವಣ್ಣ ॥೧೯॥

ಮುಸುಡ ಮುಂದಕೆ ತಂದು ಮಿಗೆ ತೋ ।
ರಿಸದ ಮುನ್ನವೆ ಸಕಲ ಪಾಕ ।
ಪ್ರಸರವೆಲ್ಲವನೊಂದು ನಿಮಿಷಾರ್ಧದಲಿ ಕಬಳಿಸಿದ ॥
ನೀತ ಸದ್ಯೋಘೃತವನರ್ಪಿಸುತಲಿರೆ ಭ ।
ಕ್ಷಿಸಿದನವನಲ್ಲಲ್ಲಿ ಗುರುವಿನ ।
ಹಸು ಮಹೋನ್ನತವಾಗುತಿರ್ದುದು ಲೋಕ ಬೆರಗಾಗೆ ॥೨೦॥

ದಂಡನಾಥಂಗೆನಿತೆನಿತುವು ।
ದ್ದಂಡತೆಯ ದಾಸೋಹ ಧೈರ್ಯದ ।
ದಂಡೆ ಹೆಚ್ಚಿದುದದಕೆ ಶತ ಸಾವಿರಕೆ ವೆಗ್ಗಳಿಸಿ ॥
ಮಂಡಳಿಸಿ ಮಾರಾಂತು ಮಿಗೆ ಮುಂ ।
ಕೊಂಡು ಗುರು ಹಸಿದುಣುತಲಿರ್ದನು ।
ಕಂಡುದಿಲ್ಲಾ ಮಹಿಮರಿಬ್ಬರ ಮಾಟಗಳ ಕಡೆಯ ॥೨೧॥

ಹೊನ್ನ ಕೊಪ್ಪರಿಗೆಗಳ ಪಾನವ ।
ಹೊನ್ನ ಕೊಪ್ಪರಿಗೆಗಳ ತುಪ್ಪವ ।
ಹೊನ್ನ ಕೊಪ್ಪರಿಗೆಗಳ ಪಾಯಸ ಫಳದ ಶಿಖರಿಣಿಯ ॥
ಹೊನ್ನ ಕೊಪ್ಪರಿಗೆಗಳ ಬೋನವ ।
ತನ್ನ ಮುಂದಕೆ ತಂದು ನಿಲಿಸದ ।
ಮುನ್ನಲಾರೋಗಿಸಿದನಾ ಪ್ರಭುಲಿಂಗ ನಸುನಗುತ ॥೨೨॥

ಹೆಡಗೆಗಳಲೇ ಭಕ್ಷ ಮಾಡಿದ ।
ಮಡಕೆಗಳಲೇ ಶಾಕ ತುಂಬಿದ ।
ಕುಡಿಕೆಗಳಲೇ ಪಕ್ವ ಫಲ ಸಂಕುಲವ ಸಂದಣಿಸಿ ॥
ಅಡಕುತಿರ್ದರು ಭಕ್ತರೆಲ್ಲರು ।
ತುಡುಕಿ ಕಬಳಿಸುತಿರ್ದನಲ್ಲಮ ।
ನೆಡೆಬಿಡಂಗಳ ಕಾಣೆನಾತನ ದೀಪನೋತ್ಸವಕೆ ॥೨೩॥

ಕಟ್ಟು ಮಂಡಗೆ ಹಾಲು ಸಕ್ಕರೆ ।
ಗಟ್ಟಿ ಮೊಸರುಂಡೆಗಳ ರುಚಿಗಳ ।
ಮೊಟ್ಟೆಯನೆ ಮುಂದಿಡುತಲುಪ್ಪಿನಕಾಯ ಕಚ್ಚರಿಯ ॥
ಬಟ್ಟ ಸಂಡಗೆ ಬಾಳುಕಂಗಳ ।
ನೊಟ್ಟುತಿರ್ದರು ಬೇಸರದೆ ಬೆಂ ।
ಬಿಟ್ಟುದಿಲ್ಲಾ ಪ್ರಭುವಿನಾರೋಗಣೆಯ ಸಡಗರಣೆ ॥೨೪॥

ಮಾಡುತಿರಹೇಳಡಿಗೆಗಳ ನೆರೆ ।
ನೀಡುತಿರಹೇಳಾದ ಬೋನವ ।
ಕೂಡುತಿರಹೇಳಖಿಳವೆನಿಸಿದ ಸಕಲ ಸಾಧನವ ॥
ತೋಡಿ ತರಹೇಳಿದ್ದುದೆಲ್ಲವ ।
ನೋಡಬೇಹುದು ದೇವನೂಟದ ।
ಗಾಡಿಕೆಯೆನೆಂದೆನುತಲಬ್ಬರಿಸಿದನು ಬಸವಣ್ಣ ॥೨೫॥

ಆತ ಹೇಳದ ಮುನ್ನಲಾತನ ।
ಮಾತು ಹಿಂಚಿತು ಮಿಂಚಿತೋ ಎನ ।
ಲಾತು ಬಂದುವು ಮನೆಯಲಾದ ಸಮಸ್ತ ಸಾಧನವು ॥
ಪ್ರೀತಿ ಮಿಗಲಾ ಬಂದ ವಸ್ತುವ ।
ನೋತು ನೀಡಿದ ಬಯಲ ಬಸುರಲಿ ।
ಕೌತುಕವನೇ ನಟಿಸುತಿರ್ದನು ಗುರು ವಿನೋದದಲಿ ॥೨೬॥

ಉಂಬನೊಬ್ಬನೆ ಪಕ್ವ ಫಲಗಳ ।
ನಿಂಬುಗೊಟ್ಟೆಯ್ದಿಸುವರಗಣಿತ ।
ಕೊಂಬನೊಬ್ಬರೆ ಕೋಟಿಮುಖದಲಿ ನೀಡಿದೆಲ್ಲವನು ॥
ತುಂಬಿ ತುತ್ತಿದ ಹೊಟ್ಟೆ ನೆರೆ ಘಾ ।
ರೆಂಬುತಿರ್ದುದು ಮತ್ತೆಯಲ್ಲಮ ।
ನುಂಬುದಕೆ ಕಡೆಗಾಣೆವೆನುತಿರ್ದುದು ಗಣಸ್ತೋಮ ॥೨೭॥

ಆವ ಬೇಗದಲಾಗಹುದೊ ಮ ।
ತ್ತಾವ ಬೇಗದಲೀತನೀವನೊ ।
ಆವ ಬೇಗದಲಾತನುಂಬನೊ ಶಿವ ಮಹಾದೇವ ॥
ಭಾವಿಸುವಡಾ ಚಳಬಳಿಕೆಯನು ।
ತಾವೆ ಬಲ್ಲರು ದೇವಭಕ್ತರು ।
ನಾವು ತಿಳಿವೊಡೆ ನಮ್ಮ ಹವಣಲ್ಲೆಂದುದಖಿಳ ಜನ ॥೨೮॥

ಏನು ಹೇಳುವೆನಾವ ಮುಖದಲಿ ।
ಬೋನವೆಯ್ದಿದ ದೀಪನಪ್ರಭೆ ।
ಹೀನವಾಗದು ಸಚ್ಚಿದಾನಂದಸ್ವರೂಪಂಗೆ ॥
ಊನವಾಗದು ಮಾಟದೊಂದಭಿ ।
ಮಾನ ಬಸವಗೆಯವರಿಗಿನ್ನು ಸ ।
ಮಾನವಾರು ಸದಾಶಿವಾ ಎಂದುದು ಗಣಸ್ತೋಮ ॥೨೯॥

ಅಲ್ಲಮಪ್ರಭುವುಂಬ ತವಕದ ।
ಭುಲ್ಲವಣೆಯನೆ ಕಂಡು ಹರಿಹರಿ ।
ದೆಲ್ಲ ಭಕ್ತರು ತಮ್ಮ ಮನೆಮನೆಗಳಲ್ಲಿ ಮಾಡಿರ್ದ ॥
ಸಲ್ಲಲಿತ ಪಕ್ವಾನ್ನ ಪಾನವ ।
ನೊಳ್ಳಿತಾಗಿಯೆ ತಂದು ಸಲಿಸಲು ।
ಪಲ್ಲವಿಸಿದುದು ಮತ್ತೆ ಹಸು ಗುರುವಿಂಗೆ ನೂರ್ಮಡಿಸಿ ॥೩೦॥

ಪುರದ ಬೀದಿಯೊಳಲ್ಲಿಗಲ್ಲಿಗೆ ।
ಹರಿಹರಿದು ಮನೆಮನೆಗಳೊಳು ಹೊ ।
ಕ್ಕುರವಣಿಸಿ ತಂದಡಕುತಿರ್ದರು ಸಕಲ ಸಾಧನವ ॥
ನೆರೆದುದಾರೋಗಣೆಗೆ ನಿಮಿಷಕೆ ।
ಸುರಿವುತಲ್ಲಮನಾನನಕೆಯ ।
ಚ್ಚರಿಯದಾಯಿತು ದೇವಭಕ್ತರ ಛಲದ ಚಳಬಳಿಕೆ ॥೩೧॥

ಪರಿಪರಿಯ ಸೌಕರಿಯದೋಗರ ।
ಪರಿಪರಿಯ ಪಾಯಸ ಘೃತಂಗಳು ।
ಪರಿಪರಿಯ ನವನೀತ ಸಕ್ಕರೆ ತೋವೆ ಪಳದೆಗಳು ॥
ಪರಿಪರಿಯ ಭಕ್ಷ್ಯಗಳು ನಾನಾ ।
ಪರಪರಿಯ ವನರುಹಫಲಂಗಳು ।
ಪರಿಪರಿಯ ಶಾಕದ ಸಮೂಹಗಳಿತ್ತರಲ್ಲಮಗೆ ॥೩೨॥

ಹಲವು ರೀತಿಯ ಕಣಿಕದಡಿಗೆಯ ।
ಹಲವು ರೀತಿಯ ಹಿಟ್ಟಿನಡಿಗೆಯ ।
ಹಲವು ರೀತಿಯ ಪಾನವಂಬಲಿಯುಪ್ಪುಗಾಯಿಗಳ ॥
ಹಲವು ರೀತಿಯ ತಕ್ರ ದಧಿಗಳ ॥
ಹಲವು ರೀತಿಗಳಗ್ಗವಣಿಗಳ ॥
ಸಲಿಸುತಿರ್ದರು ಭಕ್ತರಾ ಪ್ರಭುಲಿಂಗನಾನನಕೆ ॥೩೩॥

ಅಂಬರವೆ ಬಾಯ್ದೆರೆದು ಜೀರ್ಣಿಸಿ ।
ಕೊಂಬಡದಕಿನ್ನಾರು ದಿಟ ಸಾ ।
ಕೆಂಬ ತೆರದಲಿ ತೇಗುವಂತುಣಲಿಕ್ಕ ಬಲ್ಲವರು ॥
ಇಂಬುಗೊಟ್ಟರೆ ಸಕಲ ಲೋಕವ ।
ನುಂಬ ಮಹಿಮಗೆ ನೀಡುತೈದನೆ ।
ನಂಬ ಬಲ್ಲರೆ ಬಸವನೇ ಶಿವನೆಂದುದಖಿಳಜನ ॥೩೪॥

ಜಂಗಮಕೆ ಭಕ್ತರಿಗೆ ಪ್ರತಿದಿವ ।
ಸಂಗಳಂತಾ ಮೂರು ಲಕ್ಕಜ ।
ನಂಗಳಿಗೆ ಸವೆದಿರ್ದ ಬಸವನ ಮನೆಯ ದಿವ್ಯಾನ್ನ ॥
ಹಿಂಗದುಳಿದ ಸಮಸ್ತ ಭಕ್ತ ಗೃ ।
ಹಂಗಳಲಿ ತಂದಡಕಿದಗಣಿತ ।
ನುಂಗುತಿರ್ದನದೆಲ್ಲವನು ತಣಿವಿಲ್ಲದಲ್ಲಮಗೆ ॥೩೫॥

ಗಣಿಸುವಡೆ ಬ್ರಹ್ಮಾಂಡಕೋಟಿಗ ।
ಳಣಲಿಗಯ್ದದ ಹರಿ ವಿರಿಂಚಿಗ ।
ಳೆಣಿಕೆಗಡಿಮುಡಿದೋರದಾ ಮಾಹಿಮಾವಲಂಬಂಗೆ ॥
ಉಣಿಸುಗಳ ತಂದೊಟ್ಟಿ ಮುಟ್ಟಿಸಿ ।
ತಣಿಸುವೆನು ನೋಡೆನುತ ಪುನರಪಿ ।
ಹೊಣಕೆವಿಡಿದನು ತಾನೆ ತನ್ನಲಿ ಮತ್ತೆ ಬಸವಣ್ಣ ॥೩೬॥

ಕಣಜಗಳನೊಡೆದೊಡೆದು ತರಹೇ ।
ಳೆಣಿಸದಿರ್ದ ಸಮಸ್ತ ಭಂಡವ ।
ನುಣಿಸುಗಾರನ ಪರಿಯ ನೋಡುವೆನೆನುತ ತಮತಮಗೆ ॥
ಕಣಕ ಸಕ್ಕರೆ ತುಪ್ಪ ಗೋದುವೆ ।
ಚಣಗಿ ಹೆಸರದ್ದುಗಳನಡಕಿದ ।
ರಣಿವರಿದು ಪುರದೊಳಗೆ ಬಸವಣ್ಣನ ನಿರೂಪದಲಿ ॥೩೭॥

ಶಾಳಿ ಸಾವಿರ ಪರಿಯ ಭರಣಿಯ ।
ಜೋಳ ಬರಗಲಸಂದೆ ಹಾರಕ ।
ಕೀಳು ಧಾನ್ಯಸಮೇತ ಕಂಡುಗ ಕೋಟಿ ಸಂಖ್ಯೆಯಲಿ ॥
ಮೇಲೆ ಮೇಲಿಟ್ಟಣಿಸಿ ಭಕ್ತರು ।
ಲೀಲೆಯಲಿ ಹೊತ್ತಡಕುತಿರ್ದರು ।
ಹೇಳುವರೆ ಹೊಸತಾಯಿತಲ್ಲ ಮನೂಟದಾಟೋಪ ॥೩೮॥

ನೀಡುತಿರ್ದರು ಗಂಜಿಯಂಬಲಿ ।
ತೌಡು ನುರುಗವಲಕ್ಕಿಗಚ್ಚನು ।
ಕೂಡೆ ಸಾರದ ಮೇಲೆ ಸಾರವ ಕಟ್ಟಿ ತಮತಮಗೆ ॥
ಹಾಡದೆಣ್ಣೆಯ ಹೊಟ್ಟು ನುಚ್ಚಿನ ।
ಗೂಡೆಗಳನವ ನುಂಗಿ ಕಡು ಪಟು ।
ಮಾಡುತಿರ್ದನು ದೇವ ಮತ್ತೆ ಮಹಾ ಕ್ಷುಧಾಗ್ನಿಯನು ॥೩೯॥

ನೆನೆದು ಹಿಡಿಯದ ಮುನ್ನಲರ್ಪಿತ ।
ನೆನೆದು ಸೋಂಕದ ಮುನ್ನಲರ್ಪಿತ ।
ನೆನೆದು ನೋಡದ ಮುನ್ನಲರ್ಪಿತ ಗುರುಪದಾಂಬುಜವ ॥
ನೆನೆದಡೆಲ್ಲಿಯದಲ್ಲಿಯರ್ಪಿತ ।
ವೆನಿಸಿ ನಿರ್ವಯಲಾಗುತಿರ್ದುದು ।
ಘನತರದ ಸಾಧನಸಮಗ್ರತೆ ನಿಮಿಷಮಾತ್ರದಲಿ ॥೪೦॥

ಒಡಬನಣಲಿಗೆಯಾಲಿಕಲ್ಲಿನ ।
ಕಡಿಗಳಾನಲು ಬಲ್ಲುವೇ ಜಗ ।
ದೊಡೆಯನುಂಡಿಹೆನೆಂದಡಕಟಿಂತೊಂದು ಪಟ್ಟಣದ ॥
ಒಡವೆ ನೆರೆವುದೆ ಬಂದ ಭಂಡವ ।
ನೊಡಲೊಳಡಗಿಸಿಕೊಂಡನಾತನ ।
ಬೆಡಗಬಲ್ಲವರಿಲ್ಲವೇನೆಂದೆಂಬೆನಚ್ಚರಿಯ ॥೪೧॥

ವಿಶ್ವತೋಮುಖ ವಿಶ್ವತೋಕರ ।
ವಿಶ್ವತೋದರ ವಿಶ್ವತೋಪದ ।
ವಿಶ್ವತೋಮಯನೆನಿಸಿ ಮೆರೆವ ಮಹಾ ಮಹಾತ್ಮಂಗೆ ॥
ಶಾಶ್ವತಂಗಳನೀವ ಘನಮಹಿ ।
ಮಸ್ವರೂಪನ ಲೀಲೆಗಾವುದು ।
ವಿಶ್ವದೊಳಗರಿದೆನುತಲಿರ್ದುದು ಭಕ್ತಸಂದೋಹ ॥೪೨॥

ಪಂಚಪರುಷವನುಳ್ಳ ಬಸವನು ।
ಸಂಚಿಸಿದ ಸಾಧನಸಮಗ್ರತೆ ।
ಮುಂಚೆ ಜೀರ್ಣಿಸಿ ಹೋದುದೂಟದ ಮೊದಲಚೂಣಿಯಲಿ ॥
ಮುಂಚುತಿರ್ದುದು ದೀಪನಪ್ರಭೆ ।
ಸಂಚಲಿಸದತಿ ತೊಳಗಿ ಬೆಳಗಿತು ।
ಗೊಂಚಲಂದದೊಳಲ್ಲಮಪ್ರಭುರಾಯನಂಗದಲಿ ॥೪೩॥

ಆವ ಮುಖದಲಿ ಬಂದು ಬೇಡಿದೊ ।
ಡೀವೆನಾತನಿಗೆಂಬ ಭಕ್ತಿಯ ।
ಸೇವೆಗೂಣೆಯವಾದುದೇ ಶಿವ ಶಿವ ಮಹಾದೇವ ॥
ದೇವನೇ ಹಸಿದುಣುತಿಹನೆಯಿ ।
ನ್ನಾವ ಪರಿಯಲಿ ದಣಿಸುವೆನೊ ಮಹ ।
ದೇವ ಎನುತಲಿ ಮನದೊಳಗೆ ಬಸವಣ್ಣ ಚಿಂತಿಸಿದ ॥೪೪॥

ಕಳನೊಳಗೆ ಹಗೆ ಕಟ್ಟಿ ಬಂದಿರೆ ।
ಬಳಿಕ ಗರಡಿಯ ಹೊಕ್ಕು ಸಾಧನೆ ।
ಗಳನು ಮಾಡಿಹೆನೆಂಬನಂತಿರೆ ಗುರುವೆ ಹಸಿದಿರಲು ॥
ಸಲಿಸಲೊಲ್ಲದೆ ಬೋನಗಳನು ।
ಮ್ಮಳಿಸುವರೆ ಬಸವಣ್ಣ ಚಿಂತೆಯ ।
ತೊಲಗೆ ನೂಕೆಂದೆನುತಲಿರ್ದುದು ಭಕ್ತಿಬಂಧುಗಳು ॥೪೫॥

ಕಡುಗಲಿಗೆ ಕರುಳೊಗಲು ಕೈಯಲಿ ।
ಹಿಡಿದು ಸಮರಕೆ ನಡೆವನಲ್ಲದೆ ।
ಕಡೆಗೆ ಸಾರಲಿಬಹುದೆ ಭಕ್ತನ ಧನ ಸಮರ್ಪಿಸಲು ॥
ಒಡಲು ಮನಗಳನೊಡನೆಯರ್ಪಿಸಿ ।
ಕಡೆಯ ಕಾಣಿಪುದೆಂದು ನುಡಿದರು ।
ಮಡಿವಳಯ್ಯನು ಚೆನ್ನಬಸವನು ಬಸವರಾಜಂಗೆ ॥೪೬॥

ತೆತ್ತಿಗರು ತಾವಾದಕಾರಣ ।
ತತ್ತ ವೇಳೆಯಲಾದಿರೈ ದಿಟ ।
ಹೆತ್ತ ತಂದೆಗಳಹುದು ಮಡಿವಳ ಚೆನ್ನಬಸವಗಳು ॥
ಹೊತ್ತು ಹೋಗದ ಮುನ್ನ ತನುವಿನ ।
ತುತ್ತ ನೀಡುವೆ ಗುರುವಿಗೆನುತಲಿ ।
ಚಿತ್ತದಲಿ ಹಾರೈಸುತಿರ್ದನು ಬಸವದಂಡೇಶ ॥೪೭॥

ಭಸಿತದಂಗದ ಭಾವಶುದ್ಧದ ।
ಮಿಸುಗುವಂತರ್ಮುಖದ ಬುದ್ಧಿಯ ।
ದಶವಿಧದ ಪ್ರಾಣೇಂದ್ರಿಯಂಗಳ ನಿರ್ವಿಕಾರತೆಯ ॥
ಬಸವಬಸವಗಳಾಳ್ದನಾರೋ ।
ಗಿಸುವೊಡೋಗರವಾಗಿ ಬಂದನು ।
ನಸುನಗುತಲಾ ದೇವನೀಕ್ಷಿಸಿದನು ಕಟಾಕ್ಷದಲಿ ॥೪೮॥

ಹಸಿದು ಬಂದವನಲ್ಲವರ್ಥದ ।
ದೆಸೆಗೆ ಬಂದವನಲ್ಲ ಕಾಮದ ।
ಮಸೆಗೆ ಮನದಲಿ ನೊಂದು ಬಂದವನಲ್ಲ ನಾ ನಿನ್ನ ॥
ಹಸರಿಸಿದ ದಾಸೋಹತನವನು ।
ಸಸಿನೆ ನೋಡಲು ಬಂದೆನಲ್ಲದೆ ।
ವ್ಯಸನದಾಸೆಗಳೆನ್ನಲುಂಟೇ ಬಸವ ಕೇಳೆಂದ ॥೪೯॥

ಶುದ್ಧ ಸಾಕ್ಷಾದಮೃತದೇಹದ ।
ಬಿದ್ದಿನಂಗುಣಲಿಕ್ಕುದುಂಟೇ ।
ನಿದ್ದ ಸಾಧನೆ ಕೆಟ್ಟುದಕಟಕಟೆಂದು ನೀನೆನಲು ॥
ತಿದ್ದ ಬೇಕೆನುತಾನೆ ಹವಣಿಸಿ ।
ಮೆದ್ದೆನಲ್ಲದೆ ದಿಟ ವಿಚಾರಿಸೆ ।
ಹೊದ್ದುವುವೆ ಹಸು ತೃಷೆಗಳೆನ್ನಲಿ ಬಸವ ಕೇಳೆಂದ ॥೫೦॥

ಕನ್ನಡಿಯ ಪ್ರತಿಬಿಂಬಕಿನ್ನೊಂ ।
ದನ್ಯ ಚೆಲುವಿಕೆಯಾಗಬಲ್ಲುದೆ ।
ನಿನ್ನ ಮನದಲಿ ಮಾಟಕೂಟದ ಬುದ್ಧಿ ಮಮಕರಿಸೆ ॥
ನನ್ನ ಹಸು ಹರಿದುಂಡಿತಲ್ಲದೆ ।
ನಿನ್ನ ಮನದಲಿ ಮಾಟವಿಲ್ಲದ ।
ಡೆನ್ನ ತನುವಿಗೆಯೂಟವಿಲ್ಲೈ ಬಸವ ಕೇಳೆಂದ ॥೫೧॥

ಅಷ್ಟಮದಗಳ ಸೊಗಡ ಸೊಕ್ಕಿನ ।
ದಷ್ಟವಿಲ್ಲದ ಮೂರವಸ್ಥೆಯ ।
ದೃಷ್ಟಿ ತಾಗದ ವ್ಯಸನವೇಳರ ಕಿಡಿಯ ಖಂಡಿಸಿದ ॥
ದೃಷ್ಟವೆನಿಸಿದ ನಿಮ್ಮ ಕಾಯ ।
ಶ್ರೇಷ್ಠ ನೈವೇದ್ಯವನು ಕಾಣುತ ।
ತುಷ್ಟಿ ತನುವಿಗೆ ತುಂಬಿತೀಗಳು ಬಸವ ಕೇಳೆಂದ ॥೫೨॥

ಉಣಿಸುವುಣಿಸೆಂದೆಂಬರೆಲ್ಲರು ।
ವುಣಿಸನುಂಬುದನಿಂದು ಕಂಡೆವು ।
ದಣಿಸಿದಿರಿ ನೀವಾದಡೆಮ್ಮನು ಭಕ್ತ ನಿಮ್ಮಾಣೆ ॥
ಅಣಕವಲ್ಲಿದು ನರಸುರೋರಗ ।
ರೆಣಿಕೆಯೊಳು ನಿನಗಾರು ಸರಿ ಕಾ ।
ರಣಕಳಾತ್ಮಕ ನೀನೆಲೈ ಬಸವಣ್ಣ ಕೇಳೆಂದ ॥೫೩॥

ಬಳಿಕ ಹಸ್ತೋದಕವನತಿ ನಿ ।
ರ್ಮಳ ಸುಗಂಧ ವಿಲೇಪನವ ಪರಿ ।
ಮಳದ ಕರ್ಪುರವೀಳೆಯಂಗಳನಿತ್ತು ಭಕ್ತಿಯಲಿ ॥
ನಲಿದು ಗುರುವಿನ ಪಾದಪಂಕಜ ।
ಗಳ ಸಮೀಪದಲೊಪ್ಪುತಿರ್ದರು ।
ಬಳಸಿದಳಿಕುಲದಂತೆ ಬಸವಣ್ಣಾದಿ ಭಕ್ತಗಣ ॥೫೪॥

ಬಸವ ಬಾರೈ ನಿನ್ನ ಜಂಗಮ ।
ಹಸಿದರಲ್ಲಾ ಕರೆಯ ಹೋಗೆನೆ ।
ಬೆಸನ ಕೈಕೊಂಡಲ್ಲಮಪ್ರಭುವಿಂದೆ ಬೀಳ್ಕೊಂಡು ॥
ಒಸೆದು ಬಂದು ಮಹಂತರನು ಪ್ರಾ ।
ರ್ಥಿಸುತಲಾರೋಗಣೆಗೆ ಕರೆಯಲು ।
ಬಸವರಾಜಗೆ ಬಳಿಕ ನುಡಿದುದು ಜಂಗಮಸ್ತೋಮ ॥೫೫॥

ಎಂದಿನಾರೋಗಣೆಯ ಮಾಡಿದ ।
ಚೆಂದದಿಂ ಮಿಗಿಲಾಗಿ ಪರಮಾ ।
ನಂದವಾಗಿದೆ ತೇಗಿದರೆ ಷಡುರುಚಿ ರಸಾಯನದ ॥
ಸಂದವಾಸನೆ ಸೂಸುತಿದೆ ಡ ।
ರ್ರೆಂದುದಿದಕೋ ಎನುತ ಮಹಿಮರು ।
ಮುಂದೆ ಬಸವನು ಕಾಣಲಿಕೆ ದಣಿದಿರ್ದರೊಲವಿನಲಿ ॥೫೬॥

ನಿನ್ನ ಗುರುವಿನ ಮಹಿಮೆಯೋ ಮೇಣ್ ।
ನಿನ್ನ ಮಹಿಮೆಯೊ ಜಂಗಮಕೆ ದಿಟ ।
ನಿನ್ನ ಗುರುವಾರೋಗಿಸಲು ತಣಿವಾಯಿತೆಮಗೆಲ್ಲ ॥
ನಿನ್ನ ಗುರು ಸಚರಾಚರದ ಚೈ ।
ತನ್ಯ ಮೂರ್ತಿಯೊ ಎನುತಲಾ ಬಸ ।
ವಣ್ಣನಿದಿರಲಿ ನುಡಿವುತಿರ್ದುದು ಜಂಗಮಸ್ತೋಮ ॥೫೭॥

ನಮ್ಮ ನಾಚಿಸಲೆಂದು ಬಂದೈ ।
ನಮ್ಮೊಳಿನಿತಿಲ್ಲದರ ನಾಚಿಕೆ ।
ನಮ್ಮ ಸಮಯದೊಳಾರಿಗಾದಡೆ ಹೆಮ್ಮೆ ಹುಟ್ಟಿದಡೆ ॥
ನಮ್ಮ ಹೆಮ್ಮೆ ವಿಚಾರಿಸುವಡದು ।
ನಮ್ಮ ಜಯವದು ಸಾಕು ಹೋಗೆಂ ।
ದೆಮ್ಮ ಬಸವನ ಬೀಳುಕೊಟ್ಟುದು ಜಂಗಮಸ್ತೋಮ ॥೫೮॥

ಗುರುವಿಗೊರೆದ ಸುಗಂಧಲೇಪನ ।
ಗುರುವಿಗಿಟ್ಟಕ್ಷತೆಗಳೆಲ್ಲವು ।
ಗುರುವಿಗಿಕ್ಕಿದ ಪುಷ್ಪಮಾಲೆಗಳೆಯ್ದೆ ಜಂಗಮಕೆ
ಭರಿತವಾಗಿರೆ ತಿಳಿದನಿಂಗಿತ ।
ದಿರವಿನಲಿ ದಣಿವಾದ ಭೇದವ ।
ಕರಣದಲಿ ನೆರೆ ಕಂಡು ಸರಿದನು ಬಳಿಕ ಬಸವಣ್ಣ ॥೫೯॥

ಬಂದನಾಗಳೆ ಬಸವ ತನ್ನಯ ।
ಮಂದಿರಕೆ ಗುರುಪಾದದಲಿ ಶರ ।
ಣೆಂದು ಬಳಿಕಾ ಹದನನೆಲ್ಲವನೊಲಿದು ಬಿನ್ನೈಸೆ ॥
ಮುಂದೆ ಮೋಹಿಸಿ ನೆರೆದ ಭಕ್ತರ ।
ಸಂದಣಿಗಳುಘೆ ಎನಲು ಪರಮಾ ।
ನಂದಶರಧಿಯ ಲಹರಿಯಂತಿರೆ ಮೆರೆದುದಾಸ್ಥಾನ ॥೬೦॥

ಬಸುರ ಹೆಂಡತಿಯೂಟ ಹೊಟ್ಟೆಯ ।
ಶಿಶುವ ದಣಿಸುವವೊಲು ಜಗಂಗಳ ।
ಬಸುರಲಡಗಿಸಿಕೊಂಡು ನೀ ದಣಿಯುಣಲು ಜಂಗಮಕೆ ॥
ಹಸಿವದೆಲ್ಲಿಯದೆಲ್ಲರಿಗೆ ಸಂ ।
ತಸವು ಸಂತುಷ್ಟತೆಯಲಿದ್ದರು ।
ಹೊಸತಿದಾದುದು ಲೋಕದೊಳು ಗುರುರಾಯ ಕೇಳೆಂದ ॥೬೧॥

ನಿನ್ನ ಭಾವನೆಯಿದ್ದ ಪರಿಯಲಿ ।
ನಿನ್ನ ಜಂಗಮ ತೃಪ್ತರಾದರೆ ।
ನನ್ನನೇತಕೆ ರಟ್ಟುಮಾಡುವೆ ಬರಿದೆ ಬಯಲಿಂಗೆ ॥
ನಿನ್ನ ಕತದಿಂದಾದೆನಲ್ಲದೆ ।
ಮುನ್ನ ನಾನೆಂದೆಂಬ ವಾಸನೆ ।
ಯೆನ್ನಲುಂಟೇ ದಿಟ ವಿಚಾರಿಸೆ ಬಸವ ಕೇಳೆಂದ ॥೬೨॥

ಲಿಂಗ ನೀನಾರೋಗಿಸಿದಡಾ ।
ಜಂಗಮವು ಸಂತುಷ್ಟರಾದರು ।
ಜಂಗಮದ ಸಂತುಷ್ಟಿ ಸಚರಾಚರದೊಳೆಲ್ಲರಿಗೆ ॥
ಹಿಂಗದಿತ್ತುದು ದಣಿವನೀ ಚಿ ।
ತ್ರಂಗಳಾಟದ ಸೂತ್ರವೆಲ್ಲವು ।
ಲಿಂಗ ನಿನ್ನಯ ಮಹಿಮೆಯೆಂದನು ಬಳಿಕ ಬಸವಣ್ಣ ॥೬೩॥

ಎನಲು ನಿರಹಂಕಾರ ಭಾವದ ।
ಮನದ ಬಸವಗೆ ಚೆನ್ನಬಸವಗೆ ।
ವಿನುತಮತಿ ಮಡಿವಾಳ ಮೊದಲಾದಖಿಳ ಭಕ್ತರಿಗೆ ॥
ಅನುಪಮಾನಂದೈಕ್ಯ ನಿತ್ಯಾಂ ।
ಗನೆಯನೆಲ್ಲರಿಗೀವೆನೆನುತಲಿ ।
ನೆನೆವುತಿರ್ದನು ಗುರು ಗುಹೇಶ್ವರಲಿಂಗ ಲೀಲೆಯಲಿ ॥೬೪॥

**ಅಂತು ಗತಿ ೨೩ಕ್ಕಂ ಪದನು ೧೦೪೫ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೨೪
# ಹರಗಣಂಗಳ ಮನದ ವಾಸನೆ ಹರಿದುಹೋಯಿತು

**ವಚನ**

ಹಸಿವಿನ ಪ್ರೇಮಕ್ಕೆ ಬೋನವ ಹಿಡಿವರು
ತೃಷೆಯ ಪ್ರೇಮಕ್ಕೆ ಮಜ್ಜನಕ್ಕೆರೆವರು
ಅವರಿಗೆ ದೇವರಿಲ್ಲ ಭಕ್ತರಿಲ್ಲ ನಾನು ಇಲ್ಲ ನೀನು ಇಲ್ಲ
ಪೂಜಿಸುವರಿಲ್ಲ ಪೂಜೆಗೊಂಬುವರಿಲ್ಲ ಕಾಣಾ
ಸಂಗನ ಬಸವಣ್ಣಾ ॥೧॥

ಭಾವವಳಿಯದು ಬಯಕೆ ಸವೆಯದು
ಐಕ್ಯನಾದಹೆನೆಂದರೆ ಏನಹುದೋ ಸಬುದ ಸಂಭ್ರಮವಳಿಯದೆ
ತನ್ನ ಇದಿರಲಿ ಪ್ರತಿಗಂಡಡಹುದೇ ?
ಗುಹೇಶ್ವರನೆಂಬ ಸಂಬಂಧವಳಿಯದೆ
ಬೇಸತ್ತು ಬಯಸುವಂಗಾಯತವಹುದೆ ?

ಹೊರಸಿನೆಕ್ಕಿಗೆ ಶಂಖದ ಮಣಿಯ ಪವಣಿಸುವರಾರು ?
ನೀವಾರಾದಡೆಯೂ ಪವಣಿಸಿ ಭೋ
ಇದನಾನರಿಯೆನು
ಒಂದು ತಾಳಮರದ ಮೇಲೆ ಮೂರು ರತ್ನವಿಹುದ ನಾ ಬಲ್ಲೆ
ಒಂದು ರತ್ನ ಉತ್ಪತ್ತಿ ಸ್ಥಿತಿಲಯಕ್ಕೊಳಗು
ಒಂದು ರತ್ನ ಹದಿನಾಲ್ಕು ಭುವನಕ್ಕೆ ಬೆಲೆಯಾಯಿತ್ತು
ಇನ್ನೊಂದು ರತ್ನಕ್ಕೆ ಬೆಲಯಿಲ್ಲವೆಂದು

ಗುಹೇಶ್ವರಲಿಂಗೈಕ್ಯವು.
ನಿಶ್ಯಬ್ದಂ ಬ್ರಹ್ಮ ಉಚ್ಯತೆ ಎಂದುದಾಗಿ ॥೩॥

ಕಾಯದೊಳಗಣ ಜೀವನ ಮೀರಿ ಹೋಹ ಕಳ್ಳನ ಸಂಗ ಬೇಡ
ನಿಮ್ಮ ನಿಮ್ಮ ವಸ್ತುವ ಸುಯಿದಾನವ ಮಾಡಿಕೊಳ್ಳಿ
ಗುಹೇಶ್ವರನೆಂಬ ಕಳ್ಳನ ಕೊಂದರೆ ಅಳುವರಾರೂ ಇಲ್ಲ ॥೪॥

**ಸೂಚನೆ**

ಉದ್ಧರಿಸಿ ಬಸವಣ್ಣ ಮೊದಲಾ ।
ಗಿರ್ದ ಭಕ್ತಿರಿಗೊಲಿದು ಕೊಟ್ಟನು ।
ಸಿದ್ಧಿಗಳನುಚಿತದಲಿ ನಮ್ಮಯ ಗುರು ಗುಹೇಶ್ವರನು ॥

ಸಕಲವನು ಸಂಭವಿಸಿ ಮನಸಿಗೆ ।
ಮಕರಿಸುವಹಂಕಾರ ಭಾವದ ।
ಮಕರವನು ಮುರಿದಚಲ ಪದವಿಗೆ ನಿಲುವ ನಿರ್ಣಯವ ॥
ಸಕಲ ಭಕ್ತರು ಸಕಲ ಯುಕ್ತರು ।
ಸಕಲ ಮುಕ್ತರು ಮುಖ್ಯವಾಗಿಹ ।
ಸಕಲರೆಲ್ಲರು ತಿಳಿವುದೀ ಪ್ರಭುಲಿಂಗಲೀಲೆಯಲಿ ॥೧॥

ಪರಮ ಪರಿಣಾಮದಲಿ ತನ್ನಯ ।
ಚರಣಸನ್ನಿಧಿಸಂಗವಾಗಿಹ ।
ಶರಣರೆಲ್ಲರ ಕಂಡು ಕರುಣರಸಾರ್ದ್ರಚಿತ್ತದಲಿ ॥
ವರದನಾಗಲಿ ಬೇಕೆನುತ ಮಿಗೆ ।
ದರಹಸಿತವದನಪ್ರಭಾಶಶಿ ।
ಕಿರಣಗಳ ಸುರಿವುತ ಮಹಾಪ್ರಭುಲಿಂಗನಿಂತೆಂದ ॥೨॥

ಪಾವನತೆಯಾಯ್ತಿಷ್ಟಲಿಂಗದ ।
ಸೇವೆಯಲಿ ಬಹಿರಂಗವಂತ ।
ಭಾವಮಾದಡೆ ಶಿವಸಮಾಧಿಯಲಾಯ್ತು ನಿರ್ಮಲತೆ ॥
ನೀವು ನೋಡಲು ನೀವು ನೆನೆಯಲ ।
ದಾವುದರಿದಿನ್ನೆನುತ ಭಕ್ತರ ।
ನೋವಿ ಹೊಗಳಿದನಲ್ಲಮಪ್ರಭುಲಿಂಗ ಲೀಲೆಯಲಿ ॥೩॥

ಎನಿತು ಸಂಪದವಾದಡೇನದ ।
ರನಿತು ದಂದುಗ ಬೆಂಬಿಡದು ದಿಟ ।
ವೆನಿತು ಮಾಡಿದೊಡೇನು ಮಾಡಿದ ಫಲವನುಣಬೇಕು ॥
ಇನಿತು ಸಾಕಿನ್ನೆಮಗೆ ನಿನ್ನನೆ ।
ನೆನೆದು ನೆರೆ ನಿಶ್ಚಿಂತರಹ ಸುಖ ।
ದನಿತನೇ ಪೇಳೆನುತ ಬಿನ್ನೈಸಿದನು ಬಸವಣ್ಣ ॥೪॥

ಆವ ವಾಸನೆವಿಡಿದು ಜನಿಸಿದ ।
ಜೀವರುಗಳಭಿಲಾಷೆ ನಿಲುಕುವ ।
ದಾ ವಿಳಾಸತೆ ತಪ್ಪದದು ಶಿವನಿತ್ತ ಬೆಸನಿಂದೆ ॥
ನೀವು ನಮ್ಮೊಳು ಪರಮಸುಖಸಂ ।
ಭಾವನೆಯನರಿಯಲಿಕೆ ಬಂದಿರಿ ।
ನಾವು ನಿಮಗದನೊರೆಯಬೇಹುದು ಬಸವ ಕೇಳೆಂದ ॥೫॥

ಮಾನವಾಕೃತಿಯಿಂದೆ ತದ್ಭವ ।
ಕಾನನಂಗಳ ಸುಡುವ ಸಮ್ಯಗ್ ।
ಜ್ಞಾನವಾಗಲಿಬೇಕೆನುತ ಶಿವಭಕ್ತಿಭರದಿಂದೆ ॥
ಸ್ವಾನುಭಾವನೆಗೆಂದು ಬಂದಿರಿ ।
ನಾ ನಿಮಗೆ ಬೋಧಿಸುವೆನದನವ ।
ಧಾನಿಸೆನುತಾ ಭಕ್ತರಿಗೆ ಗುರುರಾಯನಿಂತೆಂದ ॥೬॥

ಇಲ್ಲದಿಹ ಮಾಯಾಪ್ರಪಂಚುಗ ।
ಳುಳ್ಳವೆಂದೆಂಬಂತೆ ವಿಷಯದ ।
ಭುಲ್ಲವಣೆಗಳಲಿಂದ್ರಿಯದ್ವಾರದಲಿ ರಂಜಿಸುತ ॥
ಎಲ್ಲವನು ಕಾಣಿಸುವದದರೊಳು ।
ಹೊಲ್ಲವೊಳ್ಳಿತ್ತೆಂದು ಕೆಲವನು ।
ಸಲ್ಲವಿಡುವುದು ಮನವು ಮನವಳಿದವನೆ ಸುಖಿಯೆಂದ ॥೭॥

ಸ್ಥೂಲ ತನುವಿನ ಜಾಗ್ರ ಸ್ವಪ್ನದ ।
ಕಾಲದಲಿ ಹುಸಿ ಸೂಕ್ಷ್ಮ ತನುವಿಗೆ ।
ಮೇಲೆ ಕಾರಣತನುವಿನಲ್ಲಿ ಸಷುಪ್ತಿ ಪಸರಿಸಲು ॥
ಬೀಳು ಬಿದ್ದವು ಜಾಗ್ರ ಸ್ವಪ್ನಗ ।
ಳಾಳುತಿಹುದಿವನೊಂದೆ ಮನವಾ ।
ಕಾಳು ಮನವೊಂದಳಿದುದಾದರೆ ನಿತ್ಯರಹರೆಂದ ॥೮॥

ಸುರನರೋರಗರೆಂಬ ಮರುಳರ ।
ಹುರುಳುಗೆಡಿಸಿದ ಮೂರವಸ್ಥೆಗೆ ।
ಪಿರಿದೆನಿಸುವಾ ತೂರ್ಯ ತೂರ್ಯಾತೀತವೆಂಬೆರಡು ॥
ಸರಸತರವಹ ಬಲೆಯ ಬೀಸಿಯೆ ।
ಹರಹಿಕೊಂಡಿಹುದೀ ಮನಸ್ಸದ ।
ನುರುಹಬಲ್ಲವನವನೆ ನಿತ್ಯನು ಬಸವ ಕೇಳೆಂದ ॥೯॥

ಮನವ ಬಹಿರಂಗದಲಿ ಚರಿಸುವ ।
ಮನುಜನವನಜ್ಞಾನಿ ಮತ್ತಾ ।
ಮನವನಂತರ್ಮುಖದಲಾಚರಿದೊಡೆ ಸರ್ವಜ್ಞ ॥
ಮನವು ಮನದಲಿ ನಿಂದು ನಿರ್ವಾ ।
ಸನೆಯಲಿರೆ ಸುಜ್ಞಾನಿಯಂತಾ ।
ಮನವನಳಿದರೆ ನಿತ್ಯನೈ ಬಸವಣ್ಣ ಕೇಳೆಂದ ॥೧೦॥

ಎನಿತು ತೋರುವ ತೋರಿಕೆಗಳನಿ ।
ತನಿತು ಮನಸಿಂದಾದುವಲ್ಲದೆ ।
ಮನವನಳಿದರೆ ಮತ್ತೆ ಕಾಣಿಸಲುಳಿದುದೊಂದಿಲ್ಲ ॥
ಮನವೆ ಬೆಸಲಾದಖಿಳವಹ ವಾ ।
ಸನೆಗಳಿಗೆ ಬಿದ್ದಾಸೆಗೆಯ್ದರೆ ।
ಮನುಜಜಾತಿಯಲಾತನಧಮನು ಬಸವ ಕೇಳೆಂದ ॥೧೧॥

ಆಶೆಯೆಂಬುದು ತಾನೆ ಮಾಯಾ ।
ಪಾಶವದು ಮುಸುಕಿದರೆ ತಾನೇ ।
ಕ್ಲೇಶವಿಂತಿವು ಬಗೆಗೆ ಬಲಿಯಲು ತಾನೆ ಭವಬಂಧ ॥
ದೋಷದುರಿತದ ಪುಂಜವದು ಕೀ ।
ನಾಶಗೊಡ್ಡಿದ ಹರಕೆಗುರಿಯೀ ।
ಯಾಶೆವೊಂದಳಿದವನೆ ನಿತ್ಯನು ಬಸವ ಕೇಳೆಂದ ॥೧೨॥

ಬೇಕು ಬೇಡೆಂದೆಂಬುದೊಂದವಿ ।
ವೇಕವುಳ್ಳನ್ನಬರ ನಾನಾ ।
ಶೋಕಮೋಹಾದಿಗಳು ಮುಂಗುಡಿವರಿದು ಮುಸುರುವುವು ॥
ಲೋಕರಂಜನೆಗೆರಗಿದವರೀ ।
ಕಾಕುತನದಲಿ ಕೆಟ್ಟು ಹೋಹರು ।
ಬೇಕು ಬೇಡೆಂಬೆರಡನಳಿದರೆ ನಿತ್ಯರಹರೆಂದ ॥೧೩॥

ಅನವರತವೇನಾದಡೊಂದನು ।
ನೆನೆವುತಿಹದೀ ಮನಸು ಮನಸಿನ ।
ನೆನಹಿನಿಂದವೆ ತೋರುವುವು ಸರ್ವಪ್ರಪಂಚಗಳು ॥
ಇನಿತನರಿದು ಸಮಾಧಿಯಲಿ ತ ।
ನ್ಮನವನೆಲ್ಲವ ತಿಂದು ತೇಗುವ ।
ಘನ ಪರಾಕ್ರಮವುಳ್ಳೊಡಾತನೆ ಮುಕ್ತನಹನೆಂದ ॥೧೪॥

ಘನಮಹಿಮ ಚಿತ್ತೈಸು ದಿಟವಾ ।
ಮನವನಳಿದಿಹೆನೆಂಬುದದು ತಾ ।
ಮನವೆಯಲ್ಲದೆಯಾ ಮನಸ್ಸನದೆಂತು ತಿನಬಹುದು ॥
ಮನವನೆಂತಾದರೆಯು ನಿರ್ವಾ ।
ಸನೆಗೆ ತಹುದರಿದಲ್ಲವಲ್ಲದೆ ।
ಮನವನಳಿವುದು ಚೋದ್ಯವೆಂದನು ಬಳಿಕ ಬಸವಣ್ಣ ॥೧೫॥

ಮನವನರಿದಿಹೆನೆಂಬುದದು ಮನ ।
ಮನವ ನಿಲಿಸಿಹೆನೆಂಬುದದು ಮನ ।
ಮನವನಳದಿಹೆನೆಂಬುದದು ಮನವಾವರೀತಿಯಲಿ ॥
ಮನವೆ ತಾ ಹೆರೆಸಾರಿ ಬಹು ಯೋ ।
ಚನೆಗಳನು ರಂಜಿಸುವುದಂತಾ ।
ಮನವನೆಲ್ಲವನಳಿದನಾದರೆ ನಿತ್ಯನಹನೆಂದ ॥೧೬॥

ದೇವ ಬಿನ್ನಹ ಮನವನಳಿದ ನಿ ।
ರಾವಲಂಬಿಯ ಕುರುಹದೆಂತುಟು ।
ಜೀವನೋ ಪರಮನೊ ಪರಾಪರನಾಮವುಳ್ಳವನೊ ॥
ಆವುದಾಗಿಹುದಾತನಂಕಿತ ।
ನಾವು ತಿಳಿವಂತಿರೆ ನಿರೂಪಿಸಿ ।
ಕಾವುದೆನುತಲಿ ಮತ್ತೆ ಬಿನ್ನೈಸಿದನು ಬಸವಣ್ಣ ॥೧೭॥

ನೇಮವಿಲ್ಲದೆ ಮನವನೇ ತಿಂ ।
ದಾ ಮಹಾ ನಿರುಪಮ ನಿರಾಳಗೆ ।
ನಾಮ ರೂಪು ಕ್ರಿಯೆಗಳುಂಟೇ ಕುರುಹು ತೋರುವರೆ ॥
ಪ್ರೇಮದಿಂದೊಂದೊಂದು ಕುರುಹನು ।
ಕಾಮಿಸುವರಿಂತಿವರಿದಲ್ಲದೆ ।
ಆ ಮಹಾತ್ಮನಭೇದ್ಯ ಕಾಣಾ ಬಸವಾ ಕೇಳೆಂದ ॥೧೮॥

ಗುರುವೆ ಬಿನ್ನಹವಾ ಮನವ ನಿ ।
ಟ್ಟೊರಸಿದನುಪಮನೊಂದು ಲಕ್ಷ್ಯ ।
ಸ್ಮರಣೆಯಿಂದಾಗಾದನಲ್ಲದೆ ಬರಿದೆ ಬಹುದಿಲ್ಲ ॥
ಕರುಣಿಸಾ ಲಕ್ಷ್ಯವನು ನಮ್ಮೆ ।
ಲ್ಲರಿಗೆ ಬಳಿಕೆಮ್ಮನುಭವಂಗಳ ।
ಪರಿಯನವಧರಿಸೆನುತಲಿದ್ದನು ಚೆನ್ನಬಸವಣ್ಣ ॥೧೯॥

ಲಕ್ಷ್ಯವನು ಪೇಳುವೊಡೆ ಮಾತಿನ ।
ಲಕ್ಷ್ಯವಲ್ಲ ಮಹಾನುಭಾವದ ।
ಲಕ್ಷ್ಯವಲ್ಲಷ್ಟಾಂಗಯೋಗದ ಲಕ್ಷ್ಯಮುನ್ನಲ್ಲ ॥
ಲಕ್ಷ್ಯವದು ನಿರ್ಲಕ್ಷ್ಯವೇ ತಾ ।
ಲಕ್ಷ್ಯವಾಗಿಹುದೆಂದು ಘನಗುರು ।
ಲಕ್ಷಣವ ಲಕ್ಷಿಸಿಯೆ ನುಡಿದನು ಚೆನ್ನಬಸವಂಗೆ ॥೨೦॥

ನೆನಹಿಗಿಲ್ಲದ ನೋಟಕಿಲ್ಲದ ।
ತನುವಿಗಿಲ್ಲದ ಸಾಧನದ ಭಾ ।
ವನೆಯೊಳಿಲ್ಲದ ಹೇಳಲಿಲ್ಲದ ಕೇಳಲಿಲ್ಲೆಂಬ ॥
ಅನುಪಮವನಿನ್ನಾವ ಪರಿಯಿಂದ ।
ದನುಭವಿಸಿ ನೆರೆ ನಿತ್ಯರಹೆವೆಂ ।
ದೆನುತ ಕೇಳಿದನಲ್ಲಮನ ಮಡಿವಾಳ ಮಾಚಯ್ಯ ॥೨೧॥

ಇಲ್ಲದುದ ತಾವರಿದೆವೆಂಬರಿ ।
ವುಳ್ಳವರು ತನುಮನಗಳೊಳು ತಾ ।
ವಿಲ್ಲದಿರಬೇಕಾಗಿಹುದು ಸಂಸಾರಸ್ವಪ್ನದಲಿ ॥
ಇಲ್ಲದೆಚ್ಚತ್ತರಿವು ಮರಹಿನ ।
ಗಲ್ಲಣೆಯನೀಡಾಡಿ ತಾನಿರ ।
ಬಲ್ಲಡಾತನೆ ಮುಕ್ತನೈ ಮಡಿವಾಳ ಕೇಳೆಂದ ॥೨೨॥

ಹುಸಿವೊಡೀ ಮಾಯಿಕದ ತನುಮನ ।
ದೆಸಕವವನಿನ್ನಿಲ್ಲವೆನಿಸುವ ।
ಗಸಣೆಯೇತಕೆ ಬೇರೆ ಮುಕ್ತಿಯ ಬೆದಕುತಿರಲೇಕೆ ॥
ಹುಸಿಯೆ ನಾವಾಗಿರ್ದು ಮೇಣ್ ಹೂ ॥
ಣಿಸುವ ಬಗೆ ದಿಟವಹವೆ ಎನುತಾ ।
ಬಸವ ಮೊದಲಾಗಿರ್ದ ಭಕ್ತರು ಕೇಳ್ದರಲ್ಲಮನ ॥೨೩॥

ನೀರ ಹೊಳೆ ಕೆಸರಾಗದಿಹುದೆ ವಿ ।
ಚಾರಿಸಲು ಬಸವನ ಸಮೀಪದ ।
ಲಾರು ಸಮ್ಯಗ್‌ಜ್ಞಾನಸಾಧಕರಾಗರೆಂದೆನುತ ॥
ಹಾರವಿಸಿ ಭಕ್ತರು ನಿರಾಳವ ।
ಹಾರಿ ಬಿನ್ನಹ ಮಾಡೆ ಕರುಣಾ ।
ಕಾರ ಘನಗುರುವದಕೆ ಸಂತಸವಡುತಲಿಂತೆಂದ ॥೨೪॥

ಮಾತಿನದ್ವೈತದಲಿ ಮಾರಿಯ ।
ಘಾತಿ ಮಾಣದು ಮನದ ಸಂಕ ।
ಲ್ಪಾತಿಶಯದಲಿ ನಾಮ ರೂಪು ಕ್ರಿಯೆ ನಿವಾರಿಸಲು ॥
ಪ್ರೀತಿ ನೀತಿಯ ನುಂಗಿದುಪಮಾ ।
ತೀತನಾದಂಗಲ್ಲದಾಗದು ।
ಕೌತುಕವ ನಾನೇನ ಹೇಳುವೆ ಬಸವ ಕೇಳೆಂದ ॥೨೫॥

ತೆಂಗನಗಿದಗಿದೊಡೆಯದೊಯ್ಯನೆ ।
ನುಂಗಿ ತಿರುಳನೆ ಜೀರ್ಣಿಸುವ ಮಾ ।
ತಂಗದಂತಿರೆ ಶರಿರವಳಿಯದ ಪರಿಯಲವಗವಿಸಿ ॥
ಅಂಗದೊಳಹೊರಗಿಡಿದ ಮಾಯೆಯ ।
ಹಿಂಗಿಸುವ ಗುರುಮಹಿಮೆ ನಿನಗೊ ।
ಬ್ಬಂಗೆ ಸಲುವುದು ವೇದ ಮೆಚ್ಚಲು ದೇವ ಕೇಳೆಂದ ॥೨೬॥

ಬಸವನೇ ಗುರುವಾಗಿ ತಾ ಬೋ ।
ಧಿಸಿದನೊಡನಧ್ಯಾತ್ಮಭಾವದ ।
ಬೆಸುಗೆಯನು ಮಝು ಭಾಪು ನೀನಹುದೈ ಸಮಾಧಿಯಲಿ ॥
ಹಸನ ಮಾಡಿದೆ ತನು ಮನಂಗಳ ।
ದೆಸೆಯನಲ್ಲದಡೀ ತೆರನನಾ ।
ರುಸುರ ಬಲ್ಲರು ಚಾಗೆನುತ ಮೆಚ್ಚಿದನು ಗುರುರಾಯ ॥೨೭॥

ಧರೆಯ ಕಠಿಣವ ಕೆಡಿಸಿ ನೀರಿನ ।
ಸಿರಿಯ ರಸವನೆ ದಹಿಸಿ ಪಾವಕ ।
ನುರಿಯ ನಂದಿಸಿ ಮಾರುತನ ಸಂಚಲವ ಗತಿಗೆಡಿಸಿ ॥
ಹಿರಿಯ ಗಗನವನಿಂಬುಗೊಂಡಿಹ ।
ಶರಣತನದ ಮಹಾತ್ಮೆ ನಿನ್ನನು ।
ಶರಣುವೊಕ್ಕುದು ಬಸವ ಮಝು ಭಾಪೆಂದ ಗುರುರಾಯ ॥೨೮॥

ಬಸವ ಮಾಡಿದಡಾಯ್ತು ಗುರುನೆಲೆ ।
ಬಸವ ಮಾಡಿದಡಾಯ್ತು ಲಿಂಗವು ।
ಬಸವ ಮಾಡಿದಡಾಯ್ತು ಜಂಗಮವರಿವ ಮಹಿಮಂಗೆ ॥
ಬಸವನಿಂದಾಧ್ಯಾತ್ಮವೇ ಪಸ ।
ರಿಸಿತು ಲೋಕದೊಳಂತುಕಾರಣ ।
ಬಸವನೇ ಪರದೈವವೆಂದೆನುತಿರ್ದ ಗುರುರಾಯ ॥೨೯॥

ಮನವೆಯಕ್ಕನು ಚೆನ್ನಬಸವನೆ ।
ನೆನಹು ಮಡಿವಳನರಿವು ಬಾಚರ ।
ಸನೆ ವಿವೇಕ ಸುಶೀಲವೇ ತಾ ಹಡಪದಪ್ಪಣ್ಣ ॥
ತನುವೆ ಕಿನ್ನರ ಬಸವನೇ ಚೇ ।
ತನಕಳಾತ್ಮಕನಂತು ಬಸವ ।
ಣ್ಣನ ಮಹಾತ್ಮೆಯನೇನ ಹೊಗಳುವೆನೆಂದ ಗುರುರಾಯ ॥೩೦॥

ದೇವ ನಿನ್ನಯ ಭಕ್ತರೆಲ್ಲರು ।
ಜೀವ ನೀನೆ ಪರಮನಿಂತೀ ।
ಜೀವಪರಮರನೊಂದುಮಾಡಿ ನಿರಾವಲಂಬನದ ॥
ಠಾವನೆಡೆಗುಡು ಸಾಕು ಹೊಗಳುವ ।
ಡಾವು ನಿನಗೊಂದಿದಿರೆ ಎನುತವೆ ।
ತೀವಿ ಭಯಭಕ್ತಿಯಲಿ ಬಿನ್ನೈಸಿದನು ಬಸವಣ್ಣ ॥೩೧॥

ಹೆಚ್ಚಿದನು ಗುರು ಕರುಣದಿಂದಲಿ ।
ನಚ್ಚಿದನು ಗುರುಬಸವರಾಜನ ।
ಮೆಚ್ಚಿದನು ಗುರು ತನ್ನ ಭಕ್ತಿಯ ಸವಿಯ ತನಿರಸವ ।
ಕೊಚ್ಚಿದನು ಗುರು ಮರವೆಯೆಲ್ಲವ ।
ಮುಚ್ಚಿದನು ಗುರು ಭಿನ್ನ ಭಾವವ ।
ಬಿಚ್ಚಿದನು ಗುರು ಭವದ ಬಂಧವ ತನ್ನ ಭಕ್ತರಲಿ ॥೩೨॥

ಹಲವು ದಿನ ಮರೆದೊರಗಿ ನಿದ್ರೆಯ ।
ಬಲೆಯೊಳಗೆ ದುಸ್ವಪ್ನ ಕೋಟಿಯ ।
ಕೊಲೆಗೆಲಸಕೊಳಗಾದವರನೆಬ್ಬಿಸುವ ತೆರನಂತೆ ॥
ತೊಲಗಿಸುವೆ ಸಂಸಾರ ಸ್ವಪ್ನವ ।
ತಿಳುಹಿ ನಿಜ ಪದವಿಗಳ ಕೊಡುವೆನು ।
ಸುಲಭದಲಿ ನಾನೆನ್ನ ಭಕ್ತರಿಗೆಂದ ಗುರುರಾಯ ॥೩೩॥

ಎಂದು ಬಳಿಕವರವರಿಗುಚಿತಗ ।
ಳಿಂದಲವರವರನುಭವಂಗಳ ।
ಹೊಂದಿಕೆಯ ಹೋಲುವೆಯ ಬೆಂಬಳಿವಿಡಿದು ಕರುಣದಲಿ ॥
ಸಂದ ಸಮ್ಯಗ್‌ಜ್ಞಾನ ಶಿರದ ।
ಲ್ಲಿಂದ ಮೀರಿದ ಸುಖದ ಪರಮಾ ।
ನಂದವಹ ಸಂಕೇತಗಳ ಕರುಣಿಸಿದ ಗುರುರಾಯ ॥೩೪॥

ನಾನು ನೀನೆಂದೆಂಬ ಭೇದವಿ ।
ಧಾನವಲ್ಲದನದ್ವಿತೀಯವ ।
ಧಾನವಲ್ಲದ ಜ್ಞಾನ ಜ್ಞೇಯ ವಿರಚಿಸಿದ ॥
ಏನುವೆನಿಸದ ಏನುವಿಲ್ಲದ ।
ಏನುವಲ್ಲದ ನಿರುಪಮದ ಸುಯಿ ।
ದಾನ ಸುಖವನೆ ಕೊಟ್ಟನಾ ಗುರು ಬಸವರಾಜಂಗೆ ॥೩೫॥

ಮರಣವಿಲ್ಲದ ಜನನವಿಲ್ಲದ ।
ಕರಣವಿಲ್ಲದ ಕರ್ಮವಿಲ್ಲದ ।
ಇಹಪರಂಗಳೊಳೊಡಲ ಬಿಟ್ಟಿಯ ಹೊರೆಗಳನು ಹೊರದ ॥
ನಿರುಪಮದ ನಿಶ್ಚಿಂತ ನಿಶ್ಚಲ ।
ಪರಮ ನಿತ್ಯಾನಂದಪದವಿಯ ।
ಕರುಣಿಸಿದನಾ ಗುರುಗುಹೇಶ್ವರಲಿಂಗ ಬಸವಂಗೆ ॥೩೬॥

ಭೂರುಹದ ತಾಯ್ಬೇರಿಗಮೃತದ ।
ನೀರನೆರೆದಡೆ ಶಾಖೆಗಳಿಗೆ ಸು ।
ಸಾರ ವೇದಿಸುವಂತೆ ಬಸವನ ಭಕ್ತಿಬಂಧುಗಳು ।
ಹಾರವಿಸುವಂತೆಮ್ಮ ಬಸವನ ।
ಕಾರಣದಲೆಲ್ಲರಿಗೆ ತನ್ನಯ ।
ಸಾರ ನಿತ್ಯಾನಂದಪದವಿಯನಿತ್ತ ಗುರುರಾಯ ॥೩೭॥

ತಾನೆಯೊಡ್ಡಿದ ಮಾಯೆಯನು ದಿಟ ।
ತಾನೆ ಹುಸಿಯೆಂದಿಲ್ಲವೆನಿಸುವ ।
ದೇನರಿದು ಬಸವಣ್ಣ ಮೊದಲಾಗಿರ್ದ ಭಕ್ತರಿಗೆ ॥
ತಾನೆ ಕರುಣಿಸಿ ನುಡಿದು ಪರಮ ।
ಜ್ಞಾನದೃಷ್ಟಿಯನಿತ್ತು ಕೊಟ್ಟನು ।
ತಾನೆ ತನ್ನೊಲವಿಂದಲಾ ಪ್ರಭು ತನ್ನ ನಿಜಪದವ ॥೩೮॥

ಪರಿಪರಿಯ ಬಣ್ಣದಲಿ ಬಂದಂ ।
ಬರದ ಮುಗಿಲೊಡ್ಡವಣೆಯಾ ಕ್ಷಣ ।
ಹರಿದು ನಿರ್ಮಲವಾಗದೇ ಬಿರುಗಾಳಿ ಬೀಸಿದರೆ ॥
ಹರಿದು ಹೋಯಿತು ನಿಮಿಷಮಾತ್ರಕೆ ।
ಹರಗಣಂಗಳ ಮನದ ವಾಸನೆ ।
ಪರಮಸುಖವಾಯ್ತವರಿಗಾ ಪ್ರಭುಲಿಂಗಲೀಲೆಯಲಿ ॥೩೯॥

ಪೊಡವಿಯರಿಯಲು ಬಸವರಾಜನು ।
ಮಡಿವಳಯ್ಯನು ಚೆನ್ನಬಸವನು ।
ಹಡಪದಪ್ಪಣ್ಣಗಳು ನಾಗಾಯಿಗಳು ಮೊದಲಾದ ॥
ಮೃಡನ ಶರಣರು ಗುರು ಗುಹೇಶ್ವರ ।
ನಡಿಯ ಕರುಣದಲಚಲ ಪದವಿಯ ।
ಹಡೆದು ಹರುಷದಲಿದ್ದರನುದಿನ ಪರಮ ಸುಖದಿಂದೆ ॥೪೦॥

ಇತ್ತಲತಿ ಸುಲಭದಲಿ ಕರುಣಿಸಿ ।
ನಿತ್ಯಪದವಿಯನಖಿಳ ಶರಣರಿ ।
ಗಿತ್ತು ತಾ ಪರಿಪೂರ್ಣತೆಯ ನಿರ್ಲೇಪವೃತ್ತಿಯಲಿ ॥
ತತ್ವಮಸಿ ವಾಕ್ಯಂಗಳಿಂದ ।
ತತ್ತಲನುಪಮನಾಗಿ ತೊಲಗದೆ ।
ಸತ್ಯ ಶರಣರ ಸಲಹುತಿರ್ದನು ಗುರು ಗುಹೇಶ್ವರನು ॥೪೧॥

**ಅಂತು ಗತಿ ೨೪ಕ್ಕಂ ಪದನು ೧೦೮ಕ್ಕಂ ಮಂಗಳ ಮಹಾಶ್ರೀ ಶ್ರೀ**

## ಗತಿ – ೨೫
# ಅಲ್ಲಮಪ್ರಭು ಇರ್ದನೆಲ್ಲರ ಹೃದಯಕಮಲದಲಿ

**ವಚನ**

ಆದಿಯನು ಅರಿಯದೆ ಅನಾದಿಯಿಂದತ್ತತ್ತ
ತಾನಾರೆಂಬುದ ತಿಳಿದು ವಿಚಾರಿಸದೆ ಮಾಡಿದ ಫಲವೇನಯ್ಯಾ
ಸಾವನ್ನಕ್ಕರ ಸಾಧನೆಯಂ ಮಾಡಿದಡೆ
ಕಾದುವ ದಿವಸವಾವುದಯ್ಯಾ ಬಸವಣ್ಣಾ
ಬಾಳುವನ್ನಕ್ಕರ ಭಜನೆಯಂ ಮಾಡಿದಡೆ
ತಾನಹ ದಿನವಾವುದಯ್ಯಾ ಬಸವಣ್ಣಾ
ಇದು ಕಾರಣ ಮಿಥ್ಯವನೇ ಹಿಡಿದು ಮಿಥ್ಯವನೇ ಪೂಜಿಸಿ
ಮರ್ತ್ಯಲೋಕದ ಭಕ್ತರೆಲ್ಲ ವ್ಯರ್ಥವಾದರಲ್ಲಾ
ತಮ್ಮ ತಾವು ಕೆಟ್ಟ ಕೇಡಿಂಗೆ ಬೆರಗಾದೆ
ಕಣ್ಣ ಕಳೆದುಕೊಂಡು ಹೊಟ್ಟೆ ಸೀಳಿ
ಮಗನ ಬಾಣಸವ ಮಾಡಿ
ಕೈಲಾಸಪುರಕ್ಕೆ ಹೋದವರೆಲ್ಲರು ಭಕ್ತರೇ ?
ಅವರಿಗೆ ಶಿವಪಥ ಸಾಧ್ಯವಾಯಿತ್ತೇ ?
ಭವ ಹಿಂಗತ್ತೇ ?
ಅಸುರಕರ್ಮಿಗಳ ಮಾತಂತಿರಲಿ
ನರಲೋಕದ ನರಗುರಿಗಳೆಲ್ಲಾ ನರಸಂಸಾರಕ್ಕೊಳಗಾದರು
ಸುರಲೋಕದ ಸುರರುಗಳೆಲ್ಲಾ ಸುರಸಂಸಾರಕ್ಕೊಳಗಾದರು
ರುದ್ರಲೋಕದ ರುದ್ರರುಗಳೆಲ್ಲಾ ರುದ್ರಸಂಸಾರಕ್ಕೊಳಗಾದರು
ಮುನಿಜನಂಗಳೆಲ್ಲಾ ತಪಸಂಸಾರಕ್ಕೊಳಗಾದರು
ಲಿಂಗವ ಹಿಡಿದವರೆಲ್ಲಾ ಸಾಯುಜ್ಯವೆಂಬ ಸಂಸಾರಕ್ಕೊಳಗಾದರು

ಇಂತೀ ಸಂಸಾರಕ್ಕೊಳಗಾದವರೆಲ್ಲಾ ಮಾಯೆಯ ಹೊಡೆಗಿಚ್ಚ ಗೆಲಬಲ್ಲರೇ ।
ಅದೆಂತೆಂದಡೆ :
ನಿತ್ಯ ನಿಜಾತ್ಮ ತಾನೆಂದರಿಯದೆ
ತತ್ವಮಸಿಯೆಂಬ ವಾಕ್ಯ ತಾನೆಂದರಿಯದೆ
ಹೊರಹೊರಗೆ ಬಳಸಿ ಕೆಟ್ಟರೆಲ್ಲಾ ಹಿರಿಯರು
ಸತ್ತರಲ್ಲಾ ನಾಯ ಸಾವ
ಸತ್ತವರ ಹೆಸರ ಪತ್ರವನೋದಿ ಎತ್ತಳ ಮುಕ್ತಿ ಕಾಣಾ ಗುಹೇಶ್ವರ ॥೧॥

ಪರುಷಕ್ಕೆ ಬಲೆಯುಂಟೇ ?
ಪ್ರಾಣಕ್ಕೆ ನಿರ್ಮಾಲ್ಯವುಂಟೇ ?
ರುಚಿಗೆ ಎಂಜಲುಂಟೇ ?
ಸುಖಕ್ಕೆ ಅರೋಚಕವುಂಟೇ ?
ಗುಹೇಶ್ವರಾ ನಿಮ್ಮನರಿದ ಶರಣಂಗೆ ಭವಬಂಧನವುಂಟೇ ? ॥೨॥

**ಸೂಚನೆ**

ಸತ್ಯಶರಣರಿಗಲ್ಲಮಪ್ರಭು ।
ನಿತ್ಯಪದವಿಯನೀಯೆ ನಿಗಮ ।
ಸ್ತುತ್ಯ ಶಂಕರನದನು ವಿಸ್ತರಿಸಿದನು ಗಿರಿಸುತೆಗೆ ॥

ಬಲ್ಲವರು ಭಾವಕರು ಭಕ್ತಿಯ ।
ನುಳ್ಳವರು ಸಾಧಕರು ರಸಿಕರು ।
ಸೊಲ್ಲಿನೊಳಗರಿವವರು ಸಕಳ ಕಳಾವಿಳಾಸಿಗಳು ॥
ಎಲ್ಲರಾಲಿಸಿ ಕೇಳುವುದು ಸಲೆ ।
ಸಲ್ಲಲಿತ ಸಂಗತಿಯ ಪದದೊಳ ।
ಗಲ್ಲಮನ ಮಹಿಮೆಗಳನೀ ಪ್ರಭುಲಿಂಗಲೀಲೆಯಲಿ ॥೧॥

ಶರಣಸಂದೋಹವನು ತನ್ನಯ ।
ಪರಮ ನಿತ್ಯಾನಂದ ಪದವಿಯ ।
ಲಿರಿಸಿ ತಾನಲ್ಲಿಂದೆ ಹೋಗುತಲವರ ಬೀಳ್ಕೊಟ್ಟು ॥
ಕರುಣದಿಂದಲಿ ಸಕಲ ಸಚರಾ ।
ಚರರೊಳಂತರಿಯಾಮಿಯಾಗಿಯೆ ।
ಗುರು ಗುಹೇಶ್ವರಲಿಂಗನಿರ್ದನು ತನ್ನ ಲೀಲೆಯಲಿ ॥೨॥

ಖರಕರಪ್ರತಿಬಿಂಬವಖಿಳದೊ ।
ಳಿರದೆತಾನೆಲ್ಲರಿಗೆ ದೃಗ್ಗೋ ।
ಚರವೆ ನಿರ್ಮಲ ನಿಶ್ಚಲದ ನೀರಿನಲಿ ತೋರ್ಪಂತೆ ॥
ಭರಿತನಾಗಿರ್ದೆಲ್ಲರಿಗೆ ವಿ ।
ಸ್ತರಿಸಿ ತೋರದೆ ಸತ್ಯ ಸದ್ಭ ।
ಕ್ತರಲಿ ಕಾಣಿಸುತಿರ್ದನಲ್ಲಮಲಿಂಗ ಲೀಲೆಯಲಿ ॥೩॥

ಗುರು ಗುಹೇಶ್ವರಲಿಂಗ ತನ್ನಯ ।
ಚರಣ ಭಕ್ತರ ಹೃದಯಕಮಲಾ ।
ಕರದಲಾಡುವ ಹಂಸೆಯಂತಿರುತಿರ್ದನೊಲಿದಿತ್ತ ॥
ಹರುಷದಲಿ ಬಳಿಕತ್ತ ಪರಮೇ ।
ಶ್ವರನೊಳಾ ಕೈಲಾಸಪುರದೊಳು ।
ಸರಸಗೋಷ್ಠಿಯ ಮಾಡುತಂದಿಂತೆಂದಳಾ ಗಿರಿಜೆ ॥೪॥

ಎಲೆ ಸದಾಶಿವ ನನ್ನ ಸಾತ್ವಿಕ ।
ಕಳೆಯ ನಿನ್ನಯ ಗಣವ ನೀನಂ ।
ದಿಳೆಯಲುದಯಿಸಿಯಲ್ಲ ಮಪ್ರಭುಲಿಂಗನೊಲವಿಂದೆ ॥
ತಿಳಿದು ನಿತ್ಯತ್ವವನು ಸಾಧಿಸಿ ।
ಕೊಳಲಿಯೆಂದನಿಬರನು ಕಳುಹಿದೆ ।
ಬಳಿಕಲವರೇನಾದರೆಂದಾಲಿಸಿದಳಾ ಗಿರಿಜೆ ॥೫॥

ಎನಲು ಬಸವಣ್ಣಾದಿ ಭಕ್ತರಿ ।
ಗನುಪಮದ ಪದವಾದುದನು ತಾ ।
ನೆನೆದ ನೆನಹಿಗೆ ಮುಂಚೆ ಕಂಡನು ಶರ್ವ ಸರ್ವಜ್ಞ ॥
ಮನವೊಲಿದು ನಸುನಗೆಯ ಕಾಂತಿಯ ।
ನನೆಯನರಳಿಸುತಾ ಹದನ ನಿಜ ।
ವನಿತೆಗೊರೆವುತಲಿರ್ದನಾನಂದದಲಿ ಶಶಿಮೌಳಿ ॥೬॥

ದೇವಿ ನಿನ್ನಯ ಸಾತ್ವಕವೆ ಮಹ ।
ದೇವಿವೆಸರಲಿ ಹುಟ್ಟಿ ಬೆಳೆದಳು ।
ದೇವಗಣದೊಳು ವೃಷಭರಾಜನೆ ಬಸವವೆಸರಿನಲಿ ॥
ತೀವಿ ಮಿಕ್ಕವರೆಲ್ಲ ರುಚಿತವ ।
ಚೋವಿಳಾಸದ ಹೆಸರುವಡೆದಾ ।
ಭೂವಳಯದಲಿ ಸಂಜನಿಸಿದರು ಕಾಂತೆ ಕೇಳೆಂದ ॥೭॥

ಜನಿಸಿ ಬೆಳೆದೊಂದೊಂದು ಕಾಯಕ ।
ದನುವಿಡಿದು ತಾವಲ್ಲಮಪ್ರಭು ।
ವನೆ ಸದಾ ಧ್ಯಾನಿಸುತಲಿದ್ದರು ಭಕ್ತಿಭಾವದಲಿ ॥
ಅನಿಬರೊಳಗೊಬ್ಬರಿಗದೊಬ್ಬರು ।
ಘನವೆನಲು ಸಂಪ್ರೀತಿಯಿಂದಲಿ ।
ತನುಮಂಗಳ ಸವೆವುತಿರ್ದರು ಲಿಂಗಜಂಗಮಕೆ ॥೮॥

ಆತನಲ್ಲಮ ಸಕಲ ಸಮಯ ।
ಪ್ರೀತನಲ್ಲಿಯು ಶೈವದಲಿ ಸಂ ।
ಪ್ರೀತನದರೊಳು ವೀರಶೈವದಲತಿಮಹಾ ಪ್ರೀತ ॥
ಈ ತೆರನನರಿದಖಿಳ ಭಕ್ತಸ ।
ಮೇತವಂತಾ ವೀರಶೈವದ ।
ನೀತಿಯನೆ ನಿರ್ಣಯಿಸುತಿರ್ದರು ಕಾಂತೆ ಕೇಳೆಂದ ॥೯॥

ಉಳ್ಳ ಷಡುಸಮಯಗಳ ನುಡಿವಳಿ ।
ಯೆಲ್ಲವೇಕೆಂದವರ ಮಾರ್ಗವ ।
ನೊಲ್ಲ ನೀನೀ ಹೊಗಳಿ ಹೇಳಿದ ವೀರಶೈವದಲಿ ॥
ಒಳ್ಳಿತೇನುಂಟೆಂದು ಮೆಚ್ಚಿದ ।
ನಲ್ಲಮನು ಹೇಳೆನುತ ತನ್ನಯ ।
ವಲ್ಲಭನ ಕೇಳಿದಳು ಮಾಣದೆ ಮತ್ತೆ ಗಿರಿಜಾತೆ ॥೧೦॥

ಆದಡಾಲಿಸಿ ಕೇಳು ಧರ್ಮಾ ।
ರ್ಥಾದಿಯಾಗಿಹ ಕಾಮ ಮೋಕ್ಷಾ ।
ಮೋದವಾಗಿಹವಖಿಳ ಸಮಯಗಳಾಗಮೋಕ್ತಿಯಲಿ ॥
ವೇದವರಿಯಲು ವೀರಶೈವದ ।
ಹಾದಿಯೆಂಬುದು ನಿಸ್ಪೃಹದ ಸಂ ।
ಬೋಧೆಯಾಗಹುದೇನನೆಂಬೆನು ಗಿರಿಜೆ ಕೇಳೆಂದ ॥೧೧॥

ಕರ್ಮಮಾತ್ರವೆ ಪಾಪವೆನ್ನದೆ ।
ಕರ್ಮಲಂಪಟರುಗಳು ಪಾಪದ ।
ಕರ್ಮ ಪುಣ್ಯದ ಕರ್ಮವೆಂಬಿಂತೆರಡ ಮಾಡಿದರು ॥
ಕರ್ಮ ಮಾತ್ರವೆ ಭವದ ಬೀಜದ ।
ಧರ್ಮವೆಂದಾ ವೀರಶೈವದ ।
ಕರ್ಮಿಗಳು ನಿಷ್ಕರ್ಮರೆನಿಪರು ಗಿರಿಜೆ ಕೇಳೆಂದ ॥೧೨॥

ಊಹಿಸಲು ಕರ್ಮದಲಿ ಜೀವ ।
ದ್ರೋಹವಾ ದ್ರೋಹದಲಿ ಭವಸಂ ।
ದೋಹವಾ ಭವವುಳ್ಳ ಭವಿಗಳು ಶುದ್ಧ ನರಕಿಗಳು ॥
ಮೋಹವಿಲ್ಲದೆ ಸಕಲ ಜೀವ ।
ಸ್ನೇಹವುಳ್ಳಾ ವೀರಶೈವದ ।
ಗಾಹುಕಾರರು ಪರಮ ಸುಖಿಗಳು ಗಿರಿಜೆ ಕೇಳೆಂದ ॥೧೩॥

ವೀರಶೈವವನದುನಿಮಿತ್ತದ ।
ಲಾರು ಹೊಕ್ಕಂಗೈಸಿ ಭಕ್ತಿಯ ।
ಪಾರವೆಯ್ದಿಸಬಲ್ಲರೇ ಅವರಲ್ಲ ದುಳಿದವರು ॥
ಧಾರುಣಿಯಲಿದನರಿದು ಕರುಣಾ ।
ಕಾರನಲ್ಲಮ ತನ್ನ ಭಕ್ತರು ।
ಹಾರವಿಸಿಕೊಂಬಂತೆ ಸುಳಿದನು ಗಿರಿಜೆ ಕೇಳೆಂದ ॥೧೪॥

ಬಂದು ಬಳಿಕವರವರಿಗುಚಿತಗ ।
ಳಿಂದಲನುಭವಮಾರ್ಗವನು ದಯೆ ।
ಯಿಂದಲುಪದೇಶಿಸಿ ಮಹಾ ಸುಜ್ಞಾನ ದೃಷ್ಟಿಯನು ॥
ಕಂದೆರಸಿ ಮಹದೇವಿಯಕ್ಕಗೆ ।
ಸಂದ ನಿಜ ಶರಣರಿಗೆ ನಿತ್ಯಾ ।
ನಂದ ಪದವಿಯನಿತ್ತನಲ್ಲಮ ಗಿರಿಜೆ ಕೇಳೆಂದ ॥೧೫॥

ಭವಭವದಲಜ್ಞಾನವಿಧಿಯಲಿ ।
ಭುವನ ಭವನವ ತೊಳಲಿ ಬಳಲುವ ।
ವ್ಯವಹರಣೆಯಂತಲ್ಲ ಗುರುಕೃಪೆಯಾದ ಶರಣರಿಗೆ ॥
ಹವಣಿಸಲು ಬಾರದ ಪರಬ್ರ ।
ಹ್ಮವನು ಮೀರಿದ ನಿರುಪಮಸ್ಥಾ ।
ನವನು ಸೂರೆಯ ಕೊಟ್ಟನಲ್ಲಮ ಗಿರಿಜೆ ಕೇಳೆಂದ ॥೧೬॥

ದೇವಿ ಕೇಳ್ ನಿನ್ನಂಶದಾ ಮಹ ।
ದೇವಿ ನನ್ನಂಶದ ಗಣಂಗಳು ।
ದೇವಕನ್ಯೆಯರೆಲ್ಲ ರಲ್ಲಮನಿಂದೆ ಜಗವರಿಯೆ ॥
ತೀವಿತಮ್ಮಯ ನಾಮ ರೂಪು ।
ಕ್ರೀ ವಿಳಾಸವನಿಳುಹಿ ನಿತ್ಯ ನಿ ।
ರಾವಲಂಬದ ಸುಖಿಗಳಾದರು ಗಿರಿಜೆ ಕೇಳೆಂದ ॥೧೭॥

ಲೇಸು ಮತ್ತೆಯು ನಿಮ್ಮವರು ಕೈ ।
ಲಾಸಪದವಿಯ ಮೀರಿ ನಿರುಪಮ ।
ವಾಸವನೆ ವೆಂಟಣಿಸಿಕೊಂಡರೆಲೈ ಮಹಾದೇವ ॥
ಈ ಸುಖಂಗಳನಲ್ಲಮನೆ ನಿ ।
ರ್ಯೈಸಿ ಕೊಟ್ಟನು ಶರಣರಿಗೆ ಸಂ ।
ತೋಷವಿನ್ನೆನಗಾದುದೆಂದಳು ಬಳಿಕ ಗಿರಿಜಾತೆ ॥೧೮॥

ದೇವ ನೀನೆಂದಂತೆ ಘನಮಹಿ ।
ಮಾವಲಂಬನು ತಪ್ಪದೈ ಪ್ರಭು ।
ದೇವ ನಾನಿದನರಿದೆನೀಗಳು ನಿನ್ನ ಕರುಣದಲಿ ॥
ದೇವ ನಿನ್ನ ನಿಜಸ್ವರೂಪಕಿ ।
ದಾವುದರಿದೆಂದೆನುತ ಪಾರ್ವತಿ ।
ದೇವಿ ಸಂತೋಷದಲಿ ನುಡಿದಳು ಬಳಿಕ ಶಂಕರಗೆ ॥೧೯॥

ಇಂತು ಸತತೋತ್ಸಾಹದಿಂದಲಿ ।
ಸಂತತಾನಂದೈಕಸುಖದಲಿ ।
ಕಾಂತೆ ಸಹಿತಿರುತಿರ್ದನೀಶ್ವರನತ್ತ ಬಳಿಕಿತ್ತ ।
ಚಿಂತಿತಾರ್ಥವನಖಿಳ ಭಕ್ತರ ।
ತಿಂತಿಣಿಗೆ ಕೊಡುತಲ್ಲಮಪ್ರಭು ।
ಸಂತಸದಲಿರುತಿರ್ದನೆಲ್ಲರ ಹೃದಯಕಮಲದಲಿ ॥೨೦॥

ಬಾಲರನು ವೃದ್ಧರನು ಭೂಮೀ ।
ಪಾಲರನು ಬಡವರನು ಸದಮಲ ।
ಶೀಲರನು ಗುಣಿಗಳನು ಗೋ ಬ್ರಾಹ್ಮರನು ಭಕ್ತರನು ॥
ಲೋಲತೆಯಲಿ ಸಮಸ್ತ ಜಾತಿಯ ।
ಜಾಲವನು ಸರ್ವರನು ಕರುಣಿಸಿ ।
ಪಾಲಿಸುತಲಿರುತಿರ್ದನೆಮ್ಮಯ ಗುರು ಗುಹೇಶ್ವರನು ॥೨೧॥

ಹಿರಿಯರಿಗೆ ಕಿರಿಯರಿಗೆ ಸದಮಲ ।
ಚರಿತರಿಗೆ ಚದುರರಿಗೆ ಸಜ್ಜನ ।
ಶರಣರಿಗೆ ಮುಗ್ಧರಿಗೆ ಸಕಳಕಳಾವಿದಗ್ಧರಿಗೆ ॥
ಗರುವರಿಗೆ ಹಿತವರಿಗೆ ಸಚರಾ ।
ಚರರಿಗನುದಿನ ಕರುಣದಿಂದಲಿ ।
ವರದನಾಗಲಿ ಗುರು ಗುಹೇಶ್ವರಲಿಂಗ ಲೀಲೆಯಲಿ ॥೨೨॥

ಆಲಸಿಕೆಯಿಂದಾದಡೋದಲು ।
ನಾಲಗೆಯ ಬರ ಬಿಟ್ಟು ಹೋಹುದು ।
ಕೇಳಲನುಕರಿಸಿದಡೆ ಕರ್ಣೇಂದ್ರಿಯಕೆ ದಣಿವಹುದು ॥
ಆಲಿಸಿದ ಪದದರ್ಥ ಮನಸಿನ ।
ಮೇಲೆ ನಿಲೆ ನಿತ್ಯತ್ವವಹುದೆನೆ ।
ಲಾಲಿಸುವುದದನೊಲಿವಡೀ ಪ್ರಭುಲಿಂಗಲೀಲೆಯಲಿ ॥೨೩॥

ನೋಡಿದರೆ ಭಯಭಕ್ತಿಯಲಿ ಕೊಂ ।
ಡಾಡಿದರೆ ರಾಗದಲಿ ರಂಜಿಸಿ ।
ಹಾಡಿದರೆ ಹಾರೈಸಿದರೆ ಕಿವಿಗೊಟ್ಟು ಕೇಳಿದರೆ ॥
ಕೂಡೆ ಲೀಲೆಯನರಿದು ಹರುಷವ ।
ಮಾಡಿದರೆ ಭವಬಾಧೆಗಳನೀ ।
ಡಾಡಿ ನಿತ್ಯವ ಹಡೆವರೀ ಪ್ರಭುಲಿಂಗಲೀಲೆಯಲಿ ॥೨೪॥

ಒಂದು ಸಾವಿರದೊಂದು ಶತ ಹ ।
ನ್ನೊಂದು ಪದವೆಂದೆಂಬ ಪರುಷದ ।
ಸಂದ ಶಿಲೆಯನು ಬಳಸಿದಿಪ್ಪತ್ತೈದು ಗತಿಯೆಂಬ ॥
ಹೊಂದಿಗೆಯ ಸೋಪಾನಗಳ ಬಲಿ ।
ದಂದವಿಸಿಯಲ್ಲಮನ ಪರಮಾ ।
ನಂದಲೀಲಾಮೃತಸರೋವರವಾಯ್ತು ಜಗದೊಳಗೆ ॥೨೫॥

**ಅಂತು ಗತಿ ೨೫ಕ್ಕಂ ಪದ ೧೧೧೧ಕ್ಕಂ ಮಂಗಳಂ**

**ಮಂಗಳಮಹಾ ಶ್ರೀ ಶ್ರೀ ಸಮಾಪ್ತಂ**

# ಪದ್ಯಗಳ ಅಕಾರಾದಿ


| | ಗತಿ | ಪದ್ಯಸಂಖ್ಯೆ |
|---|---|---|
| **ಅ** | | |
| ಅಕಟ ನಿಮ್ಮಯ ಗುರು | ೧೩ | ೯ |
| ಅಕಟ ಮಗಳಿಗಿದಾವ ದೆಸೆ | ೫ | ೬೦ |
| ಅಕಟ ಮರುಳೇ ಅಲ್ಲಮಪ್ರಭು | ೭ | ೨೦ |
| ಅಕ್ಕ ಕೇಳೌ ನಿನ್ನ ಹೆಸರಿಗೆ | ೧೨ | ೧೩ |
| ಅಕ್ಕಟಕ್ಕಟವೀತಗಳುಪಿದ | ೫ | ೪೯ |
| ಅಂಗ ಭೂಮಿಯಲನ್ನ | ೧೮ | ೨೩ |
| ಅಂಗವಿಸಲೀ ಪ್ರಾಣವಿದು | ೧೬ | ೨೬ |
| ಅಂಗವಿಸಿ ನಾನೀ ಪ್ರಕಾರದ | ೧೯ | ೪೮ |
| ಅಡಕಿಲಡಕಿಲುಗೊಂಡು ಭುವನ | ೪ | ೧೨ |
| ಅಂಡ ಪಿಂಡ ನ್ಯಾಯವೊಂದೇ | ೨೧ | ೨೧ |
| ಅಣಕವಲ್ಲಿದು ತನ್ನ ಹೊಯ್ದಡೆ | ೧೯ | ೩೬ |
| ಅಣಕಿಸುವ ಬಾಧಕರ ಬಾಯನೆ | ೨೨ | ೩೦ |
| ಅಣ್ಣ ಕೇಳುದಕದಲಿ ಮುಳುಗಿದ | ೫ | ೬೮ |
| ಅತ್ರಿ ಭಾರದ್ವಾಜ | ೨ | ೨೬ |
| ಅದರೊಳಗೆ ಕೆಲಕೆಲರು | ೨೦ | ೩೬ |
| ಅದರೊಳವನೀಕಾಂತೆ | ೩ | ೨ |
| ಅದು ನಿಮಿತ್ತದಲಂತರಂಗದ | ೧೮ | ೧೬ |
| ಅದು ನಿಮಿತ್ತದಲಲ್ಲಮನ | ೬ | ೪೨ |
| ಅದು ನಿಮಿತ್ತದಲಿಷ್ಟಲಿಂಗದ | ೧೬ | ೪೨ |
| ಅದು ನಿಮಿತ್ತದಲಿಷ್ಟಲಿಂಗವೆ | ೧೬ | ೩೩ |
| ಅದು ನಿಮಿತ್ತದಲಖಿಳ ಜೀವರ | ೧೯ | ೪೬ |
| ಅದು ನಿಮಿತ್ತದಲಾಗ | ೧೬ | ೧೩ |
| ಅಂತರಂಗವ ಹೊಕ್ಕು | ೧೧ | ೨೦ |

| | | |
|---|---|---|
| ಅಂತು ಕಾರಣವಿದನುಹಮ್ಮಿನ | ೧೬ | ೫೦ |
| ಅಂದಿನಿರುಳಿನೊಳಾರುವರಿಯದ | ೫ | ೪೪ |
| ಅಂದು ಕಲ್ಯಾಣದ | ೯ | ೩೩ |
| ಅಂದು ಬಳಿಕಾ ಹದನನಾಗಳೆ | ೫ | ೫೫ |
| ಅನವರತವೇನಾದಡೊಂದನು | ೨೪ | ೧೪ |
| ಅನುಗೊಳಿಸಲಳವಟ್ಟ | ೬ | ೧೮ |
| ಅನುಗೊಳಿಸದನು ಶೂನ್ಯ | ೨೧ | ೯ |
| ಅನುಭವಣೆಯಳವಡುವ | ೧೮ | ೩೪ |
| ಅನುಮತಿಸಿ ನಾರಿಯರು | ೧೦ | ೧೦ |
| ಅನುವಿಡಿದು ಗುರುಲಿಂಗ | ೨೩ | ೧ |
| ಅನುಶ್ರವಣ ಮನನದ | ೧೮ | ೧೪ |
| ಅಂಬರವೆ ಬಾಯ್ದೆರೆದು | ೨೩ | ೩೪ |
| ಅರಮನೆಯ ಹೊಕ್ಕಳು | ೧೦ | ೨೧ |
| ಅರರೆ ಫಡಫಡದಾರು | ೧೩ | ೮ |
| ಅರಸಗಿದರೇ ನೀವು | ೧೦ | ೭ |
| ಅರಲುಗೊಂಡವರಿದಿರಲಮೃತ | ೧೭ | ೪ |
| ಅರಸನರಿಯದ ತೆರದ | ೫ | ೬೩ |
| ಅರಸನರಿಯದ ಬಿಟ್ಟಿಗೆಲಸ | ೨೨ | ೪ |
| ಅರಸಿ ನುಡಿದಡೆ ನಾವು | ೫ | ೫೯ |
| ಅರಿಗಳಿದಿರಲಿ ತಪ್ಪಿದರೆ | ೧೪ | ೨೪ |
| ಅರಿಗಳೆಂಬಭಿದಾನವಡಗಿದ | ೨೧ | ೩ |
| ಅರಿಯದವರಾಳೋಚನೆಗೆ | ೧೧ | ೨೬ |
| ಅರಿಯದವರಿಗೆ ಅಂಗಲಿಂಗದ | ೧೯ | ೫೨ |
| ಅರಿಯಬೇಕಾರಾವವೇಷವ | ೧೫ | ೯ |
| ಅರಿಯೆ ನಾನಿನ್ನಬರ | ೧೯ | ೩೯ |
| ಅಲ್ಲದಿರ್ದಡೆ ನಮಗಿದೆತ್ತಣ | ೩ | ೧೮ |
| ಅಲ್ಲಮನ ಮುಖದಿಂದಲೀಕೆಯ | ೮ | ೧೪ |
| ಅಲ್ಲಮನು ತಾನೆಂಬ ಹೆಸರವ | ೭ | ೧೮ |
| ಅಲ್ಲಮಪ್ರಭುವೆಂಬ ತವಕದ | ೨೩ | ೩೦ |

| | | |
|---|---|---|
| ಅಲ್ಲಮಪ್ರಭುವೆನಿಪನಾತನ | ೨ | ೩೭ |
| ಅಲ್ಲಮಪ್ರಭು ಸಂಪ್ರದಾಯದ | ೧ | ೮ |
| ಅಲ್ಲಮಪ್ರಭು ಪಾದಪಂಕಜ | ೮ | ೩೩ |
| ಅಲ್ಲಮಪ್ರಭು ಬರಲು ಕಾಣುತ | ೧೫ | ೪ |
| ಅಲ್ಲಮಪ್ರಭುರಾಯನಾನತ | ೧೨ | ೨ |
| ಅಲ್ಲಿಗಲ್ಲಿಗೆ ಬೇಹ ಶಕ್ತಿ | ೨೧ | ೨೦ |
| ಅವಧರಿಸಿ ಕೇಳೆನ್ನ ಬುದ್ಧಿಯ | ೧೧ | ೧೩ |
| ಅವರು ತಿಳಿದರು ಮಾಯೆ ಹುಟ್ಟಿದ | ೨೦ | ೪೨ |
| ಅವರು ಮಕ್ಕಳ ಬಯಸಿ | ೩ | ೯ |
| ಅಷ್ಟಮದಗಳ ಸೊಗಡ ಸೊಕ್ಕಿನ | ೨೩ | ೫೨ |
| ಅಷ್ಟವಿಧದರ್ಚನೆಗಳಿಂದು | ೩ | ೪೬ |
| ಅಹುದು ತನುವುಳ್ಳಲ್ಲಿ ಸುಖದಿಂ | ೫ | ೬೨ |
| ಅಹುದು ನಿಮ್ಮಯ ಚಿತ್ತ | ೧೩ | ೪೬ |
| ಅಹುದು ಮತ್ತೇನಯ್ಯ | ೧೨ | ೨೪ |
| ಅಹುದು ಮತ್ತೇನವ್ವ | ೧೨ | ೧೮ |
| ಅಳನು ಮಿಡುಕನು | ೯ | ೧೨ |
| ಅಳಲಿದರು ಮಗಳಗಲಿದರೆ | ೮ | ೮ |
| ಅಳವಡಿಸಿದನು ಪಂಚಭೂತ | ೨೧ | ೧೯ |
| **ಆ** | | |
| ಆಕೆ ಕಡೆಗಣ್ಣಿನಲಿ ತೋರಿದ | ೭ | ೨೯ |
| ಆಕೆ ಕನ್ಯಾಮಾಡದೊಳು | ೩ | ೩೬ |
| ಆಕೆ ತಾನು ಪತಿವ್ರತಾ | ೯ | ೧೧ |
| ಆಕೆಯನು ಕೇಳುವುದು | ೧೦ | ೯ |
| ಆಗಮಂಗಳನೆಲ್ಲವನು | ೭ | ೬ |
| ಆಗಲದಕೇನೊಂದುಬಾರಿಯ | ೧೩ | ೪೩ |
| ಆಗಲಾದಡೆ ನಾಮರೂಪು | ೨ | ೩೩ |
| ಆಗಲೆನುತಲಿ ಬಳಿಕ | ೫ | ೭೨ |
| ಆಡಿ ಕಲರಿಗೆ ಕರುಣದಲಿ | ೧೫ | ೨೭ |
| ಆಡಿಸುವ ಕೆಳದಿಯರ | ೩ | ೨೯ |

| | | |
|---|---|---|
| ಆಣೆಗಂಜುವೆನವ್ವ ಕಾಮನ | ೭ | ೧೭ |
| ಆತನದ ಕೈಕೊಂಡು ನೋಡುವೆ | ೫ | ೧೬ |
| ಆತನಂತಃಕರಣವಾತನ | ೨೨ | ೫ |
| ಆತನಲ್ಲಮ ಸಕಲ ಸಮಯ | ೨೫ | ೯ |
| ಆತನಿದ ನೆರೆ ನೋಡು | ೧೦ | ೨೫ |
| ಆತನೋದದ  ವೇದಶಾಸ್ತ್ರ | ೬ | ೩೩ |
| ಆತ ಮಹಿಮನು ನಿತ್ಯ | ೧೨ | ೧೦ |
| ಆತ ಹೇಳದ ಮುನ್ನಲಾತನ | ೨೩ | ೨೬ |
| ಆದಡದನಾನರಿಯೆನೌ | ೭ | ೨೧ |
| ಆದಡಂತಃಕರಣ ವೃತ್ತಿಯ | ೬ | ೧೫ |
| ಆದಡಾಗಲಿ ಅರಸ ನಡೆಯೆನೆ | ೧೦ | ೨೦ |
| ಆದಡಾಲಿಸಿ ಕೇಳು ಕಠಿಣತೆ | ೧೯ | ೪೩ |
| ಅದಡಾಲಿಸುವೊಂದು ಬುದ್ಧಿಯ | ೬ | ೧೦ |
| ಆದಡಿನ್ನಾ ಸಾವು ತಪ್ಪುವ | ೧೩ | ೫೭ |
| ಆದಡಿನ್ನೀತನನುಪಾಯದ | ೧೧ | ೬ |
| ಆದಡಿನ್ನೇಳೇಳು ಹಿಡಿಹಿಡಿ | ೧೯ | ೨೫ |
| ಆದಡಿವಳಂತಸ್ಥವೇ ವಿಧಿ | ೭ | ೧೫ |
| ಆದಡೆಲೆ ಘನ ಮಹಿಮ | ೭ | ೭೮ |
| ಆದಡೇನಾ ನಿನ್ನ ಮಾತಿನ | ೫ | ೩೪ |
| ಆದವಾತಗೆ ನಾಮಕರಣ | ೯ | ೧೭ |
| ಆದಿನಾಥನೆ ತಾನಿದೊಂದು | ೧೯ | ೩೮ |
| ಆದಿ ಪುರುಷನು ಬಸವರಾಜನ | ೧೮ | ೧೨ |
| ಆದಿ ಮಧ್ಯಾಂತಂಗಳಿಲ್ಲದ | ೨೨ | ೫೩ |
| ಆದಿಯಂತ್ಯವರಿಯದೆಲ್ಲರ | ೭ | ೫೮ |
| ಆದಿಯಲಿ ಕೈಲಾಸದೊಳು | ೯ | ೨೬ |
| ಆದೊಡಾಲಿಸಿ ಕೇಳು ಧರ್ಮಾ | ೨೫ | ೧೧ |
| ಆದೊಡಾಲಿಸಿ ಕೇಳು ಭಕ್ತಿಯ | ೧೮ | ೧೩ |
| ಆ ನಟಣೆಯಾ ರೀತಿಯಾ | ೩ | ೩೪ |
| ಆ ನರೇಂದ್ರನ ಕಂಡು | ೯ | ೨೧ |

| | | |
|---|---|---|
| ಆ ನುಡಿಯ ಕೇಳುತ್ತ | ೫ | ೩೪ |
| ಆ ನುಡಿಯ ಮಾರ್ಕೊಂಡು | ೮ | ೨೩ |
| ಆ ನುಡಿಯನಾಲಿಸುತ | ೫ | ೨೮ |
| ಆನುನೀನೆಂಬುಭಯ | ೧೭ | ೨೨ |
| ಆನೆ ಕೆಸರೊಳಗದ್ದಿ ಬಿದ್ದರೆ | ೧೩ | ೬೬ |
| ಆ ಮರನ ಹಬ್ಬಿರ್ದ ಲತೆ | ೨೧ | ೧೮ |
| ಆ ಮಹಾ ಶ್ರೀಗಿರಿಯ | ೧೯ | ೧೩ |
| ಆಯತವನಳವಡಿಸಿ ದಿಟ | ೧೭ | ೨೦ |
| ಆಯತಿಕೆಯಲಿ ನಗರ | ೧೦ | ೩೦ |
| ಆಯಿತೆ ಕಡೆಯಕಟ ಹೂಣಿಕೆ | ೭ | ೩೯ |
| ಆರನಾಡಿಸುವರೆಂಬುದ | ೭ | ೬೨ |
| ಆರು ನಮ್ಮನು ಜರೆದವನು | ೧೩ | ೨೩ |
| ಆರು ನಮ್ಮನು ತಿಳಿವೆನೆನುತಲಿ | ೧೭ | ೧೩ |
| ಆರು ಬಣ್ಣಿಸಬಲ್ಲರಾ | ೩ | ೭ |
| ಆರು ಬಲ್ಲರು ಬಸವನೊಡ್ಡಿದ | ೨೧ | ೨೭ |
| ಆರು ಬೇಡಿದವರಿಗೆ ಬೇಡಿದ | ೨೦ | ೨೦ |
| ಆರು ಮೊದಲಲಿ ಬಯಸ | ೭ | ೫೦ |
| ಆರು ಮೊದಲಲಿ ಭಕ್ತಿ | ೧೮ | ೧ |
| ಆರು ಚಕ್ರವನಾರು ಶಕ್ತಿಯ | ೨೨ | ೪೯ |
| ಆರು ಭೂತದಲಾರು ಚಕ್ರ | ೧೮ | ೨೫ |
| ಆಲಸಿಕೆಯಿಂದಾದಡೋದಲು | ೨೫ | ೨೩ |
| ಆಲಿ ನಿಂದರೆ ಸುಳಿದು ಸೂಸುವ | ೧೮ | ೨೨ |
| ಆವ ಕಡಯಿಂ ಬಿಜಯ | ೧೯ | ೧೬ |
| ಆವ ಕಾಲದಲಾದಡೆಯು | ೩ | ೩ |
| ಆವ ತೆರದಿಂದಲಾದಡೆಯು | ೬ | ೩೮ |
| ಆವ ದೇಶದ ಪುರುಷನೈ | ೫ | ೧೨ |
| ಆವನವ ಪಾಲಿಸುವನೊಬ್ಬನು | ೧೧ | ೧೪ |
| ಆವನಾದಡೆಯಂತರಂಗದ | ೧೩ | ೫೯ |
| ಆವ ಪರಿಗಳಲಾವ ಬುದ್ಧಿಯ | ೧೯ | ೫೧ |

| | | |
|---|---|---|
| ಆವ ಪರಿಯಿಂದರಿವೆಯಾದಡೆ | ೮ | ೧೯ |
| ಆವ ಪರಿಯಿಂದಾದಡೆಯು | ೧೩ | ೨೫ |
| ಆವ ಪರಿಯಿಂದಾದಡೇನೈ | ೭ | ೬೬ |
| ಆವ ಬೆವಸಾಯವನು ಮಾಡಲು | ೧೧ | ೧೧ |
| ಆವ ಬೇಗದಲಾಗಹುದೋ | ೨೩ | ೨೮ |
| ಆವ ಮುಖದಲಿ ಬಂದು | ೨೩ | ೪೪ |
| ಆವ ವಾಸನೆವಿಡಿದು ಜನಿಸಿದ | ೨೪ | ೫ |
| ಆವ ವೇಷದಲಾದಡೆಮ್ಮಯ | ೨೧ | ೮ |
| ಆವ ವೇಷವ ತೊಟ್ಟಿಹನೊ | ೨೨ | ೧೪ |
| ಆವ ಶಕುನವ ತಿದ್ದಿಕೊಂಡೆಲೆ | ೫ | ೩೯ |
| ಆವುದಾನೊಂದನುಪಮದ | ೧ | ೧೭ |
| ಆಶೆಯೆಂಬುದು ತಾನೆ ಮಾಯಾ | ೧೪ | ೧೨ |
| ಆಸನಸ್ಥಿರರಾಗಿ ಸಪದುಪವಾಸ | ೨೦ | ೨೩ |
| ಆ ಸಮಾಧಿಯ ಭಾವದಲಿ | ೬ | ೨೦ |
| ಆ ಸರೋಜಭವಾಂಡದೊಳಗತಿ | ೨ | ೪ |
| ಆಳು ನೆರದುದು ಲಕ್ಕಸಂಖ್ಯೆಗೆ | ೧೩ | ೧೮ |
| **ಇ** | | |
| ಇಡಿದ ಸರ್ವಾಂಗದ ವಿಭೂತಿಯ | ೨೨ | ೧೫ |
| ಇತ್ತಲತಿ ಸುಲಭದಲಿ ಕರುಣಿಸಿ | ೨೪ | ೪೧ |
| ಇತ್ತಲಾಗಳೆ ತೋಳು ತೊಡೆ | ೫ | ೪೦ |
| ಇತ್ತಲಿಂತೀ ಮಾಯೆ ಹುಟ್ಟಿ | ೩ | ೧೩ |
| ಇತ್ತಲಿವರಿರುತಿರ್ದರಾಗಳೆ | ೯ | ೧೯ |
| ಇತ್ತಲೀ ಬಸವಣ್ಣ ಮೊದಲಾದ | ೧೯ | ೫ |
| ಇತ್ತಲೀ ಮಹದೇವಿ | ೧೦ | ೨ |
| ಇತ್ತಲೀ ಹದನಾಯ್ತು ಬಳಿಕಿ | ೨೨ | ೨೮ |
| ಇದ್ದ ನೆಲೆಗಳವಡುವ ಭಕ್ತಿ | ೧೬ | ೩೧ |
| ಇದಿರುಗನಸಿದು ಲೇಸು | ೫ | ೫೪ |
| ಇದಿರುವರಿತಂದಲ್ಲಮಪ್ರಭು | ೧೯ | ೯ |
| ಇದು ಮನೋಜ ಬ್ರಹ್ಮ | ೪ | ೩೫ |

| | | |
|---|---|---|
| ಇದು ಯಥಾರ್ಥದ ವಾಕ್ಯ | ೨ | ೩೯ |
| ಇದುವೆ ಕಾರಣ ಮಾಯೆ | ೩ | ೨೧ |
| ಇದುವೆ ಕೈಲಾಸಾದ್ರಿಯೋ | ೪ | ೩೬ |
| ಇದೆ ಕಣಾ ಶಿವಲಿಂಗಭಕ್ತಿಯ | ೧೧ | ೨೩ |
| ಇನಿತು ನೈಯ್ದಿಲಗಣ್ಣ | ೩ | ೪೦ |
| ಇಂತು ನಿರಹಂಕಾರದಿಂ | ೧೭ | ೧೭ |
| ಇಂತು ನುಡಿದುನ್ಮತ್ತವೃತ್ತಿ | ೨ | ೪೨ |
| ಇಂತು ಸತತೋತ್ಸಾಹದಿಂದಲಿ | ೨೫ | ೨೦ |
| ಇಂತು ಸಲೆ ಸಸ್ವಾನುಭವದ | ೨೧ | ೬ |
| ಇಂದ್ರಿಯಂಗಳಾನವ ಪರಿಯಲಿ | ೧೩ | ೫೧ |
| ಇಂದ್ರಿಯವನತಿಗಳೆದನಳುಪಿನ | ೧೫ | ೨೫ |
| ಇಂದುಕಾಂತದ ಶಿಲೆಯ | ೨೧ | ೧೦ |
| ಇನ್ನರಿಯಬಹುದಾವನಿಂತೀ | ೨೧ | ೨೩ |
| ಇರಲು ಮಯಾದೇವಿ | ೫ | ೨ |
| ಇರುತಲೊಂದಾನೊಂದು ದಿನ | ೨ | ೩೦ |
| ಇರುತಲೊಂದಾನೊಂದು ದಿನವಾ | ೧೦ | ೪ |
| ಇರುತಿರಲು ಮಮಕಾರ | ೩ | ೩೮ |
| ಇಲ್ಲದುದು ಬಹುದಿಲ್ಲ ದಿಟ | ೮ | ೨೪ |
| ಇಲ್ಲದಿಹ ಮಾಯಾ ಪ್ರಪಂಚು | ೨೪ | ೭ |
| ಇಲ್ಲದುದು ತಾವರಿಯದೆನೆಂಬರಿ | ೨೪ | ೨೨ |
| ಇಲ್ಲಿ ಕೇಳುವುದಿನ್ನು ಸಾಧಕೆ | ೧೩ | ೧ |
| ಇಲ್ಲಿ ಭಕ್ತಿಯ ಮಾಡುತಲಿ | ೧೧ | ೧೨ |
| ಇಷ್ಟ ಗುರುವಿಗೆ ತನುವ | ೧೬ | ೩೦ |
| ಇಷ್ಟಲಿಂಗದ ಮಾರ್ಗದಲಿ | ೧೯ | ೧ |
| ಇಳೆಯಲುಡುತಡಿಯೆಂಬ | ೯ | ೨ |
| **ಈ** | | |
| ಈ ಕೃಪಾಳುವೆ ದೇವನಾಗಲಿ | ೧೧ | ೩೦ |
| ಈ ಕುಮಾರಿಯ ತಿಳವೆ | ೫ | ೨೯ |
| ಈಕೆ ಭಕ್ತಿಯ ಬಳ್ಳಿಯಂತೆ | ೯ | ೬ |

| | | |
|---|---|---|
| ಈಕೆಯಂಗವನರಿದು | ೭ | ೩೭ |
| ಈಡೆ ಪಿಂಗಳ ವರಸುಷುಮ್ನಾ | ೨೧ | ೧೬ |
| ಈತನಾದಿಟದದಲ್ಲಮನೊ | ೭ | ೨೭ |
